ವಿಶ್ವವಾಣಿ
ವಿಶ್ವಾಸವೇ ವಿಶ್ವ

ಹ್ಯಾಪಿ ಬರ್ತ್‌ಡೇ

95ನೇ ವರ್ಷಕ್ಕೆ ಕಾಲಿಟ್ಟ ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಅವರು ಬುಧವಾರ ಜನ್ಮದಿನ ಪ್ರಯುಕ್ತ ವಿಶ್ವವಾಣಿ ಹೊರ ತಂದ ವಿಶೇಷ ಪುಟವನ್ನು ಓದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸೊಂಪಾದ ಪುಟಗಳು

ಇದು ಭೂತಾನ್ ಜಗತ್ತಿಗೆ ನೀಡಿದ ಅನನ್ಯ ಮಾದರಿ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಇವು ಯಾರ ಜಪ್ತಿಗೂ ಸಿಗದ ನವಿಲುಗಳು!
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಈ ಜಗತ್ತಿನಲ್ಲಿ ಯಾವುದಾದರೂ ಒಂದು ಸಂಗತಿ ನಿಮ್ಮನ್ನು ಅತಿಯಾಗಿ ಬಾಧಿಸಿದರೆ, ಕಾಡಿದರೆ ಅದು ನಿಮ್ಮ ತಲೆಯೊಳಗಿರುವ ಚಿಂತೆ ಅಥವಾ ಯೋಚನೆ. ಅದನ್ನು ನಿಗ್ರಹಿಸಿದರೆ ನೀವು ಏನನ್ನು ಬೇಕಾದರೂ ನಿಯಂತ್ರಿಸಬಹುದು.

ವಕ್ರತುಂಡೋಕ್ತಿ

ನಾಳೆಗಳು ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಆಲಸಿಗಳು ಮಾತ್ರ ಎಲ್ಲ ಕೆಲಸಗಳನ್ನು ಮಾಡೋದು ನಾಳೆಯೇ.

ಫನ್‌ತರಂಗ

- ರಘುಪತಿ ಶೃಂಗೇರಿ -

ಇನ್ಮುಂದೆ ಕ್ರಿಮಿನಲ್ ಸಚಿವರಿಗೆ ಜೈಲಿನಿಂದಲೇ ಅಧಿಕಾರ ಸಾಧ್ಯವಿಲ್ಲ – ಕೇಂದ್ರ

ಸುದ್ದಿ

ಜೈಲು ಶಿಕ್ಷೆಗೆ ಗುರಿಯಾದ ಪಿಎಂ, ಸಿಎಂ, ಸಚಿವರ ಗೇಟ್‌ಪಾಸ್‌ಗೆ ಮಸೂದೆ

ವಿಪಕ್ಷ ಸದಸ್ಯರ ಆಕ್ರೋಶದ ನಡುವೆ 130ನೇ ತಿದ್ದುಪಡಿ ಮಸೂದೆ ಮಂಡನೆ

ಕಳಂಕಿತರ ಪದಚ್ಯುತಿಗೆ ತಿದ್ದುಪಡಿ ವಿಧೇಯಕ

ದೆಹಲಿ: ಗಂಭೀರ ಕ್ರಿಮಿನಲ್ ಆರೋಪಗಳ ಮೇಲೆ ಕನಿಷ್ಠ ಐದು ವರ್ಷಗಳ ಜೈಲು ಶಿಕ್ಷೆಗೆ ಅರ್ಹವಾದ ಅಪರಾಧಗಳಲ್ಲಿ ಬಂಧನಕ್ಕೊಳಗಾಗಿ, ಸತತ 30 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿರುವ ಪ್ರಧಾನ ಮಂತ್ರಿ, ಮುಖ್ಯಮಂತ್ರಿಗಳು ಮತ್ತು ಸಚಿವರನ್ನು ಅವರ ಹುದ್ದೆಯಿಂದ ತೆಗೆದುಹಾಕುವ ಮೂರು ಪ್ರಮುಖ ಮಸೂದೆಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಸಭೆಯಲ್ಲಿ ಬುಧವಾರ ಮಂಡಿಸಿದರು.

ಸಂವಿಧಾನದ 130ನೇ ತಿದ್ದುಪಡಿ ಮಸೂದೆ 2025, ಕೇಂದ್ರಾಡಳಿತ ಸರಕಾರ ತಿದ್ದುಪಡಿ ಮಸೂದೆ ಮತ್ತು ಜಮ್ಮು ಮತ್ತು ಕಾಶ್ಮೀರ ಪುನರ್ ರಚನೆ ತಿದ್ದುಪಡಿ ಮಸೂದೆ– 2025 ಅನ್ನು ಮಂಡಿಸಿದ ಅಮಿತ್ ಶಾ, ಈ ಮೂರೂ ಮಸೂದೆಗಳನ್ನು ಹೆಚ್ಚಿನ ಪರಿಶೀಲನೆಗಾಗಿ ಸಂಸತ್ತಿನ ಜಂಟಿ ಸಮಿತಿಗೆ ಒಪ್ಪಿಸಲಾಗುವುದು. ಅಲ್ಲಿ ಪ್ರತಿಪಕ್ಷಗಳು ಸೇರಿದಂತೆ ಉಭಯ ಸದನಗಳ ಸದಸ್ಯರು ತಮ್ಮ ಸಲಹೆಗಳನ್ನು ನೀಡಲು ಅವಕಾಶವಿದೆ ಎಂದು ಹೇಳಿದರು.

ಅಮಿತ್ ಶಾ ಸಚಿವರು ವಿಧೇಯಕ ಮಂಡಿಸುತ್ತಿದ್ದಂತೆ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೆಲವರು ಮಸೂದೆಗಳ ಪ್ರತಿಗಳನ್ನು ಹರಿದು ಹಾಕಿ ಅಮಿತ್ ಶಾ ಮೇಲೆ ಎಸೆದರು. ಪ್ರತಿಪಕ್ಷ ಸದಸ್ಯರ ವರ್ತನೆಗೆ ಸ್ಪೀಕರ್

ಓಂ ಬಿರ್ಲಾ ಆಕ್ರೋಶ ಹೊರ ಹಾಕಿದರು.

ಎಐಎಂಐಎಂನ ಅಸಾದುದ್ದೀನ್ ಓವೈಸಿ ಮತ್ತು ಕಾಂಗ್ರೆಸ್‌ನ ಮನೀಷ್ ತಿವಾರಿ, ಕೆ ಸಿ ವೇಣುಗೋಪಾಲ್ ಸೇರಿದಂತೆ ಸೇರಿದಂತೆ ಪ್ರತಿಪಕ್ಷ ಸದಸ್ಯರು ಮಸೂದೆ ವಿರುದ್ಧ ಮಾತನಾಡಿದರು. ಉದ್ದೇಶಿತ ವಿಧೇಯಕ ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಆರೋಪಿಸಿದರು.

ಅಮಿತ್ ಶಾ ಗುಜರಾತ್ ನಲ್ಲಿ ಗೃಹ ಸಚಿವರಾಗಿದ್ದಾಗ ಆಗಿದ್ದ ಬಂಧನ ವಿಚಾರವನ್ನು ಪ್ರಸ್ತಾಪಿಸಿದ ವೇಣುಗೋಪಾಲ್, ರಾಜಕೀಯದಲ್ಲಿ ಅವರ ನೈತಿಕತೆಯನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಮಿತ್ ಶಾ, ''ನನ್ನ ವಿರುದ್ಧ ಆರೋಪಗಳು ಕೇಳಿ ಬಂದಾಗ, ಬಂಧನಕ್ಕೂ ಮುನ್ನ ನಾನು ನೈತಿಕವಾಗಿ ರಾಜೀನಾಮೆ ನೀಡಿದ್ದೇನೆ. ನ್ಯಾಯಾಲಯದಿಂದ ನಾನು ನಿರಪರಾಧಿ ಎಂದು ಸಾಬೀತಾಗುವವರೆಗೆ ನಾನು ಯಾವುದೇ ಸಾಂವಿಧಾನಿಕ ಹುದ್ದೆಯನ್ನು ವಹಿಸಿಕೊಂಡಿರಲಿಲ್ಲ'' ಎಂದು ತಿರುಗೇಟು ನೀಡಿದರು.

130ನೇ ತಿದ್ದುಪಡಿ ಮಸೂದೆಯಲ್ಲಿ ಏನಿದೆ?

- ಕಳಂಕಿತ ಪ್ರಧಾನಿ, ಸಿಎಂ, ಕೇಂದ್ರ ಅಥವಾ ರಾಜ್ಯಗಳ ಸಚಿವರ ಪದಚ್ಯುತಿಗೆ ಅವಕಾಶ
- 30 ದಿನಗಳ ಕಾಲ ನಿರಂತರ ಬಂಧನದಲ್ಲಿದ್ದವರು 31ನೇ ದಿನ ಸ್ವಯಂ ಪದಚ್ಯುತಿ
- ಬಂಧನದಿಂದ ಬಿಡುಗಡೆ ಆದವರ ಮರು ನೇಮಕಕ್ಕೆ ನಿರ್ಬಂಧ ಇಲ್ಲ
- ಪ್ರಧಾನಿ, ಸಿಎಂ ಶಿಫಾರಸು ಮಾಡದಿದ್ದರೂ 31ನೇ ದಿನ ಕಳಂಕಿತ ಸಚಿವರ ಪದಚ್ಯುತಿ
- ಕೇಂದ್ರದಲ್ಲಿ ರಾಷ್ಟ್ರಪತಿ, ರಾಜ್ಯದಲ್ಲಿ ರಾಜ್ಯಪಾಲರಿಗೆ ಪದಚ್ಯುತಗೊಳಿಸುವ ಅಧಿಕಾರ

ಉಪರಾಷ್ಟ್ರಪತಿ ಸ್ಥಾನಕ್ಕೆ ಸಿಪಿಆರ್ ನಾಮಪತ್ರ

ದೆಹಲಿ: ಸೆ.9ರಂದು ನಡೆಯಲಿರುವ ಉಪರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿ ಸಿಪಿ ರಾಧಾಕೃಷ್ಣನ್ ಅವರು ಬುಧವಾರ ಪ್ರಧಾನಿ ನರೇಂದ್ರ

ಮೋದಿ ಹಾಗೂ ಕೇಂದ್ರ ಸಚಿವರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಮಹಾರಾಷ್ಟ್ರದ ಹಾಲಿ ರಾಜ್ಯಪಾಲರಾಗಿರುವ ರಾಧಾಕೃಷ್ಣನ್ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸುವ ವೇಳೆ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಆರೋಗ್ಯ ಸಚಿವ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಮತ್ತು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಉಪಸ್ಥಿತರಿದ್ದು ಬೆಂಬಲ ಸೂಚಿಸಿದರು. ಒಟ್ಟು 4 ಸೆಟ್ ಅರ್ಜಿಯನ್ನು ಸಲ್ಲಿಸಲಾಗಿದ್ದು, ಮೊದಲ ಸೆಟ್‌ನಲ್ಲಿ ದಾಖಲೆ ಸಲ್ಲಿಸುವ ವೇಳೆ ಮೋದಿ ಮುಖ್ಯ ಅನುಮೋದಕರಾಗಿದ್ದರು.

ಬಿಎಸ್‌ವೈ ವಿಚಾರಣೆ ತ್ವರಿತಕ್ಕೆ ಮನವಿ

ಬೆಂಗಳೂರು: ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಮಾಜಿ ಮುಖ್ಯ ಮಂತ್ರಿ ಯಡಿಯೂರಪ್ಪ ವಿರುದ್ಧ ದಾಖ ಲಾದ ಪ್ರಕರಣ

ಸಂಬಂಧ ವಿಚಾರಣಾ ನ್ಯಾಯಾಲಯದಲ್ಲಿ ಶೀಘ್ರ ವಿಚಾರಣೆಗೆ ಅವಕಾಶ ಕಲ್ಪಿಸಬೇಕು ಎಂದು ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮನವಿ ಮಾಡಿದೆ. ಪೋಕ್ಸೋ ಪ್ರಕರಣ ದಲ್ಲಿ ಕಾಗ್ನಿಜೆನ್ಸ್ ಪಡೆದುಕೊಂಡಿದ್ದ ವಿಶೇಷ ನ್ಯಾಯಾಲಯದ ಕ್ರಮ ಮತ್ತು ಸಿಐಡಿ ಪೊಲೀಸರು ದಾಖಲಿ ಸಿರುವ ಎಫ್‌ಐಆರ್ ರದ್ದು ಕೋರಿ ಯಡಿಯೂರಪ್ಪ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಂ.ಐ. ಅರುಣ್ ಅವರಿಗೆ ಪ್ರಾಸಿಕ್ಯೂಷನ್ ಪರ ವಕೀಲರು ಬುಧವಾರ ಈ ಮನವಿ ಮಾಡಿದರು.

ಧರ್ಮಸ್ಥಳ ಪ್ರಕರಣಕ್ಕೆ ಟ್ವಿಸ್ಟ್: ಅನಾಮಿಕನ ಬೆಂಬಲಿಗರಿಗೆ ಸಂಕಷ್ಟ

ಬುರುಡೆ ತನಿಖೆಗೆ ಇಡಿ ಎಂಟ್ರಿ?

ಬೆಂಗಳೂರು/ಮಂಗಳೂರು: ರಾಷ್ಟ್ರಾದ್ಯಂತ ಭಾರಿ ವಿವಾದಕ್ಕೆ ಕಾರಣವಾಗಿರುವ ಧರ್ಮಸ್ಥಳದ ಬುರುಡೆ ಪ್ರಕರಣದಲ್ಲಿನ ಅನಾಮಿಕ ವ್ಯಕ್ತಿಯ ಹಿಂದಿರುವ 'ಶಕ್ತಿ'ಗಳ ಮೂಲವನ್ನು ಕೆದಕಲು ವಿಶೇಷ ತನಿಖಾ ತಂಡ ಮುಂದಾಗಿದೆ.

ಸೌಜನ್ಯ ಪ್ರಕರಣದ ಮೂಲಕ ಮುನ್ನಲೆಗೆ ಬಂದ ಮಹೇಶ್ ತಿಮರೋಡಿ ಈ ಅನಾಮಧೇಯ ವ್ಯಕ್ತಿಗೆ 'ಬೆಂಬಲ' ನೀಡಿದ್ದರು. ಎಸ್‌ಐಟಿ ಅಧಿಕಾರಿಗಳು ಬುರುಡೆ ಬದಲಿಗೆ, ಅನಾಮಿಕನ ಮೂಲ ಕೆದಕಲು ಮುಂದಾಗಿದ್ದಾರೆ. ಇದರ ಭಾಗವಾಗಿ ಮಹೇಶ್ ತಿಮರೋಡಿ ಹಾಗೂ ಗಿರೀಶ್ ಮಟ್ಟಣ್ಣನವರ್ ಅವರನ್ನು



ಇತರೆ ಪ್ರಕರಣದ ವಿಚಾರಣೆಯ 'ನೆಪದಲ್ಲಿ' ಪೊಲೀಸ್ ಠಾಣೆಗೆ ಹಾಜರಾಗಲು ಸೂಚನೆ ನೀಡಲಾಗಿತ್ತು. ಈ ಇಬ್ಬರು ವಿಚಾರಣೆಗೆ ಹಾಜರಾಗಿದ್ದಾರೆ.

ಇದೇ ವೇಳೆ ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಪರಮೇಶ್ವರ ಸೇರಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ತಿಮರೋಡಿ ವಿರುದ್ಧದ ಪ್ರಕರಣ ಗಳಿಗೆ 'ವೇಗ' ನೀಡಲು ಸೂಚನೆ ನೀಡಲಾಗಿತ್ತು. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣದ ವಿಚಾರಣೆಗಾಗಿ ಮಹೇಶ್ ಶೆಟ್ಟಿ ತಿಮರೋಡಿ ಸೇರಿದಂತೆ ಪ್ರಕರಣದಲ್ಲಿ 16 ಮಂದಿ ಆರೋಪಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ಜಾರಿ ಮಾಡಲಾಗಿತ್ತು. ಪ್ರಮುಖವಾಗಿ ಆಸ್ಪತ್ರೆ ಮುಂಭಾಗ ಅಕ್ರಮ ಕೂಟದಲ್ಲಿ ಸುಮೊ ಟೊ ಪ್ರಕರಣ, ಮಾಧ್ಯಮ ವರದಿಗಾರನ ಮೇಲೆ ಹಲ್ಲೆ , ಮಾಧ್ಯಮದಲ್ಲಿ ಅವಹೇಳನಕಾರಿ ಹೇಳಿಕೆ ವಿರುದ್ಧ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಮೂರು ಪ್ರಕರಣ ದಾಖಲಾಗಿತ್ತು. ಅದರಂತೆ ಠಾಣೆಗೆ ಹಾಜರಾಗಿ ಬೆಳ್ತಂಗಡಿ ಇನ್‌ಸ್ಪೆಕ್ಟರ್ ಸುಬ್ಬಾಪುರ್ ಮುಂದೆ ವಿಚಾರಣೆ ಎದುರಿಸುತ್ತಿದ್ದಾರೆ.

ಸಮೀರ್ ವಿರುದ್ಧ ಇಡಿಗೆ ದೂರು: ಧರ್ಮಸ್ಥಳ ಪ್ರಕರಣದಲ್ಲಿ ಅನಾಮಿಕ ವ್ಯಕ್ತಿಯನ್ನು ಬೆಂಬಲಿಸುವ ಜತೆ ಹಿಂದೂ ಧಾರ್ಮಿಕ ನಂಬಿಕೆಗಳಿಗೆ ಹಾನಿ ಮಾಡುತ್ತಿರುವ ಯೂಟ್ಯೂಬರ್‌ಗಳು, ಸಾಮಾಜಿಕ ಮಾಧ್ಯಮ ಇನ್ಫ್ಲುಯೆನ್ಸರ್‌ಗಳು ವಿದೇಶದಿಂದ ಹಣದ ನೆರವು ಪಡೆಯು ತ್ತಿದ್ದು, ಈ ಬಗ್ಗೆ ವಿಚಾರಣೆ ನಡೆಸುವಂತೆ ಜಾರಿ ನಿರ್ದೇಶನಾಲಯಕ್ಕೆ ಭಜರಂಗದಳ ಮುಖಂಡ ತೇಜಸ್ ಎ ಗೌಡ ಪತ್ರ ಬರೆದಿದ್ದಾರೆ.

ವಿದೇಶದಿಂದ ಬಂದ ಹಣವನ್ನು ಉಪಯೋ ಗಿಸಿಕೊಂಡು ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನದ ವಿರುದ್ಧ ಅಪಪ್ರಚಾರ ಮಾಡಲು ಓರ್ವ ಮುಸ್ಲಿಂ ಯ್ಯೂಟ್ಯೂಬರ್ ವಿದೇಶದಿಂದ ಹಣ ಪಡೆಯುತ್ತಿದ್ದಾನೆ. ಈತನ ಹಣದ ಮೂಲವನ್ನು ಪತ್ತೆ ಹಚ್ಚಿ, ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಅನನ್ಯ ಭಟ್ ಪ್ರಕರಣವೂ ಎಸ್‌ಐಟಿ ವ್ಯಾಪ್ತಿಗೆ: ಸೌಜನ್ಯ ಪ್ರಕರಣದ ಬಳಿಕ ತೀವ್ರ ವಿವಾದಕ್ಕೆ ಕಾರಣವಾಗಿದ್ದ ಅನನ್ಯ ಭಟ್ ಪ್ರಕರಣದಲ್ಲಿ ಹಲವು ಅನುಮಾನಗಳಿರುವುದರಿಂದ, ಇದರ ಬಗ್ಗೆಯೂ ತನಿಖೆ ನಡೆಸಲು ಎಸ್‌ಐಟಿಗೆ ಸೂಚನೆ ನೀಡಲಾಗಿದೆ. ಸುಜಾತ ಭಟ್ ನೀಡಿರುವ ದೂರನ್ನು ಎಸ್‌ಐಟಿಗೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ. ಅನನ್ಯಾ ಭಟ್ ನಾಪತ್ತೆ ಪ್ರಕರಣ, ಸುಜಾತ್ ಭಟ್ ಹೇಳುತ್ತಿರುವ ಹೇಳಿಕೆ, ತೋರಿಸಿದ ಮಗಳ ಫೋಟೋದ ಅಸಲಿಯತ್ತಿನ ಬಗ್ಗೆ ಹಲವು ಅನುಮಾನವಿರುವುದರಿಂದ ಎಸ್‌ಐಟಿಗೆ ವರ್ಗಾಯಿಸಲಾಗಿದೆ. ಆದ್ದರಿಂದ ಇದೀಗ ಸುಜಾತ್ ಭಟ್ ಅವರನ್ನು ಕರೆಸಿ ವಿಚಾರಣೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

ಬುರುಡೆ ನಾನು ಕೊಟ್ಟಿಲ್ಲ : ಸಸಿಕಾಂತ್: ಇನ್ನು ಅನಾಮಧೇಯ ವ್ಯಕ್ತಿಯ ಬುರುಡೆ ಪ್ರಕರಣದ ಮಾಸ್ಟರ್ ಮೈಂಡ್ ಸಸಿಕಾಂತ್ ಸೆಂಥಿಲ್ ಎನ್ನುವ ಆರೋಪ ಮಾಡಿದ್ದ ಜನಾರ್ದನ ರೆಡ್ಡಿ ಹೇಳಿಕೆಯನ್ನು ಸಂಸದ ಸಸಿಕಾಂತ್ ಸೆಂಥಿಲ್ ತಳ್ಳಿ ಹಾಕಿದ್ದಾರೆ. ಜನಾರ್ದನ ರೆಡ್ಡಿ ಹೇಳಿಕೆಗಳು ಆಧಾರ ರಹಿತ, ಅದರಲ್ಲಿ ಯಾವುದೇ ಸತ್ಯವಿಲ್ಲ. ಬಳ್ಳಾರಿಯಲ್ಲಿ ನಾನು ಸಹಾಯಕ ಆಯುಕ್ತನಾಗಿದ್ದಾಗ ಅವರ ಅಪರಾಧಗಳನ್ನು ಬಹಿರಂಗಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೇನೆ. ಆ ಕಾರಣಗಳಿಂದ ಅವರು ನನ್ನ ಮೇಲೆ ಆರೋಪ ಮಾಡಿರಬಹುದು ಎಂದಿದ್ದಾರೆ.

ಸ್ನೇಹಿತನಿಂದ ಹೇಳಿಕೆ : ಮಂಗಳೂರು: ಮುಸುಕುಧಾರಿಯ ಜತೆ ಧರ್ಮಸ್ಥಳದಲ್ಲಿ ಸ್ವಚ್ಛತಾ ಕಾರ್ಮಿಕನಾಗಿ ಕೆಲಸ ಮಾಡಿದ್ದ ವ್ಯಕ್ತಿಯೊಬ್ಬರು, ನೂರಾರು ಶವ ಹೂತ ಆರೋಪ ಸತ್ಯಕ್ಕೆ ದೂರ ಎಂದು ಹೇಳಿಕೆ ನೀಡಿದ್ದಾರೆ.

ಅನಾಮಿಕ ಸ್ನೇಹಿತ ವೈದ್ಯನಾಥಪುರದ ನಿವಾಸಿ ರಾಜು ಎಂಬಾತ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದು. ಧರ್ಮಸ್ಥಳದ ಬಗ್ಗೆ ಮುಸುಕುಧಾರಿ ವ್ಯಕ್ತಿಯ ಹೇಳಿಕೆಗಳು ಸತ್ಯಕ್ಕೆ ದೂರ. ಸಾವಿರಾರು ಜನರಿಗೆ ಅನ್ನ ಹಾಕಿದ ಧಣಿಯವರ ಬಗ್ಗೆ ಈ ರೀತಿ ಹೇಳಿಕೆ ಕೊಡುತ್ತಿರುವುದು ಸರಿಯಲ್ಲ ಎಂದಿದ್ದಾರೆ. ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧ ನನ್ನನ್ನು ಎಸ್‌ಐಟಿ ಅಧಿಕಾರಿಗಳು ಅರ್ಧ ಗಂಟೆ ವಿಚಾರಣೆ ನಡೆಸಿದರು. ನನಗೆ ಗೊತ್ತಿರುವ ಮಾಹಿತಿಯನ್ನು ನೀಡಿದ್ದೇನೆ ಎಂದವರು ತಿಳಿಸಿದ್ದಾರೆ.

ದೂರು ನೀಡಲು ಚಿಂತನೆ

ಸುಜಾತ ಭಟ್ ತೋರಿಸಿದ್ದ ಅನನ್ಯ ಭಟ್ ಫೋಟೋ ನಕಲಿ ಎನ್ನುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಯ ಬಳಿಕ ವಾಸಂತಿ ಎನ್ನುವವರ ಫೋಟೋವನ್ನು ಸುಜಾತಾ ಭಟ್ ಅನನ್ಯ ಭಟ್ ಎಂದು ತೋರಿಸಿದ್ದರು ಎಂದು ವಾಸಂತಿ ಸಂಬಂಧಿಕರು ಸ್ಪಷ್ಟಪಡಿಸಿದ್ದಾರೆ. ಇದೀಗ ವಾಸಂತಿ ಸಹೋದರ ವಿಜಯ್, ನನ್ನ ತಂಗಿ 2007ರಲ್ಲಿಯೇ ಮೃತಪಟ್ಟಿದ್ದು ಆಕೆಯ ಫೋಟೋವನ್ನು ಬಳಸಿಕೊಂಡಿದ್ದಾರೆ. ಅವರ ವಿರುದ್ಧ ಕಾನೂನು ಹೋರಾಟ ಮಾಡಲು ಕುಟುಂಬ ಸದಸ್ಯರೊಂದಿಗೆ ಚರ್ಚಿಸಿ ತೀರ್ಮಾನಿಸುವುದಾಗಿ ಹೇಳಿದ್ದಾರೆ.

> ಅನಾಮಿಕ ವ್ಯಕ್ತಿಯ ಮಂಪರು ಪರೀಕ್ಷೆಯಾಗದೆ, ತಿಮರೋಡಿ ಬಂಧನವಾಗದೇ ತನಿಖೆ ನಡೆಸುವುದಕ್ಕೆ ನನ್ನ ವಿರೋಧವಿದೆ. ಅನಾಮಿಕ ಇನ್ನೂ 13 ಪಾಯಿಂಟ್ ತೋರಿಸಬಹುದು. ಆರಂಭದಲ್ಲೇ ಮುಸುಕುಧಾರಿಯ ಮಂಪರು ಪರೀಕ್ಷೆ ಆಗಬೇಕಿತ್ತು. ಇನ್ನು ಮುಂದೆ ಅನಾಮಿಕನನ್ನು ಧರ್ಮಸ್ಥಳ ದ್ವಾರ ದಾಟಿ ದೇಗುಲದ ವಠಾರಕ್ಕೆ ಬರಲು ನಾವು ಬಿಡುವುದಿಲ್ಲ. ಮತ್ತೆ ಬಾಹುಬಲಿ ಬೆಟ್ಟಕ್ಕೆ ಬಂದರೆ ನಾನು ಮುಂದೆ ನಿಲ್ಲುತ್ತೇನೆ.
>
> –ಅಭಯ್ ಚಂದ್ರ ಜೈನ್ ಮಾಜಿ ಸಚಿವ

> ಅನನ್ಯ ಭಟ್ ಎಂಬ ಮಗಳು ಇದ್ದದ್ದು ನಿಜ. ನನ್ನ ಮದುವೆಗೆ ಮುನ್ನ ಪ್ರಿಯಕರನಿಂದ ಮಗಳ ಜನನವಾಗಿತ್ತು. ಆಕೆಯನ್ನು ದಂಪತಿಗೆ ಸಾಕಲು ನೀಡಿದ್ದೆ. ಬಳಿಕ ಟೈಪಿಸ್ಟ್ ಆಗಿ ಕೆಲವೊಂದು ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದೆ. ಸಿಬಿಐ ಕಚೇರಿಯಲ್ಲೂ ಸ್ಟೆನೋ ಆಗಿದ್ದೆ. ಪ್ರೌಢಶಾಲೆ ಮತ್ತು ದ್ವಿತೀಯ ಪಿಯು ಕೊಲ್ಕತ್ತಾದಲ್ಲಿ ಮುಗಿಸಿದ ಅನನ್ಯ ಭಟ್ ರ‍್ಯಾಂಕ್ ಸ್ಟೂಡೆಂಟ್ ಆಗಿದ್ದಳು. ವೈದ್ಯಕೀಯ ಕೋರ್ಸ್‌ಗಾಗಿ ಈಕೆಯನ್ನು ಕಸ್ತೂರಬಾ ಮೆಡಿಕಲ್ ಕಾಲೇಜಿಗೆ ಸೇರಿಸಿದ್ದೆ.
>
> – ಸುಜಾತ ಭಟ್

ರಾಜ್ಯ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕ ವಿಧಾನ ಪರಿಷತ್‌ನಲ್ಲಿ ತಿರಸ್ಕೃತ

ಮೇಲ್ಮನೆಯಲ್ಲಿ ರಾಜ್ಯ ಸರಕಾರಕ್ಕೆ ಮುಖಭಂಗ

ವಿಧಾನ ಪರಿಷತ್: ವಿಧಾನಸಭೆಯಲ್ಲಿ ಅಂಗೀಕಾರವಾ ಗಿದ್ದ ರಾಜ್ಯ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯ ಕವು ವಿಧಾನಪರಿಷತ್‌ನಲ್ಲಿ ತಿರಸ್ಕೃತವಾಗಿದೆ. ಈ ಮೂಲಕ ವಿಧೇಯಕದ ಅನುಮೋದನೆ ನಿರೀಕ್ಷೆಯಲ್ಲಿದ್ದ ರಾಜ್ಯ ಸರಕಾರಕ್ಕೆ ಹಿನ್ನಡೆಯಾಗಿದೆ.

ತಿದ್ದುಪಡಿ ವಿಧೇಯಕ ಕುರಿತಂತೆ ಕಲಾಪದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಒಂದು ಗಂಟೆಗಳ ಕಾಲ ಚರ್ಚೆ ನಡೆಸಿದರು. ಕಾಯಿದೆಯಲ್ಲಿ ಕೆಲವು ಅಂಶಗಳು ನ್ಯೂನತೆಯಿಂದ ಕೂಡಿದೆ. ಹೀಗಾಗಿ, ಇದನ್ನ ಸರಳೀಕರಿಸುವಂತೆ ವಿರೋಧ ಪಕ್ಷದ ಸದಸ್ಯರು ಒತ್ತಾಯಿಸಿದರು. ಆಡಳಿತ ಪಕ್ಷ ಒಪ್ಪದ ಕಾರಣ ಕಾಯಿದೆ ಅಂಗೀಕಾರಕ್ಕೆ ಮತಕ್ಕೆ ಹಾಕುವಂತೆ ವಿಪಕ್ಷ ಸದಸ್ಯರು ಒತ್ತಾಯಿಸಿದವು. ಪ್ರತಿಪಕ್ಷಗಳ ಕೋರಿಕೆಯ ಮೇರೆಗೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಮತಕ್ಕೆ ಹಾಕುವ ನಿರ್ಧಾರ ಕೈಗೊಂಡರು. ಸದನದಲ್ಲಿ ಆಡಳಿತ ಪಕ್ಷವಾದ ಕಾಂಗ್ರೆಸ್‌ನ 23 ಸದಸ್ಯರು ಕಾಯಿ ದೆಯ ಪರವಾಗಿದ್ದರೆ, ವಿರೋಧ ಪಕ್ಷಗಳ 26 ಸದಸ್ಯರು ವಿಧೇಯಕದ ವಿರುದ್ಧ ಮತ ಹಾಕಿದರು. ಬಹುಮತ ಕೊರತೆಯಿಂದ ವಿಧೇಯಕ ತಿರಸ್ಕೃತವಾಗಿದೆ.

ಇದಕ್ಕೂ ಮುನ್ನ ತಿದ್ದುಪಡಿ ವಿಧೇಯಕ ಮಂಡಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಸೌಹಾರ್ದ ಸಹಕಾರ ಸಂಘಗಳಲ್ಲಿ ಆರ್ಥಿಕ ಶಿಸ್ತು ಹಾಗೂ ಹೊಣೆಗಾರಿಕೆ ಮೂಲಕ ಬಲವರ್ಧನೆಗೊಳಿಸಲು ಕಾಯಿದೆಗೆ ತಿದ್ದುಪಡಿ ತರಲಾಗಿದೆ. ತಿದ್ದುಪಡಿ ಮಸೂದೆಯಡಿ ಸೌಹಾರ್ದ ಸಂಘಗಳಲ್ಲಿ ಬರುವ ಶೇ. 25ರಷ್ಟು ಠೇವಣಿ ಹಣವನ್ನು ಶಾಸನಬದ್ಧ ಮೀಸಲು ದ್ರವ್ಯ (ಎಸ್‌ಎಲ್‌ಆರ್) ರೂಪದಲ್ಲಿ ಅಪೆಕ್ಸ್ ಹಾಗೂ ಡಿಸಿಸಿ ಬ್ಯಾಂಕ್‌ಗಳಲ್ಲಿ ಇಡಲು ಅವಕಾಶ ಕಲ್ಪಿಸಲಾಗುತ್ತಿದೆ. ಸೌಹಾರ್ದ ಸಂಘಗಳ ನಾಮನಿರ್ದೇಶಿತ ಅಧಿಕಾರಿಗಳು, ಕಾರ್ಯನಿರ್ವಾ ಹಕರು ಹಾಗೂ ನಿರ್ದೇಶಕರು ಪ್ರತಿ ವರ್ಷ ಆಸ್ತಿ ಘೋಷಣೆ ಮಾಡಬೇಕು. ಕಡ್ಡಾಯ ಲೆಕ್ಕಪರಿಶೋಧ ಕರಿಂದ ಲೆಕ್ಕಪತ್ರ ನಿರ್ವಹಣೆ ಬಗ್ಗೆ ಆಡಿಟ್ ಮಾಡಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರತಿಪಕ್ಷಗಳಿಂದ ಆಕ್ಷೇಪ: ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಛಲವಾದಿ ನಾರಾಯಣಸ್ವಾಮಿ, ಅಪೆಕ್ಸ್ ಬ್ಯಾಂಕ್ ಹಾಗೂ ಡಿಸಿಸಿ ಬ್ಯಾಂಕ್‌ಗಳಲ್ಲಿ ಮಾತ್ರ ಠೇವಣಿದಾರ ಸಂಘಗಳ ಎಸ್‌ಎಲ್‌ಆರ್ ಹಣ ಇಡಲು ಅವಕಾಶ ಕಲ್ಪಿಸಿರುವುದು ಸರಿಯಲ್ಲ. ಬೆಂಗಳೂರು ನಗರ ಹೊರತುಪಡಿಸಿ ಗ್ರಾಮೀಣ ಭಾಗಗಳಲ್ಲಿ ಅಪೆಕ್ಸ್ ಬ್ಯಾಂಕ್‌ಗಳಿಲ್ಲ. ಸೌಹಾರ್ದ ಸಂಘಗಳ ಠೇವಣಿದಾರರು ತಮ್ಮ ಹಣ ಪಡೆಯಲು ಪ್ರಯಾಸ ಪಡಬೇಕಿದೆ. ಒಂದು ವರ್ಷದ ಬದಲಿಗೆ ಐದು ವರ್ಷಕ್ಕೊಮ್ಮೆ ಆಸ್ತಿ ಘೋಷಣೆ ಮಾಡಿದರೆ ಸಮಂಜಸವಾಗಲಿದೆ ಎಂದರು. ತಿದ್ದುಪಡಿ ಕಾಯಿದೆ ಬಗ್ಗೆ ಸದಸ್ಯರಾದ ಸಿ.ಟಿ.ರವಿ. ಕೆ.ಎಸ್ .ನವೀನ್, ಬೋಜೇಗೌಡ, ನಿರಾಣಿ ಹನುಮಂತ ರುದ್ರಪ್ಪ ಸೇರಿದಂತೆ ಹಲವು ಸದಸ್ಯರು ಬಗ್ಗೆ ಮಾತನಾಡಿದರು.

ಅಂತಿಮವಾಗಿ ಮಾತನಾಡಿದ ಎಚ್.ಕೆ.ಪಾಟೀಲ್, ಆರ್‌ಬಿಐ ನಿಯಂತ್ರಣದಲ್ಲಿರುವ ಷೆಡ್ಯೂಲ್ಡ್ ಬ್ಯಾಂಕ್‌ಗಳಲ್ಲೂ ಎಸ್‌ಎಲ್‌ಆರ್ ಹಣ ಠೇವಣಿಗೆ ಒಪ್ಪಿದ್ದೇವೆ. ಒಂದು ವರ್ಷದ ಬದಲು ಎರಡು ವರ್ಷಕ್ಕೊಮ್ಮೆ ಆಡಳಿತ ಮಂಡಳಿ ಸದಸ್ಯರು ಆಸ್ತಿ ಘೋಷಣೆ ಮಾಡುವ ಸಲಹೆಯನ್ನು ಅನುಮೋದಿಸುವು ದಾಗಿ ಹೇಳಿದರು. ಇದಕ್ಕೆ ಒಪ್ಪದ ವಿಪಕ್ಷ, ತಿದ್ದುಪಡಿ ವಿಧೇಯಕವನ್ನು ಮತಕ್ಕೆ ಹಾಕಲು ಒತ್ತಾಯಿಸಿದರು. ಇದರಂತೆ ಮತಕ್ಕೆ ಹಾಕಿದಾಗ ಅಗತ್ಯ ಬಹುಮತ ಸಿಗದೆ ಮಸೂದೆ ಬಿದ್ದು ಹೋಗಿದೆ.

ಮುಂದೇನು ?

ಮೇಲ್ಮನೆಯಲ್ಲಿ ವಿಧೇಯಕ ತಿರಸ್ಕೃತಗೊಂಡ ಕಾರಣ ಸರಕಾರ ಮಸೂದೆಯನ್ನು ಮತ್ತೊಮ್ಮೆ ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕರಿಸಬೇಕಾಗಿದೆ. ಈ ಬಳಿಕ ಪರಿಷತ್‌ನಲ್ಲಿ ಎರಡನೇ ಬಾರಿ ಮಂಡಿಸಿದಾಗ ಕಡ್ಡಾಯವಾಗಿ ಮೇಲ್ಮನೆಯೂ ಅಂಗೀಕರಿಸಬೇಕಾಗುತ್ತದೆ.

ಸಾರಿಗೆ ಬಸ್ ಮೇಲೆ ಪ್ರಾಣಿ ದಯೆ ಘೋಷವಾಕ್ಯ

ದೆಹಲಿ: ಸಾರಿಗೆ ಸಂಸ್ಥೆಗಳ ಬಸ್‌ಗಳ ಮೇಲೆ 'ಪ್ರಾಣಿಗಳ ಮೇಲೆ ದಯೆ ಇರಲಿ' ಎಂಬ ಘೋಷ ವಾಕ್ಯ ಬರೆಸುವುದನ್ನು ಕೇಂದ್ರ ಸರಕಾರ ಕಡ್ಡಾಯಗೊಳಿಸಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಗೆ ಪ್ರಾಣಿಗಳು ಬಲಿಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರಕಾರ ಇಂತಹ ಮಹತ್ವದ ಆದೇಶ ಹೊರಡಿಸಿದೆ. ಈ ಆದೇಶ ದೇಶದ ಎಲ್ಲಾ ಸರಕಾರಿ ಸಾಮ್ಯದ ಸಾರಿಗೆ ಸಂಸ್ಥೆಗಳಿಗೆ ಅನ್ವಯವಾಗಲಿದೆ. ವಾಹನ ಡಿಕ್ಕಿಯಾಗಿ ಪ್ರಾಣಿಗಳು ಸಾವನ್ನಪ್ಪುತ್ತಿರುವ ಹಿನ್ನಲೆಯಲ್ಲಿ ಇಂತಹ ತೀರ್ಮಾನ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಸಾರಿಗೆ ಸಂಸ್ಥೆ ಬಸ್ಸಿನ ಹಿಂಬದಿ ಗಾಜಿನ ಮೇಲೆ 'ಪ್ರಾಣಿಗಳ ಮೇಲೆ ಇರಲಿ ದಯೆ' ಎಂಬ ಘೋಷ ವಾಕ್ಯ ಬರೆಸುವಂತೆ ಸೂಚನೆ ನೀಡಲಾಗಿದೆ. ರಾಜ್ಯದ ನಾಲ್ಕೂ ನಿಗಮಗಳ ಅಧಿಕಾರಿಗಳಿಗೂ ಕೇಂದ್ರ ಸರಕಾರ ತಲುಪದೆ.

ದಾವಣಗೆರೆಯಲ್ಲಿ 30 ಲಕ್ಷ ದಲಿತರನ್ನು ಸೇರಿಸಿ ಸಮಾವೇಶ ನಡೆಸಲು ಸಿದ್ಧತೆ

ಸಿಎಂ ಪರ ಮತ್ತೊಮ್ಮೆ ಬಲಪ್ರದರ್ಶನ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಮಾತಿನ ಬಗ್ಗೆ ಯಾರೊಬ್ಬರೂ ಮಾತನಾಡದಂತೆ ಸ್ಪಷ್ಟ ಎಚ್ಚರಿಕೆಯ ಹೊರತಾಗಿಯೂ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಪ್ತರು ಅಲ್ಲಲ್ಲಿ 'ಧ್ವನಿ' ಎತ್ತುತ್ತಿರುವ ನಡುವೆಯೇ ಮಧ್ಯ ಕರ್ನಾಟಕದಲ್ಲಿ ಮತ್ತೊಮ್ಮೆ ಬಲಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರು ವೇದಿಕೆ ಸಿದ್ಧಪಡಿಸಿದ್ದು, ಇದಕ್ಕೆ 'ದಲಿತ ಸಮಾವೇಶ' ಎಂದು ಹೆಸರಿಡಲು ತೀರ್ಮಾನಿಸಿದ್ದಾರೆ.

ಮಂಗಳವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯ ಬಳಿಕ ಒಳ ಮೀಸಲನ್ನು ಮುಂದಿಟ್ಟುಕೊಂಡು ಬೃಹತ್ ಸಮಾವೇಶ ನಡೆಸಲು ದಲಿತ ನಾಯಕರು ತೀರ್ಮಾನಿಸಿದ್ದು, ಇದರ ಭಾಗವಾಗಿ ಅಕ್ಟೋಬರ್ ವೇಳೆಗೆ ಬೃಹತ್ ಕಾರ್ಯಕ್ರಮ ನಡೆಸಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ಈ ಸಮಾವೇಶದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಬಲ ಪ್ರದರ್ಶನದ ಜತೆಜತೆಗೆ ದಲಿತ ನಾಯಕತ್ವದ ಏಕತೆಯನ್ನು ಸಾರುವ ಲೆಕ್ಕಾಚಾರದಲ್ಲಿ ನಾಯಕರಿದ್ದಾರೆ. ಇದೇ ವೇಳೆ, ಮುಂದೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗ 'ದಲಿತ'ರಿಗೆ ಮುಖ್ಯಮಂತ್ರಿ ಸ್ಥಾನಕ್ಕೆ ಅವಕಾಶ ನೀಡಬೇಕು ಎನ್ನುವ ಸಂದೇಶವನ್ನು ಈ ಮೂಲಕ ಸಾರುವ ಲೆಕ್ಕಾಚಾರದಲ್ಲಿ ನಾಯಕರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಲಿತರ ಒಳಮೀಸಲು ವಿವಾದವನ್ನು ಮಂಗಳವಾರ ಸಂಪುಟ ಸಭೆ ಇತ್ಯರ್ಥಗೊಳಿಸಿದ್ದು, ಈ ಹಿನ್ನೆಲೆಯಲ್ಲಿ ಭಿನ್ನಾಭಿಪ್ರಾಯವನ್ನು ಮರೆತ ದಲಿತ ಸಮುದಾಯಗಳು ಒಗ್ಗೂಡಿ ಬಲ ಪ್ರದರ್ಶನ ಮಾಡಲು ಈ ಸಮಾವೇಶ ಹಮ್ಮಿಕೊಂಡಿದ್ದು, ಸುಮಾರು 30 ಲಕ್ಷ ಮಂದಿಯನ್ನು ಸೇರಿಸುವ ಲೆಕ್ಕಾಚಾರದಲ್ಲಿದ್ದಾರೆ. ಜನಸಂಖ್ಯೆಯಲ್ಲಿ ರಾಜ್ಯದ ನಂಬರ್ ಒನ್ ಸ್ಥಾನದಲ್ಲಿರುವ ದಲಿತರಿಗೆ ಈ ಬಾರಿ ಮುಖ್ಯಮಂತ್ರಿ ಹುದ್ದೆ ದಕ್ಕಲೇಬೇಕು ಎಂಬ ಘೋಷಣೆಯ ಮೂಲಕ ಮುಂದಿನ ಸರಕಾರದಲ್ಲಿ ದಲಿತ ಸಿಎಂ ಕೂಗಿಗೆ ಮತ್ತಷ್ಟು ಬಲ ಕೊಡಿಸುವ ಲೆಕ್ಕಾಚಾರದಲ್ಲಿದ್ದಾರೆ.

ಈ ಹಿಂದೆ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎನ್ನುವ ಒತ್ತಡ ಹಲವು ಬಾರಿ ಬಂದಿದ್ದರೂ ಅವಕಾಶ ಸಿಕ್ಕಿರಲಿಲ್ಲ. ಆದ್ದರಿಂದ ಸಿದ್ದರಾಮಯ್ಯ ಬಳಿಕ ದಲಿತರಿಗೆ ಅವಕಾಶ ನೀಡಬೇಕು ಎನ್ನುವ ಒತ್ತಡವನ್ನು ಈ ಸಮಾವೇಶದಲ್ಲಿ ಹೇರಬೇಕು ಎನ್ನುವುದು ಹಲವರ ಅಭಿಪ್ರಾಯವಾಗಿದೆ. ರಾಜ್ಯದ ಜನಸಂಖ್ಯೆಯಲ್ಲಿ ಅತಿ ಹೆಚ್ಚಿರುವ ದಲಿತರಿಗೆ ಯಾವ ಕಾರಣಕ್ಕೂ ಮುಂದಿನ ಬಾರಿ ಅವಕಾಶ ತಪ್ಪಬಾರದು ಎಂಬ ಹಕ್ಕೊತ್ತಾಯದೊಂದಿಗೆ ಈ ಐತಿಹಾಸಿಕ ದಲಿತ ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಡಿಕೆಸಿಗೆ ಟಾಂಗ್

ದಲಿತ ನಾಯಕರು ಮುಖ್ಯಮಂತ್ರಿ ಕುರ್ಚಿಗೆ ಬೇಡಿಕೆ ಸಲ್ಲಿಸುತ್ತಿದ್ದರೂ ಸಿದ್ದರಾಮಯ್ಯ ಅವರನ್ನು ಬದಲಾಯಿಸಬೇಕು ಎನ್ನುವ ಮಾತನ್ನು ಹೇಳುತ್ತಿಲ್ಲ. ಬದಲಿಗೆ ಸಿದ್ದರಾಮಯ್ಯ ಬಳಿಕ ದಲಿತ ನಾಯಕರಿಗೆ ಅವಕಾಶ ನೀಡಬೇಕು ಎನ್ನುವ ಬೇಡಿಕೆಯನ್ನು ಸಲ್ಲಿಸಲು ತೀರ್ಮಾನಿಸಿದ್ದಾರೆ.



ಸಮಾಚಾರ ಸಣ್ಣದಲ್ಲ

ಬಿಎಂಟಿಸಿ ಬಸ್ ಡಿಕ್ಕಿ ಬೈಕ್ ಸವಾರ ಸಾವು

ಬೆಂಗಳೂರು: ನಗರದ ಜನರಿಗೆ ಸಾರಿಗೆ ಸೇವೆ ನೀಡುತ್ತಿರುವ ಬಿಎಂಟಿಸಿ ಬಸ್‌ಗಳು ಜನರಿಗೆ ಸಾರಿಗೆ ವ್ಯವಸ್ಥೆ ನೀಡುವ ಬದಲಾಗಿ ಜನರ ಪ್ರಾಣ ತೆಗೆಯುವ ವಾಹನಗಳಾಗಿ ಪರಿವರ್ತನೆಯಾಗಿದೆ. ಕಳೆದ ವಾರದಲ್ಲಿ ಬಿಎಂಟಿಸಿ ಬಸ್‌ಗಳ ಅಪಘಾತಗಳಲ್ಲಿ ಮೂವರು ಸಾವನ್ನಪ್ಪಿದ್ದು, ಇಬ್ಬರು ಬೈಕ್ ಸವಾರರು ಮತ್ತು ಒಬ್ಬ ಬಿಎಂಟಿಸಿ ಪ್ರಯಾಣಿಕರು ಸಾವನ್ನಪ್ಪಿದ ಘಟನೆಗಳು ನಡೆದಿವೆ. ಚಾಲಕರ ನಿರ್ಲಕ್ಷ್ಯ ಮತ್ತು ಅಜಾಗರೂಕತೆಯೇ ಅಪಘಾತಗಳಿಗೆ ಕಾರಣ ಎಂದು ಆರೋಪಿಸಲಾಗಿದೆ. ಬೆಂಗಳೂರಿನ ರೂಪೇನಾ ಅಗ್ರಹಾರ ಬಳಿ ಆ.13ರ ಮಧ್ಯಾಹ್ನ 2.15ರ ಸುಮಾರಿಗೆ ಬಿಎಂಟಿಸಿ ಬಸ್ ಹರಿದು ಬೈಕ್ ಸವಾರ ಸಾವನ್ನಪ್ಪಿದ ಘಟನೆ ನಡೆದಿದ್ದು, ಚಂದಾಪುರದಿಂದ ಬನಶಂಕರಿಗೆ ಬರ್ತಿದ್ದ ಬಸ್‌ನಲ್ಲಿ ಈ ಘಟನೆ ನಡೆದಿದೆ. ರಸ್ತೆಯಲ್ಲಿ ಬೈಕ್ ಸವಾರ ಹೋಗುವಾಗ ಪಕ್ಕದಲ್ಲಿ ಹೋಗುತ್ತಿದ್ದ ಆಟೋಗೆ ತಗಲಿ ಕೆಳಕ್ಕೆ ಬಿದ್ದಿದ್ದಾನೆ. ಈ ವೇಳೆ ಬೈಕ್ ಸವಾರನ ಮೇಲೆ ಬಿಎಂಟಿಸಿ ಬಸ್‌ನ ಚಕ್ರ ಹರಿದಿದೆ. ಬಿಎಂಟಿಸಿ ಬಸ್ಸಿನ ಹಿಂಬದಿ ಚಕ್ರ ಬೈಕ್ ಸವಾರನ ಮೇಲೆ ಹರಿಯುತ್ತಿದ್ದಂತೆ, ಸವಾರ ಅಲ್ಲಿಯೇ ಸಾವನ್ನಪ್ಪಿದ್ದಾನೆ. ಈ ಅಪಘಾತ ಸಂಬಂಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಆಗಿದೆ. ರೂಪೇನ ಅಗರಹಾರದಲ್ಲಿ ಸೈಯದ್ ಜಾಫರ್ ಸಾವಿಗೆ ಬಿಎಂಟಿಸಿ ಚಾಲಕ ಜಯರಾಮಯ್ಯ ಅವರ ನಿರ್ಲಕ್ಷ್ಯವೇ ಕಾರಣವೆಂದು ಮಡಿವಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲು ಮಾಡಲಾಗಿತ್ತು.

ದೇವರಾಜ ಅರಸು 110 ನೇ ಜನ್ಮದಿನಾಚರಣೆ | ಪತ್ರಕರ್ತ ಕಲ್ಲೆ ಶಿವೋತ್ತಮ ರಾವ್‌ಗೆ ದೇವರಾಜ ಅರಸು ಪ್ರಶಸ್ತಿ ಪ್ರದಾನ

ಸಾಮಾಜಿಕ ನ್ಯಾಯದ ಹರಿಕಾರ ಅರಸು: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೇವರಾಜ್ ಅರಸುರವರು ತಮ್ಮ ಅಧಿಕಾರಾವಧಿಯಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾನತೆ ಒದಗಿಸಲು ಪ್ರಾಮಾಣಿಕ ಪ್ರಯ ತ್ನ ಮಾಡಿದ್ದಾರೆ. ಮೈಸೂರು ರಾಜ್ಯವನ್ನು ಕರ್ನಾಟಕ' ಎಂದು ನಾಮಕಾರಣ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿ, ಸಮಾಜದ ಎಲ್ಲ ವರ್ಗಗಳಿಗೂ ನ್ಯಾಯ ಒದಗಿಸಲು ಶ್ರಮಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಲಾಖೆ ವತಿಯಿಂದ ವಿಧಾನಸವಧದ ಬ್ಯಾಂಕ್ವೆಟ್ ಹಾಲಿನಲ್ಲಿ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110 ನೇ ಜನ್ಮದಿನಾಚರಣೆ ಹಾಗೂ ದೇವರಾಜ ಅರಸು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇವರಾಜ ಅರಸು ಅವರು ಎಂಟು ವರ್ಷಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅವರ ನಂತರ ಹೆಚ್ಚು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದು ನಾನೇ. ಅವರಂತೆ ನಾನೂ ಮುಖ್ಯಮಂತ್ರಿಯಾಗಿ 5 ವರ್ಷಗಳನ್ನು ಪೂರೈಸಿದ್ದೇನೆ. ಈ ವಿಚಾರದಲ್ಲಿ ನಮ್ಮಿಬ್ಬರಿಗೂ ಸಾಮ್ಯತೆ ಇದೆ ಎಂದರು.

ದೇವರಾಜ ಅರಸು ಅವರು ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರಲು ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ದೊರಕಬೇಕೆಂದು ನಂಬಿದ್ದರು. ಇವುಗಳಿಲ್ಲದೇ ರಾಜಕೀಯ ಸ್ವಾತಂತ್ರ್ಯ ಸಾಧ್ಯವಿಲ್ಲ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರೂ ಹೇಳಿದ್ದರು. ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ ಇರುತ್ತದೆಯೋ ಅಲ್ಲಿಯವರೆಗೆ ಸ್ವಾತಂತ್ರ್ಯ ಸೌಧ ಗಟ್ಟಿಯಾಗಿರಲು ಸಾಧ್ಯವಿಲ್ಲ. ಅಸಮಾನತೆಯಿಂದ ನರಳುವ ಜನ ಎಂದಾದರೂ ಸ್ವಾತಂತ್ರ್ಯ ಸೌಧವನ್ನು ಧ್ವಂಸ ಮಾಡುತ್ತಾರೆ ಎಂದು ಹೇಳಿದ್ದರು. ಈ ವಿಚಾರದಲ್ಲಿ ಅಪಾರವಾದ ನಂಬಿಕೆಯನ್ನಿಟ್ಟವರು ದೇವರಾಜ ಅರಸು ಎಂದರು.

ಅಸಮಾನತೆ ಹೋಗಲಾಡಿಸಲು ಯತ್ನ: ಅರಸು ಅವರು ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಅನುಭವಿಸದಿದ್ದರೂ ಈ ವಿಚಾರಗಳಲ್ಲಿ ನಂಬಿಕೆ ಇರಿಸಿಕೊಂಡಿದ್ದರಲ್ಲದೇ ಅದನ್ನು ಜಾರಿ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು. ಅವರು ಮುಖ್ಯಮಂತ್ರಿಯಾದಾಗ ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕೆಂದು ಪ್ರತಿಪಾದಿಸಿದ್ದರು. ಜಾತಿ, ವರ್ಗ ವ್ಯವಸ್ಥೆಯಿರುವ ಸಮಾಜದಲ್ಲಿ ಎಲ್ಲರಿಗೂ ಆರ್ಥಿಕ ಸಾಮಾಜಿಕ ಶಕ್ತಿ, ಸ್ವಾವಲಂಬನೆ ಬರಬೇಕು. ಅದಿಲ್ಲದೇ ಜಾತಿ, ವರ್ಗ ಯಾವುದೂ ಹೋಗುವುದಿಲ್ಲ ಎಂದರು.

ಬಸವಣ್ಣನವರು ಎಷ್ಟು ವರ್ಷಗಳ ಹಿಂದೆ ಇವನಾರವ ಎನ್ನದಿರಿ ಎಂದರು. ಆದರೆ ಜಾತಿ ವ್ಯವಸ್ಥೆಗೆ ಜಡತ್ವ ಇದೆ. ಇದಕ್ಕೆ ಚಲನೆ ಸಿಗಲು ಆರ್ಥಿಕ, ಸಾಮಾಜಿಕ ಬದಲಾವಣೆಗಳು ಆಗಬೇಕು. ಇಲ್ಲದಿದ್ದರೇ ಚಲನತಹಿತವಾಗಿರುತ್ತದೆ. ಬಸವಣ್ಣ, ಬುದ್ಧ, ಗಾಂಧಿ, ಅಂಬೇಡ್ಕರ್, ಯಾರು ಹೇಳಿದರೂ ಜಾತಿ ವ್ಯವಸ್ಥೆ ಹೋಗಿಲ್ಲ. ಚಲನಶೀಲತೆ ಸಿಕ್ಕಾಗ ಮಾತ್ರ ಜಾತಿ ವ್ಯವಸ್ಥೆ ಹೋಗಲು ಸಾಧ್ಯ. ಅದು ಅಷ್ಟು ಸುಲಭವಾಗಿ ಹೋಗುವಂತಿಲ್ಲ. ಇದಕ್ಕೆ ನೀರೆರೆಯುವ ಸಮಾಜಿಕ ಪಟ್ಟಭದ್ರ ಹಿತಾಸಕ್ತರು ಕೂಡ ಸಮಾಜದಲ್ಲಿ ಇದ್ದಾರೆ. ಇದು ಬದಲಾಗಲು ಸಾಮಾಜಿಕ ನ್ಯಾಯ, ಸಮಾನ ಅವಕಾಶಗಳು ಹಾಗೂ ಆರ್ಥಿಕ, ಸಮಾಜಿಕವಾಗಿ ಶಕ್ತಿ ಬರಬೇಕು. ಇದು ಬಾರದೇ ಜಾತಿ, ವರ್ಗ ವ್ಯವಸ್ಥೆ ಹೋಗುವುದಿಲ್ಲ. ಅರಸು ಅವರು ದಲಿತರು, ಬಡವರು, ಹಿಂದುಳಿದವರಿಗೆ ಶಕ್ತಿ ತುಂಬುವ ಕೆಲಸವನ್ನು ಮಾಡಿದ್ದಾರೆ. ಹಿಂದುಳಿದ ವರ್ಗಗಳ ಸಚಿವ ಶಿವರಾಜ್ ತಂಗಡಗಿ, ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ಗ್ಯಾರಂಟಿ ಯೋಜನೆಗಳ ರಾಜ್ಯ ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್, ಶಾಸಕರಾದ ರಿಜ್ವಾನ್ ಅರ್ಷದ್ ಸೇರಿ ಅನೇಕರಿದ್ದರು.



ಡಿ.ದೇವರಾಜ ಅರಸು ಅವರ ಹೆಸರಲ್ಲಿ ಕೊಡಮಾಡಲಾಗುವ ಅರಸು ಪ್ರಶಸ್ತಿಯನ್ನು ಹಿರಿಯ ಪತ್ರಕರ್ತರಾದ ಕಲ್ಲೆ ಶಿವೋತ್ತಮ ರಾವ್ ಅವರಿಗೆ ಸಿಎಂ ಸಿದ್ದರಾಮಯ್ಯ ಪ್ರದಾನ ಮಾಡಿದರು.

> ಅಕ್ಕಿ ಬಳಸುವುದೂ ಶ್ರೀಮಂತರ ಸ್ವತ್ತಾಗಿದ್ದ ಕಾಲದಲ್ಲಿ, ಹಿಂದುಳಿದವರಿಗೆ ಅನ್ನವೂ ಉಣ್ಣುವ ಪರಿಸ್ಥಿರಿಯಿರಲಿಲ್ಲ. ಆದ್ದರಿಂದ ರಾಜ್ಯದಲ್ಲಿ ಯಾರೊಬ್ಬರೂ ಅನ್ನಕ್ಕಾಗಿ ಕೈಒಡ್ಡಬಾರದೆಂಬ ಸದುದ್ದೇಶದಿಂದ ಅನ್ನಭಾಗ್ಯ ಯೋಜನೆಗೆಯನ್ನು ನಾನು ಜಾರಿಗೆ ತಂದೆನು. ಪ್ರಸ್ತುತ ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ ನೀಡಲಾಗುತ್ತಿದೆ.
>
> - ಸಿದ್ದರಾಮಯ್ಯ, ಮುಖ್ಯಮಂತ್ರಿ

ಯೋಗ್ಯ ವ್ಯಕ್ತಿಗೆ ಪ್ರಶಸ್ತಿ ಸಿಕ್ಕಿದ್ದು ಸಂತಸ ತಂದಿದೆ

ದೇವರಾಜ ಅರಸು ಅವರ ಹೆಸರಿನಲ್ಲಿ ಸರಕಾರ ಪ್ರಶಸ್ತಿಯನ್ನು ನೀಡುತ್ತಿದ್ದು, ಈ ವರ್ಷ ಹಿರಿಯ ಪತ್ರಕರ್ತರಾದ ಕಲ್ಲೆ ಶಿವೋತ್ತಮ ರಾವ್ ಅವರು ಆಯ್ಕೆಯಾಗಿರುವುದು ಸಂತೋಷದ ವಿಚಾರ. ಅವರಿಗೆ ಬಹಳ ಹಿಂದೆಯೇ ಈ ಪ್ರಶಸ್ತಿ ದೊರೆಯಬೇಕಿತ್ತು. ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡಿರುವುದು ನನಗೆ ಅತೀವ ಸಂತಸ ತಂದಿದೆ ಎಂದರು. ಕಲ್ಲೆ ಶಿವೋತ್ತಮ ರಾವ್ ಅವರೂ ಸಮಾಜವಾದಿ ಹಿನ್ನೆಲೆಯಿಂದ ಬಂದವರು. ಅನೇಕ ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದು, ಸರಕಾರ ವನ್ನು ಯಾವುದೇ ಮುಲಾಜಿಲ್ಲದೇ ನೇರವಾಗಿ ಟೀಕಿಸುತ್ತಿದ್ದರು. ನನ್ನನ್ನೂ ಕೂಡ ಟೀಕಿಸಿದ್ದಾರೆ. ಅವರಿಗೆ ಸರ್ಕಾರದ ಪರವಾಗಿ ಅಭಿನಂದನೆ ಗಳನ್ನು ಸಲ್ಲಿಸಿ ಕಲ್ಲೆ ಶಿವೋತ್ತಮ ರಾವ್ ಅವರಿಗೆ 96 ವರ್ಷಗಳಾಗಿದ್ದು, ಅವರು ನೂರು ವರ್ಷಕ್ಕೂ ಹೆಚ್ಚು ಕಾಲ ಬಾಳಲಿ ಎಂದು ಸಿಎಂ ಸಿದ್ದರಾಮಯ್ಯ ಹಾರೈಸಿದರು.

ATHER

ಎಥರ್ ಎನರ್ಜಿ ಲಿಮಿಟೆಡ್

(ಈ ಹಿಂದೆ ಎಥರ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
CIN: L40100KA2013PLC093769
ನೋಂದಾಯಿತ ಕಚೇರಿ: 3ನೇ ಮಹಡಿ, ಟವರ್ ಡಿ, ಐಬಿಸಿ ನಾಲೆಡ್ಜ್ ಪಾರ್ಕ್, #4/1 ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು 560 029, ಕರ್ನಾಟಕ, ಭಾರತ
ವೆಬ್‌ಸೈಟ್: www.atherenergy.com
ಇಮೇಲ್: cs@atherenergy.com **ದೂ:** +91 80 6646 5750

ಎಥರ್ ಎನರ್ಜಿ ಲಿಮಿಟೆಡ್‌ನ ವಿಡಿಯೋ ಕಾನ್ಫರೆನ್ಸಿಂಗ್ ಅಥವಾ ಇತರ ಧ್ವನಿ-ದೃಶ್ಯ ವಿಧಾನಗಳ ಮೂಲಕ ನಡೆಯಲಿರುವ 12ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಸದಸ್ಯರು ಗಮನಿಸಬೇಕಾದ ವಿಷಯವೇನೆಂದರೆ, ಎಥರ್ ಎನರ್ಜಿ ಲಿಮಿಟೆಡ್‌ನ ('ಕಂಪನಿ') 12ನೇ ವಾರ್ಷಿಕ ಸಾಮಾನ್ಯ ಸಭೆಯು ("ಎಜಿಎಂ") ಬುಧವಾರ, ಸೆಪ್ಟೆಂಬರ್ 17, 2025 ರಂದು ಬೆಳಿಗ್ಗೆ 11:00 ಗಂಟೆಗೆ (ಭಾರತೀಯ ಕಾಲಮಾನ) ವಿಡಿಯೋ ಕಾನ್ಫರೆನ್ಸಿಂಗ್ ("ವಿಸಿ") ಅಥವಾ ಇತರ ಧ್ವನಿ-ದೃಶ್ಯ ವಿಧಾನಗಳ ("ಒಎವಿಎಂ") ಮೂಲಕ ನಡೆಯಲಿದ್ದು, ಈ ಎಜಿಎಂನಲ್ಲಿ, ಕಂಪನಿಗಳ ಕಾಯ್ದೆ, 2013, ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳು, 2015 ("ಸೆಬಿ ಲಿಸ್ಟಿಂಗ್ ಅಗತ್ಯಗಳು") ಮತ್ತು ಇತರ ಎಲ್ಲಾ ಅನ್ವಯವಾಗುವ ಕಾನೂನುಗಳ ಜೊತೆಗೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("ಎಂಸಿಎ") ಹೊರಡಿಸಿದ ದಿನಾಂಕ ಏಪ್ರಿಲ್ 8, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020, ದಿನಾಂಕ ಏಪ್ರಿಲ್ 13, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020, ದಿನಾಂಕ ಮೇ 05, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020, ಮತ್ತು ಈ ಸಂಬಂಧದಲ್ಲಿ ನಂತರ ಹೊರಡಿಸಲಾದ ಇತ್ತೀಚಿನ ಸುತ್ತೋಲೆ ದಿನಾಂಕ ಸೆಪ್ಟೆಂಬರ್ 19, 2024 ರ 09/2024 ಮತ್ತು ಭಾರತದ ಷೇರು ವಿನಿಮಯ ಮಂಡಳಿ ("ಸೆಬಿ") ಹೊರಡಿಸಿದ ದಿನಾಂಕ ಅಕ್ಟೋಬರ್ 3, 2024 ರ SEBI/HO/CFD/CFD-PoD-2/P/CIR/2024/133 (ಇವುಗಳನ್ನು ಒಟ್ಟಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ) ಅನುಸರಣೆಯಲ್ಲಿ ಎಜಿಎಂ ಸೂಚನೆಯಲ್ಲಿ ತಿಳಿಸಲಾದ ವಿಷಯಗಳ ವ್ಯವಹಾರವನ್ನು ನಡೆಸಲು ಈ ಸಭೆ ಕರೆಯಲಾಗಿದೆ.

ಸುತ್ತೋಲೆಗಳ ಅನುಸರಣೆಯಲ್ಲಿ, ಎಜಿಎಂ ಸೂಚನೆ ಮತ್ತು 2024-25 ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಆಗಸ್ಟ್ 22, 2025 ರ ಶುಕ್ರವಾರದ ವರೆಗೆ ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("ಆರ್‌ಟಿಎ") / ಡಿಪಾಸಿಟರಿಗಳಲ್ಲಿ ಇಮೇಲ್ ವಿಳಾಸಗಳನ್ನು ನೋಂದಾಯಿಸಿದ ಸದಸ್ಯರಿಗೆ ಎಲೆಕ್ಟ್ರಾನಿಕ್ ವಿಧಾನದಲ್ಲಿ ಕಳುಹಿಸಲಾಗುತ್ತದೆ.

ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ / ಆರ್‌ಟಿಎ / ಡಿಪಾಸಿಟರಿಗಳಲ್ಲಿ ನೋಂದಾಯಿಸದ ಸದಸ್ಯರಿಗೆ, ಕಂಪನಿಯು ವೆಬ್-ಲಿಂಕ್ ಇರುವ ಪತ್ರವನ್ನು ಕಳುಹಿಸುತ್ತದೆ. ಈ ಪತ್ರವು 2024-25ರ ಹಣಕಾಸು ವರ್ಷದ ವಾರ್ಷಿಕ ವರದಿಯ (ಎಜಿಎಂ ಸೂಚನೆ ಸೇರಿದಂತೆ) ಸಂಪೂರ್ಣ ವಿವರ ಲಭ್ಯವಿರುವ ನಿಖರವಾದ ಮಾರ್ಗವನ್ನು ಒಳಗೊಂಡಿರುತ್ತದೆ. ಸದಸ್ಯರು ಗಮನಿಸಬೇಕಾದ ಸಂಗತಿಯೆಂದರೆ, ಎಜಿಎಂ ಸೂಚನೆ ಮತ್ತು 2024-25ರ ಹಣಕಾಸು ವರ್ಷದ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.atherenergy.com/investor-relations/financials, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ www.nseindia.com ಮತ್ತು www.bseindia.com ವೆಬ್‌ಸೈಟ್‌ಗಳು ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್ ("ಎನ್‌ಎಸ್‌ಡಿಎಲ್") ನ ವೆಬ್‌ಸೈಟ್ www.evoting.nsdl.com ನಲ್ಲೂ ಲಭ್ಯವಿರುತ್ತದೆ.

ಸದಸ್ಯರು ವಿಸಿ/ಒಎವಿಎಂ ಸೌಲಭ್ಯವನ್ನು ಬಳಸಿಕೊಂಡು ಮಾತ್ರ ಎಜಿಎಂಗೆ ಹಾಜರಾಗಲು ಮತ್ತು ಭಾಗವಹಿಸಲು ಅವಕಾಶವಿದೆ. ವಿಸಿ/ಒಎವಿಎಂ ಸೌಲಭ್ಯವನ್ನು ಬಳಸಿಕೊಂಡು ಭಾಗವಹಿಸುವ ಸದಸ್ಯರನ್ನು ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 103 ರ ಅಡಿಯಲ್ಲಿ ಕೋರಂ ಲೆಕ್ಕ ಹಾಕುವ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ. ಸದಸ್ಯರು ಎನ್‌ಎಸ್‌ಡಿಎಲ್‌ನ ಇ-ವೋಟಿಂಗ್ ವ್ಯವಸ್ಥೆಯ ಮೂಲಕ, ಎಜಿಎಂ ಸೂಚನೆಯಲ್ಲಿ ತಿಳಿಸಲಾದ ವ್ಯವಹಾರದ ಮೇಲೆ ರಿಮೋಟ್ ಆಗಿ ತಮ್ಮ ಮತ ಚಲಾಯಿಸಲು ಅವಕಾಶವಿರುತ್ತದೆ. ಎಜಿಎಂನಲ್ಲಿ ಭಾಗವಹಿಸಲು ಮತ್ತು ರಿಮೋಟ್ ಇ-ವೋಟಿಂಗ್ ಅಥವಾ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮತ ಚಲಾಯಿಸುವ ವಿಧಾನದ ಕುರಿತಾದ ಸೂಚನೆಗಳನ್ನು ಎಜಿಎಂ ಸೂಚನೆಯಲ್ಲಿ ಒದಗಿಸಲಾಗುತ್ತದೆ.

ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸದ/ನವೀಕರಿಸದ ಸದಸ್ಯರು, ಎಜಿಎಂ ಸೂಚನೆ ಮತ್ತು 2024-25ರ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಸ್ವೀಕರಿಸಲು, ಮತ್ತು ರಿಮೋಟ್ ಇ-ವೋಟಿಂಗ್ ಮೂಲಕ ಅಥವಾ ಎಜಿಎಂ ಸಮಯದಲ್ಲಿ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ತಮ್ಮ ಮತವನ್ನು ಚಲಾಯಿಸಲು ಬಳಕೆದಾರರ ಐಡಿ / ಪಾಸ್‌ವರ್ಡ್ ಪಡೆಯಲು, ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ (ಡಿಪಿ) ಮೂಲಕ ತಮ್ಮ ಡಿಪಾಸಿಟರಿ(ಗಳು) ನಲ್ಲಿ ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ.

ಈ ಸೂಚನೆಯನ್ನು ಕಂಪನಿಯ ಎಲ್ಲಾ ಸದಸ್ಯರ ಮಾಹಿತಿ ಮತ್ತು ಪ್ರಯೋಜನಕ್ಕಾಗಿ ನೀಡಲಾಗಿದ್ದು, ಇದು ಎಂಸಿಎ ಮತ್ತು ಸೆಬಿ ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳ ಅನುಸರಣೆಯಲ್ಲಿದೆ.

ಎಥರ್ ಎನರ್ಜಿ ಲಿಮಿಟೆಡ್ ಪರವಾಗಿ
ಸಹಿ/-
ಪೂಜಾ ಅಗರ್ವಾಲ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ಸದಸ್ಯತ್ವ ಸಂಖ್ಯೆ: A49310

ದಿನಾಂಕ: ಆಗಸ್ಟ್ 20, 2025
ಸ್ಥಳ: ಬೆಂಗಳೂರು

ಗುಜರಾತ್ ಮೂಲದ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲು

ಹೈನುಗಾರಿಕೆ ಹೆಸರಲ್ಲಿ ಪ್ರೇಮ್‌ಗೆ ವಂಚನೆ

ಬೆಂಗಳೂರು: ಕನ್ನಡದ ಖ್ಯಾತ ಚಿತ್ರ ನಿರ್ದೇಶಕ ಪ್ರೇಮ್ ಅವರಿಂದ ಲಕ್ಷಾಂತರ ರು. ಹಣ ಪಡೆದು ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಹೈನುಗಾರಿಕೆಗಾಗಿ ಎಮ್ಮೆಗಳನ್ನು ಖರೀದಿಸಲು ಇಚ್ಚಿಸಿದ್ದ ಪ್ರೇಮ್ ಅವರಿಂದ 4.50 ಲಕ್ಷ ರು. ಹಣ ಪಡೆದು ವಂಚಿಸಿರುವ ಆರೋಪದ ಮೇಲೆ ಎಫ್‌ಐಆರ್ ದಾಖಲಾಗಿದೆ.

ಪ್ರೇಮ್ ಅವರ ಮ್ಯಾನೇಜರ್ ಆಗಿರುವ ದಶಾವರ ಚಂದ್ರು ಎಂಬವರು ನೀಡಿರುವ ದೂರಿನ ಅನ್ವಯ ಗುಜರಾತ್ ಮೂಲದ ವಘೇಲಾ ವನರಾಜ್ ಭಾಯ್ ಎಂಬಾತನ ವಿರುದ್ಧ ಚಂದ್ರಾಲೇಔಟ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಪ್ರೇಮ್ ಅವರು ಹೈನುಗಾರಿಕೆ ಮಾಡಲು ಎಮ್ಮೆಗಳನ್ನು ಖರೀದಿಸಲು ಮುಂದಾದಾಗ ಗುಜರಾತ್ನ ಗಧಡಾ ಮೂಲದ ವನರಾಜ್ ಭಾಯ್ ಎಂಬಾತನ ಪರಿಚಯವಾಗಿತ್ತು. ಎಮ್ಮೆಗಳ ಖರೀದಿ ಮಾತುಕತೆ ಮಾಡಿದ್ದ ಪ್ರೇಮ್, ಜುಲೈನಲ್ಲಿ 25 ಸಾವಿರ ರು. ಮುಂಗಡ ಹಣ ವರ್ಗಾಯಿಸಿದ್ದರು. ಬಳಿಕ ಹಂತ - ಹಂತವಾಗಿ ಒಟ್ಟು 4.50 ಲಕ್ಷ ರು. ಹಣವನ್ನು ಆರೋಪಿ ವನರಾಜ್ ಭಾಯ್ ಖಾತೆಗೆ ವರ್ಗಾಯಿಸಲಾಗಿತ್ತು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆರೋಪಿ ಮೊಬೈಲ್ ಸ್ವಿಚ್‌ಆಫ್

ವನರಾಜ್ ಭಾಯ್ ನೀಡಿದ್ದ ವಿಳಾಸಕ್ಕೆ ಪರಿಚಿತರನ್ನು ಕಳುಹಿಸಿ ವಿಚಾರಿಸಿದಾಗ ಆತ ಆ ವಿಳಾಸದಲ್ಲಿ ಇಲ್ಲ ಎಂದು ತಿಳಿದು ಬಂದಿದೆ. ಸದ್ಯ ಮೊಬೈಲ್ ಆಫ್ ಮಾಡಿಕೊಂಡಿದ್ದಾರೆ. ಈ ಬಗ್ಗೆ ವನರಾಜ್ ಭಾಯ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ತಮ್ಮ ಮ್ಯಾನೇಜರ್ ದಶಾವರ ಚಂದ್ರು ಮೂಲಕ ಪ್ರೇಮ್ ದೂರು ಕೊಡಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಚಂದ್ರಾಲೇಔಟ್ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದು, ಹಣ ವರ್ಗಾವಣೆಯಾದ ಖಾತೆಯ ವಿವರಗಳನ್ನು ಪರಿಶೀಲನೆ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ.

ಅಲ್ಲದೇ, ವಾಟ್ಸ್‌ಅಪ್ ಮೂಲಕ ಎರಡು ಎಮ್ಮೆಗಳ ವಿಡಿಯೋ ಕಳಿಸಿದ್ದ ವನರಾಜ್ ಭಾಯ್, ಅವುಗಳನ್ನ ಕಳಿಸಿಕೊಡುತ್ತಿರುವುದಾಗಿ ತಿಳಿಸಿದ್ದ. ಆದರೆ, ಒಂದು ವಾರ ಕಳೆದರೂ ಎಮ್ಮೆಗಳು ಬಾರದಿದ್ದಾಗ ಹಣ ವಾಪಸ್ ನೀಡುವಂತೆ ಪ್ರೇಮ್ ಅವರು ಕೇಳಿದ್ದರು. ಆದರೆ ಹಣ ನೀಡದ ವನರಾಜ್ ಭಾಯ್ ಸತಾಯಿಸುತ್ತಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ.

ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪ್ರಕರಣ

ಪೋಕ್ಸೊ ವಿಚಾರಣೆ ತ್ವರಿತಕ್ಕೆ ಮನವಿ

ಬೆಂಗಳೂರು: ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಮಾಜಿ ಮುಖ್ಯ ಮಂತ್ರಿ ಯಡಿಯೂರಪ್ಪ ವಿರುದ್ಧ ದಾಖಲಾದ ಪ್ರಕರಣ ಸಂಬಂಧ ವಿಚಾರಣಾ ನ್ಯಾಯಾಲಯದಲ್ಲಿ ಶೀಘ್ರ ವಿಚಾರಣೆಗೆ ಅವಕಾಶ ಕಲ್ಪಿಸಬೇಕು ಎಂದು ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮನವಿ ಮಾಡಿದೆ.

ಪೋಕ್ಸೋ ಪ್ರಕರಣದಲ್ಲಿ ಕಾಗ್ನಿಜೆನ್ಸ್ ಪಡೆದುಕೊಂಡಿದ್ದ ವಿಶೇಷ ನ್ಯಾಯಾಲಯದ ಕ್ರಮ ಮತ್ತು ಸಿಐಡಿ ಪೊಲೀಸರು ದಾಖಲಿ ಸಿರುವ ಎಫ್ ಐಆರ್ ರದ್ದು ಕೋರಿ ಯಡಿಯೂರಪ್ಪ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿಗೆ ಪ್ರಾಸಿಕ್ಯೂಷನ್ ಪರ ವಕೀಲರು ಬುಧವಾರ ಈ ಮನವಿ ಮಾಡಿದರು. ವಿಚಾ ರಣೆ ವೇಳೆ ಅರ್ಜಿದಾರರ ಪರ ವಕೀಲರು, ಪ್ರಕರಣ ಸಂಬಂಧ ಇತರ ಆರೋಪಿಗಳು ಪ್ರಕರಣ ರದ್ದುಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಆ ಅರ್ಜಿಗಳೊಂದಿಗೆ ಅರ್ಜಿ ದಾರ ಯಡಿಯೂರಪ್ಪ ಅವರ ಪ್ರಕರಣವನ್ನು ವಿಚಾರಣೆ ನಡೆಸಲು ಪರಿಗಣಿಸಬೇಕು. ವಿಚಾರಣೆಗೆ ಸೆಪ್ಟಂಬರ್ ಮೊದಲ ವಾರಕ್ಕೆ ಮುಂದೂಡಬೇಕು ಎಂದು ಮನವಿ ಮಾಡಿದರು.

23ಕ್ಕೆ ವಿಚಾರಣೆ ಮುಂದೂಡಿಕೆ

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸರಕಾರ ಪರವಾಗಿ ಹಾಜರಿದ್ದ ಹಿರಿಯ ವಕೀಲ ರಾದ ಪ್ರೊ.ರವಿವರ್ಮ ಕುಮಾರ್, ಅರ್ಜಿದಾರರಾದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ಅಪ್ರಾಪ್ತೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ಅಸಭ್ಯ ವಾಗಿ ವರ್ತಿಸಿರುವ ಆರೋಪವಿದೆ. ಪೋಕ್ಸೋ ಕಾಯಿದೆಯಲ್ಲಿ ಪ್ರಕರಣ ದಾಖಲಾಗಿದ್ದು, ಶೀಘ್ರ ವಿಚಾರಣೆ ನಡೆಯಬೇಕು. ತ್ವರಿತಗತಿಯಲ್ಲಿ ಸಾಕ್ಷಿಗಳ ವಿಚಾರಣೆ ಮಾಡಬೇಕಾಗಿದೆ. ಅಲ್ಲದೆ, ಪ್ರಕರಣ ಸಂಬಂಧ ವಿಶೇಷ ನ್ಯಾಯಾಲಯ ಪಡೆದುಕೊಂಡಿದ್ದ ಕಾಗ್ನಿಜೆನ್ಸ್ ಇಂದಿಗೆ ಮುಕ್ತಾಯವಾಗಲಿದೆ. ಆದ್ದರಿಂದ ಕಾಗ್ನಿಜೆನ್ಸ್ ಪಡೆದುಕೊಂಡಿರುವ ವಿಶೇಷ ನ್ಯಾಯಾಲಯ ಆದೇಶಕ್ಕೆ ತಡೆ ನೀಡಬಾರದು ಎಂದು ಪೀಠಕ್ಕೆ ಮನವಿ ಮಾಡಿದರು. ವಾದ -ಪ್ರತಿವಾದ ಆಲಿಸಿದ ನ್ಯಾಯಪೀಠ, ಕಾಗ್ನಿಜೆನ್ಸ್ ಪಡೆದುಕೊಂಡಿದ್ದ ವಿಶೇಷ ನ್ಯಾಯಾ ಲಯದ ಕ್ರಮಕ್ಕೆ ನೀಡಿದ್ದ ತಡೆಯಾಜ್ಞೆ ವಿಸ್ತರಿಸಿ, ವಿಚಾರಣೆಯನ್ನು ಆಗಸ್ಟ್ 23ಕ್ಕೆ ನಿಗದಿಪಡಿಸಿತು.

ಪರಶುರಾಮ ಪ್ರತಿಮೆ ಮರು ಅನಾವರಣಕ್ಕೆ ಕೋರಿ ಹೈಕೋರ್ಟ್‌ನಲ್ಲಿ ಪಿಐಎಲ್

ಥೀಮ್ ಪಾರ್ಕ್: 5 ಲಕ್ಷ ಠೇವಣಿಗೆ ಸೂಚನೆ

ಬೆಂಗಳೂರು: ಕಾರ್ಕಳದ ಪರಶುರಾಮ ಥೀಮ್ ಪಾರ್ಕ್‌ನಲ್ಲಿ ಪರಶುರಾಮ ಪ್ರತಿಮೆಯನ್ನು ಮರು ಅನಾವರಣ ಮಾಡಲು ನಿರ್ದೇಶನ ನೀಡಬೇಕು ಎಂದು ಕೋರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಅರ್ಜಿದಾರರಿಗೆ ಮುಂದಿನ ಎರಡು ವಾರಗಳಲ್ಲಿ ಐದು ಲಕ್ಷ ರು.ಗಳನ್ನು ರಿಜಿಸ್ಟ್ರಾರ್ ಕಚೇರಿಯಲ್ಲಿ ಠೇವಣಿ ಇಡುವಂತೆ ಹೈಕೋರ್ಟ್ ಸೂಚನೆ ನೀಡಿದೆ.

ಈ ಸಂಬಂಧ ಉಡುಪಿ ಜಿಲ್ಲೆಯ ವರಂಗ ನಿವಾಸಿಯಾಗಿರುವ ಕೆಪಿಸಿಸಿ ಸದಸ್ಯರು ಹಾಗೂ ಕಳೆದ ವಿಧಾನಸಭೆ ಚುನಾಣೆಯಲ್ಲಿ ಕಾರ್ಕಳ ಕ್ಷೇತ್ರದಿಂದ ಪರಾಜಿತ ಅಭ್ಯರ್ಥಿಯಾಗಿದ್ದ ಉದಯ್ ಶೆಟ್ಟಿ ಮುನಿಯಾಳ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿ ವಿಚಾರಣೆಯನ್ನು ಮುಂದೂಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಉಡುಪಿ ಜಿಲ್ಲೆಯ ಕಾರ್ಕಳದ ಪರಶುರಾಮ ಥೀಮ್ ಪಾರ್ಕ್‌ನಲ್ಲಿ ಪರಶುರಾಮ ಪ್ರತಿಮೆ ನಿರ್ಮಾಣಕ್ಕೆ ನಿರ್ಧರಿಸಲಾಗಿತ್ತು. ಕಾರಣಾಂತರಗಳಿಂದ ಅದು ಸಾಧ್ಯವಾಗಿಲ್ಲ. ಪ್ರತಿಮೆ ನಿರ್ಮಾಣವಾಗದಿದ್ದಲ್ಲಿ ಈ ಭಾಗದ ಜನರ ಭಾವನೆಗಳಿಗೆ ಧಕ್ಕೆಯಾಗಲಿದೆ. ಹೀಗಾಗಿ ಮತ್ತೆ ಪ್ರತಿಮೆ ನಿರ್ಮಾಣಕ್ಕೆ ನಿರ್ದೇಶನ ನೀಡಬೇಕು ಎಂದು ಪೀಠಕ್ಕೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಜನರ ಭಾವನೆಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಲು ನಿಮ್ಮ ಕೊಡುಗೆ ಏನು ಎಂದು ಪ್ರಶ್ನಿಸಿತು. ಇದಕ್ಕೆ ವಕೀಲರು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಬಳಿಕ ಪೀಠ, ನೀವು ಐದು ಲಕ್ಷ ರು.ಗಳನ್ನು ಪಾವತಿಸುವಿರೇ ಎಂದು ಪ್ರಶ್ನಿಸಿತು. ಇದಕ್ಕೆ ಸಮ್ಮತಿಸಿ, ಐದು ಲಕ್ಷ ರು. ಪಾವತಿ ಮಾಡುವುದಕ್ಕೆ ಸಿದ್ಧರಿದ್ದೇವೆ ಎಂದು ತಿಳಿಸಿದರು. ಈ ಅಂಶವನ್ನು ದಾಖಲಿಸಿಕೊಂಡ ನ್ಯಾಯಪೀಠ, ವಿಚಾರಣೆ ಮುಂದೂಡಿತು.



ಏನಿದು ಪ್ರಕರಣ?

2023ರ ಜನವರಿ 27ರಲ್ಲಿ ಸರಕಾರ 33 ಅಡಿಯ ಪರಶುರಾಮ ಪ್ರತಿಮೆಯನ್ನು ಕಾರ್ಕಳದಲ್ಲಿ ಉದ್ಘಾಟನೆ ಮಾಡಿತ್ತು. ಈ ಸಂದರ್ಭದಲ್ಲಿ ಕಂಚಿನ ಪ್ರತಿಮೆಯ ಬದಲಿಗೆ ಹಿತ್ತಾಳೆ ಪ್ರತಿಮೆ ಅನಾವರಣ ಮಾಡಿ ದೊಡ್ಡ ಮಟ್ಟದ ಅಕ್ರಮ ನಡೆದಿತ್ತು ಎಂಬ ಆರೋಪವಿತ್ತು. ಸಾರ್ವಜನಿಕ ಸುರಕ್ಷತೆ ದೃಷ್ಟಿಯಿಂದ ಪ್ರತಿಮೆ ತೆರವುಗೊಳಿಸಲಾಗಿತ್ತು. ಅಲ್ಲದೆ, ಅವ್ಯವಹಾರ ಆರೋಪ ಸಂಬಂಧ ಶಿಲ್ಪಿ ಕೃಷ್ಣ ನಾಯಕ್ ಮತ್ತು ನಿರ್ಮಿತಿ ಕೇಂದ್ರದ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಪ್ರಕರಣ ಇತ್ಯರ್ಥಕ್ಕೆ ಹಲವು ವರ್ಷಗಳಾಗಲಿದೆ. ಹೀಗಾಗಿ ಪ್ರತಿಮೆ ಮತ್ತೆ ಅನಾವರಣ ಮಾಡಬೇಕು ಎಂದು ಅರ್ಜಿಯಲ್ಲಿ ಕೇಳಲಾಗಿದೆ.

ಕನ್ನಡ ನಿರ್ಲಕ್ಷ್ಯ ಖಂಡಿಸಿ ರಾಜ್ಯ ಸಾರಿಗೆ ಆಯುಕ್ತರಿಗೆ ಪ್ರಾಧಿಕಾರ ಪತ್ರ

ಅನ್ಯ ಭಾಷೆ: ಖಾಸಗಿ ಬಸ್‌ಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ಬೆಂಗಳೂರು: ಖಾಸಗಿ ಬಸ್ ಗಳಲ್ಲಿ ಕನ್ನಡ ಭಾಷೆಯ ಬದಲಾಗಿ ಬೇರೆ ಭಾಷೆಗಳನ್ನು ಬಳಸಲಾಗುತ್ತಿದ್ದು, ಈ ಬಗ್ಗೆ ಸಾರಿಗೆ ಇಲಾಖೆಗೆ ಪ್ರಾಧಿಕಾರದ ಅಧ್ಯಕ್ಷ ಪತ್ರ ಬರೆದಿದ್ದು, ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕರ್ನಾಟಕದೊಳಗೆ ಸಂಚರಿಸುವ ಸ್ಥಳೀಯರ ಮಾಲೀಕತ್ವದ ಖಾಸಗಿ ಬಸ್‌ಗಳ ಮೇಲೆ ಕನ್ನಡ ಸಂಪೂರ್ಣವಾಗಿ ಮಾಯವಾಗಿದ್ದು, ಕನ್ನಡದ ಬದಲಾಗಿ ಇತರೆ ಭಾಷೆಗಳನ್ನು ಬಳಸಲಾಗುತ್ತಿದೆ. ಇದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಕ್ರೋಶಕ್ಕೆ ಕಾರಣವಾಗಿದ್ದು, ಕೂಡಲೇ ಅಂತಹವರ ಮೇಲೆ ಕ್ರಮ ಕೈಗೊಳ್ಳುವಂತೆ ಸಾರಿಗೆ ಇಲಾಖೆ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಲಾಗಿದೆ.

ಖಾಸಗಿ ಬಸ್‌ಗಳ ಮೇಲೆ ಕನ್ನಡ ಭಾಷೆ ಬಿಟ್ಟು ಬೇರೆ ಭಾಷೆಗಳನ್ನು ಬಳಸಲಾಗುತ್ತಿದ್ದು, ಬಸ್‌ಗಳ ಮೇಲೆ ಕನ್ನಡ ಇರುವಂತೆ ನೋಡಿಕೊಳ್ಳಲು ರಾಜ್ಯ ಸಾರಿಗೆ ಇಲಾಖೆಗೆ ಸೂಚನೆ ನೀಡಿದ್ದು, ಕಾನೂನು ಉಲ್ಲಂಘನೆ ಮಾಡಿದ ಸಂಸ್ಥೆಗಳು ಮತ್ತು ಮಾಲೀಕರ ಮೇಲೆ ಕ್ರಮಕ್ಕೆ ಮುಂದಾಗುವಂತೆ ಒತ್ತಾಯಿಸಿದ್ದು, ಕರ್ನಾಟಕ ರಾಜ್ಯದ ಒಳಗೆ ಸಂಚರಿಸುವ ಸ್ಥಳೀಯರ ಮಾಲೀಕತ್ವದ ಅನೇಕ ಬಸ್‌ಗಳ ಮೇಲೆ ಇರುವ ಫಲಕಗಳು ಹಾಗೂ ಬಸ್ ಹೆಸರುಗಳಲ್ಲಿ ಕೂಡ ಕನ್ನಡ ಭಾಷೆ ಸಂಪೂರ್ಣವಾಗಿ ಕಾಣೆಯಾಗಿದ್ದು, ಸಾರಿಗೆ ಇಲಾಖೆ ಕೂಡಲೇ ಕ್ರಮಕ್ಕೆ ಮುಂದಾಗಬೇಕು ಎಂದು ಪತ್ರ ಬರೆದಿದ್ದಾರೆ.

ಸಾರಿಗೆ ಮತ್ತು ರಸ್ತೆ ಸುರಕ್ಷತಾ ಇಲಾಖೆ ಆಯುಕ್ತರಿಗೆ ಪತ್ರ ಬರೆದಿರುವ ಬಿಳಿಮಲೆ, ಖಾಸಗಿ ಸಾರಿಗೆ ಸಂಸ್ಥೆಗಳು ಅನಿಯಂತ್ರಿತವಾಗಿ ಕನ್ನಡವನ್ನು ಕಡೆಗಣಿಸುವುದು ಸಾಮಾಜಿಕವಾಗಿ ತಪ್ಪು ಸಂದೇಶವನ್ನು ರವಾನಿಸುತ್ತದೆ. ವಾಹನಗಳ ಸಂಚಾರಕ್ಕೆ ಪರವಾನಗಿ ನೀಡುವ ಅಥವಾ ನವೀಕರಣ ಮಾಡುವ ಸಂದರ್ಭದಲ್ಲಿ ಇದನ್ನು ಹೆಚ್ಚಿನ ಮುತುವರ್ಜಿಯಿಂದ ಇಲಾಖೆ ಗಮನ ವಹಿಸಬೇಕಾಗುತ್ತದೆ ಎಂದಿದ್ದಾರೆ. ಕೂಡಲೇ ಈ ವಿಷಯವನ್ನು ಸಾರಿಗೆ ಇಲಾಖೆ ಅಭಿಯಾನದ ಮಾದರಿಯಲ್ಲಿ ಕೈಗೆತ್ತಿಕೊಂಡು ರಾಜ್ಯದಲ್ಲಿ ವ್ಯವಹರಿಸುವ ಖಾಸಗಿ ಸಾರಿಗೆ ಸಂಸ್ಥೆಗಳು ತಮ್ಮ ವಾಹನಗಳ ಮೇಲೆ ಕನ್ನಡ ಭಾಷೆಯಲ್ಲಿ ಫಲಕಗಳು ಮತ್ತು ಹೆಸರುಗಳನ್ನು ಅಳವಡಿಸುವಲ್ಲಿ ಕೂಡಲೇ ಕ್ರಮವಹಿಸಲು ನಿರ್ದೇಶನ ನೀಡಬೇಕು. ನಿಯಮ ಉಲ್ಲಂಘಿಸುವ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

> ಸಾರಿಗೆ ಇಲಾಖೆಗೆ ಪ್ರಾಧಿಕಾರದ ಅಧ್ಯಕ್ಷರು ಬರೆದಿರುವ ಪತ್ರ ನಮಗೆ ತಲುಪಿದೆ. ಈ ಬಗ್ಗೆ ಚರ್ಚೆ ಮಾಡಿ ಯಾವ ಕ್ರಮಕೈಗೊಳ್ಳಬಹುದು ಎಂದು ತೀರ್ಮಾನ ಮಾಡುತ್ತೇವೆ.
>
> - ಸಿ.ಮಲ್ಲಿಕಾರ್ಜುನ, ರಾಜ್ಯ ಸಾರಿಗೆ ಇಲಾಖೆ ಆಯುಕ್ತ

ನೇರಫೋನ್ ಇನ್ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವತಿಯಿಂದ ಆ.22ರಂದು ಬೆಳಗ್ಗೆ 9.30ರಿಂದ 10.30ರವರೆಗೆ ನೇರ ಫೋನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಮಂಡಳಿಯ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ,ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಸಂಪರ್ಕ ಸಂಖ್ಯೆ 080-22945119 ಮತ್ತು 080-22229639.

ಮಾನ್ಯ ಪ್ರಧಾನ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್. ನಂ: 406 / 2025

ಅರ್ಜಿದಾರರು: 1. ಶ್ರೀ.ಬೊಮ್ಮೇಗೌಡ ಬಿನ್ ಲೇಟ್ ಬೊಮ್ಮೇಗೌಡ ವಯಸ್ಸು 56 ವರ್ಷ, ವಾಸ:- ಈರೇಗೌಡನದೊಡ್ಡಿ ಗ್ರಾಮ, ಆಲನಾಥ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು
ವಿರುದ್ಧ
ಪ್ರತಿಅರ್ಜಿದಾರರು: ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು ಕೋಡಿಹಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಪ್ರಕರಣದ 1 ರಿಂದ 6ನೇ ಅರ್ಜಿದಾರರ ತಾಯಿಯಾದ ಶ್ರೀಮತಿ.ಮಾತ್ತೂರಮ್ಮ ಕೋಂ ಲೇಟ್ ಬೊಮ್ಮೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಆಲನಾಥ ಅಂಚೆ, ಈರೇಗೌಡನದೊಡ್ಡಿ ಗ್ರಾಮದಲ್ಲಿ ದಿನಾಂಕ:21.02.2018 ರಂದು ಮರಣ ಹೊಂದಿದ್ದು, ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 30.09.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.
ದಿನಾಂಕ: 19.08.2025 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದಂತೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ.
ಅರ್ಜಿದಾರರ ಪರ ವಕೀಲರು
ಶೀ.ಬಿ.ವಿ.ನಾಗೇಶ್
ವಕೀಲರು
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 318 / 2025

ಅರ್ಜಿದಾರರು: 1. ಶ್ರೀ.ಚಲುವಯ್ಯ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 72 ವರ್ಷ, ವಾಸ:- ನಂ.117, ವಾರ್ಡ್ ನಂ.3, 4ನೇ ಕ್ರಾಸ್, ಕಬ್ಬಾಳಮ್ಮ ದೇವಸ್ಥಾನದ ಹತ್ತಿರ, ಗಾಂಧಿನಗರ, ರಾಮನಗರ, 2. ಶ್ರೀಮತಿ. ಕೆಂಪಮ್ಮ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 62 ವರ್ಷ, ವಾಸ:- ಇಟ್ಟಮಡು ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ. 3. ಶ್ರೀ.ಸಿದ್ದರಾಜು ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 60 ವರ್ಷ, ವಾಸ:- ಹುಲ್ತಾರ್ ಹೊಸದೊಡ್ಡಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ. 4. ಶ್ರೀಮತಿ. ಗಿರಿಜಮ್ಮ ಕೋಂ ಸಿದ್ದಪ್ಪ.ಕೆ.ಎಸ್ ವಯಸ್ಸು 68 ವರ್ಷ, ವಾಸ:- ಕೋಟೆ ಬೀದಿ, ವಾಟರ್ ಟ್ಯಾಂಕ್ ಹತ್ತಿರ, ಹಾರೋಹಳ್ಳಿ ಟೌನ್, ಹೋಬಳಿ ಮತ್ತು ತಾಲ್ಲೂಕು, ರಾಮನಗರ ಜಿಲ್ಲೆ.
ವಿರುದ್ಧ
ಪ್ರತಿಅರ್ಜಿದಾರರು: 1 ಜನನ ಮತ್ತು ಮರಣ ನೊಂದಣಾಧಿಕಾರಿಗಳು, ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ. 2. ಗ್ರಾಮ ಲೆಕ್ಕಾಧಿಕಾರಿಗಳು ಕೋನಸಂದ್ರ ವೃತ್ತ, ಹಾರೋಹಳ್ಳಿ ಹೋಬಳಿ ಮತ್ತು ತಾಲ್ಲೂಕು ರಾಮನಗರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ , 1 ರಿಂದ 3ನೇ ಅರ್ಜಿದಾರರ ಸಹೋದರಿ, ಮತ್ತು 4ನೇ ಅರ್ಜಿದಾರರ ನಾದಿನಿ (ಸಹೋದರನ ಪತ್ನಿ) ರವರಾದ ಶ್ರೀಮತಿ. ಗುಜ್ಜಮ್ಮ ಕೋಂ ಲೇಟ್ ಗುಡ್ಡಯ್ಯ ರವರು ಇದೇ ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದಲ್ಲಿ ದಿನಾಂಕ:08.07.2015 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾ-ರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 23.09.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ: 19.08.2025 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಶೀ.ಬಿ.ವಿ.ನಾಗೇಶ್
ವಕೀಲರು
ಸ್ಥಳ: ಕನಕಪುರ
ದಿನಾಂಕ:02.08.2025

ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 317 / 2025

ಅರ್ಜಿದಾರರು: 1. ಶ್ರೀ.ಚಲುವಯ್ಯ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 72 ವರ್ಷ, ವಾಸ:- ನಂ.117, ವಾರ್ಡ್ ನಂ.3, 4ನೇ ಕ್ರಾಸ್, ಕಬ್ಬಾಳಮ್ಮ ದೇವಸ್ಥಾನದ ಹತ್ತಿರ, ಗಾಂಧಿನಗರ, ರಾಮನಗರ, 2. ಶ್ರೀಮತಿ. ಕೆಂಪಮ್ಮ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 62 ವರ್ಷ, ವಾಸ:- ಇಟ್ಟಮಡು ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ. 3. [illegible]

ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 316 / 2025

ಅರ್ಜಿದಾರರು: 1. ಶ್ರೀ.ಚಲುವಯ್ಯ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 72 ವರ್ಷ, ವಾಸ:- ನಂ.117, ವಾರ್ಡ್ ನಂ.3, 4ನೇ ಕ್ರಾಸ್, ಕಬ್ಬಾಳಮ್ಮ ದೇವಸ್ಥಾನದ ಹತ್ತಿರ, ಗಾಂಧಿನಗರ, ರಾಮನಗರ, 2. ಶ್ರೀಮತಿ. ಕೆಂಪಮ್ಮ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 62 ವರ್ಷ, ವಾಸ:- ಇಟ್ಟಮಡು ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ. 3. [illegible]

ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 315 / 2025

ಅರ್ಜಿದಾರರು: 1. ಶ್ರೀ.ಚಲುವಯ್ಯ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 72 ವರ್ಷ, ವಾಸ:- ನಂ.117, ವಾರ್ಡ್ ನಂ.3, 4ನೇ ಕ್ರಾಸ್, ಕಬ್ಬಾಳಮ್ಮ ದೇವಸ್ಥಾನದ ಹತ್ತಿರ, ಗಾಂಧಿನಗರ, ರಾಮನಗರ, 2. ಶ್ರೀಮತಿ. ಕೆಂಪಮ್ಮ ಬಿನ್ ಲೇಟ್ ಚಿಕ್ಕಹುಡುಗಯ್ಯ @ ಸಿದ್ದಯ್ಯ @ ಸಿದ್ದಪ್ಪ ವಯಸ್ಸು 62 ವರ್ಷ, ವಾಸ:- ಇಟ್ಟಮಡು ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ. 3. [illegible]

ಮಾನ್ಯ ಪ್ರಧಾನ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್. ನಂ: 407 / 2025

ಅರ್ಜಿದಾರರು: 1. ಶ್ರೀ.ಬೊಮ್ಮೇಗೌಡ ಬಿನ್ ಲೇಟ್ ಬೊಮ್ಮೇಗೌಡ ವಯಸ್ಸು 56 ವರ್ಷ, ವಾಸ:- ಈರೇಗೌಡನದೊಡ್ಡಿ ಗ್ರಾಮ, ಆಲನಾಥ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು
ವಿರುದ್ಧ
ಪ್ರತಿಅರ್ಜಿದಾರರು: ತಹಶೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮ ಲೆಕ್ಕಾಧಿಕಾರಿಗಳು ಕೋಡಿಹಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಪ್ರಕರಣದ 1 ರಿಂದ 6ನೇ ಅರ್ಜಿದಾರರ ತಂದೆಯಾದ ಶ್ರೀ. ಬೊಮ್ಮೇಗೌಡ ಬಿನ್ ಲೇಟ್ ಬೊಮ್ಮೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಆಲನಾಥ ಅಂಚೆ, ಈರೇಗೌಡನದೊಡ್ಡಿ ಗ್ರಾಮದಲ್ಲಿ ದಿನಾಂಕ:31/08/1999 ರಂದು ಮರಣ ಹೊಂದಿದ್ದು, ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು ಇವರ ಮರಣ ದಿನಾಂಕದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 30.09.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.
ದಿನಾಂಕ: 19.08.2025 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದಂತೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ.
ಅರ್ಜಿದಾರರ ಪರ ವಕೀಲರು
ಶೀ.ಬಿ.ವಿ.ನಾಗೇಶ್
ವಕೀಲರು
ಸ್ಥಳ: ಕನಕಪುರ

ಸಮಾಚಾರ ಸಣ್ಣದಲ್ಲ

ಪಿಎಚ್.ಡಿ ಪ್ರದಾನ

ಬೆಂಗಳೂರು: ಶೀಲಾ ಅವರು ಮಂಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ ನೀಡಿ ಗೌರವಿಸಿದೆ. ಡಾ.ಎಚ್.ಎಂ ತೇಜಸ್ವಿನಿ ಅವರ ಮಾರ್ಗದರ್ಶನದಲ್ಲಿ ಶೀಲಾ ಬಿ.ಎಸ್.ಅವರು ವಾಣಿಜ್ಯ ಶಾಸ್ತ್ರದಲ್ಲಿ 'ಎಂಪ್ಲಾಯಿ ವೆಲ್‌ಫೇರ್ ಮೆಷರ್ಸ್ ಇನ್ ಗಾರ್ಮೆಂಟ್ ಇಂಡಸ್ಟ್ರಿ ಇನ್ ಕರ್ನಾಟಕ' ಎಂಬ ಮಹಾ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ ಪ್ರದಾನ ಮಾಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ 66/11ಕೆ.ವಿ. ಆಸ್ಟಿನ್ ಟೌನ್ ಉಪಕೇಂದ್ರ ವ್ಯಾಪ್ತಿಯಲ್ಲಿ ಆ.21ರಂದು ಬೆಳಗ್ಗೆ 10 ರಿಂದ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ವಿಕ್ಟೋರಿಯ ಲೇಔಟ್, ಪಾಮ್ ಗ್ರೂವು ರೋಡ್, ಬಾಲಾಜಿ ಥಿಯೇಟರ್, ಅಗ್ರಂ ವಿವೇಕನಗರ,ಸಣ್ಣೇನಹಳ್ಳಿ, ವೊನ್ನರ್ ಪೇಟೆ, ಆಂಜನೇಯ ಟೆಂಪಲ್ ಸ್ಟ್ರೀಟ್, ಕೆಎಸ್‌ಆರ್‌ಪಿ ಕ್ವಾಟ್ರಸ್, ಲಿಂಡನ್ ಸ್ಟ್ರೀಟ್, ಪಾಮ್ ಗ್ರೂವು ರೋಡ್, ಕ್ಷೇವಿಯರ್ ಲೇಔಟ್, ಯಲಗುಂಟೆ ಪಾಳ್ಯಮ್,ಆಸ್ಟಿನ್ ಟೌನ್ ನೀಲಸಂದ್ರ, ಬೆಂಗಳೂರು ಫರ್ನಿಚರ್ ,ರೋಸ್ ಗಾರ್ಡನ್, ಒ.ಆರ್.ಸಿ ರಸ್ತೆ, ಮತ್ತು ಸುತ್ತಮುತ್ತಲಿನ ಸ್ಥಳ. 66/11ಕೆವಿ ಪೂರ್ವಾಂಕರ ಪಾಮ್ ಬೀಚ್ ಉಪಕೇಂದ್ರ ವ್ಯಾಪ್ತಿಯಲ್ಲಿ ಆ.21ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಹಳೆಹಳ್ಳಿ, ಮಾರ್ಗೊಂಡಣ ಹಳ್ಳಿ, ಕಲ್ಕೆರೆ ರಸ್ತೆ, ಬೈರತಿ ಗ್ರಾಮ, ಕನಕಶ್ರೀಲೇಔಟ್, ಅಥಮ ವಿದ್ಯಾನಗರ, ಕೆ.ಆರ್.ಸಿ ಬಸ್ ನಿಲ್ದಾಣ, ಬೈರತಿ, ಗುಬ್ಬಿ ಅಡ್ಡ ರಸ್ತೆ, ಬೈರತಿ ಬಂಡೆ, ಕ್ಯಾಲಸನಹಳ್ಳಿ, ಪೂರ್ವಾಂಕರ ಅಪಾರ್ಟ್‌ಮೆಂಟ್ ,ಕಲ್ಕೆರೆ ರೋಡ,ಪೂರ್ಣ ಪ್ರಜ್ಞಾ, ಮಾರಗೊಂಡ ನಹಳ್ಳಿ, ಗವಿಗುಡಿ ಮತ್ತು ಸುತ್ತಮುತ್ತಲಿನ ಪ್ರದೇಶ. 66/11ಕೆ.ವಿ. ಎಚ್.ಎಸ್.ಆರ್ ಲೇಔಟ್ ಉಪಕೇಂದ್ರ ವ್ಯಾಪ್ತಿಯಲ್ಲಿ ಆ.21ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 05 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಬೊಮ್ಮನಹಳ್ಳಿ, ಎಚ್.ಎಸ್.ಆರ್ ಲೇಔಟ್, ಕುಡ್ಲೂ, ಜಕ್ಕಸಂದ್ರ, ಕೈಕೊಂಡನಹಳ್ಳಿ, ಸೋಮಸುಂದರಪಾಳ್ಯ, ಹೊಸಪಾಳ್ಯ, ಕೋರಮಂಗಲ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅರ್ಹರ ಪಟ್ಟಿ ನೀಡದಿದ್ದರೆ ಅನುದಾನ ವಾಪಸ್

ವಿಧಾನಸಭೆ: ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಉಪ ಯೋಜನೆಯ ಹಣದ ಬಳಕೆಯಲ್ಲಿ ಅರ್ಹ ಫಲಾನು ಭವಿಗಳ ಪಟ್ಟಿ ನೀಡದೆ ಇದ್ದರೆ ಅನುದಾನವನ್ನು ಹಿಂಪಡೆಯುವುದಾಗಿ ಸಮಾಜ ಕಲ್ಯಾಣ ಸಚಿವ ಎಚ್. ಸಿ .ಮಹದೇವಪ್ಪ ಎಚ್ಚರಿಕೆ ನೀಡಿದ್ದಾರೆ . ವಿಧಾನಸಭೆಯಲ್ಲಿ ಮಾಗಡಿ ಕ್ಷೇತ್ರದ ಶಾಸಕ ಎಚ್.ಸಿ .ಬಾಲಕೃಷ್ಣ ಅವರು ವಿವಿಧ ನಿಗಮಗಳಿಗೆ ಒದಗಿಸಿರುವ ಅನುದಾನದ ಬಗ್ಗೆ ಮಾಹಿತಿ ಕೇಳಿದರು ಹಾಗೂ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಕೊರೆಯುವುದು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ಸಮಯ ವ್ಯರ್ಥವಾಗುತ್ತಿದೆ. ಕಾಲಮಿತಿ ಯಲ್ಲಿ ಈ ಯೋಜನೆಗಳನ್ನು ಪೂರ್ಣಗೊಳಿಸಿ ಎಂದು ಒತ್ತಾಯಿಸಿದರು. ಉತ್ತರ ನೀಡಿದ ಸಚಿವ ಮಹದೇವಪ್ಪ, ಗಂಗಾ ಕಲ್ಯಾಣ ಹಾಗೂ ಇತರ ಯೋಜನೆಗಳನ್ನು ಜಿಲ್ಲಾವಾರು ಅನುಷ್ಠಾನಗೊಳಿಸಲಾಗುತ್ತಿದೆ. ಬೋರ್‌ವೆಲ್ ಕೊರೆದ ಬಳಿಕ, ವಿದ್ಯುತ್ ಸಂಪರ್ಕ ಕಲ್ಪಿಸುವುದು ಇಂಧನ ಇಲಾ ಖೆಯ ಜವಾಬ್ದಾರಿ. ಗಂಗಾ ಕಲ್ಯಾಣ ಯೋಜನೆ ಅಡಿ 75 ಸಾವಿರ ರು.ಗಳನ್ನು ನೀಡುತ್ತಿದ್ದೇವೆ. ಹೆಚ್ಚಿನ ವೆಚ್ಚವಾದರೆ ಅದನ್ನು ಇಂಧನ ಇಲಾಖೆಗೆ ಭರಿಸಬೇಕು ಎಂದರು. ಇಂಧನ ಇಲಾಖೆಗೆ ಎಸ್‌ಸಿ, ಎಸ್‌ಟಿ ಉಪ ಯೋಜನೆಯಲ್ಲಿ 5180 ಕೋಟಿ ರು.ನೀಡಲಾಗಿದೆ. ಆ ಹಣವನ್ನು ಯಾವುದಕ್ಕೆ ಬಳಕೆ ಮಾಡಲಾಗುತ್ತಿದೆ ಎಂದು ಶಾಸಕ ಎಂ. ಚಂದ್ರಪ್ಪ ಪ್ರಶ್ನಿಸಿದರು. ಉಪ ಯೋಜನೆಗಳ ಫಲಾನುಭವಿಗಳ ಪಟ್ಟಿಯನ್ನು ಎಲ್ಲಾ ಇಲಾಖೆಗಳು ಸಮಾಜ ಕಲ್ಯಾಣ ಇಲಾಖೆಗೆ ನೀಡಬೇಕು. ಇಲ್ಲವಾದರೆ ಅನುದಾನ ವಾಪಾಸ್ ಪಡೆಯಲಾಗುವುದು ಎಂದು ಮಹದೇವಪ್ಪ ಎಚ್ಚರಿಕೆ ನೀಡಿದರು.

ಒತ್ತುವರಿ ತೆರವು ಸ್ವಚ್ಛತೆ

ಬೆಂಗಳೂರು: ಬಿಬಿಎಂಪಿ ಪೂರ್ವ ವಲಯ, ರಾಜರಾಜೇಶ್ವರಿನಗರ ಹಾಗೂ ಯಲಹಂಕ ವಲಯಗಳಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ ಹಾಗೂ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಯಿತು. ಮುಖ್ಯ ಆಯುಕ್ತ ಮಹೇಶ್ವರ್ ರಾವ್ ರವರ ನಿರ್ದೇಶನದಂತೆ ವಲಯ ಆಯುಕ್ತರ ನೇತೃತ್ವದಲ್ಲಿ ನಗರದಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ ಹಾಗೂ ನಾಗರೀಕ ಸ್ನೇಹಿ ಮತ್ತು ಅಡೆತಡೆಯಿಲ್ಲದ ಪಾದಚಾರಿ ಮಾರ್ಗಗಳನ್ನು ಒದಗಿಸುವ ಉದ್ದೇಶದಿಂದ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುವುದು. ಗಣೇಶ ಹಬ್ಬದ ಆಚರಣೆಯ ನಿಮಿತ್ತ ಶಿವಾಜಿನಗರ ವಿಭಾಗದ ಹಲಸೂರು ಕೆರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲು ನಾಗರೀಕರು ಬರುವುದರಿಂದ ಸುತ್ತಲಿನ ಪ್ರದೇಶದಲ್ಲಿ ಆ.21ರಿಂದ 26ರವರೆಗೆ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಲಾಗುವುದು.

{ ವಿ.ಸುನೀಲ್ ಕುಮಾರ್ } ಶಾಸಕ

ಗ್ಯಾರಂಟಿ ಯೋಜನೆಗಳಿಗೆ 13 ಸಾವಿರ ಕೋಟಿ ರು.ಗಳನ್ನು ಖರ್ಚು ಮಾಡಿರುವುದಾಗಿ ಸಚಿವರು ಲಿಖಿತ ಮಾಹಿತಿ ನೀಡಿದ್ದಾರೆ. ಶಕ್ತಿ ಯೋಜನೆಗೆ 1500 ಕೋಟಿ ಬಳಕೆಯಾಗಿದೆ. ಪ್ರಯಾಣಿಕರಲ್ಲಿ ಎಸ್‌ಸಿ-ಎಸ್‌ಟಿಗಳನ್ನು ಹೇಗೆ ಗುರುತಿಸುತ್ತೀರಾ?

ನಾಗಮೋಹನ್‌ದಾಸ್ ವರದಿ ಅಂಗೀಕಾರದಿಂದ ದಲಿತ ವರ್ಗದ ದೀರ್ಘಕಾಲದ ಬೇಡಿಕೆ ಈಡೇರಿಕೆ

ಶಾಶ್ವತ ಪರಿಶಿಷ್ಟ ಆಯೋಗ ರಚನೆ: ಒಳ ಮೀಸಲು ಬಗ್ಗೆ ಸದನಕ್ಕೆ ಸಿಎಂ ಮಾಹಿತಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ: ಬಹುನಿರೀಕ್ಷಿತ ಒಳ ಮೀಸಲು ಜಾರಿಗೊಳಿಸುವ ಸಂಬಂಧ ವಿಶೇಷ ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಪ್ರಕಟಿಸಿದರು.

ಮಂಗಳವಾರ ನಡೆದ ವಿಶೇಷ ಸಚಿವ ಸಂಪುಟದಲ್ಲಿ ನ್ಯಾ. ನಾಗಮೋಹನ್ ದಾಸ್ ಆಯೋಗದ ಒಳಮೀಸಲಾತಿ ಶಿಫಾರಸ್ಸುಗಳನ್ನು ಕೆಲವು ಮಾರ್ಪಾಟುಗಳೊಂದಿಗೆ ಅಂಗೀಕರಿಸಿದ್ದೇವೆ. ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ಕುರಿತಂತೆ ಸುಪ್ರೀಂ ಕೋರ್ಟ್ ಪರಿಶಿಷ್ಟ ಜಾತಿಗಳ ಉಪವರ್ಗೀಕರಣ ಮಾಡುವ ಅಧಿಕಾರ ರಾಜ್ಯ ಸರಕಾರಗಳಿಗೆ ಸಾಂವಿಧಾನಿಕವಾಗಿ ದತ್ತವಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ನಮ್ಮ ಸರಕಾರ 12.11.2024 ರಂದು ನ್ಯಾ. ಎಚ್. ಎನ್. ನಾಗಮೋಹನ್‌ದಾಸ್ ಅವರ ಏಕ ಸದಸ್ಯ ಆಯೋಗವನ್ನು ರಚಿಸಿತ್ತು. ಈ ಆಯೋಗವು ಸೂಕ್ತ ದತ್ತಾಂಶಗಳನ್ನು ಸಂಗ್ರಹಿಸಿ, ಒಳ ಮೀಸಲಾತಿ ನೀಡುವ ಕುರಿತು ಶಿಫಾರಸುಗಳನ್ನು ಮಾಡಲು ಕೋರಲಾಯಿತು ಎಂದು ವಿವರಿಸಿದರು.

ನಾಗಮೋಹನ್‌ದಾಸ್ ಆಯೋಗ ರಾಜ್ಯದ 101 ಪರಿಶಿಷ್ಟ ಜಾತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ 1.08.2025 ರಂದು ವರದಿಯನ್ನು ಸಲ್ಲಿಸಿತು. ಆಯೋಗ ಪರಿಶಿಷ್ಟ ಜಾತಿಗಳಿಗೆ ಸೇರಿದ 1,05,09,871 ಜನರ ದತ್ತಾಂಶಗಳನ್ನು ಸಂಗ್ರಹಿಸಿದೆ. ಶೇ.93 ರಷ್ಟು ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಈ ಸಮೀಕ್ಷೆಗೆ ಲಭ್ಯವಾಗಿದೆ. ಸಚಿವ ಸಂಪುಟವು ಈ ವರದಿಯನ್ನು ಕೂಲಂಕಶವಾಗಿ ಪರಿಶೀಲಿಸಿದೆ. ಮಂಗಳವಾರ ನಡೆದ ವಿಶೇಷ ಸಚಿವ ಸಂಪುಟದಲ್ಲಿ ಆಯೋಗದ ಒಳಮೀಸಲಾತಿ ಶಿಫಾರಸುಗಳನ್ನು ಕೆಲವು ಮಾರ್ಪಾಟುಗಳೊಂದಿಗೆ ಅಂಗೀಕರಿಸಿದ್ದೇವೆ ಎಂದರು.

ಅದರಂತೆ ಎಡಗೈ ಸಂಬಂಧಿತ ಜಾತಿಗಳೆಂದು ಆಯೋಗವು ಗುರುತಿಸಿರುವ ಸಮುದಾಯಗಳಿಗೆ ಶೇ.6 ರಷ್ಟು ಒಳಮೀಸಲಾತಿ ಕಲ್ಪಿಸಲು ತೀರ್ಮಾನಿಸಿದ್ದೇವೆ. ಜಸ್ಟೀಸ್ ನಾಗಮೋಹನ್ ದಾಸ್ ಆಯೋಗವು ಪರಯ, ಮೊಗೇರ ಮುಂತಾದ ಬಲಗೈ ಸಂಬಂಧಿತ ಜಾತಿಗಳನ್ನು ಎಡಗೈ ಸಂಬಂಧಿತ ಜಾತಿಗಳ ಜತೆ ಸೇರಿಸಿತ್ತು. ಇದನ್ನು ಗಮನಿಸಿದ ಸಚಿವ ಸಂಪುಟ ಈ ಜಾತಿಗಳನ್ನು ಬಲಗೈ ಸಂಬಂಧಿತ ಜಾತಿಗಳ ಜತೆ ಸೇರಿಸಿ ಬಲಗೈ ಸಂಬಂಧಿತ ಜಾತಿಗಳ ಸಮೂಹಕ್ಕೆ ಶೇ.6 ರಷ್ಟು ಮೀಸಲಾತಿ ಕಲ್ಪಿಸಲು ತೀರ್ಮಾನಿಸಿದ್ದೇವೆ ಎಂದು ವಿವರಿಸಿದರು.

ಆಯೋಗವು ಎ,ಬಿ,ಸಿ,ಡಿ,ಇ ಎಂದು ಪ್ರವರ್ಗಗಳನ್ನಾಗಿ ವಿಭಾಗೀಕರಿಸಿ ಮಾಡಿದ್ದ ಶಿಫಾರಸನ್ನು ಸಚಿವ ಸಂಪುಟವು ಎ,ಬಿ,ಸಿ ಎಂದು ಮೂರು ಪ್ರವರ್ಗಗಳನ್ನಾಗಿ ವಿಭಾಗೀಕರಿಸಲು ಹಾಗೂ ಎಡಗೈ ಸಂಬಂಧಿತ ಜಾತಿಗಳುಳ್ಳ ಎ ಪ್ರವರ್ಗಕ್ಕೆ – ಶೇ. 6, ಬಲಗೈ ಸಂಬಂಧಿತ ಜಾತಿಗಳುಳ್ಳ ಬಿ ಪ್ರವರ್ಗಕ್ಕೆ – ಶೇ. 6 ಹಾಗೂ ಸಿ ಪ್ರವರ್ಗಕ್ಕೆ – ಶೇ.5 ರಷ್ಟು ಒಳಮೀಸಲಾತಿ ನೀಡಲು ತೀರ್ಮಾನಿಸಿದ್ದೇವೆ. ಪರಿಶಿಷ್ಟ ಜಾತಿಗಳಲ್ಲಿರುವ ಎಲ್ಲಾ 101 ಜಾತಿಗಳಿಗೆ ಶಿಕ್ಷಣ, ಉದ್ಯೋಗಾವಕಾಶ ಹಾಗೂ ಇನ್ನಿತರೆ ವಿಷಯಗಳಲ್ಲಿ ಅವಕಾಶಗಳನ್ನು ಒದಗಿಸುವಲ್ಲಿ ಸಮಾನತೆ ಮತ್ತು ನ್ಯಾಯ ಸಮ್ಮತತೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಈ ಮಾರ್ಪಾಡುಗಳನ್ನು ಮಾಡಲಾಗಿದೆ. ಈ ರೀತಿ ನಿರ್ಧಾರ ಮಾಡುವಾಗ ಸಚಿವ ಸಂಪುಟ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ನಮೂದಿಸಲಾದ ತತ್ವಗಳನ್ನು ಗಮನದಲ್ಲಿಟ್ಟುಕೊಂಡಿದೆ ಎಂದರು.

ಇತರ ನಾಲ್ಕು ತೀರ್ಮಾನಗಳೇನು?: ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆಯನ್ನು ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿಕೊಂಡು, ಕಾಲಕಾಲಕ್ಕೆ ಈ ಜಾತಿಗಳನ್ನು ಅಧ್ಯಯನ ಮಾಡಿ ವರದಿ ನೀಡಲು ಶಾಶ್ವತ ಪರಿಶಿಷ್ಟ ಜಾತಿಗಳ ಆಯೋಗವನ್ನು ರಚಿಸಲು ತೀರ್ಮಾನಿಸಿದ್ದೇವೆ. ಒಳ ಮೀಸಲಾತಿಯ ಕುರಿತಂತೆ ಆದೇಶ ಹೊರಡಿಸಿದ ಕೂಡಲೇ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಹಾಗೂ ಒಂದು ಬಾರಿಗೆ ವಯೋಮಿತಿ ಸಡಿಲಿಸಲು ತೀರ್ಮಾನಿಸಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಒಳ ಮೀಸಲು ಐತಿಹಾಸಿಕವಾದ ನಿರ್ಣಯ. ಸರ್ವ ಜನಾಂಗ ಸಂತೋಷ ಪಡುವಂಥ ನಿರ್ಣಯ ಇದಾಗಿದೆ. ಹೇಗಾದರೂ ಮಾಡಿ ಗೊಂದಲ ಮಾಡಬೇಕು ರಾಜಕೀಯ ಮಾಡಬೇಕೆಂಬುದು ಬಿಜೆಪಿ ಉದ್ದೇಶ ಅಷ್ಟೇ. ಸಿಎಂ ಮಾತನ್ನು ಸದಸ್ಯರು ಹಾಗೂ ಜನರೇ ಸ್ವಾಗತ ಮಾಡಿದ್ದಾರೆ. ಈ ಫಾರ್ಮುಲಾ ಎಲ್ಲರಿಗೂ ಒಪ್ಪಿಗೆ ಆಗಿದೆ. ಅವರ ಸಭಾತ್ಯಾಗ ರಾಜಕೀಯ ನಾಟಕವೇ ವಿನಹ.

-ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

- ಸಚಿವ ಸಂಪುಟದಿಂದ ಎ,ಬಿ,ಸಿ ಎಂದು ಮೂರು ಪ್ರವರ್ಗಗಳನ್ನಾಗಿ ವಿಭಾಗ
- ಎಸ್‌ಸಿ ಎಡಗೈ ಸಂಬಂಧಿತ ಜಾತಿಗಳುಳ್ಳ ಎ ಪ್ರವರ್ಗಕ್ಕೆ – ಶೇ. 6
- ಎಸ್‌ಸಿ ಬಲಗೈ ಸಂಬಂಧಿತ ಜಾತಿಗಳುಳ್ಳ ಬಿ ಪ್ರವರ್ಗಕ್ಕೆ – ಶೇ. 6
- ಸಿ ಪ್ರವರ್ಗಕ್ಕೆ – ಶೇ.5 ರಷ್ಟು ಒಳಮೀಸಲಾತಿ ನೀಡಲು ತೀರ್ಮಾನ

ಬಿಜೆಪಿ ಸಭಾತ್ಯಾಗ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಮೇಲೆ ಮಾತಾಡಲು ಬಿಜೆಪಿ ಸದಸ್ಯರು ಮುಂದಾದರು. ಆದರೆ, ಬಿಜೆಪಿ ಸದಸ್ಯರಿಗೆ ಸ್ಪೀಕರ್ ಅವಕಾಶ ನೀಡಲಿಲ್ಲ. ಸಿಎಂ ಸರಕಾರದ ಪರವಾಗಿ ಹೇಳಿಕೆ ನೀಡಬಹುದು, ಆದರೆ ಚರ್ಚೆಗೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು. ಈ ವೇಳೆ ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗಿಲ್ಲ. ಈಗ ನಾವು ಮಾಡಿದ್ದೇವೆ ಎಂದು ಸಿಎಂ ತಿರುಗೇಟು ನೀಡಿದರು. ಪಲಾಯನ ಮಾಡದಂತೆ ಆರ್. ಅಶೋಕ್ ಸಿಎಂ ಕಾಲೆಳೆದರು. ಅದಕ್ಕೆ ಪ್ರತಿಕ್ರಿಯಿಸುತ್ತಾ, ನನ್ನ ರಾಜಕೀಯ ಜೀವನದಲ್ಲಿ ನಾನು ಎಂದಿಗೂ ಪಲಾಯನ ಮಾಡಿಲ್ಲ. ನಿಮಗೆ ಹಿಂದೆ ಅಲ್ಲ, ಇವಾಗಲೂ ನಾನು ಹೆದರುವು ದಿಲ್ಲ. ನಿಮ್ಮ ಕಂಡರೆ ನನಗೆ ಭಯವಿಲ್ಲ ಎಂದು ಸದನದಿಂದ ಸಿಎಂ ಹೊರಟರು. ಈ ವೇಳೆ ಸಿಎಂ ಹೆದರಿ ಓಡಿ ಹೋಗುತ್ತಿದ್ದಾರೆ ಎಂದ ಬಿಜೆಪಿ ಸದಸ್ಯರು ಆಕ್ರೋಶ ಹೊರಹಾಕಿದರು. ಇತ್ತ ಒಳ ಮೀಸಲು ಕುರಿತು ಚರ್ಚೆಗೆ ಬಿಜೆಪಿ ಸದಸ್ಯರು ಪಟ್ಟು ಹಿಡಿದರು. ಸ್ಪೀಕರ್ ತೀರ್ಮಾನ ಸರಿ ತಪ್ಪು ಅನ್ನೋದು ಇಲ್ಲ. ಸ್ಪೀಕರ್ ತೀರ್ಮಾನ ಅಂತಿಮ ಎಂದ ಯು.ಟಿ. ಖಾದರ್ ಸ್ಪಷ್ಟಪಡಿಸಿದರು. ಎರಡು ಕಣ್ಣಲ್ಲಿ ಒಂದು ಕಣ್ಣು ಹೋದರು ಒಂಟಿ ಕಣ್ಣು ಎನ್ನುತ್ತಾರೆ. ಎಡ ಬಲ ಕಣ್ಣು ಅಂತ ಹೇಳಲ್ಲ. ನೀವು ಅಷ್ಟೇ ಒಂದು ಕಡೆ ನಡೆದುಕೊಂಡರೆ ಎಡ ಬಲ ಎನ್ನಲ್ಲ. ಒನ್ ಸೈಡ್ ಎಂದೇ ಹೇಳುತ್ತಾರೆ ಎಂದು ಹೇಳಿ ಸಭಾತ್ಯಾಗ ಮಾಡಿದರು.

ತಳಮಟ್ಟದ ಕೃಷಿ ನಾವಿನ್ಯತೆ ಸಾಧಕರಿಗೆ ಟಫೆ ಸನ್ಮಾನ

ಬೆಂಗಳೂರು: ವಿಶ್ವದ ಅತಿದೊಡ್ಡ ಟ್ರ್ಯಾಕ್ಟರ್ ತಯಾರಕ ಕಂಪೆನಿ ಹಾಗೂ ಭಾರತದ ಅತಿ ಹಿಂದಿನ ಮ್ಯಾಸ್ಸಿ ಫರ್ಗುಸನ್ ಟ್ರಾಕ್ಟರುಗಳ ತಯಾರಕರಾದ ಟಫೆ ಟ್ರಾಕ್ಟರುಗಳು ಮತ್ತು ಫಾರ್ಮ್ ಎಕ್ವಿಪ್ಮೆಂಟ್ ಲಿಮಿಟೆಡ್, ತನ್ನ ಮ್ಯಾಸ್ಸಿ ಡೈನಾಸ್ಟಾರ್ ಸ್ಪರ್ಧೆಯ ಎರಡನೇ ಆವೃತ್ತಿಯನ್ನು ಪೂರ್ಣಗೊಳಿಸಿದೆ.

ಸ್ಪರ್ಧೆಯಲ್ಲಿ 26 ರಾಜ್ಯಗಳು ಮತ್ತು 5 ಕೇಂದ್ರ ಪ್ರದೇಶಗಳಿಂದ 16,000ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಅಸ್ಸಾಂ, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಪಂಜಾಬ್, ತಮಿಳುನಾಡು ಮತ್ತು ಉತ್ತರ ಪ್ರದೇಶದ ಏಳು ರಾಜ್ಯಗಳನ್ನು ಪ್ರತಿನಿಧಿಸುವ 12 ಫೈನಲಿಸ್ಟ್‌ಗಳನ್ನು ಆಯ್ಕೆ ಮಾಡಲಾಗಿದೆ. ಭಾಗವಹಿಸುವವರು ರೈತರು, ಗ್ರಾಮೀಣ ಉದ್ಯಮಿಗಳು ಮತ್ತು ಉತ್ಸಾಹಭರಿತ ಕೃಷಿ-ವಿದ್ಯಾರ್ಥಿಗಳ ಕ್ರಿಯಾತ್ಮಕ ಮಿಶ್ರಣವನ್ನು ಒಳಗೊಂಡಿದ್ದು, ತಳಮಟ್ಟದ ನಾವೀನ್ಯತೆಯ ರೋಮಾಂಚಕ ಸಂಸ್ಕೃತಿಯನ್ನು ಅವರುಗಳು ಪ್ರತಿನಿಧಿಸುತ್ತಾರೆ.

ಫೈನಲ್‌ಗೆ ನಾವೀನ್ಯತೆ ಮೌಲ್ಯಮಾಪನ

ಇತ್ತೀಚೆಗೆ ನಡೆದ ಗ್ರ್ಯಾಂಡ್ ಫಿನಾಲೆಯಲ್ಲಿ ಮಾರಾಟ ಮತ್ತು ಮಾರುಕಟ್ಟೆ, ಕಾರ್ಯಾಚರಣೆಗಳು ಮತ್ತು ಉತ್ಪನ್ನ ನಿರ್ವಹಣಾ ರಂಗಗಳ ಉದ್ಯಮದ ಅನುಭವಿಗಳನ್ನು ಒಳಗೊಂಡ ಪ್ರತಿಷ್ಠಿತ ಗ್ರ್ಯಾಂಡ್ ಜ್ಯೂರಿಯನ್ನು ಒಳಗೊಂಡಿತ್ತು. ಫೈನಲಿಸ್ಟ್‌ಗಳನ್ನು ನಾವೀನ್ಯತೆ, ಕಾರ್ಯಸಾಧ್ಯತೆ, ಸ್ಕೇಲೆಬಿಲಿಟಿ, ಆದಾಯ ಉತ್ಪಾದನೆಯ ಸಾಮರ್ಥ್ಯ ಮತ್ತು ಸಾಮಾಜಿಕ ಪ್ರಭಾವಗಳ ಮೂಲಕ ಮೌಲ್ಯಮಾಪನ ಮಾಡಲಾಯಿತು. ಸ್ಪರ್ಧೆಯ ಅತ್ಯುತ್ತಮ ಬಹುಮಾನವನ್ನು ಕರ್ನಾಟಕದ ಬೆಳಗಾಮಿನ ಒಬ್ಬ ಐಟಿ ವೃತ್ತಿಪರನಿಂದ ರೈತನಾಗಿ ಪರಿವರ್ತನೆ ಹೊಂದಿದ ಅವಿನಾಷ್ ದೇಸಾಯ್ ಪ್ರಸ್ತುತ ಪಡಿಸಿದ ನವೀನ ಕಲ್ಪನೆಯಾದ ಮ್ಯಾಸ್ಸಿ ಫರ್ಗುಸನ್ ಡೈನಾಟ್ರಾಕ್ 241 ಉಪಯೋಗಿಸಿಕೊಂಡು ನಡೆಸಲ್ಪಡುವ ಮೊಬೈಲ್ ಸ್ಲರಿ ಡ್ಯೂಟರಿಂಗ್ ಯಂತ್ರಕ್ಕಾಗಿ ನೀಡಲಾಯಿತು. ಆತನಿಗೆ 8.2 ಲಕ್ಷ ಮೌಲ್ಯದ ಟ್ರಾಕ್ಟರ್ ಅನ್ನು ನೀಡಿ ಸನ್ಮಾನಿಸಲಾಯಿತು.

ಇಂದು ಸುಮಾರು 4500 ಸಾವಿರಕ್ಕೂ ಹೆಚ್ಚು ಮಂದಿಯಿಂದ ರ್‍ಯಾಲಿ

ಸ್ವಾಭಿಮಾನಿ ಜನತಾ ಪಕ್ಷ ಧರ್ಮಸ್ಥಳ ಚಲೋ

ಬೆಂಗಳೂರು: ಧರ್ಮಸ್ಥಳ ವಿರುದ್ಧ ಷಡ್ಯಂತ್ರ ರೂಪುಗೊಳ್ಳುತ್ತಿರುವುದನ್ನು ವಿರೋಧಿಸಿ ಆಗಸ್ಟ್ 21ರಂದು ಸ್ವಾಭಿಮಾನಿ ಜನತಾ ಪಕ್ಷದ ಹೂಡಿ ವಿಜಯ್ ಕುಮಾರ್ ನೇತೃತ್ವದಲ್ಲಿ ಧರ್ಮಸ್ಥಳ ಚಲೋ ಹಮ್ಮಿಕೊಳ್ಳಲಾಗಿದೆ.

ಈ ಬಗ್ಗೆ ಮಂಗಳವಾರ ಸಭೆ ನಡೆಸಿದ ಹೂಡಿ ವಿಜಯ್ ಕುಮಾರ್ ಅವರು, ಹಿಂದೂ ಧರ್ಮದ ಪ್ರಮುಖ ದೇವಾಲಯವಾಗಿರುವ ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ವ್ಯವಸ್ಥಿತ ಷಡ್ಯಂತ್ರದ ವಿರುದ್ಧ ಹೋರಾಡಬೇಕಿದೆ. ಆದ್ದರಿಂದ ಧರ್ಮಸ್ಥಳ ಚಲೋ ನಡೆಸಲು ಪ್ರಮುಖರ ಸಮ್ಮುಖದಲ್ಲಿ ತೀರ್ಮಾನಿಸಿದರು. ಸಭೆಯ ಬಳಿಕ ಈ ಬಗ್ಗೆ ಮಾತನಾಡಿದ ಹೂಡಿ ವಿಜಯ್‌ಕುಮಾರ್, 23ರಂದು ನಡೆಯಲಿರುವ ಧರ್ಮಸ್ಥಳ ಚಲೋದಲ್ಲಿ ಸುಮಾರು 4500ಕ್ಕೂ ಹೆಚ್ಚು ಭಕ್ತಾದಿಗಳು ಭಾಗವಹಿಸಲಿದ್ದಾರೆ. ಈ ರ್‍ಯಾಲಿಯಲ್ಲಿ ಆನಂದ ಗುರೂಜಿ ಸೇರಿದಂತೆ 50ಕ್ಕೂ ಹೆಚ್ಚು ಸ್ವಾಮೀಜಿಗಳು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು. ಧರ್ಮಸ್ಥಳದ ಭಕ್ತಾದಿಗಳು ನೂರಾರು ಕಾರು ಹಾಗೂ ಬಸ್‌ಗಳ ಮೂಲಕ ಶ್ರೀ ಕ್ಷೇತ್ರಕ್ಕೆ ತೆರಳಲಿದ್ದೇವೆ. ಬಳಿಕ ಮಂಜು ನಾಥನ ದರ್ಶನ ಪಡೆಯುತ್ತೇವೆ. ಇದ ರೊಂದಿಗೆ ಅಲ್ಲಿ ದೀಪದ ರ್‍ಯಾಲಿ ನಡೆಸುವ ಮೂಲಕ ಧರ್ಮಸ್ಥಳ ಮಂಜುನಾಥೇಶ್ವರ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸಲು ತೀರ್ಮಾನಿಸಲಾಗಿದೆ. ಈ ರ್‍ಯಾಲಿಯಲ್ಲಿ ಕೋಲಾರ, ಹೂಡಿ ಸೇರಿದಂತೆ ಸುತ್ತಮುತ್ತಲಿನಿಂದ ಭಕ್ತರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಧರ್ಮಸ್ಥಳ ಚಲೋ ನಿಮಿತ್ತ ಶ್ರೀ ಆನಂದ ಗುರೂಜಿ ರವರನ್ನು ಸ್ವಾಭಿಮಾನಿ ಜನತಾ ಪಕ್ಷದ ಹೂಡಿ ವಿಜಯ್ ಕುಮಾರ್ ನೇತೃತ್ವದಲ್ಲಿ ಕಾರ್ಯಕರ್ತರೊಂದಿಗೆ ಭೇಟಿ ನೀಡಿ ಧರ್ಮಸ್ಥಳ ಯಾತ್ರೆ ಯಶಸ್ವಿಯಾಗಿ ನಡೆಯಲು ಆಶೀರ್ವಾದ ಪಡೆದರು.

ಧರ್ಮಸ್ಥಳ: ರಾಜ್ಯಪಾಲರಿಗೆ ಭಕ್ತವೃಂದ ಮನವಿ

ಬೆಂಗಳೂರು: ಹಿಂದೂ ಹಾಗೂ ಜೈನ ಸಮುದಾಯ, ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಕಳಂಕ ತರಬೇಕೆಂಬ ದುರುದ್ದೇಶದಿಂದ ಕೆಲವರು ಅಪಪ್ರಚಾರ ಮಾಡುತ್ತಿದ್ದು, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥಸ್ವಾಮಿ ಭಕ್ತವೃಂದ ಮನವಿ ಮಾಡಿದೆ.

ರಾಜ್ಯಪಾಲರನ್ನು ಬುಧವಾರ ಭೇಟಿಯಾದ ನಿಯೋಗ, ವ್ಯವಸ್ಥಿತ ಗುಂಪೊಂದು ಧರ್ಮಸ್ಥಳ ದೇವಾಲಯ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಗುರಿಯಾಗಿಸಿಕೊಂಡು ನಿರಂತರವಾಗಿ ಅವಹೇಳನಕಾರಿ, ಸುಳ್ಳು ಹಾಗೂ ಪ್ರಚೋದನಾಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಹೇಳಿಕೆಗಳನ್ನೇ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಿ, ಧರ್ಮಸ್ಥಳಕ್ಕೆ ಕಳಂಕ ತರುವ ಕೆಲಸ ಮಾಡುತ್ತಿದ್ದಾರೆ. ಇಂತಹ ಕ್ರಮಗಳು ಇಡೀ ಸಮುದಾಯದ ಭಾವನೆಗಳಿಗೆ ತೀವ್ರ ನೋವುಂಟು ಮಾಡುತ್ತವೆ. ಇದರೊಂದಿಗೆ ರಾಜ್ಯದಲ್ಲಿ ಕೋಮು ಸಾಮರಸ್ಯಕ್ಕೆ ಧಕ್ಕೆಯಾಗುವ ಸಾಧ್ಯತೆಯಿದೆ. ಆದ್ದರಿಂದ ಅಪಪ್ರಚಾರಕ್ಕೆ ಕಾರಣರಾದವರ ವಿರುದ್ಧ ತಕ್ಷಣ ಮತ್ತು ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಆಗ್ರಹಿಸಿದ್ದಾರೆ.

ಈ ವೇಳೆ ಸಂಚಾಲಕ ನಾಗಶ್ರೀ ಮುಪ್ಪಾನೆ, ಜಿ.ಮಂಜುನಾಥ್, ವಿಲಾಸ್ ಪಾಸಣ್ಣ, ವಕೀಲ ಗಜೇಂದ್ರ, ವೀರಶೈವ ಮಹಾಸಭಾ ಅಧ್ಯಕ್ಷ ಆರ್. ಚಂದ್ರಶೇಖರ್ ಸೇರಿದಂತೆ ಹಲವರಿದ್ದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥಸ್ವಾಮಿ ಭಕ್ತವೃಂದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿ ಮಾಡಿ ಧರ್ಮಸ್ಥಳ ವಿರುದ್ಧ ಅಪಪ್ರಚಾರಕ್ಕೆ ತಡೆ ಹಾಕಲು ಮನವಿ ಮಾಡಿದರು.

ಕರ್ತವ್ಯ ನಿಷ್ಠೆ ಕೈ ಹಿಡಿದು ನಡೆಸಿವೆ: ಕೆ.ವಿ.ಪ್ರಭಾಕರ್

ಬೆಂಗಳೂರು: ಪತ್ರಕರ್ತನಾಗಿ ಸಮಾಜವನ್ನು ಬಿಡಿ-ಬಿಡಿಯಾಗಿ ನೋಡುತ್ತಿದ್ದ ನಾನು ಸಮಾಜವಾದದ ಆಲದ ಮರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗರಡಿಯಲ್ಲಿ ಇಡಿ ಇಡಿಯಾಗಿ ಗ್ರಹಿಸುವುದನ್ನು ಕಲಿತೆ. ಹೀಗಾಗಿ ಇಲ್ಲಿ ನನಗೆ ಸಲ್ಲುವ ಎಲ್ಲಾ ಸನ್ಮಾನ, ಗೌರವಗಳನ್ನು ನಾನು ಆಲದ ಮರಕ್ಕೇ ಅರ್ಪಿಸುತ್ತೇನೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪ್ರಭಾಭಿನಂದನಂ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಹಿಂದುಳಿದ ಕೆಳ ಮಧ್ಯಮ ವರ್ಗದ ಕುಟುಂಬದಿಂದ ಬಂದ ನನಗೆ ಬದುಕಿನ ಆಯ್ಕೆಗಳೇ ಇರಲಿಲ್ಲ. ಹೀಗಾಗಿ ನನ್ನ ಪಾಲಿಗೆ ಒದಗಿ ಬಂದಿದ್ದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾ, ಬಂದದ್ದೆಲ್ಲವನ್ನೂ ಬಂದ ಹಾಗೆಯೇ ಸ್ವೀಕರಿಸುತ್ತಾ ಮುಂದೆ ಸಾಗಿ ಈಗ ನಿಮ್ಮ ಮುಂದೆ ಧನ್ಯತೆಯಿಂದ ನಿಂತಿದ್ದೇನೆ. ನಾನು ಸಾಗಿಬಂದ ಹಾದಿಯನ್ನು ಹಿಂದಿರುಗಿ ನೋಡಿದಾಗ ವೃತ್ತಿಪರತೆ ಮತ್ತು ಕರ್ತವ್ಯ ಪ್ರಜ್ಞೆ ಇಲ್ಲಿಯವರೆಗೂ ನನ್ನನ್ನು ಕೈ ಹಿಡಿದು ನಡೆಸಿದೆ ಎಂದು ಭಾವಿಸುತ್ತೇನೆ. ನಾನು ಕನ್ನಡ ಪ್ರಭ ಬಿಟ್ಟು 2013ರಲ್ಲಿ ಮುಖ್ಯಮಂತ್ರಿಗಳ ನೆರಳಿಗೆ ಬಂದೆ. ಪತ್ರಿಕಾ ವೃತ್ತಿಯ ಸಾಧ್ಯತೆಗಳನ್ನೆಲ್ಲಾ ಇಲ್ಲಿ ಪ್ರಯೋಗಿಸತ್ತಾ ಹೋದೆ. ಆದರೆ, ಪತ್ರಿಕಾ ಕಚೇರಿಯಲ್ಲಿ ಇದ್ದ ಸಮಯದ ಮಿತಿ ಇಲ್ಲದೆ ಇಲ್ಲಿ ಕೆಲಸ ಮಾಡುವ ಅನಿವಾರ್ಯತೆ ಇತ್ತು. ಈ ಸಂದರ್ಭದಲ್ಲಿ ಇಡೀ ರಾಜ್ಯದ ಪತ್ರಕರ್ತ ಸಮುದಾಯ ನನ್ನ ಸಹಕಾರ ನೀಡಿದ್ದಕ್ಕೆ ಕೃತಜ್ಞತೆ ಅರ್ಪಿಸುತ್ತೇನೆ ಎಂದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಬಳಿಕ ಶಿವಾನಂದ ತಗಡೂರು ಅವರು ಪತ್ರಕರ್ತ ಸಮುದಾಯದ ರಾಶಿ ರಾಶಿ ಸಮಸ್ಯೆಗಳನ್ನು ಪ್ರತಿದಿನ ನನ್ನ ಬಳಿಗೆ ತರುತ್ತಿದ್ದರು. ಸರಕಾರದಿಂದ, ಇಲಾಖೆಯಿಂದ ಆಗಬೇಕಾದ ಮತ್ತು ಬಾಕಿ ಇರುವ ಕೆಲಸಗಳ ಬಗ್ಗೆ ಕ್ರಿಯಾಶೀಲ ಒತ್ತಡ ಹೇರುತ್ತಿದ್ದರು. ಅದನ್ನೆಲ್ಲಾ ನಾನು ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಮತ್ತು ಕಾರ್ಯದರ್ಶಿಗಳಾದ ಕಾವೇರಿ ಅವರ ಮುಂದಿಡುತ್ತಿದ್ದೆ. ಇವರಿಬ್ಬರೂ ಅತ್ಯಂತ ಸಹೃದಯತೆಯಿಂದ ಸಹಕಾರ ನೀಡಿದರು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪ್ರಭಾಭಿನಂದನಂ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್.

ಜಯನಗರದ ಜೆಎಸ್‌ಎಸ್ ಆಡಿಟೋರಿಯಂನಲ್ಲಿ ಆ.22ರಂದು ಸಂಜೆ 4 ಗಂಟೆಗೆ ಉದಯೋನ್ಮುಖ ನೃತ್ಯಾಭ್ಯಾಸಿಗಳ ಪ್ರಥಮ ಹೆಜ್ಜೆ ಸಾಮೂಹಿಕ ಗೆಜ್ಜೆಪೂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನೃತ್ಯಗುರು ಡಾ. ಎ. ಚಿತ್ರಾ ಮತ್ತು ಲೇಖಕಿ,ಕಲಾ ವಿಮರ್ಶಕಿ ವೈ.ಕೆ.ಸಂಧ್ಯಾ ಶರ್ಮ ಭಾಗವಹಿಸುವರು.

ವಿದ್ಯುತ್ ಚಿತಾಗಾರ ಸ್ಥಗಿತ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯ ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಹೊಸದಾಗಿ ಚಿಮಣಿ ಹಾಗೂ ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಹೊಸದಾಗಿ ಚಿಮಣಿ ಅಳವಡಿಕೆ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವು ದರಿಂದ ಸದರಿ ಚಿತಾಗಾರದ ಫರ್ನೇಸ್‌ನ್ನು ಆ.22ರಿಂದ 28ರ ವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸುತ್ತಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ದಕ್ಷಿಣ ವಲಯ ವಿದ್ಯುತ್ ವಿಭಾಗದ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ಒಳ ಮೀಸಲು ಸಣ್ಣ ಜಾತಿಗಳಿಗೆ ಅನ್ಯಾಯ

ಬೆಂಗಳೂರು: ಪರಿಶಿಷ್ಟ ಜಾತಿ ಒಳಮೀಸಲಾತಿ ವಿಚಾರದಲ್ಲಿ ಸಣ್ಣ ಸಣ್ಣ ಜಾತಿಗಳಿಗೆ ಅನ್ಯಾಯವಾಗಿದ್ದು, ಅವರಿಗೂ ನ್ಯಾಯ ಒದಗಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ಸಭೆಯಲ್ಲಿ ಎಡ ಮತ್ತು ಬಲಗೈ ಸಮುದಾಯಕ್ಕೆ ಶೇ.6 ರಷ್ಟು ಹಾಗೂ ಉಳಿದೆಲ್ಲಾ ಜಾತಿಗಳಿಗೆ ಶೇ.5 ರಷ್ಟು ಮೀಸಲಾತಿ ಒದಗಿಸಿದ್ದಾರೆ. ಇದರಿಂದ ಸಣ್ಣ ಜಾತಿಗಳಿಗೆ ನ್ಯಾಯ ಒದಗಿಸಿಲ್ಲ. ಸದನದಲ್ಲಿ ಅನುದಾನ ತಾರತಮ್ಯ ವಿಚಾರವಾಗಿ ಧ್ವನಿ ಎತ್ತಿದ್ದೇವೆ. ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನ ಹೆಚ್ಚಳವಾಗಿ 10 ವರ್ಷ ಕಳೆದಿದೆ. ಈಗ ಬಜೆಟ್ ಗಾತ್ರವೂ ದೊಡ್ಡದಾಗಿದೆ. ಅನುದಾನ ಮಾತ್ರ ಹೆಚ್ಚಳವಾಗಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ನಮಗೆ ಅನುದಾನ ನೀಡದೇ ತಾರತಮ್ಯ ಮಾಡುವುದು ಸರಿಯಲ್ಲ. 50 ಕೋಟಿ ರೂ. ಅನುದಾನವನ್ನು ಮುಂಗಡವಾಗಿ ನೀಡಲು ಆರ್ಥಿಕ ಇಲಾಖೆ ಹಿಂದೇಟು ಹಾಕುತ್ತಿದ್ದು, ಇದು ಊಟ ಕಿತ್ತುಕೊಂಡಂತೆ ಎಂದು ಟೀಕಿಸಿದರು. ಸೂಪರ್ ಸಿಎಂ ರಣದೀಪ್ ಸಿಂಗ್ ಸುರ್ಜೇವಾಲ ಅವರು ಬಂದು ಸಭೆ ನಡೆಸಿದ ನಂತರ ಶಾಸಕರಿಗೆ ಅನುದಾನ ಘೋಷಿಸಿದ್ದಾರೆ. ಆದರೆ ಮುಂಗಡವಾಗಿ ಅನುದಾನ ನೀಡಲು ಆಗುವುದಿಲ್ಲ ಎಂದು ಆರ್ಥಿಕ ಇಲಾಖೆ ತಿಳಿಸಿದೆ. ಹೀಗಾದರೆ ಗುತ್ತಿಗೆದಾರರು ಹೇಗೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಾರೆ. ಕಾಂಗ್ರೆಸ್ ಶಾಸಕರು ಎಚ್ಚೆತ್ತುಕೊಳ್ಳಬೇಕಿದೆ. ಇದು ಶಾಸಕರ ಮೂಗಿಗೆ ತುಪ್ಪ ಸವರುವ ಕೆಲಸ ಎಂದು ಅವರು ಆರೋಪಿಸಿದರು. ಶಾಸಕರ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ಒದಗಿಸಿ ಕಾಮಗಾರಿ ಕೈಗೊಳ್ಳಲು ಮುಖ್ಯಮಂತ್ರಿ ಅವಕಾಶ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದರು.

ನೂರಾರು ಕೋಟಿ ಖರ್ಚು ಮಾಡುವ ಅವಶ್ಯಕತೆ ಏನಿತ್ತು: ಸರಕಾರಕ್ಕೆ ಬಿವೈವಿ ಪ್ರಶ್ನೆ

ಒಳಮೀಸಲಾತಿ ಜಾರಿಗೆ ಸುಪ್ರೀಂ ಆದೇಶ ಪಾಲಿಸಿಲ್ಲ

ಬೆಂಗಳೂರು: ಒಳಮೀಸಲಾತಿ ಜಾರಿ ವಿಚಾರದಲ್ಲಿ ಮುಖ್ಯಮಂತ್ರಿ ಸುಪ್ರೀಂಕೋರ್ಟಿನ ಆದೇಶವನ್ನು ಸರಿಯಾಗಿ ಪಾಲನೆ ಮಾಡಿದಂತೆ ಕಾಣುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನ್ಯಾ. ಸದಾಶಿವ ಆಯೋಗದ ವರದಿ ಹಾಗೂ ನ್ಯಾ.ನಾಗಮೋಹನ್ ದಾಸ್ ವರದಿಯನ್ನು ಸರಿಯಾಗಿ ಪಾಲಿಸಿದಂತೆ ಕಾಣುತ್ತಿಲ್ಲ. ನ್ಯಾ.ನಾಗಮೋಹನ್ ದಾಸ್ ವರದಿಯಲ್ಲಿ ಎ, ಬಿ, ಸಿ, ಡಿ, ಇ ಎಂದು 5 ವರ್ಗ ಮಾಡಿದ್ದರು. ಅದನ್ನು ಎ, ಬಿ, ಸಿ ಎಂದು ಮಾಡಿದ್ದಾರೆ ಎಂದು ಆರೋಪಿಸಿದರು.

ನರೇಂದ್ರ ಸ್ವಾಮಿ ಮೊದಲಾದವರ ಮೂಲಕ ನೀವೇ ವಿಂಗಡಣೆ ಮಾಡುವುದಾದರೆ, ಸರಕಾರ ಮತ್ತು ಸಿದ್ದರಾಮಯ್ಯನವರಿಗೆ ನ್ಯಾ. ಸದಾಶಿವ ಹಾಗೂ ನ್ಯಾ.ನಾಗಮೋಹನ್ ದಾಸ್ ಆಯೋಗಕ್ಕೆ ನೂರಾರು ಕೋಟಿ ಖರ್ಚು ಮಾಡುವ ಅವಶ್ಯಕತೆ ಏನಿತ್ತು ಎಂದು ಪ್ರಶ್ನಿಸಿದರಲ್ಲದೆ, ಬಸವರಾಜ ಬೊಮ್ಮಾಯಿಯವರ ನೇತೃತ್ವದ ಬಿಜೆಪಿ ಸರಕಾರ ಅಧಿಕಾರದಲ್ಲಿ ಇದ್ದಾಗ ಅವರು ಪರಿಶಿಷ್ಟ ಜಾತಿ, ಪಂಗಡಗಳ ಕುರಿತು ಒಂದು ದಿಟ್ಟ ನಿರ್ಧಾರ ಮಾಡಿದ್ದರು. ಅವತ್ತು ಬೊಮ್ಮಾಯಿಯವರು ಪರಿಶಿಷ್ಟ ಜಾತಿಗೆ ಶೇ.15 ಇದ್ದುದನ್ನು ಶೇ.17ಕ್ಕೆ ಏರಿಸಿದ್ದರು. ಪರಿಶಿಷ್ಟ ಪಂಗಡಕ್ಕೆ ಶೇ.3 ಇದ್ದುದನ್ನು ಶೇ.7ಕ್ಕೆ ಏರಿಕೆ ಮಾಡಿದ್ದರು. ಆಗ ವಿಪಕ್ಷ ನಾಯಕರಾಗಿದ್ದ ಇದೇ ಸಿದ್ದರಾಮಯ್ಯನವರು, ಒಳ ಮೀಸಲಾತಿಯ ಬಿಜೆಪಿ ಸರಕಾರದ ನಿರ್ಧಾರ ಯಾವುದೂ ಅನುಷ್ಠಾನ ಆಗಿಲ್ಲ. ಇವರು ಬೂಟಾಟಿಕೆ- ನಾಟಕ ಮಾಡುತ್ತಿದ್ದಾರೆಂದು ರಾಜ್ಯಾದ್ಯಂತ ಓಡಾಡಿ ಅಪಪ್ರಚಾರ ಮಾಡಿದ್ದರು ಎಂದು ಟೀಕಿಸಿದರು.

ಮುಖ್ಯಮಂತ್ರಿ ಪಲಾಯನ: ಪ್ರತಿಪಕ್ಷ ನಾಯಕರು ಚರ್ಚೆ ಮಾಡಬೇಕೆಂದು ಕೋರಿದರೂ ಸಿಎಂ ಪಲಾಯನವಾದ ಮಾಡಿ ದ್ದಾರೆ. ಈ ಮೂಲಕ ಸದನಕ್ಕೆ ಅಗೌರವ ತೋರಿ ದ್ದಾರೆ. ನ್ಯಾ. ಸದಾಶಿವ ಆಯೋಗ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಘೋಷಣೆ ಮಾಡಿತ್ತಾದರೂ, ಆಯೋಗಕ್ಕೆ ಹಣಕಾಸಿನ ನೆರವು ಕೊಟ್ಟು ವ್ಯವಸ್ಥೆ ಮಾಡಿದ್ದು, ಯಡಿಯೂರಪ್ಪ ಅವರ ನೇತೃತ್ವದ ಹಿಂದಿನ ಬಿಜೆಪಿ ಸರಕಾರ. ಅದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯಲು ಬಸವರಾಜ ಬೊಮ್ಮಾಯಿ ಯವರು ಮುಂದಾಗಿದ್ದರು. ರಾಜ್ಯ ಸರಕಾರ ದತ್ತಾಂಶ ಇಟ್ಟುಕೊಂಡು ವರ್ಗೀಕರಣ ಮಾಡ ಬೇಕಿತ್ತು. ಒಳ ಮೀಸಲಾತಿ ಜಾರಿ ವಿಚಾರದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಿಂದುಳಿದಿರುವಿಕೆ ವಿಚಾರ ಇಟ್ಟುಕೊಂಡು ಒಳ ಮೀಸಲಾತಿ ಕೊಡ ಬೇಕೇ ಹೊರತು ಜನಸಂಖ್ಯೆ ಆಧಾರದಲ್ಲಿ ಅಲ್ಲ ಎಂದರು.

ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಕ್ರಮ: ಛಲವಾದಿ ನಾರಾಯಣಸ್ವಾಮಿ

ಒಳ ಮೀಸಲಾತಿ ವಿಷಯದಲ್ಲಿ ಸರಕಾರ ರಾಜಕೀಯ ತೀರ್ಮಾನ ಮಾಡಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೀದಿ ಬೀದಿಗಳಲ್ಲಿ ಗಲಭೆ ಪ್ರಾರಂಭವಾಗಿದೆ. ಇದು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಸರಕಾರ ಮಾಡಿದ ಕ್ರಮ. ಸಾಮಾಜಿಕ ನ್ಯಾಯದ ತೀರ್ಮಾನ ಅಲ್ಲ. 59 ಅಲೆಮಾರಿ ಸಮುದಾಯಗಳಿದ್ದರೂ ಅವುಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳದೇ ಅವರನ್ನು ಸ್ಪಶ್ಯ ಜಾತಿಗಳ ಗುಂಪಿಗೆ ಸೇರಿಸಿದ್ದಾರೆ. ಬೋವಿ, ಲಂಬಾಣಿ, ಕೊರಚ, ಕೊರಮ- ಇವರು ಹೆಚ್ಚು ಪಾಲನ್ನು ತೆಗೆದುಕೊಳ್ಳುತ್ತಿದ್ದಾರೆ. ಅವರ ಜೊತೆ ಸ್ಪರ್ಧೆ ಮಾಡಲು ಆಗುವುದಿಲ್ಲ ಎಂಬ ಕಾರಣಕ್ಕೆ ಎಡ- ಬಲ ಎಂಬ ಪ್ರಶ್ನೆ ಬಂದಿತ್ತು. ಸಬಲರ ಜೊತೆ ಸಬಲರನ್ನು ಸೇರಿಸಿದರೆ, ಅಲ್ಲಿ ಅವರು ಬದುಕಬಲ್ಲರು. ಸಬಲರ ಜೊತೆ ದುರ್ಬಲರನ್ನು (ಅಸಬಲ) ಸೇರಿಸಿದರೆ, ಅವರು ಅಲ್ಲಿ ಬದುಕಲಾಗದು. ದೊಡ್ಡ ಮೀನು ಸಣ್ಣ ಮೀನುಗಳನ್ನು ತಿನ್ನುತ್ತವೆ ಎಂಬ ಗಾದೆಯೇ ಇದೆ. ಇಂಥ ಪರಿಸ್ಥಿತಿ ಈಗ ಉದ್ಭವವಾಗಿದೆ. ಇದು ರಾಜಕೀಯ ತೀರ್ಮಾನವೇ ಹೊರತು ಸಾಮಾಜಿಕ ನ್ಯಾಯದ ತೀರ್ಮಾನ ಅಲ್ಲ ಎಂದರು.

ತಗ್ಗಿದ ಮಳೆ: ನಿಲ್ಲದ ಪ್ರವಾಹ ರಗಳೆ

ಲೋಳಸೂರ, ಶೀಲಹಳ್ಳಿ ಸೇತುವೆ ಸಂಪೂರ್ಣ ಮುಳುಗಡೆ | ಎಲೆಬಿಚ್ಚಾಲಿಯಲ್ಲಿ ರಾಯರಿಗೆ ಜಲದಿಗ್ಬಂಧನ | ಬೆಳೆಹಾನಿ

ಬೆಂಗಳೂರು: ಕಳೆದ ಒಂದು ವಾರದಿಂದ ಅಬ್ಬರಿಸಿದ ಮಳೆ ಬುಧವಾರ ಕೊಂಚ ತಗ್ಗಿದ್ದು, ಆದರೆ ಡ್ಯಾಮ್ ಹಾಗೂ ಹಳ್ಳಗಳಿಂದ ಹರಿದು ಬರುತ್ತಿರುವ ಭಾರೀ ಪ್ರಮಾಣದ ನೀರು ಪ್ರವಾಹ ಸೃಷ್ಟಿಸಿದೆ. ಬೆಳಗಾವಿ, ಧಾರವಾಡ, ಕಲಬುರಗಿ, ಬೀದರ್, ಯಾದಗಿರಿ, ಬಾಗಲಕೋಟೆ ಜಿಲ್ಲೆಯಲ್ಲಿ ಸುರಿದ ಭಾರೀ ಮಳೆಯಿಂದ ಹಲವಾರು ಅವಾಂತರಗಳು ಉಂಟಾಗಿವೆ.

ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿರುವ ಹಿನ್ನಲೆಯಲ್ಲಿ ರಾಜ್ಯದ ಕೃಷ್ಣಾ, ಘಟಪ್ರಭಾ, ವೇದಗಂಗಾ, ದೂದಗಂಗಾ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಪರಿಣಾಮ ಬೆಳಗಾವಿ ಜಿಲ್ಲೆಯ ಜನರ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಕೊಯ್ನಾ ಜಲಾಶಯದಿಂದ 95 ಸಾವಿರ ಕ್ಯೂಸೆಕ್, ವಾರಣಾ ಜಲಾಶಯದಿಂದ 40 ಸಾವಿರ ಕ್ಯೂಸೆಕ್, ರಾಧಾನಗರ ಜಲಾಶಯದಿಂದ 13 ಸಾವಿರ ಕ್ಯೂಸೆಕ್ ಕಾಳಮ್ಮಾವಾಡಿ ಜಲಾಶಯದಿಂದ 25 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದ್ದು ಒಟ್ಟು 1 ಲಕ್ಷ 75 ಸಾವಿರಕ್ಕೂ ಅಧೀಕ ನೀರು ಮಹಾರಾಷ್ಟ್ರದಿಂದ ಕೃಷ್ಣಾ, ದೂದಗಂಗಾ, ವೇದಗಂಗಾ ನದಿ ಮೂಲಕ ರಾಜ್ಯಕ್ಕೆ ಹರಿದು ಬರುತ್ತಿದ್ದು ನದಿ ಪಾತ್ರದಲ್ಲಿ ಪ್ರವಾಹ ಭೀತಿ ಎದುರಾಗಿದೆ. ಘಟಪ್ರಭ ನದಿಗೆ 65694 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜತ್ತ-ಜಾಂಬೋಟಿ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯ ಲೋಳಸೂರ ಸೇತುವೆ ಸಂಪೂರ್ಣ ಮುಳುಗಡೆಗೊಂಡಿದೆ.

ಎಲೆಬಿಚ್ಚಾಲಿ ಗ್ರಾಮದಲ್ಲಿರುವ ಗುರುರಾಘವೇಂದ್ರ ಸ್ವಾಮಿಗಳ ಏಕಶಿಲಾ ವೃಂದಾವನಕ್ಕೆ ತುಂಗಭದ್ರಾ ನದಿ ನೀರು ನುಗ್ಗಿರುವುದು.

ಜತ್ತ-ಜಾಂಬೋಟಿ ಸಂಪರ್ಕ ಕಲ್ಪಿಸುವ ಗೋಕಾಕ್ ಬಳಿಯ ಲೋಳಸೂರ ಸೇತುವೆ ಸಂಪೂರ್ಣ ಮುಳುಗಡೆ ಆಗಿರುವುದು.

ಶೀಲಹಳ್ಳಿ ಸೇತುವೆ ಸಂಪೂರ್ಣ ಮುಳುಗಡೆ: ಮಹಾರಾಷ್ಟ್ರ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಕೃಷ್ಣಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಪರಿಣಾಮ ಬಸವ ಸಾಗರ ಜಲಾಶಯ ಭರ್ತಿಯಾಗಿ 2.60 ಲಕ್ಷ ಕ್ಯೂಸೆಕ್ ನೀರು ಕೃಷ್ಣಾ ನದಿಗೆ ಬಿಡಲಾಗಿದ್ದು, ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಶೀಲಹಳ್ಳಿ ಸೇತುವೆ ಮುಳುಗಡೆಯಾಗಿದೆ. ಯಳಗುಂದಿ, ಯರಗೋಡಿ, ಕಡದರಗಡ್ಡಿ, ಓಂಕಾರದೊಡ್ಡಿ, ಮ್ಯಾದರದೊಡ್ಡಿ ಹಾಗೂ ಹಂಚಿನಾಳ ಗ್ರಾಮಗಳ ಸಂಪರ್ಕ ಸ್ಥಗಿತಗೊಂಡಿದೆ. ಇನ್ನು ಹೆಚ್ಚು ನೀರು ಬಿಡುವ ಸಾಧ್ಯತೆ ಇದ್ದು, ನಡುಗಡ್ಡೆಗೆ ಜಾನುವಾರು, ಕುರಿ ಮೇಯಿಸಲು ತೆರಳದಂತೆ ಸೂಚಿಸಲಾಗಿದೆ.

ಪ್ರವಾಹ ಭೀತಿ: ಹೊಸಪೇಟೆಯ ತುಂಗಭದ್ರಾ ಜಲಾಶಯದಿಂದ 1.40 ಲಕ್ಷ ಕ್ಯೂಸೆಕ್ ನೀರು ತುಂಗಭದ್ರಾ ನದಿಗೆ ಹರಿಬಿಟ್ಟಿರುವುದರಿಂದ ಮಾನ್ವಿ ತಾಲೂಕಿನ ತುಂಗಭದ್ರಾ ನದಿಪಾತ್ರದ ಗ್ರಾಮಗಳ ಗ್ರಾಮಸ್ಥರಿಗೆ ಪ್ರವಾಹ ಭೀತಿ ಉಂಟಾಗಿದೆ. ಇನ್ನು ಯಾದಗಿರಿ ತಾಲೂಕಿನ ಪಗಲಾಪುರಕೋಯಿಲೂರ ನಡುವಿನ ಹಳ್ಳದ ತಾತ್ಕಾಲಿಕ ರಸ್ತೆ ಕೊಚ್ಚಿ ಹೋಗಿದೆ. ಬೀದರ್, ಬಸವಕಲ್ಯಾಣ, ಹುಲಸೂರ ಹಾಗೂ ಭಾಲ್ಕಿಯಲ್ಲಿ ಮಳೆಯಾಗಿದೆ. ಕಮಲನಗರ ತಾಲೂಕಿನಲ್ಲಿ 2 ಸಾವಿರ ಹಾಗೂ ಔರಾದ್ ತಾಲೂಕಿನಲ್ಲಿ 1,500 ಹೆಕ್ಟೇರ್ ಬೆಳೆ ಹಾಳಾಗಿದೆ.

11 ಬ್ಯಾರೇಜ್‌ಗಳು ಮುಳುಗಡೆ: ಘಟಪ್ರಭಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದ ಕಾರಣ ಬಾಗಲಕೋಟೆ ಜಿಲ್ಲೆಯ 11 ಬ್ಯಾರೇಜ್‌ಗಳು ಮುಳುಗಡೆಯಾಗಿವೆ. ಮಾಚಕನೂರಿನ ಹೊಳೆ ಬಸವೇಶ್ವರ ದೇವಸ್ಥಾನ ಜಲಾವೃತವಾಗಿದೆ. ಮಿರ್ಜಿ, ಚನ್ನಾಳ, ಜಾಲಿಬೇರಿ, ಜಿರಗಾಳ, ಅಂತಾಪುರ, ಕಸಬಾ ಜಂಬಗಿ, ಆಲಗುಂಡಿ, ತಿಮ್ಮಾಪುರ, ಮುಧೋಳ, ಡವಳೇಶ್ವರ ಹಾಗೂ ಮಾಚಕನೂರ ಬ್ಯಾರೇಜ್ ಮುಳುಗಡೆಯಾಗಿವೆ.

ಕೊಚ್ಚಿಹೋದ ನೀಲೂರು-ಗೊಬ್ಬೂರ್ ಸೇತುವೆ: ಕಲಬುರಗಿ ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯ ಪರಿಣಾಮ ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳು ನದಿಯಂತಾಗಿ, ವಾಹನ ಸಂಚಾರವೇ ಅಸಾಧ್ಯ ಎನ್ನುವ ಮಟ್ಟಿಗೆ ದುಸ್ಥಿತಿ ಎದುರಾಗಿದೆ. ಅಫಜಲಪುರ ತಾಲೂಕಿನ ನೀಲೂರು-ಗೊಬ್ಬೂರ್ ನಡುವಿನ ಗೊಬ್ಬರ ಹಳ್ಳದ ರಸ್ತೆ ಮಳೆಗೆ ಕೊಚ್ಚಿಕೊಂಡು ಹೋಗಿದೆ. ಪರಿಣಾಮವಾಗಿ, ರೈತರು ತಮ್ಮ ಹೊಲಗಳಲ್ಲಿ ಬೆಳೆದ ತರಕಾರಿಗಳನ್ನು ಮಾರುಕಟ್ಟೆಗೆ ಸಾಗಿಸಲು ಪರದಾಡಿದ್ದಾರೆ. ನಿರಂತರ ಮಳೆಯ ಮಳೆಗಾಲದಲ್ಲಿ ತೊಗರಿ, ಹೆಸರು, ಉದ್ದು ಸೇರಿದಂತೆ ಹಲವು ಬೆಳೆಗಳು ನೀರು ಪಾಲಾಗುತ್ತಿದ್ದು, ರೈತರು ಕಂಗಾಲಾಗಿದ್ದಾರೆ. ತೊಗರಿ, ಹೆಸರು, ಉದ್ದು ಬೆಳೆಗಳು ನೀರಿನಲ್ಲಿ ನಾಶವಾಗಿದ್ದು, ರೈತರ ಕಣ್ಣುಮುಚ್ಚಿ ಕುಳಿತುಕೊಳ್ಳುವಂತಾಗಿದೆ. ಭೀಮಾ ನದಿಗೆ 91,600 ಕ್ಯೂಸೆಕ್ ನೀರು ಮಹಾರಾಷ್ಟ್ರದ ಮೇಲ್ದಂಡೆ ಪ್ರದೇಶದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದ ಉಜ್ಜಿನಿ ಜಲಾಶಯ ತುಂಬಿ ಹರಿಯುತ್ತಿದೆ.

ಮನೆ ಕುಸಿದು ವೃದ್ಧ ಸಾವು

ನಿರಂತರ ಮಳೆಗೆ ಮಣ್ಣಿನ ಮನೆಯ ಮೇಲ್ಚಾವಣಿ ಕುಸಿದು ವಯೋವೃದ್ಧ ಸಾವನ್ನಪ್ಪಿದ ಘಟನೆ ಬೆಳಗಾವಿ ಜಿಲ್ಲೆಯ ರಾಮದುರ್ಗ ಪಟ್ಟಣದಲ್ಲಿ ನಡೆದಿದೆ. ನಿಂಗಾಪೂರ ಪೇಟೆಯ ನಿವಾಸಿ ವಾಮನ ಬಾಪೂ ಪವಾರ (75) ಮೃತ ವ್ಯಕ್ತಿಯಾಗಿದ್ದು, ಅಡುಗೆ ಮನೆಯಲ್ಲಿ ಮಲಗಿದ್ದ ಸಂದರ್ಭದಲ್ಲಿ ಬುಧವಾರ ಬೆಳಿಗ್ಗೆ ಮನೆಯ ಮಣ್ಣಿನ ಮೇಲ್ಚಾವಣಿ ಸಂಪೂರ್ಣ ಕುಸಿದ ಪರಿಣಾಮ ವೃದ್ಧ ವಾಮನ ಪವಾರ ಮಣ್ಣಿನಲ್ಲಿ ಹುದುಗಿ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ ಎಂದು ಮೃತ ವ್ಯಕ್ತಿ ಮಗ ಕೃಷ್ಣ ವಾಮನ ಪವಾರ ರಾಮದುರ್ಗ ಠಾಣೆಗೆ ದೂರು ನೀಡಿದ್ದಾನೆ.

ಭೂಕುಸಿತದ ಭೀತಿ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಬೀಗಾರ ಸಮೀಪ ಭೂಕುಸಿತ ಸಂಭವಿಸಿದೆ. ಇದರಿಂದ ತಾರಗಾರ ಬೀಗಾರ ಗ್ರಾಮಗಳ ಸಂಪರ್ಕ ರಸ್ತೆ ಕುಸಿಯುವ ಭೀತಿ ಕಾಡುತ್ತಿದೆ. ಸತತ ಮಳೆಯಿಂದ ಕಾಳಿನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಕಾರವಾರ ತಾಲೂಕಿನ ಕದ್ರಾ ಜಲಾಶಯದಿಂದ 6 ಕ್ರಸ್ಟ್‌ಗೇಟ್‌ಗಳನ್ನು ತೆರೆದು 31 ಸಾವಿರ ಕ್ಯೂಸೆಕ್ ಪ್ರಮಾಣದ ನೀರು ನದಿಗೆ ಹರಿಸಲಾಗಿದೆ. ಹೊನ್ನಾವರ ತಾಲೂಕಿನ ಉಪ್ಪೋಣಿ, ಸರಳಗಿ ಸೇರಿ ಶರಾವತಿ ನದಿಪಾತ್ರದಲ್ಲಿನ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಈ ಗ್ರಾಮಗಳ ಜನರನ್ನು ಸಮೀಪದಲ್ಲಿ ತೆರೆದ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ರಾಯರ ಏಕಶಿಲಾ ವೃಂದಾವನ ಜಲಾವೃತ

ತುಂಗಭದ್ರಾ ಜಲಾಶಯದಿಂದ 1.30 ಲಕ್ಷ ಕ್ಯೂಸೆಕ್ ನೀರು ನದಿಗೆ ಬಿಡಲಾಗಿದ್ದು, ಪರಿಣಾಮ ರಾಯಚೂರಿನ ಎಲೆಬಿಚ್ಚಾಲಿ ಗ್ರಾಮದಲ್ಲಿರುವ ಗುರುರಾಘವೇಂದ್ರ ಸ್ವಾಮಿಗಳ ಏಕಶಿಲಾ ವೃಂದಾವನ ಜಲಾವೃತವಾ ಗಿದೆ. ತುಂಗಭದ್ರಾ ನದಿ ಮೈದುಂಬಿ ಹರಿಯುತ್ತಿರುವುದರಿಂದ ಬಿಚ್ಚಾಲಮ್ಮ ದೇವಿ ದೇವಾಲಯ ಬಳಿಯ ರಾಯರ ವೃಂದಾವನಕ್ಕೆ ನೀರು ನುಗ್ಗಿದೆ. ಏಕಶಿಲಾ ವೃಂದಾವನ ದರ್ಶನ ಪಡೆಯಲು ಭಕ್ತರು ಪರದಾಡುತ್ತಿದ್ದು, ಅರ್ಚಕರು ನೀರಿನಲ್ಲೇ ತೆರಳಿ ಪೂಜೆ, ಅಭಿಷೇಕ ಮಾಡುತ್ತಿದ್ದಾರೆ. ಎಲೆಬಿಚ್ಚಾಲಿಯ ಬಿಚ್ಚಾಲಮ್ಮ ದೇವಾಲಯ ಸುತ್ತಲೂ ನೀರು ಆವರಿಸಿದೆ. ಇಲ್ಲಿನ ಉಗ್ರ ನರಸಿಂಹ ದೇವಾಲಯ, ನಾಗದೇವತೆ ಕಟ್ಟೆ, ಶಿವಲಿಂಗ ಮುಳುಗಡೆ ಹಂತದಲ್ಲಿವೆ. ತುಂಗಭದ್ರಾ ನದಿಗೆ ಇನ್ನೂ ಹೆಚ್ಚು ಪ್ರಮಾಣದ ನೀರು ಬಿಡುವ ಸಾಧ್ಯತೆಯಿದ್ದು, ಭಕ್ತರು ನದಿಗೆ ಇಳಿಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಒಂದೇ ತಿಂಗಳ ಅಂತರದಲ್ಲಿ 2ನೇ ಬಾರಿ ಜಾಲವೃತಗೊಂಡಿದೆ.

ಯುವತಿ ಕೊಲೆ: ಆರೋಪಿ ತಪ್ಪೊಪ್ಪಿಗೆ

ಚಿತ್ರದುರ್ಗ: ನಗರದ ಸರಕಾರಿ ಪದವಿ ಕಾಲೇಜಿನ ದಲಿತ ಸಮುದಾಯದ ವಿದ್ಯಾರ್ಥಿನಿ ವರ್ಷಿತಾಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿರುವ ಘಟನೆ ನಡೆದಿದೆ. ಈ ವಿದ್ಯಾರ್ಥಿನಿಯ ಜತೆ ಸಂಪರ್ಕದಲ್ಲಿದ್ದ ಕ್ಯಾನ್ಸರ್ ಮೂರನೇ ಹಂತದಲ್ಲಿರುವ ಚಿತ್ರದುರ್ಗದ ಕೆಳಗೋಟೆ ಬಡಾವಣೆಯ ಯುವಕ ಚೇತನ್‌ಕುಮಾರ್ ಕೊಲೆ ಆರೋಪಿ ಎನ್ನಲಾಗಿದೆ.

ಚಿತ್ರದುರ್ಗ ಗ್ರಾಮಾಂತರ ಠಾಣೆ ಪೊಲೀಸರು ವಿಚಾರಣೆ ಮಾಡಿದ್ದು, ಈ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ. ಬೇರೊಬ್ಬನ ಜತೆ ವರ್ಷಿತಾ ಸಂಬಂಧ ಹೊಂದಿದ್ದಳು. ಇದರಿಂದ ಕೊಲೆ ಮಾಡಿದ್ದೇನೆ ಎಂದಿರುವ ಚೇತನ್, ಗೋನೂರು ಬಳಿ ಕರೆದೊಯ್ದು ಹೊಡೆದಾಗ ನೆಲಕ್ಕೆ ಬಿದ್ದು ಸಾವನ್ನಪ್ಪಿದಳು. ಬಳಿಕ ಪೆಟ್ರೋಲ್ ಸುರಿದು ಸುಟ್ಟು ಹಾಕಿದ್ದೇನೆಂದು ಹೇಳಿರುವುದಾಗಿ ಪೊಲೀಸ್ ಮೂಲಗಳಿಂದ ಮಾಹಿತಿ ತಿಳಿದು ಬಂದಿದೆ.

ಶಾಸಕ ರಾಯರೆಡ್ಡಿ ಫಾರ್ಮ್‌ಹೌಸ್‌ನಲ್ಲಿ ದರೋಡೆಗೆ ಯತ್ನ

ಧಾರವಾಡ: ಸಿಎಂ ಆರ್ಥಿಕ ಸಲಹೆಗಾರ ಶಾಸಕ ಬಸವರಾಜ ರಾಯರೆಡ್ಡಿ ಅವರ ಧಾರವಾಡದ ಫಾರ್ಮ್‌ಹೌಸ್‌ನಲ್ಲಿ ದರೋಡೆ ಯತ್ನಿಸಿದ ಆರೋಪದಲ್ಲಿ 15 ಮಂದಿಯನ್ನು ಧಾರವಾಡ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಧಾರವಾಡ ತಾಲೂಕಿನ ದಡ್ಡಿಕಮಲಾಪುರ ಗ್ರಾಮದ ಬಳಿ ಬಸವರಾಜ ರಾಯರೆಡ್ಡಿ ಅವರು 'ಮಮತಾ' ಎಂಬ ಹೆಸರಿನಡಿ ಫಾರ್ಮ್ ಹೌಸ್ ಹೊಂದಿದ್ದಾರೆ. ಈ ಫಾರ್ಮ್‌ಹೌಸ್‌ಗೆ ಸಿಎಂ ಸಿದ್ದರಾಮಯ್ಯ ಸೇರಿ ಹಲ ಸಚಿವರು ಅನೇಕ ಬಾರಿ ಬಂದು ಹೋಗಿದ್ದಾರೆ.

ಕಳೆದ ಆ.13 ರಂದು ಸುಮಾರು 8-10 ಜನರ ಗುಂಪು ಫಾರ್ಮ್ ಹೌಸ್‌ಗೆ ನುಗ್ಗಿದೆ. ಫಾರ್ಮ್ ಹೌಸ್‌ನಲ್ಲಿ ಮಲಗಿದ್ದ ಕಣ್ಣಪ್ಪ ಜಡ್ಲಿ, ಹನುಮಂತ ಧನದಾವರ್, ಅಶೋಕ ಪೋತಲಿ, ಲಕ್ಷ್ಮಣ ಚಂದರಗಿ ಎಂಬುವವರನ್ನ ಎಬ್ಬಿಸಿದ ದರೋಡೆ ಕೋರರು ಅವರಿಗೆ ಚಾಕು ತೋರಿಸಿ ಹೆದರಿಸಿ, ಅವರ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿ ಬಾಯಿಗೆ ಗಮ್ ಟೇಪ್ ಸುತ್ತಿ ಅವರ ಬಳಿ ಇದ್ದ ಮೊಬೈಲ್ ಫೋನ್ ಹಾಗೂ ಇತರ ವಸ್ತುಗಳನ್ನ ದರೋಡೆ ಮಾಡಿದ್ದಾರೆ. ಸ್ಥಳಕ್ಕೆ ಎಸ್ಪಿ ಗುಂಜನ್ ಆರ್ಯ ಸಹ ಭೇಟಿ ನೀಡಿ ದರೋಡೆಕೋರರ ಬಂಧನಕ್ಕೆ ಒಟ್ಟು 8 ತಂಡಗಳನ್ನು ರಚಿಸಿದ್ದರು. ಬಳ್ಳಾರಿ, ರಾಯಚೂರು, ವಿಜಯನಗರ, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಸೇರಿದಂತೆ ಅನೇಕ ಕಡೆಗಳಲ್ಲಿ ದರೋಡೆಕೋರರ ಬಗ್ಗೆ ದಾಖಲಾದ ಮಾಹಿತಿ ಪಡೆದು ಶೋಧಕ್ಕಿಳಿದಿದ್ದ ತಂಡ 15 ಜನ ಆರೋಪಿಗಳನ್ನ ಬಂಧಿಸಿದ್ದು, ವಿಚಾರಣೆ ವೇಳೆ ಅವರೇ ದರೋಡೆ ಮಾಡಿದ್ದು ಎಂಬುದು ಗೊತ್ತಾಗಿದೆ.

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಗೌರಿಬಿದನೂರು ತಾಲ್ಲೂಕು, ಗಣೇಶ ಸೈಕಲ್ ಮಾರ್ಟ ಹತ್ತಿರ, ಕೊಲಿಮಿಗಲ್ಲಿ, ಗೌರಿಬಿದನೂರು-561208,
Email:cdpogbd@gmail.com, ದೂ:08155-284168

ಸಂ:ಶಿಅಯೋ:ಗೌರಿಬಿ:ಮರುಇ-ಟೆಂಡರ್:2025-26 ದಿನಾಂಕ:16.08.2025

ಮರು ಇ-ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಗೌರಿಬಿದನೂರು ಇಲ್ಲಿಗೆ 2025-26ನೇ ಸಾಲಿಗೆ ಕಛೇರಿಗೆ ಅವಶ್ಯವಿರುವ ವಾಹನವನ್ನು ಹೊರಗುತ್ತಿಗೆ ಆಧಾರದಲ್ಲಿ ಬಾಡಿಗೆಗೆ ಪಡೆಯಲು (ಟೆಂಡರ್ ನಂ:DWCD/2025-26/SE0527/CALL-2) ಮರು ಇ-ಟೆಂಡರ್ ಆಹ್ವಾನಿಸಿದ್ದು, ಈ ಟೆಂಡರ್‌ಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು **www.kppp.karnataka.gov.in** ವೆಬ್ ಸೈಟ್‌ನಲ್ಲಿ ಪರಿಶೀಲಿಸುವುದು ಹಾಗೂ ಅರ್ಜಿಗಳನ್ನು ಅಪ್ಲೋಡ್ ಮಾಡಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು **ಕೊನೆಯ ದಿನಾಂಕ: 25.08.2025 ರ ಸಂಜೆ 5:00 ಗಂಟೆ.** ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:164/ಕೆಎಸ್‌ಎಂಸಿಎ/2025-26

ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831-2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿ.ಎಂ./ಟಿಎನ್‌ಡಿ/ಇಪ್ರೋ-15/2025-26 ದಿನಾಂಕ : 20-08-2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000 ಪ್ರಕಾರ ಆ್ಯಕ್ಟ 2000 ನಿಯಮದಂತೆ ಮಹಾನಗರ ಪಾಲಿಕೆಯ **2022-23ನೇ ಸಾಲಿನ 15ನೇ ಹಣಕಾಸು ಹಾಗೂ ಎಸ್.ಎಫ್.ಸಿ. ಕುಡಿಯುವ ನೀರು ಉಳಿತಾಯ ಮೊತ್ತ ಹಾಗೂ ಮಹಾನಗರ ಪಾಲಿಕೆಯ ನಿಧಿಯಡಿಯಲ್ಲಿ ಅನುಮೋದನೆಗೊಂಡ ಹಾಗೂ ಬೆಳಗಾವಿ ಮಹಾನಗರ ಪಾಲಿಕೆಯ ವಾಪ್ತಿಯಲ್ಲಿರುವ ಒಳಚರಂಡಿ ದುರಿಸ್ಥಿ / ನಿರ್ವಹಣೆಗಾಗಿ ಸೇವಾ ಪೂರೈಕೆದಾರರಿಂದ ಒಳಚರಂಡಿ ಸಹಾಯಕರುಗಳನ್ನು ಒದಗಿಸುವ ಕಾಮಗಾರಿಗಳಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 25-08-2025 ರ ಸಂಜೆ 5.00 ಘಂಟೆವರೆಗೆ. 2) ಟೆಂಡರಿನ ಮೊದಲನೆ ಸಭೆಯ (Pre-Bid Meeting) ದಿನಾಂಕ : 26-08-2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 30-08-2025 ರ ಅಪರಾಹ್ನ 4.00 ಘಂಟೆವರೆಗೆ. 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 01-09-2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 02-09-2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ **ವೆಬ್‌ಸೈಟ್ : https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/850/ಮಣಿಪಾಲ್/2025-26

ನಗರಸಭಾ ಕಾರ್ಯಾಲಯ, ಚಳ್ಳಕೆರೆ.(ಚಿತ್ರದುರ್ಗ ಜಿಲ್ಲೆ)

ಫೋ ನಂ. 08195-250094 ka.challakere.cmc@gmail.com

ಸಂಖ್ಯೆ: ಚ.ನ/ತಾಂತ್ರಿಕ/ಅಮೃತ್ 2.0,ಎಸ್.ಎಫ್.ಸಿ ಉಳಿಕೆ & 2025-26 ನ.ನಿ/ಟೆಂಡರ್/ಸಿ.ಆರ್ 02/2025-26 ದಿನಾಂಕ: 19/08/2025

ಟೆಂಡರ್ ಪ್ರಕಟಣೆ

2019-20 ರಿಂದ 2024-25ನೇ ಸಾಲಿನವರೆಗೆ ಎಸ್.ಎಫ್.ಸಿ,ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಮತ್ತು ಶೇ 7.25ರ ಅನುದಾನದ ಉಳಿಕೆ ಅನುದಾನ, 2019-20ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಎಸ್.ಎಫ್.ಸಿ ಸಾಮಾನ್ಯ ತೆರಿಗೆ ಅನುದಾನದ ಉಳಿಕೆ ಅನುದಾನ, ಕೇಂದ್ರ ಪುರಸ್ಕೃತ ಅಮೃತ್ 2.0 ಅನುದಾನದಲ್ಲಿ ಮತ್ತು 2025-26ನೇ ಸಾಲಿನ ನಗರಸಭಾ ನಿಧಿ ಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ-2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1/ KW-3 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆ/ಅಧಿಕೃತ ಏಜೆನ್ಸಿದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ದಿನಾಂಕ: 09/09/2025 ರ ಸಂಜೆ 5:00 ಗಂಟೆವರೆಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.challakerecity.mrc.gov.in ಮತ್ತು http://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

SL NO	INDENT NUMBER	ESTIMATED AMOUNT (in lakhs)
1	DMA/2025-26/OW/WORK_INDENT46898	69.11
2	DMA/2025-26/WS/WORK_INDENT47388	2.94
3	DMA/2025-26/OW/WORK_INDENT47392	1.05
4	DMA/2025-26/OW/WORK_INDENT47391	2.54
5	DMA/2025-26/OW/WORK_INDENT47394	1.04
6	DMA/2025-26/OW/WORK_INDENT47398	5.60
7	DMA/2025-26/RD/WORK_INDENT47495	3.85
8	DMA/2025-26/RD/WORK_INDENT47397	10.00
9	DMA/2025-26/RD/WORK_INDENT47494	12.40
10	DMA/2025-26/OW/W_INDENT43681/CALL-2	2.00

RO.No.297:DIPR/CTA/KSMCA/2025-26 ಸಹಿ/- **ಪೌರಾಯುಕ್ತರು,** ನಗರಸಭೆ, ಚಳ್ಳಕೆರೆ

ಕರ್ನಾಟಕ ಸರ್ಕಾರ

ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ದಾವಣಗೆರೆ.

ಸಂ:ಕಾಪಾಇಂ/ಪಂರಾಇಂ/ವಿ/ದಾ/ಕಿ.ಇಂ/ಟೆಂಡರ್/2025-26/950
ದಿನಾಂಕ:-19/08/2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

("ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ 2024-25 ನೇ ಸಾಲಿನ 5054 ಮಳೆಹಾನಿ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಏಕ ಮತ್ತು ದ್ವಿ-ಲಕೋಟೆಯಲ್ಲಿ ಟೆಂಡರ್‌ಗಳನ್ನು **ಕೆ.ಡಬ್ಲ್ಯೂ ನಮೂನೆ-3ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:01 ಟೆಂಡರ್‌ಗಿಟ್ಟ ಮೊತ್ತ ರೂ.56.31 ಲಕ್ಷಗಳು ಇರುತ್ತವೆ. ಕಾಮಗಾರಿ ಸ್ವರೂಪ ರಸ್ತೆ ನಿರ್ಮಾಣ ಟೆಂಡರ್ ಫಾರಂಗಳನ್ನು ದಿನಾಂಕ: 19/08/2025 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 28/08/2025 ಸಂಜೆ 4.30 ಗಂಟೆಯವರೆಗೆ** ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192-250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/276/ಕೆಎಸ್‌ಎಂಸಿಎ/2025-26 **ಸಹಿ/- ಕಾರ್ಯಪಾಲಕ ಇಂಜನಿಯರ್,** ಪಂ.ರಾ.ಇಂ.ವಿಭಾಗ, ದಾವಣಗೆರೆ.

ಮಹಾನಗರ ಪಾಲಿಕೆ, ವಿಜಯಪುರ

ಸಂಖ್ಯೆ:ಮನಪಾ/ಲೋವಿ/ಕಾಅ/ಡಿಎಮ್/ಟಿಎನ್‌ಡಿ/ಕೆಪಿಪಿ ಪೋರ್ಟಲ್/2025-26 ದಿನಾಂಕ:18.08.2025

ಕೆ.ಪಿ.ಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಮಹಾನಗರ ಪಾಲಿಕೆಯ ಅನುದಾನದಲ್ಲಿ (05) ಕಾಮಗಾರಿಗಳು ಕೆ.ಪಿ.ಡಬ್ಲೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ https://kppp.karnataka.gov.in ಪೊರ್ಟಲ್‌ನಲ್ಲಿ ನಮೂದಿಸಲಾಗುವುದು.
2) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 24.08.2025**

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/272/ಕೆಎಸ್‌ಎಂಸಿಎ/2025-26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು-572 142, ಫೋ: 7338590199
ಇ-ಮೇಲ್: eeyediyur1@gmail.com

ಕೆಪಿಪಿ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ-07/2025-26 ದಿನಾಂಕ : 08.08.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 04 ಕಾಮಗಾರಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.16.92 ಲಕ್ಷ ರೂಪಾಯಿಗಳು ಹಾಗೂ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.79.20 ಲಕ್ಷ ರೂಪಾಯಿಗಳು
ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ ಕ್ರಮ ಸಂಖ್ಯೆ 1 ಮತ್ತು 2 ಕಾಮಗಾರಿಗಳಿಗೆ 02 ತಿಂಗಳು ಹಾಗೂ ಕ್ರಮ ಸಂಖ್ಯೆ 3 ಮತ್ತು 4 ಕಾಮಗಾರಿಗಳಿಗೆ 03 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 18.08.2025 ಸಂಜೆ 5.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 21.08.2025 ಸಂಜೆ 5:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22.08.2025 ಸಂಜೆ 5:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.

DIPR/TUM/259/KSMCA/2025-26

ಮೈಸೂರು ಜಿಲ್ಲಾ ಪಂಚಾಯತ್
(ಕೈಗಾರಿಕೆ ವಿಭಾಗ)
ಉಪ ನಿರ್ದೇಶಕರು(ಖಾಗ್ರಾ)ರವರ ಕಛೇರಿ, ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ, ಮೈಸೂರು

ವೃತ್ತಿನಿರತ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜಿಗಾಗಿ ಇ-ಟೆಂಡರ್ ಪ್ರಕಟಣೆ

ಟೆಂಡರ್ ಆದೇಶ ಸಂಖ್ಯೆ : ಉನಿ/(ಖಾಗ್ರಾ)/ಜಿಪಂ/ಮೈ/ಇ-ಟೆಂಡರ್/2025-26 ದಿನಾಂಕ: 18.08.2025 **ಇ-ಪ್ರೊಕ್ಯೂರ್ ಮೆಂಟ್ ಮೂಲಕ ಅರ್ಜಿ ಸ್ವೀಕರಿಸುವ ದಿ:** 18.08.2025 ರಿಂದ 01.09.2025 ಸಂಜೆ 05.00 ಗಂಟೆಯೊಳಗೆ **ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ:** 01.09.2025 ಸಂಜೆ 05.00 ಗಂಟೆಯೊಳಗೆ https:kppp.karnataka.gov.in **ಇ-ಟೆಂಡರ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ:** 03.09.2025 ಬೆಳಿಗ್ಗೆ 11.00 ಗಂಟೆ. **ಟೆಂಡರ್ ತೆರೆಯುವ ಅಧಿಕಾರಿ:** ಉಪ ನಿರ್ದೇಶಕರು(ಖಾಗ್ರಾ), ಜಿ.ಪಂ.ಮೈಸೂರು. **ಸಂಪರ್ಕಿಸಬೇಕಾದ ಕಛೇರಿ ವಿಳಾಸ:** ಉಪ ನಿರ್ದೇಶಕರು(ಖಾಗ್ರಾ)ರವರ ಕಛೇರಿ, ಜಿಲ್ಲಾ ಪಂಚಾಯತ್, ಕೈಗಾರಿಕಾ ವಿಭಾಗ,ಮೈಸೂರು ಮೇಲ್ಮನವಿ ಪ್ರಾಧಿಕಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್,ಮೈಸೂರು

ಉಪನಿರ್ದೇಶಕರು(ಖಾಗ್ರಾ), ಜಿಲ್ಲಾ ಪಂಚಾಯತ್(ಕೈಗಾರಿಕಾ ವಿಭಾಗ), ಮೈಸೂರು ರವರ ಕಛೇರಿಯಿಂದ ಮೈಸೂರು ಜಿಲ್ಲೆಯಲ್ಲಿರುವ ವೃತ್ತಿನಿರತ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡಲು ಈ ಕೆಳಕಂಡ ಉಪಕರಣಗಳ ಸರಬರಾಜಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಿದೆ.

ಕ್ರ. ಸಂ.	ವಿವರಗಳು	ಅಂದಾಜು ಸಂಖ್ಯೆ	ಇ.ಎಂ.ಡಿ. ರೂ.ಲಕ್ಷಗಳಲ್ಲಿ	ಅಂದಾಜು ಟೆಂಡರ್ ಮೊತ್ತ ರೂ. ಲಕ್ಷಗಳಲ್ಲಿ
01	ವಿದ್ಯುತ್‌ಚಾಲಿತ ಹೊಲಿಗೆಯಂತ್ರ	425	0.68	34.00
02	ವಿದ್ಯುತ್‌ಚಾಲಿತ ಮರಗೆಲಸದ ಉಪಕರಣಗಳು	100	0.16	8.00
03	ವಿದ್ಯುತ್‌ಚಾಲಿತ ಕ್ಷೌರಿಕ ಉಪಕರಣಗಳು	100	0.16	8.00

DIPR/DDMYS/820/KSMCA/459/2025-26 **ಸಹಿ/- ಉಪನಿರ್ದೇಶಕರು(ಖಾಗ್ರಾ), ಜಿಲ್ಲಾ ಪಂಚಾಯತ್, ಮೈಸೂರು**

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ2/ಟೆಂಡರ/2025-26/2396 ದಿನಾಂಕ: 18/08/2025

:: ಇ-ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: Construction of CC road and Drain in Sc colony at Handarki, Hulgol, Lingampalli, Rajola K, Kadalapur Tanda, Gopanpalli, Gopanpalli Tanda, Bondepalli, Gopinayak, Indira Nagar Karbhari Tanda, Indira Nagar Phasaladi Tanda, Eranapalli Tanda, Nadepalli, Nadepalli Tanda, Khandrayanpalli, At Mallabad Tanda, Gaddanna Tanda, Shakaleshpalli, Venktapur Bikku Nayak Tanda, Venktapur Ramuji Nayak Tanda and Yaddalli village in Sedam Taluka **Indent No.17689**, 2) ಲೆಕ್ಕ ಶೀರ್ಷಿಕೆ: **2024-25 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ,** 3) ಟೆಂಡರಿಗಿಟ್ಟ ಅಂದಾಜು ಮೊತ್ತ: **ಇಂಡೆಂಟ್ ಸಂಖ್ಯೆ : 17689 ರೂ. 1,34,14,496.14,** 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **18-08-2025 ರಿಂದ 02-09-2025 ಸಾಯಂಕಾಲ 4:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ : ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ 7) ಇ.ಎಂ.ಡಿ. : ರೂ. 3360.00, ರೂ. 2,01,500.00, 8) ಟೆಂಡರ ಸಲ್ಲಿಸುವ ದಿನಾಂಕ: **18-08-2025 ರಿಂದ 02-09-2025 ಸಾಯಂಕಾಲ 4:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **03-09-2025 ಸಾಯಂಕಾಲ 4:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **06-09-2025 ಬೆಳಿಗ್ಗೆ 11:00 ಗಂಟೆ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/411/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ

ದೂರವಾಣಿ: 08354- 235042 ಇ-ಮೇಲ್: bgkeezpe@yahoo.com ಫ್ಯಾಕ್ಸ್: 08354-235043

ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ-1,2/ಟೆಂಡರ್/2025-26/2026 ದಿನಾಂಕ:14.8.2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಏಕ & ದ್ವಿ-ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲ್ಯೂ-1, 2 & 3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2024-25ನೇ ಸಾಲಿನ ಲೆಕ್ಕಶೀರ್ಷಿಕೆ:5054 ರಡಿ ಸಾಲಿನಲ್ಲಿ ಸುರಿದ ಮಳೆ ಮತ್ತು ಪ್ರವಾಹದಿಂದಾಗಿ ಹಾನಿಗೊಳಗಾದ ಗ್ರಾಮೀಣ ರಸ್ತೆ, ಸೇತುವೆ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲು ತಲಾ ವಿಧಾನಸಭಾ ಕ್ಷೇತ್ರಕ್ಕೆ **ರೂ.10.00 ಕೋಟಿ** ಅನುದಾನದಡಿ ಹಾಗೂ 2024-25ನೇ ಸಾಲಿನ ಲೆಕ್ಕಶೀರ್ಷಿಕೆ:5054 ರಡಿ ಮುಖ್ಯಮಂತ್ರಿ ವಿಶೇಷ ಅಭಿವೃದ್ಧಿ ಯೋಜನೆಅಡಿ ಗ್ರಾಮೀಣ ರಸ್ತೆ, ಸೇತುವೆ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲು ಬಾಗಲಕೋಟೆ ಜಿಲ್ಲೆಯ ಬಾದಾಮಿ ವಿಧಾನಸಭಾ ಕ್ಷೇತ್ರಕ್ಕೆ ಹಂಚಿಕೆಯಾಗಿರುವ **ರೂ.1.46 ಕೋಟಿ** ಮೊತ್ತದ ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಬಾದಾಮಿ, ಬೀಳಗಿ, ಮುಧೋಳ, ಹುನಗುಂದ ಹಾಗೂ ಜಮಖಂಡಿ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗೆ **Standard Tender Document KW-1,2 & 3** ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ & ದ್ವಿ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ:: 16273/CALL-2, 17024/CALL-2, 17022/CALL-2, 17014/CALL-2 17042/CALL-2, 15845/Call-2, 14927/CALL-2
ಪ್ರವರ್ಗ-1 ವರ್ಗದ ಗುತ್ತಿಗೆಯ ಕಾಮಗಾರಿಯ ಇಂಡೆಂಟ್ ಸಂಖ್ಯೆ:: 15150/CALL-2, 15851/CALL-2
ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಕಾಮಗಾರಿಯ ಇಂಡೆಂಟ್ ಸಂಖ್ಯೆ:: 15449/CALL-2, 17637, 14938/CALL-2 14945/Call-2

ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ.10.00 ದಿಂದ 100.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **25.08.2025 ರ ಸಾಯಂಕಾಲ 5.30** ಗಂಟೆವರೆಗೆ.

ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **28.08.2025 ರಂದು ಮುಂಜಾನೆ 11.00** ಗಂಟೆಯ ನಂತರ. (ದ್ವಿ ಲಕೋಟೆ ಟೆಂಡರಗಳಿಗೆ ಮಾತ್ರ ಅನ್ವಯಿಸುತ್ತದೆ)

ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಅನುಮೋದನೆ ನಂತರ

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ.

ವಾ.ಸಾ.ಇ/ಬಾಗಲಕೋಟ/224/ದೇಶಪಾಂಡೆಪಬ್ಲಿಸಿಟಿ/2025-26

ಬೆಂಗಳೂರಲ್ಲಿ ರಸ್ತೆಗಳು ಗುಂಡಿಗಳಾಗಿವೆ. ವಾಹನ ಸವಾರರು ಪರದಾಡುವ ಪರಿಸ್ಥಿತಿ ಇದೆ. ಇದೇನಾ ಬ್ರ್ಯಾಂಡ್ ಬೆಂಗಳೂರು? ನಗರದಲ್ಲಿ ಕಸ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ಖಾಲಿ ನಿವೇಶನಕ್ಕೂ ತೆರಿಗೆ ಹಾಕಿರೋದು ಸರಿಯಲ್ಲ. ಇದನ್ನು ವಾಪಸ್ ಪಡೆಯಬೇಕು. ಬೆಂಗಳೂರಲ್ಲಿ ಟನಲ್ ರಸ್ತೆ ನಿರ್ಮಾಣ ಮಾಡುವುದಕ್ಕೆ ಸರಕಾರ ಮುಂದಾಗಿದೆ. ಆದರೆ ಅದು ಅವೈಜ್ಞಾನಿಕವಾಗಿ, ಹುಡುಗಾಟಿಕೆಗೆ ಮಾಡಲಾಗುತ್ತಿದೆ.

– ಅಶ್ವತ್ಥನಾರಾಯಣ, ಶಾಸಕ

ಎರಡು ವರ್ಷದಿಂದ ಅನುದಾನ ಸಮರ್ಪಕವಾಗಿ ಕೊಡುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ನಾವು ಜನರಿಗೆ ಉತ್ತರ ಕೊಡಲು ಆಗುತ್ತಿಲ್ಲ. ಆಡಳಿತ ಪಕ್ಷದ ಶಾಸಕರೇ ಅನುದಾನದ ಬಗ್ಗೆ ಧ್ವನಿ ಎತ್ತಿದ್ದಾರೆ. ಈ ಸರಕಾರ ಎಚ್ಚೆತ್ತುಕೊಂಡು ಜನರ ಗೌರವ ಉಳಿಸಬೇಕು. ರಾಜ್ಯದ 224 ಕ್ಷೇತ್ರಗಳಿಗೂ ತಾರತಮ್ಯ ಮಾಡದೆ ಅನುದಾನ ಬಿಡುಗಡೆ ಮಾಡಬೇಕು. ಅನುದಾನದ ಬಗ್ಗೆ ಶ್ವೇತ ಪತ್ರ ಹೊರಡಿಸಬೇಕು.

– ಸುರೇಶ್ ಬಾಬು, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ



ವಿಧಾನ ಮಂಡಲ ಮಧ್ಯದೊಳಗೆ

ಸಮಾಚಾರ ಸಣ್ಣದಲ್ಲ

ಡಯಾಲಿಸಿಸ್ ಬಗ್ಗೆ ತನಿಖೆಯಾಗಲಿ

ಸತ್ತ ವ್ಯಕ್ತಿಗೂ ಡಯಾಲಿಸಿಸ್ ಮಾಡಿ ಹಣ ಪಡೆಯಲಾಗುತ್ತಿದ್ದು, ಈ ಬಗ್ಗೆ ತನಿಖೆ ನಡೆಸಬೇಕು ಎಂದು ಬಿಜೆಪಿ ಶಾಸಕ ಚನ್ನಬಸಪ್ಪ ಆಗ್ರಹಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಆಸ್ಪತ್ರೆಯಲ್ಲಿ ಉಚಿತವಾಗಿ ಡಯಾಲಿಸಿಸ್ ಮಾಡುವ ವ್ಯವಸ್ಥೆ ಇದೆ. ಡಯಾಲಿಸಿಸ್ ಮಾಡುವ ಏಜೆನ್ಸಿಯು ಫೆ.15 ರಂದು ಮೃತಪಟ್ಟ ಹೆಣ್ಣುಮಗಳಿಗೆ ಫೆ.24 ಹಾಗೂ ಆನಂತರ ಮತ್ತೊಮ್ಮೆ ಡಯಾಲಿಸಿಸ್ ಮಾಡಿ ಹಣ ಪಡೆದಿದೆ ಎಂದು ಆರೋಪಿಸಿದರು. 20 ರಿಂದ 30 ಲಕ್ಷ ರು. ಹಣವು ಸರಕಾರದಿಂದ ಸಂದಾಯವಾಗುತ್ತದೆ. ಸತ್ತ ವ್ಯಕ್ತಿಗೂ ಡಯಾಲಿಸಿಸ್ ಮಾಡಲಾಗುತ್ತದೆ. ಇದೇ ಏಜೆನ್ಸಿಗೆ ಮತ್ತೆ 50 ಡಯಾಲಿಸಿಸ್ ಉಪಕರಣ ನೀಡುವ ಹುನ್ನಾರ ನಡೆದಿದೆ. ಈ ಬಗ್ಗೆ ತನಿಖೆ ನಡೆಯಬೇಕು ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜವಳಿ ಸಚಿವ ಶಿವಾನಂದ ಪಾಟೀಲ್, ಈ ವಿಚಾರ ಗಂಭೀರವಾಗಿದ್ದು, ಆರೋಗ್ಯ ಸಚಿವರ ಗಮನಕ್ಕೆ ತಂದು ಉತ್ತರ ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ವಿಧಾನಸಭೆ: ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನಲ್ಲಿ 6 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 35 ಅಂಗನವಾಡಿ ಸಹಾಯಕಿಯರ

ಹುದ್ದೆಗಳಿಗೆ ಪ್ರಸ್ತುತ ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ಡಿ.ಜಿ. ಶಾಂತನಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಖಾಲಿ ಇರುವ ಅಂಗನವಾಡಿ ಕೇಂದ್ರಗಳಲ್ಲಿ ದೈನಂದಿನ ಚಟುವಟಿಕೆಗಳಿಗೆ ಅಡಚಣೆಯಾಗದಂತೆ ಹತ್ತಿರದ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಗೆ ಪ್ರಭಾರ ವಹಿಸಿ ಕರ್ತವ್ಯ ನಿರ್ವಹಿಸುವಂತೆ ಕ್ರಮವಹಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ನೇಮಕಾತಿಗೆ ಅರ್ಜಿ ಸಲ್ಲಿಸಲು ರಾಜ್ಯಾದ್ಯಂತ ಅಭ್ಯರ್ಥಿಗಳಿಗೆ ತಾಂತ್ರಿಕ ಸಮಸ್ಯೆ ಉಂಟಾದ ಹಿನ್ನೆಲೆಯಲ್ಲಿ ಅಪೂರ್ಣಗೊಂಡ ಅರ್ಜಿಗಳನ್ನು ಪೂರ್ಣಗೊಳಿಸಲು ಸಮಯಾವಕಾಶ ನೀಡಲಾಗುತ್ತದೆ. ಈ ಕುರಿತಂತೆ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗೂ ಕಾಲಕಾಲಕ್ಕೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಅತಿವೃಷ್ಟಿ ಹಾನಿ: ಜಂಟಿ ಸಮೀಕ್ಷೆ

ವಿಧಾನಸಭೆ: ಮಲೆನಾಡು, ಹಾಸನ, ಬೆಳಗಾವಿ ಹಾಗೂ ಕಲಬುರಗಿ ವಿಭಾಗ ಸೇರಿದಂತೆ ರಾಜ್ಯದಲ್ಲಿ ಉಂಟಾಗಿರುವ ಅತಿವೃಷ್ಟಿ ಹಾನಿ ಬಗ್ಗೆ ಕಂದಾಯ

ಹಾಗೂ ಕೃಷಿ ಇಲಾಖೆಯಿಂದ ಜಂಟಿ ಸಮೀಕ್ಷೆ ನಡೆಸಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು. ಶೂನ್ಯವೇಳೆಯಲ್ಲಿ ಬಿಜೆಪಿ ಶಾಸಕ ಸಿಮೆಂಟ್ ಮಂಜು, ಆಡಳಿತ ಪಕ್ಷದ ಶಾಸಕರಾದ ಅಲ್ಲಮಪ್ರಭು ಪಾಟೀಲ್ ಮತ್ತು ಜಿ.ಟಿ.ಪಾಟೀಲ್ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ವಾಡಿಕೆಗಿಂತ ಹೆಚ್ಚು ಮಳೆಯಾಗಿ ವಿವಿಧ ಬೆಳೆಗಳು ಹಾನಿಯಾಗಿವೆ. ಜಂಟಿ ಸರ್ವೆ ನಂತರ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮಾರ್ಗ ಸೂಚಿ ಪ್ರಕಾರ, ಪರಿಹಾರ ಒದಗಿಸಲಾಗುವುದು. ಏಪ್ರಿಲ್, ಮೇ ತಿಂಗಳಿನಿಂದಲೂ ಮಳೆ ಜಾಸ್ತಿಯಾಗಿ ರಾಜ್ಯದ ಹಲವೆಡೆ ರೈತರಿಗೆ ತೊಂದರೆಯಾಗಿರುವುದನ್ನು ಗಂಭೀರವಾಗಿ ಸರಕಾರ ಪರಿಗಣಿಸಿದೆ ಎಂದರು. ಕಲಬುರಗಿ ಜಿಲ್ಲೆಯಲ್ಲಿ ಹೆಸರು, ಉದ್ದು ಸೇರಿದಂತೆ ಹಲವು ಬೆಳೆಗಳು ಹಾನಿಗೀಡಾಗಿವೆ. ರಾಜ್ಯದಲ್ಲಿ ಮೊದಲ ಬಾರಿಗೆ ಕಲಬುರಗಿ ಜಿಲ್ಲೆಗೆ 650 ಕೋಟಿ ರು.ಗೂ ಹೆಚ್ಚು ಬೆಳೆವಿಮೆ ಪರಿಹಾರ ದೊರೆಯುತ್ತಿದೆ. ವಿಮೆ ಪರಿಹಾರವನ್ನು ರೈತರಿಗೆ ಬಿಡುಗಡೆ ಮಾಡಲು ಕ್ರಮ ವಹಿಸಲಾಗಿದೆ. ಸುಮಾರು 28 ಲಕ್ಷ ರೈತರು ಬೆಳೆವಿಮೆ ನೋಂದಣಿ ಮಾಡಿಸಿದ್ದಾರೆ. ರೈತರು ಬೆಳೆವಿಮೆ ಕಂತಿನ ಶೇ.2 ರಷ್ಟು ಭರಿಸಿದರೆ, ಕೇಂದ್ರ ಮತ್ತು ರಾಜ್ಯ ಸರಕಾರಗಳು ಶೇ.90ರಷ್ಟು ಭರಿಸಲಿವೆ ಎಂದರು.

ವಿಶ್ವವಾಣಿ ಕ್ಲಬ್ ಹೌಸ್

21.08.2025

ಸಂಜೆ: 06.55 ರಿಂದ 08.05 ರವರೆಗೆ



ಗುರುವಾರದ ಅತಿಥಿ

ಎಂ. ಬಿ. ಕವಿತಾ

ವಿಷಯ

ಗಟ್ ಹೆಲ್ತ್ ಎನಿದು?

vishwavani.news

ಪ್ರತಿಪಕ್ಷಗಳ ಸದಸ್ಯರ ಸಭಾತ್ಯಾಗದ ನಡುವೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ ಮಂಡನೆ

ಕೆರೆ ಒತ್ತುವರಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಆಗ್ರಹ

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ರಾಜ್ಯದಲ್ಲಿ ಕಾನೂನು ಬಾಹಿರವಾಗಿ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಸರಕಾರ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಪಕ್ಷಬೇಧ ಮರೆತು ಸದಸ್ಯರು ವಿಧಾನಪರಿಷತ್‌ನಲ್ಲಿ ಆಗ್ರಹಿಸಿದರು. ಈ ವೇಳೆ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕಕ್ಕೆ ಕೆಲವು ತಿದ್ದುಪಡಿ ಮಾಡುವ ಸಂಬಂಧ ಸದನ ಸಮಿತಿ ರಚನೆ ಮಾಡಬೇಕು ಎಂದು ಒತ್ತಾಯಿಸಿ ಪ್ರತಿಪಕ್ಷಗಳ ಸದಸ್ಯರು ವಿಧಾನಪರಿಷತ್‌ನಲ್ಲಿ ಸಭಾತ್ಯಾಗ ಮಾಡಿದರು. ಸಭಾತ್ಯಾಗದ ನಡುವೆಯೇ ವಿಧಾನಸಭೆಯಲ್ಲಿ ಅಂಗೀಕೃತವಾಗಿದ್ದ ವಿಧೇಯಕ ಸದನದಲ್ಲಿ ಅಂಗೀಕರಿಸಲಾಯಿತು.

ಇದಕ್ಕೂ ಮುನ್ನ ವಿಧೇಯಕದ ಬಗ್ಗೆ ಮಾತನಾಡಿದ ಸಣ್ಣ ನೀರಾವರಿ ಸಚಿವ ಭೋಸರಾಜು, ಈ ವಿಧೇಯಕ ಜಾರಿಗೆ ಬರುವುದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಇದನ್ನು ನಾವು ಸಾರ್ವಜನಿಕರ ಹಿತ ದೃಷ್ಟಿಯಲ್ಲಿಟ್ಟುಕೊಂಡು ಜಾರಿ ಮಾಡಿದ್ದೇವೆ. ಇದರಲ್ಲಿ ಖಾಸಗಿಯವರ ಹಸ್ತಕ್ಷೇಪಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು. ಸದಸ್ಯರ ಆತಂಕ ಬೆಂಗಳೂರು ಭಾಗದ್ದು ಎಂದು ಸದಸ್ಯರು ಆತಂಕ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ 206 ಬಿಡಿಎ ಗೆ ಸೇರುತ್ತವೆ. ಈ ಕೆರೆಗಳ ಬಗ್ಗೆ ಆತಂಕ ಇವೆ ಎನ್ನುವುದು ಅವರ ಮಾತಾಗಿದೆ. 35 ಸಾವಿರ ಕೆರೆಗಳ ಸರ್ವೇ ಮಾಡಿದ್ದೇವೆ ಎಂದರು.

ಈ ಪೈಕಿ 13644 ಕೆರೆಗಳ ಒತ್ತುವರಿಯಾಗಿವೆ. ಆ ಪೈಕಿ 7986 ಕೆರೆಗಳು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. 5600 ಕೆರೆ ಒತ್ತುವರಿಯಿಂದ ತೆರವುಗೊಳಿಸಬೇಕು, ಕೆರೆ ಸಂರಕ್ಷಣೆ, ಅಭಿವೃದ್ಧಿಗೆ ಈಗಾಗಲೇ ಬಜೆಟ್‌ನಲ್ಲೇ ಘೋಷಣೆ ಆಗಿದೆ. ಪ್ರತಿಯೊಂದು ಗ್ರಾಮದಲ್ಲಿ ಕೆರೆಗಳ ಸಂರಕ್ಷಣೆಗೆ ಸಮಿತಿ ರಚಿಸಿದ್ದೇವೆ. ಇದಕ್ಕೆ ಬೇಕಾದ ಸದಸ್ಯರನ್ನು ಅವರೇ ನೇಮಕ ಮಾಡಿಕೊಳ್ಳುತ್ತಾರೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಸರಕಾರ ಕೆರೆ ಸಂರಕ್ಷಣೆ ಮಾಡಲು ಬದ್ಧವಿದೆ, ಯಾರಿಗೂ ಆತಂಕ ಬೇಡ ಎಂದು ಸ್ಪಷ್ಟಪಡಿಸಿದರು.

ಬೆಂಗಳೂರು ಸಮಸ್ಯೆ ಬೇರೆ ಗ್ರಾಮೀಣ ಭಾಗದ ಸಮಸ್ಯೆ ಬೇರೆ, ಬೆಂಗಳೂರು ಕಾಂಕ್ರಿಟ್ ಕಾಡಾಗಿದೆ, ನಾವೂ ಈ ಬಿಲ್ ಸಾರಾಸಗಟಾಗಿ ವಿರೋಧ ಮಾಡುತ್ತಿಲ್ಲ, ಬೆಂಗಳೂರು ಬೆಳೆಯುತ್ತಿರುವ ನಗರ, ಇನ್ನೊಂದು ಸಲ ಪರಿಷ್ಕರಣೆ ಮಾಡಿ, ಇದೇನು ಬಾರೀ ಪ್ರಾಮುಖ್ಯತೆ ಇರುವ ವಿಧೇಯಕವಲ್ಲ. ಸದನ ಸಮಿತಿಗೆ ಇದನ್ನು ಒಪ್ಪಿಸಿ.

– ಛಲವಾದಿ ನಾರಾಯಣ ಸ್ವಾಮಿ, ವಿಧಾನಪರಿಷತ್ ಪ್ರತಿಪಕ್ಷ ನಾಯಕ

ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಬಗ್ಗೆಯೂ ಕೆಲವರು ಮಾತನಾಡಿದ್ದಾರೆ. ಇದು ಸಾಂವಿಧಾನಿಕ ನ್ಯಾಯಾಲಯ ಅಲ್ಲ, ಇದನ್ನು ನಾವು ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂಬ ನಿಯಮವಿಲ್ಲ. ಇದು ಸಲಹೆ ಸೂಚನೆ ಕೊಡುತ್ತದೆ ಎಂದರು. ಕೆರೆಗಳ ಸಂರಕ್ಷಣೆ ಹಿಂದೆ ಇಲ್ಲಿ ಯಾವುದೇ ಸೂಟ್‌ಕೇಸ್ ಎಂದು ಇಲ್ಲ, ನಿಮಗೆ ಅನುಭವ ಆಗಿರಬೇಕು ನಮಗೆ ಆಗಿಲ್ಲ, ಅಪಾರ್ಟ್‌ಮೆಂಟ್‌ಗಳ ವಿಚಾರವೂ ಇಲ್ಲ, ಸಿ.ಟಿ.ರವಿ ಹಿರಿಯರು ಇದ್ದಾರೆ. ಈ ಬಗ್ಗೆ ಸೂಟ್‌ಕೇಸ್ ಎಂದೆಲ್ಲಾ ಮಾತನಾಡುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಭೂ ಮಾಫಿಯಾ ಒತ್ತಡಕ್ಕೆ ಸರಕಾರ ಮಣಿದಿದೆ

ಈ ವೇಳೆ ಸಿ.ಟಿ. ರವಿ ಮಾತನಾಡಿ, ಭೂ ಮಾಫಿಯಾ ಒತ್ತಡಕ್ಕೆ ಸರಕಾರ ಮಣಿದಂತೆ ಕಾಣುತ್ತಿದೆ, ನಮ್ಮ ಸರಕಾರ ಇದ್ದಾಗಲೂ ಒತ್ತಡ ಇತ್ತು, ಈಗಿನ ಸರಕಾರದ ಮೇಲೆ ಅನುಮಾನ ಬರುತ್ತಿದೆ, ಸೂಟ್‌ಕೇಸ್‌ಗಳು ಎಲ್ಲಾದರೂ ಕೆಲಸ ಮಾಡಿದ್ದಾವಾ ಎಂಬ ಅನುಮಾನ ಬರುತ್ತಿದೆ, ಮತ್ತೊಮ್ಮೆ ಬಿಲ್ ಪರಾಮರ್ಶೆ ಮಾಡಿ ಜಂಟಿ ಸದನ ಸಮಿತಿಗೆ ಬಿಲ್ ನೀಡಿ, ಮೆಜಾರಿಟಿ ಮೇಲೆ ಸರಕಾರ ಮುಂದುವರಿಯುವುದು ಬೇಡ, ರಿಯಾಲಿಟಿ ಮೇಲೆ ನಿರ್ಧಾರ ಮಾಡಲಿ ಎಂದು ಒತ್ತಾಯ ಮಾಡಿದರು. ಆದರೆ ಕೆರೆಗಳ ಬಫರ್‌ಝೋನ್ ಬದಲಾಯಿಸಿದರೆ ಬೆಂಗಳೂರು, ಬೆಂಗಳೂರಿನ ನಾಗರೀಕರು ನಾಶವಾಗುತ್ತಾರೆ, ಬಫರ್ ಝೋನ್ ಆಗಿದೆ. ಇರುವ ಕೆರೆಗಳನ್ನಾದರೂ ನಾವು ಸಂರಕ್ಷಣೆ ಮಾಡಬೇಕಲ್ಲ, ಈ ಬಿಲ್‌ನ ಸದುದ್ದೇಶ ಏನು ಎಂದು ಪ್ರಶ್ನೆ ಮಾಡಿದರು.

ವಿಧೇಯಕದ ಮೇಲೆ ಸದಸ್ಯರಾದ ಐವಾನ್ ಡಿಸೋಜ, ಟಿ.ಎ.ಶರವಣ, ಕೆ.ಎಸ್.ನವೀನ್, ಎನ್.ರವಿಕುಮಾರ್, ಪ್ರತಾಪ್ ಸಿಂಹ ನಾಯಕ್, ರಾಮೋಜಿಗೌಡ, ಗೋವಿಂದರಾಜು, ಹೇಮಲತಾ ನಾಯಕ್, ಪಿ.ಎಚ್.ಪೂಜಾರ್ ಸೇರಿದಂತೆ ಮತ್ತಿತರರು ಮಾತನಾಡಿದರು.

ವಿಧೇಯಕಗಳ ಅಂಗೀಕಾರ

ವಿಧಾನಸಭೆಯಲ್ಲಿ ಅಂಗೀಕೃತವಾಗಿದ್ದ ಹಲವು ವಿಧೇಯಕಗಳನ್ನು ಯಥಾವತ್ತಾಗಿ ಯಾವುದೇ ತಿದ್ದುಪಡಿ ಮಾಡದೇ ವಿಧಾನಪರಿಷತ್‌ನಲ್ಲಿ ಅಂಗೀಕರಿಸಲಾಯಿತು. ವಿಧಾನಪರಿಷತ್ ಕಲಾಪ ಪ್ರಾರಂಭವಾಗುತ್ತಿದ್ದಂತೆ ಸಭಾಪತಿ ಬಸವರಾಜ ಹೊರಟ್ಟಿಯವರು ವಿಧಾನಸಭೆಯಲ್ಲಿ ಅಂಗೀಕೃತವಾಗಿದ್ದ ವಿಧೇಯಕಗಳನ್ನು ಸದನವು ಅಂಗೀಕರಿಸಬೇಕೆಂದು ಸದಸ್ಯರಿಗೆ ಮನವಿ ಮಾಡಿದರು. ವಿಧೇಯಕದ ಮೇಲೆ ಹಲವು ಸದಸ್ಯರು ಚರ್ಚಿಸಿ ಸರಕಾರಕ್ಕೆ ಕೆಲವು ಸಲಹೆಗಳನ್ನು ನೀಡಿದ ನಂತರ ಅಂಗೀಕರಿಸ ಲಾಯಿತು. ಮೊದಲು ವಿಧಾನಪರಿಷತ್ ಕಾರ್ಯದರ್ಶಿಯವರಿಗೂ ಸಭಾಪತಿಯವರು ವಿಧಾನಸಭೆಯಲ್ಲಿ ಮಂಡನೆಯಾಗಿದ್ದ ಸಿಎಜಿ ವರದಿಯನ್ನು ಮಂಡಿಸುವಂತೆ ಸೂಚನೆ ನೀಡಿದರು. ಕಾರ್ಯದರ್ಶಿಗಳು ವರದಿ ಮಂಡನೆ ಮಾಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರವಾಗಿ ಸಭಾನಾಯಕ ಬೋಸರಾಜು ಅವರು, ಭಾರತದ ಲೆಕ್ಕ ನಿಯಂತ್ರಣಾಧಿಕಾರ ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯನ್ನು ಸದನದಲ್ಲಿ ಮಂಡನೆ ಮಾಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪರವಾಗಿ ಸಭಾನಾಯಕ ಭೋಸರಾಜು ರವರು ಬೃಹತ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ-2025 ಅನ್ನು ಮಂಡಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಪರವಾಗಿ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯ (ತಿದ್ದುಪಡಿ ವಿಧೇಯಕ-2025) ವಿಧೇಯಕ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಪರವಾಗಿ ಕರ್ನಾಟಕ ವೇದಿಕೆ ಆಧರಿತ ಗಿಗ್ ಕಾರ್ಮಿಕರ ವಿಧೇಯಕ-2025 ಮಂಡನೆ ಮಾಡಿದರು. ಕೆರೆಗಳ ವಿಸ್ತೀರ್ಣ ಆಧರಿಸಿ ಬಫರ್ ಝೋನ್ ನಿಗದಿಪಡಿಸಿರುವ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು (ತಿದ್ದುಪಡಿ ವಿಧೇಯಕ-2025) ಸಣ್ಣ ನೀರಾವರಿ ಸಚಿವರಾಗಿರುವ ಬೋಸರಾಜು ಮಂಡಿಸಿದರು. ಸದಸ್ಯರಾದ ಐವಾನ್ ಡಿಸೋಜ, ಟಿ.ಎ.ಶರವಣ, ಕೆ.ಎಸ್.ನವೀನ್ ಸೇರಿದಂತೆ ಹಲವು ಸದಸ್ಯರು ಮಾತನಾಡಿದರು.

ವೈದ್ಯರು, ನರ್ಸ್‌ಗಳಿಗೆ ಗ್ರಾಮೀಣ ಸೇವೆ ಕಡ್ಡಾಯ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ನಗರ ಪ್ರದೇಶಗಳಲ್ಲಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ನರ್ಸ್ ಸೇರಿದಂತೆ ಇತರೆ ಸಿಬ್ಬಂದಿಯನ್ನು ಇನ್ನು ಮುಂದೆ ಕಡ್ಡಾಯವಾಗಿ ಗ್ರಾಮೀಣ ಭಾಗದಲ್ಲಿ ಕರ್ತವ್ಯ ನಿರ್ವಹಿಸಬೇಕು ಎನ್ನುವ ವಿಧೇಯಕಕ್ಕೆ ವಿಧಾನಪರಿಷತ್‌ನಲ್ಲಿ ಅನುಮೋದನೆಗೊಂಡಿದೆ.

ವಿಧೇಯಕ ಮಂಡಿಸಿದ ಬಳಿಕ ಮಾತನಾಡಿದ ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ನಗರ ಪ್ರದೇಶಗಳ ಸರಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ನರ್ಸ್‌ಗಳು, ಡಿ ಗ್ರೂಪ್ ಸಿಬ್ಬಂದಿ ದೀರ್ಘಕಾಲದವರೆಗೂ ಒಂದೇ ಕಡೆ ಕೆಲಸ ಮಾಡುತ್ತಿದ್ದಾರೆ. ಪಾರದರ್ಶಕತೆ ತರುವ ಸಲುವಾಗಿ ಇವರನ್ನು ವರ್ಗಾವಣೆ ಮಾಡಿದರೆ ನ್ಯಾಯಾಲಯದ ಮೊರೆ ಹೋಗಿ ವರ್ಗಾವಣೆಗೆ ತಡೆಯಾಜ್ಞೆ ತರುತ್ತಿದ್ದಾರೆ. ಇದರಿಂದ ಗ್ರಾಮೀಣ ಭಾಗದ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಇತರ ಸಿಬ್ಬಂದಿ ಕೊರತೆ ಉಂಟಾಗುತಿತ್ತು. ಇದನ್ನು ಸರಿದೂಗಿಸಲು ಕಾಯಿದೆಗೆ ತಿದ್ದುಪಡಿ ತರಲಾಗಿದೆ ಎಂದರು.

ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಎ,ಬಿ,ಸಿ,ಡಿ ಎಂದು ನಾಲ್ಕು ವಲಯಗಳನ್ನಾಗಿ

ಹಲವು ವರ್ಷಗಳ ಕಾಲ ಒಂದೇ ಕಡೆ ಕೆಲಸ ಮಾಡುತ್ತಿರುವ ವೈದ್ಯರಿಗೆ ಅಥವಾ ಬಡ್ತಿ ಸಂದರ್ಭದಲ್ಲಿ ಕಡ್ಡಾಯವಾಗಿ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕಿದೆ. ಈಗಾಗಲೇ 5,500 ವೈದ್ಯರು ಹಾಗೂ ಇನ್ನಿತರರನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ.

–ದಿನೇಶ್ ಗುಂಡೂರಾವ್, ಸಚಿವ

ರೂಪಿಸಲಾಗಿದೆ. ಈ ವಲಯಗಳಲ್ಲಿ ಗರಿಷ್ಠ ವರ್ಷಗಳ ಕಾಲ ಸೇವೆ ಸಲ್ಲಿಸುತ್ತಿರುವವರು ಗ್ರಾಮೀಣ ಭಾಗದಲ್ಲಿ ಕೆಲಸ ಮಾಡಬೇಕಿದೆ. ಇನ್ನೂ ತಜ್ಞ ವೈದ್ಯರನ್ನು ಗುರುತಿಸಲಾದ ಹುದ್ದೆಗಳಲ್ಲಿ ಮುಂದುವರೆಸಲು ಹಾಗೂ ಚಿಕ್ಕ ಮಕ್ಕಳಿರುವ ಹಾಗೂ ನಿವೃತ್ತಿ ಅಂಚಿನಲ್ಲಿರುವ ವೈದ್ಯಾಧಿಕಾರಿಗಳು ಹಾಗೂ ಇತರ ಸಿಬ್ಬಂದಿಗೆ ತಿದ್ದುಪಡಿ ಕಾಯ್ದೆಯಲ್ಲಿ ವರ್ಗಾವಣೆಗೆ ವಿನಾಯಿತಿ ನೀಡಲಾಗಿದೆ ಎಂದರು. ಬಳಿಕ ಸದಸ್ಯರು ಒಕ್ಕೂರಲಿನಿಂದ ಮಸೂದೆಗೆ ಸಹಮತ ವ್ಯಕ್ತಪಡಿಸಿದ್ದರಿಂದ ವಿಧೇಯಕ ಅನುಮೋದನೆಯಾಯಿತು.

ಅನುದಾನ ಜನಸಂಖ್ಯೆಗೆ ಪೂರಕವಾಗಿ ಹಂಚಿಕೆಯಾಗಿಲ್ಲ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿ ಬರುವ ಅಭಿವೃದ್ಧಿ ನಿಗಮಗಳ ಅನುದಾನ ಹಂಚಿಕೆಯಾಗುತ್ತಿಲ್ಲ ಎನ್ನುವ ವರದಿ ಬಹಿರಂಗವಾಗಿದೆ.

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಹಾಗೂ ಪಂಗಡಗಳ ಕಲ್ಯಾಣ ಸಮಿತಿಯ ಐದನೇ ವರದಿಯಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದೆ. ಇದಿಷ್ಟೇ ಅಲ್ಲದೇ, ವಸತಿ ಶಿಕ್ಷಣ ಸಂಸ್ಥೆಯಲ್ಲಿ ನಡೆಸಲ್ಪಡುತ್ತಿರುವ ಸಿವಿಲ್ ಕಾಮಗಾರಿಗಳು, ಆಹಾರ ಸರಬರಾಜು ಇತರೆ ವಸ್ತುಗಳ ಖರೀದಿ ಅವೈಜ್ಞಾನಿಕವಾಗಿದ್ದು, ಮಾರುಕಟ್ಟೆ ಬೆಲೆ ಹಾಗೂ ಖರೀದಿಯ ಬೆಲೆ ಅಜಗಜಾಂತರವಿದೆ. ಇದರ ಬಗ್ಗೆ ಕೂಲಂಕಷವಾಗಿ ತನಿಖೆಗೆ ಸರಕಾರ ಕ್ರಮ ಕೈಗೊಳ್ಳಬೇಕೆಂದು ಸಮಿತಿ ಶಿಫಾರಸು ಮಾಡಿದೆ.

ಈ ಸಮುದಾಯದ ಜನಸಂಖ್ಯೆ ಯಲ್ಲಿರುವ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವ ಮಟ್ಟದಲ್ಲಿ ಸಮರ್ಪಕವಾಗಿರುವುದಿಲ್ಲ, ಹಲವು ದಶಕಗಳ ಹಿಂದಿನ ಯೋಜನೆಗಳೇ ಅಭಿವೃದ್ಧಿ ನಿಗಮಗಳಲ್ಲಿ ಮುಂದುವರೆದಿರುವುದು ಗೋಚರಿಸುತ್ತದೆ. ಇವುಗಳನ್ನು ವೈಜ್ಞಾನಿಕ ತಳಹದಿಯ ಹಿನ್ನೆಲೆಯಲ್ಲಿ ಮಾರ್ಪಾಟು ಮಾಡಬೇಕು. ಹಾಸ್ಟೆಲ್‌ಗಳ ನಿರ್ವಹಣೆಯಲ್ಲಿ ವಾರ್ಡನ್‌ಗಳ ಕೊರತೆ ತೀವ್ರವಾಗಿದ್ದು, ಮೂಲ ಸೌಕರ್ಯ ಕೊರತೆಯಿಂದ ಶೈಕ್ಷಣಿಕ ವ್ಯವಸ್ಥೆ ಮತ್ತು ವಸತಿ ವ್ಯವಸ್ಥೆಗೆ ಅನಾನುಕೂಲವಾಗುತ್ತದೆ ಎಂಬುದನ್ನು ಸಮಿತಿಯು ಗಮನಿಸಿ ತುರ್ತು ಮಾರ್ಪಾಡಿಗೆ ಸರಕಾರ ತ್ವರಿತ ಕ್ರಮವಹಿಸಬೇಕು ಎಂದು ಸೂಚಿಸಲಾಗಿದೆ.

ಟೆಂಡರ್ ಶೀಘ್ರವಾಗಲಿ

ಎಸ್‌ಸಿ- ಎಸ್‌ಟಿ ಹಾಸ್ಟೆಲ್‌ಗಳು ಹಾಗೂ ವಸತಿ ಶಿಕ್ಷಣ ಸಂಸ್ಥೆಗಳ ಆಹಾರ ಸಾಮಗ್ರಿಗಳ ಟೆಂಡರ್ ಪ್ರಕ್ರಿಯೆ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲೇ ಆರಂಭಿಸಿ ಆಹಾರ ಸರಬರಾಜು ಸುಗಮವಾಗಿ ನಡೆಯಲು ಕ್ರಮವಹಿಸಬೇಕು. ಹಲವಾರು ಕಡೆ ತಿಂಗಳ ಕೊನೆಯಲ್ಲಿ ಆಹಾರ ಸರಬರಾಜು ಆಗುತ್ತಿರುವುದನ್ನು ಸಮಿತಿ ಗಮನಿಸಿದೆ. ವಸತಿ ಶಾಲೆ ಮತ್ತು ಹಾಸ್ಟೆಲ್‌ಗಳನ್ನು ನಡೆಸಲ್ಪಡುವ ಸಂಬಂಧ ಅಕ್ರಮಗಳಿಗಾಗಿ ಅವಕಾಶ ಕಲ್ಪಿಸಿದಂತಾಗುತ್ತದೆಂದು ಸಮಿತಿಯು ಅಭಿಪ್ರಾಯಪಟ್ಟಿದೆ.

ಗ್ಯಾರಂಟಿ ನೆಪದಲ್ಲಿ ಎಲ್ಲ ವಸ್ತುಗಳ ದರವೂ ಏರಿಕೆ

ವಿಧಾನಸಭೆ: ಗ್ಯಾರಂಟಿಗಳಿಗಾಗಿ ಹಾಲು, ಮದ್ಯ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿ ರಾಜ್ಯ ಸರಕಾರ ಜನರಿಗೆ ಸಂಕಷ್ಟ ತಂದಿಟ್ಟಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ವಿಧಾನಸಭೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ

ಮಾತನಾಡಿದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಗಳಿಗೆ ಅನುದಾನ ನೀಡುತ್ತಿಲ್ಲ. ನಾವು ಬಂದರೆ, ಬೆಂಗಳೂರನ್ನು ಕೃಷ್ಣದೇವರಾಯನ ಕಾಲದ ರೀತಿ ಮಾಡುತ್ತೇವೆ. ವಜ್ರಗಳು ರಸ್ತೆಯಲ್ಲಿ ಸಿಗುತ್ತವೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದರು. ಆದರೆ, ಈಗ ಜಲ್ಲಿ ಕಲ್ಲುಗಳು ಸಿಗುತ್ತವೆ. ಜತೆಗೆ ರಸ್ತೆಗಳ ಮೇಲೆ ಗುಂಡಿಗಳು, ಕೆಳಗಡೆ ಸುರಂಗದ ಕನಸುಗಳು-ಇದುವೇ ಕಾಂಗ್ರೆಸ್‌ನ ಬ್ರ್ಯಾಂಡ್ ಬೆಂಗಳೂರಿನ ಪರಿಕಲ್ಪನೆಯಾಗಿದೆ ಎಂದು ಲೇವಡಿ ಮಾಡಿದರು. ಅನುದಾನ ಹಂಚಿಕೆ, ಅಭಿವೃದ್ಧಿ ವಿಚಾರದಲ್ಲಿ ರಾಜ್ಯ ಸರಕಾರದ ವಿರುದ್ಧ ಸ್ವಪಕ್ಷದ ಶಾಸಕರೇ ಆಕ್ರೋಶ ಹೊರಹಾಕುತ್ತಿದ್ದು, ಸಿದ್ದರಾಮಯ್ಯ ಅವರ ಸರಕಾರ ಒಡೆದ ಮನೆಯಾಗಿದೆ. ಅನುದಾನ ಹಂಚಿಕೆ, ಅಭಿವೃದ್ಧಿಯಲ್ಲಿ ಸರಕಾರ ವಿಫಲ ಎಂದು ವಾಗ್ದಾಳಿ ನಡೆಸಿದರು.

ಸರಕಾರಿ ಆಸ್ಪತ್ರೆಗೆ ಜನ ಹೋಗುತ್ತಾರೆ. ಅಲ್ಲಿ ಸಹ ಶೇ.100 ರಷ್ಟು ತೆರಿಗೆ ಹಾಕಿದ್ದಾರೆ. ನಾನು ಜಯನಗರ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಪ್ರತಿ ಸರಿ ಬಂದಾಗ ಬಳಕೆದಾರರು ಹಣ ಕಟ್ಟಬೇಕು. ಮೈಸೂರು ಮೃಗಾಲಯ ನೋಡಲು ಸಹ ಶೇ.20 ರಷ್ಟು ದರ ಹೆಚ್ಚಳ ಮಾಡಿದ್ದಾರೆ. ಅದೇ ಹುಲಿ, ಅದೇ ಜಿರಾಫೆಗೆ ಬಣ್ಣ ಸುಣ್ಣ ಹೊಡೆದು ವಿದೇಶಿ ಬಟ್ಟೆ ಹಾಕಿದರೆ ಪರವಾಗಿಲ್ಲ. ಏನೂ ಇಲ್ಲದೆ ಶೇ.20 ರಷ್ಟು ಹೇಗೆ ಆಗುತ್ತದೆ. ಅಲ್ಲಿಯೂ ವಸೂಲಿ ಮಾಡಬೇಕಾ?

– ಆರ್.ಅಶೋಕ್, ಪ್ರತಿಪಕ್ಷ ನಾಯಕ

ಅನಾಥ ಮಕ್ಕಳಿಗೆ ವಿಶೇಷ ರಿಯಾಯಿತಿ

ವಿಧಾನಸಭೆ: ಅನಾಥಶ್ರಮಗಳಲ್ಲಿರುವ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ದಾಖಲಾಗುವ ಸಮಯದಲ್ಲಿ ವಿಶೇಷ ರಿಯಾಯಿತಿ ತರುವ ನಿಟ್ಟಿನಲ್ಲಿ ಸರಕಾರ ಶೀಘ್ರ ಕ್ರಮವಹಿಸಲಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಶಾಸಕಿ ನಯನಾ ಮೋಟಮ್ಮ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅನಾಥಾಶ್ರಮಗ ಳಲ್ಲಿರುವ ಮಕ್ಕಳಿಗೆ ಪದವಿ ಪೂರ್ವ ಶಿಕ್ಷಣದವರೆಗೂ ಯಾವುದೇ ಸಮಸ್ಯೆಯಿಲ್ಲ. ಆದರೆ ಉನ್ನತ ಶಿಕ್ಷಣಕ್ಕೆ ಸೇರಬೇಕು ಎನ್ನುವ ಸಮಯದಲ್ಲಿ ಸಾಮಾನ್ಯ ವರ್ಗದ ಇತರ ಮಕ್ಕಳಂತೆ ಈ ಮಕ್ಕಳನ್ನು ದಾಖಲಾತಿ ಮಾಡಲಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಇಂಥ ಮಕ್ಕಳಿಗೆ ವಿಶೇಷ ರಿಯಾಯಿತಿ ನೀಡಲಾಗುವುದು ಎಂದು ಪ್ರಕಟಿಸಿದರು.

ರಾಜ್ಯದಲ್ಲಿ 108 ಸರಕಾರಿ, 54 ಅನುದಾನಿತ, 550 ಖಾಸಗಿ ಒಟ್ಟು 712 ಮಕ್ಕಳ ಪಾಲನಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 712 ಸಂಸ್ಥೆಗಳಲ್ಲಿ ಒಟ್ಟು ಮಕ್ಕಳ ಸಾಮರ್ಥ್ಯ 38,975 ಇದ್ದು, ಈ ಪೈಕಿ 17048 (7874 ಹೆಣ್ಣು, 9175 ಗಂಡು) ಮಕ್ಕಳು ದಾಖಲಾಗಿದ್ದಾರೆ. ಅನಾಥ ಮಕ್ಕಳು ಮಕ್ಕಳ ಕಲ್ಯಾಣ ಸಮಿತಿಯ ಆದೇಶದಂತೆ ದಾಖಲಾಗುತ್ತಿದ್ದು, ಕೆಲವು ಮಕ್ಕಳಿಗೆ ಸಂಬಂಧಿಸಿದಂತೆ ತಮ್ಮ ಕೌಟುಂಬಿಕ ಹಿನ್ನೆಲೆ ಹಾಗೂ ಜಾತಿಯ ಮಾಹಿತಿ ಇರುವುದಿಲ್ಲ. ಜಿಲ್ಲಾ ಶಸ್ತ್ರ ಚಿಕಿತ್ಸಕರ ವೈದ್ಯಕೀಯ ತಪಾಸಣೆ ವರದಿಯಂತೆ ಮಗುವಿನ ವಯಸ್ಸನ್ನು ದೃಢೀಕರಿಸಲಾಗುತ್ತದೆ ಎಂದರು.

ಎಸ್‌ಸಿ-ಎಸ್‌ಟಿಗೆ ಸೇರಿಸಲು ಅವಕಾಶವಿಲ್ಲ: ಹೆಬ್ಬಾಳ್ಕರ್

ಜಾತಿ ಹಿನ್ನೆಲೆಯಿಲ್ಲದ ಮಕ್ಕಳಿಗೆ ಸರಕಾರದಿಂದ ಹೆಚ್ಚಿನ ಸೌಲಭ್ಯ ಒದಗಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ವರ್ಗಗಳಿಗೆ ಸೇರಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಗೆ ಕೋರಲಾಗಿತ್ತು. ಆದರೆ, ಈ ವರ್ಗಕ್ಕೆ ಸೇರಿಸಲು ಸಾಧ್ಯವಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆಯಿಂದ ಉತ್ತರ ಬಂದಿದೆ. ಜಯಪ್ರಕಾಶ್ ಹೆಗ್ಡೆ ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ವೇಳೆ ಈ ಮಕ್ಕಳನ್ನು ಕ್ಯಾಟಗರಿ-1ಕ್ಕೆ ಸೇರಿಸಬೇಕು ಎಂದು ಶಿಫಾರಸ್ಸು ಮಾಡಿದ್ದರು. ಈ ಮಕ್ಕಳ ಹಿತದೃಷ್ಟಿಯಿಂದ ಸಮಾಜ ಕಲ್ಯಾಣ ಇಲಾಖೆ ಸಚಿವರೊಂದಿಗೆ ಚರ್ಚೆ ನಡೆಸಿ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಕಾಂಗ್ರೆಸ್ ಶಾಸಕರಿಗೆ ಆತ್ಮಹತ್ಯೆ ಸ್ಥಿತಿ

ರಾಜು ಕಾಗೆ ಕಳೆದ ವರ್ಷದಿಂದ ನನ್ನ ಗೋಳು ಆಲಿಸುತ್ತಿಲ್ಲ, ಹೀಗಾಗಿ ವಿಧಾನಸೌಧಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೀನಿ ಎಂದಿದ್ದಾರೆ. ಪ್ರತಿಪಕ್ಷದವರು ಆತ್ಮಹತ್ಯೆ ಮಾಡಿಕೊಳ್ಳಬೇಕು. ಆದರೆ ಆಡಳಿತ ಪಕ್ಷದ ಶಾಸಕರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಬಿ.ಆರ್. ಪಾಟೀಲ್ ಕೂಡ ನಾನು ಹೇಳಿರುವುದು ಸತ್ಯ ಎಂದಿದ್ದಾರೆ. ದಾವಣಗೆರೆ ಶಾಸಕ ನಾನು ತೆಂಗಿನಕಾಯಿಯನ್ನೇ ಒಡೆದಿಲ್ಲ ಎಂದಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಸತ್ಯ ನುಡಿಯುವಂತವರು. ಅವರು ಬಾಗಲಕೋಟೆ ಬಾದಾಮಿ ಯಲ್ಲಿ ಬೆಂಕಿ ಹಾರಿಸಲು ಹೋಗಿದ್ದರು. ಆದರೆ ಅಲ್ಲಿ ಬೆಂಕಿ ಹಚ್ಚಿ ಬಂದಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಲೇವಡಿ ಮಾಡಿದರು.

3352 ಕೋಟಿ ಮೊತ್ತದ ಪೂರಕ ಅಂದಾಜು ಪಟ್ಟಿ ಮಂಡನೆ | 100 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು 10 ಕೋಟಿ

ಶಾಸಕರ ಓಡಾಟದ ವಾಹನ ಖರೀದಿಗೆ ಮೂರು ಕೋಟಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಶಾಸಕರ ಓಡಾಟಕ್ಕೆ ಅಗತ್ಯವಿರುವ ವಾಹನಗಳ ಖರೀದಿಗೆ ಮೂರು ಕೋಟಿ ರು. ಅನುದಾನ ನೀಡಲಾಗಿದೆ ಎಂದು ಪೂರಕ ಅಂದಾಜುಗಳ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

2025-26ನೇ ಸಾಲಿನ ಮೊದಲನೇ ಕಂತಿನ ಪೂರಕ ಅಂದಾಜನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮಂಡಿಸಿದರು. 3,352.57 ಕೋಟಿ ರು. ಮೊತ್ತದ ರಾಜ್ಯದ ಪೂರಕ ಅಂದಾಜಿನಲ್ಲಿ ಶಾಸಕರ ಓಡಾಟಕ್ಕೆ ಕಾರು, ಕೇರಳದ ವಯನಾಡಿನ ಭೂಕುಸಿತದಿಂದ ಹಾನಿಗೊಳಗಾದ ನೂರು ಕುಟುಂಬಗಳ ಪುನರ್‌ವಸತಿಗೆ 10 ಕೋಟಿ ಸೇರಿದಂತೆ ಹಲವು ವಿಷಯಗಳನ್ನು ಸೇರಿಸಲಾಗಿದೆ.

ಇನ್ನು ರಾಜ್ಯ ಸರಕಾರದ ಎರಡು ವರ್ಷ ಸಂಭ್ರಮಾಚರಣೆಯ ಹಿನ್ನಲೆಯಲ್ಲಿ ಹೊಸಪೇಟೆಯಲ್ಲಿ ಹಮ್ಮಿಕೊಂಡಿದ್ದ ಸಾಧನಾ ಸಮಾವೇಶಕ್ಕೆ 10 ಕೋಟಿ ರು. ವೆಚ್ಚ ಮಾಡಿರುವ ಬಗ್ಗೆ ಉಲ್ಲೇಖ ಮಾಡಲಾಗಿದೆ. ಪೂರಕ ಅಂದಾಜಿನಲ್ಲಿ ಒದಗಿಸಿರುವ ಒಟ್ಟು 3,352.57 ಕೋಟಿ ರುಪಾಯಿಯಲ್ಲಿ 60 ಲಕ್ಷ ರು.ಗಳನ್ನು ಪ್ರಭೃತ ವೆಚ್ಚ ಮತ್ತು 3,351.97 ಕೋಟಿ



ರುಪಾಯಿ ಪುರಸ್ಕೃತ ವೆಚ್ಚದ ಪಟ್ಟಿಯಲ್ಲಿ ಸೇರಿದೆ. ಇದರಲ್ಲಿ ಮೀಸಲು ನಿಧಿಯಿಂದ ಭರಿಸಲಾಗುವ 262.20 ಕೋಟಿ ರುಪಾಯಿ ಸಹ ಪುರಸ್ಕೃತವಾಗಿದೆ. ಸಂಚಿತ ನಿಧಿಯಿಂದ ಹೊರ ಹೋಗುವ ನಿವ್ವಳ ಮೊತ್ತ 3,090.37 ಕೋಟಿಯಾಗಿದ್ದು, ಇದರಲ್ಲಿ 820.70 ಕೋಟಿ ಕೇಂದ್ರ ಸಹಾಯಕ್ಕೆ ಸಂಬಂಧಿಸಿವೆ. ಆದ್ದರಿಂದ ಹೊರಹೋಗುವ ನಿವ್ವಳ ನಗದು 2,269.66 ಕೋಟಿ ರು. ಆಗಿದೆ.

ವಯನಾಡ್ ದುರಂತಕ್ಕೆ 10 ಕೋಟಿ ರು ಅನುದಾನ

ರಾಜ್ಯದಿಂದ ಉತ್ತರಾಖಂಡಕ್ಕೆ ತೆರಳಿದ ವೇಳೆ ಪ್ರಕೃತಿ ವೈಪರೀತ್ಯದಿಂದ ಮೃತ ಪಟ್ಟವರ ದೇಹಗಳನ್ನು ಮತ್ತು ಸಂಕಷ್ಟದಲ್ಲಿ ಸಿಲುಕಿದ್ದ ಜನರನ್ನು ರಕ್ಷಿಸಲು ಕ್ರಮ ಕೈಗೊಳ್ಳಲಾಗಿತ್ತು. ನೆರವಿಗಾಗಿ ರಾಜ್ಯದಿಂದ ನಿಯೋಜಿಸಲಾದ ಅಧಿಕಾರಿಗಳ ವೆಚ್ಚಕ್ಕಾಗಿ 56.64 ಲಕ್ಷ ವೆಚ್ಚ ಮಾಡಲಾಗಿದೆ. ಕೇರಳದ ವಯನಾಡ್ ಜಿಲ್ಲೆಯ ಮೆಪ್ಪಾಡಿಯಲ್ಲಿ ಉಂಟಾದ ಭೂಕುಸಿತದಿಂದ ಹಾನಿಗೊಳಗಾದ 100 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು 10 ಕೋಟಿ ರು. ಸೇರಿದಂತೆ ಒಟ್ಟಾರೆಯಾಗಿ 10.56 ಕೋಟಿ ರು. ಎಸ್‌ಡಿಆರ್‌ಎಫ್‌ನಲ್ಲಿ ರಾಜ್ಯದಿಂದ ಹೆಚ್ಚುವರಿಯಾಗಿ ಒದಗಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ. ನೆರೆ ಸಂತ್ರಸ್ತರ ಪುನರ್‌ವಸತಿ ಯೋಜನೆಯಲ್ಲಿ 2019-2023ರ ವರೆಗಿನ ಮನೆಗಳ ದುರಸ್ತಿ ಮತ್ತು ಪೂರ್ಣ ನಿರ್ಮಾಣಕ್ಕಾಗಿ ಪರಿಹಾರ ಮೊತ್ತವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಬಿಡುಗಡೆ ಮಾಡಲು 42 ಕೋಟಿ ರು.ಗಳನ್ನು ಎಸ್‌ಡಿಆರ್‌ಎಫ್‌ನಲ್ಲಿ ನೀಡಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ಜರುಗಿದ ಸಚಿವ ಸಂಪುಟಕ್ಕೆ 3.69 ಕೋಟಿ ರುಪಾಯಿ ಹೆಚ್ಚುವರಿಯಾಗಿ ಒದಗಿಸಲಾಗಿದೆ. ರಾಜ್ಯದ ಎಲ್ಲಾ ನೋಂದಣಿ ಮತ್ತು ಮುದ್ರಾಂಕ ಕಚೇರಿಗಳಿಗೆ ಐಟಿ ಉಪಕರಣಗಳ ಪೂರೈಕೆ, ಅಳವಡಿಕೆ ಕಾರ್ಯಾಚರಣೆ ಮತ್ತು ನಿರ್ವಹಣೆ ಹಾಗೂ ಅಗತ್ಯ ಇರುವ ಮಾನವ ಸಂಪನ್ಮೂಲ ವೆಚ್ಚಗಳ ಪಾವತಿಯನ್ನು ಪಾವತಿಸಲು 50 ಕೋಟಿ ರುಪಾಯಿ ನೀಡಲಾಗಿದೆ ಎಂದು ತಿಳಿಸಲಾಗಿದೆ.

ಇನ್ನುಳಿದಂತೆ ಬೆಂಗಳೂರಲ್ಲಿ ನಡೆಯುವ 11ನೇ ಕಾಮನ್ ವೆಲ್ತ್ ಸಂಸದೀಯ ಸಂಘದ ಭಾರತ ವಿಭಾಗದ ಸಮ್ಮೇಳನದ ವೆಚ್ಚಗಳಿಗಾಗಿ 10 ಕೋಟಿ ನೀಡಲಾಗಿದೆ. ಕಳೆದ ಬೆಳಗಾವಿ ಅಧಿವೇಶನ ನಡೆಸಿರುವುದಕ್ಕೆ 1.72 ಕೋಟಿ ವೆಚ್ಚ ಮಾಡಲಾಗಿದೆ. 5ನೇ ರಾಜ್ಯ ಹಣಕಾಸು ಆಯೋಗದ ಕಚೇರಿ ನಿರ್ವಹಣೆಗಾಗಿ 2.30 ಕೋಟಿ ಅನುದಾನ ಒದಗಿಸಲಾಗಿದೆ. ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧೀನದಲ್ಲಿರುವ ಮಾಧ್ಯಮ ಕೋಶದ ಹೊರಗುತ್ತಿಗೆ ಸಿಬ್ಬಂದಿ ವೇತನ ಪಾವತಿಗಾಗಿ 32.90 ಲಕ್ಷ ನೀಡಲಾಗಿದೆ. ಕುಮಾರಕೃಪಾ ಅತಿಥಿ ಗೃಹದ ದುರಸ್ತಿ ಕಾಮಗಾರಿಗಳ ವೆಚ್ಚಕ್ಕಾಗಿ 9.95 ಲಕ್ಷ ಒದಗಿಸಲಾಗಿದೆ ಎಂದು ಹೇಳಲಾಗಿದೆ.

ಶಾಸಕರ ವಾಹನ ಖರೀದಿಗೆ 3.20 ಕೋಟಿ

ವಿಧಾನಸಭಾ ಸದಸ್ಯರ ವಾಹನ ಖರೀದಿಗಾಗಿ 3.20 ಕೋಟಿ ರು. ವೆಚ್ಚ ಮಾಡಲಾಗಿದೆ. ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಉಪಯೋಗಕ್ಕೆ ಹೊಸ ವಾಹನ ಖರೀದಿಗೆ 30 ಲಕ್ಷ ರು. ವೆಚ್ಚ ಮಾಡಲಾಗಿದೆ. ಪ್ರತಿಪಕ್ಷದ ಮುಖ್ಯ ಸಚೇತಕರ ಉಪಯೋಗಕ್ಕಾಗಿ ಹೊಸ ವಾಹನವನ್ನು ಖರೀದಿಸಲು 31 ಲಕ್ಷ ರು. ನೀಡಲಾಗಿದೆ. ವಿಧಾನಪರಿಷತ್ ಸಚಿವಾಲಯದ ಅಧಿಕಾರಿ/ಸಿಬ್ಬಂದಿಗೆ ಪ್ರಯಾಣ ವೆಚ್ಚವನ್ನು ಪಾವತಿಸಲು 1.31 ಕೋಟಿ ರು. ನೀಡಲಾಗಿದೆ. ಇನ್ನು, ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ ವೇಳೆ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಪಾವತಿಸಲು 21 ಲಕ್ಷ ರು. ವೆಚ್ಚ ಮಾಡಲಾಗಿದೆ ಎಂದು ಪೂರಕ ಅಂದಾಜಿನಲ್ಲಿ ತಿಳಿಸಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಸಮನ್ವಯತೆ ಸಾಧಿಸಬೇಕು

ಇದು ನಿಜಕ್ಕೂ ಗಂಭೀರವಾಗಿ ಆಲೋಚಿಸಬೇಕಾದ ವಿಷಯವೇ. 'ನಮ್ಮ ಮೆಟ್ರೋ'ದ ಹಳದಿ ಮಾರ್ಗದ ಉದ್ಘಾಟನೆಯಾದ ಬಳಿಕ ಈಗ 'ಕಿತ್ತಳೆ ಮಾರ್ಗ' ಸಂಬಂಧಿತ ಕಾಮಗಾರಿಗೂ ಸಿದ್ಧತೆ ನಡೆದಿದೆ. ಆದರೆ ಇದಕ್ಕಾಗಿ ಬರೋಬ್ಬರಿ 6500 ಮರಗಳಿಗೆ ಕೊಡಲಿಯೇಟು ಬೀಳಬೇಕಿದೆ ಎಂಬ ಸುದ್ದಿಯು ಪರಿಸರ ಪ್ರೇಮಿಗಳಲ್ಲಿ ತಲ್ಲಣವನ್ನು ಉಂಟುಮಾಡಿದೆ. ಒಂದು ಕಾಲಕ್ಕೆ ಬೆಂಗಳೂರು ಪಡೆದುಕೊಂಡಿದ್ದ 'ಉದ್ಯಾನ ನಗರಿ' ಎಂಬ ಹೆಸರಿಗೆ ಕಾಲಕ್ರಮೇಣ ಸಂಚಕಾರ ಒದಗಿ 'ಕಾಂಕ್ರೀಟ್ ಜಂಗಲ್' ಎಂಬ ಹಣೆಪಟ್ಟಿ ಏರಿಕೊಳ್ಳುವಂತಾಯಿತು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಹಾಗಾದರೆ ಅಭಿವೃದ್ಧಿ ಚಟುವಟಿಕೆಗಳನ್ನು ಕೈಬಿಡಬೇಕೇ? ಅದನ್ನು ನೆಚ್ಚಿರುವ ಆರ್ಥಿಕ ಚಟುವಟಿಕೆಗಳನ್ನು ಮೂಲೆಗುಂಪು ಮಾಡಬೇಕೇ? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಅಭಿವೃದ್ಧಿ ಕಾರ್ಯ ಮತ್ತು ಪರಿಸರದ ಸಂರಕ್ಷಣೆ ಎರಡೂ ನಮ್ಮ ಸಮಾಜಕ್ಕೆ ಮುಖ್ಯವೇ. ಆದರೆ ಒಂದನ್ನು ಬಲಿಕೊಟ್ಟು ಇನ್ನೊಂದಕ್ಕೆ ಉಸಿರು ತುಂಬುವುದು ಎಷ್ಟರ ಮಟ್ಟಿಗೆ ಸರಿ? ಎಂಬುದು ಸಹೃದಯಿಗಳ ಪ್ರಶ್ನೆ. ಈ ಹಿಂದೆ ಕಿತ್ತಳೆ ಮಾರ್ಗದ ಕಾಮಗಾರಿ ಸಂಬಂಧವಾಗಿ 11 ಸಾವಿರ ಮರಗಳನ್ನು ಕಡಿಯಲು ಯೋಜಿಸಿದ್ದ ಬಿಎಂಆರ್‌ಸಿಎಲ್, ಈ ಉದ್ದೇಶಕ್ಕೆ ಪರಿಸರ ಹೋರಾಟಗಾರರಿಂದ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಆ ಸಂಖ್ಯೆಯನ್ನು ಕಡಿತಗೊಳಿಸಿ 6500ಕ್ಕೆ ಇಳಿಸಿತ್ತು ಎಂಬುದೇನೋ ನಿಜವೇ. ಆದರೆ ಇದು ಕೂಡ ಸಣ್ಣ ಸಂಖ್ಯೆ ಅಲ್ಲವಲ್ಲಾ ಎಂಬುದು ಪರಿಸರ ಪ್ರೇಮಿಗಳ ಆತಂಕಕ್ಕೆ ಕಾರಣವಾಗಿರುವ ಸಂಗತಿ. ಈಗಾಗಲೇ 'ವಿಭಿನ್ನ ಧ್ವನಿ ತರಂಗಗಳ' ಹಾವಳಿಯಿಂದಾಗಿ ಬೆಂಗಳೂರು ಮಹಾನಗರಿಯ ವ್ಯಾಪ್ತಿಯೊಳಗೆ ಗುಬ್ಬಚ್ಚಿಗಳನ್ನು ಕಾಣಲಾಗುತ್ತಿಲ್ಲ; ಈಗ ಹೀಗೆ ಗಣನೀಯ ಸಂಖ್ಯೆಯಲ್ಲಿ ಮರಗಳ ಹನನವಾದರೆ ಉತ್ತಮ ಗಾಳಿಯೂ ದುಸ್ತರವಾಗುತ್ತದಲ್ಲಾ? ಎಂಬುದು ಪರಿಸರ ಪ್ರೇಮಿಗಳ ಪ್ರಶ್ನೆ. ಒಟ್ಟಿನಲ್ಲಿ, ಅಭಿವೃದ್ಧಿ ಚಟುವಟಿಕೆಗಳನ್ನೂ ಕೈಬಿಡದೆ, ಪರಿಸರ ಸಂರಕ್ಷಣೆಯನ್ನೂ ನಿರ್ಲಕ್ಷಿಸದೆ, ಸಮನ್ವಯ ಮಾರ್ಗವೊಂದನ್ನು ಕಂಡುಕೊಳ್ಳಬೇಕಾದ ಅಗತ್ಯ ಹಿಂದೆಂದಿಗಿಂತ ಹೆಚ್ಚಾಗಿದೆ ಎನ್ನಲಡ್ಡಿಯಿಲ್ಲ.

ಸೊಂಪಾದಕೀಯ

ಟಿವಿ ಟೈಮ್

ಭಾರತದಲ್ಲಿ ಮನರಂಜನೆ ಅಂದ್ರೆ ಸಿನಿಮಾ ಅನ್ನೋ ಮಾತು ಜನಜನಿತ. ಈಗೀಗ ಸಿನಿಮಾ ನೋಡಬೇಕು ಅಂದ್ರೆ ಚಿತ್ರಮಂದಿರಕ್ಕೇ ಹೋಗಬೇಕು ಅಂತೇನಿಲ್ಲ. ನಮ್ಮ ಮನೆಯ ದೂರದರ್ಶನ ಈಗ ಎಲ್ಲರಿಗೂ ಚಿತ್ರಮಂದಿರದಷ್ಟೇ ಹತ್ತಿರ. ಅಲ್ಲದೆ ಮೊಬೈಲ್, ಲ್ಯಾಪ್‌ಟಾಪ್, ಟ್ಯಾಬ್ಲೆಟ್‌ಗಳೂ ಈಗ 'ಟೂರಿಂಗ್ ಟಾಕೀಸ್'ಗಳಾಗಿವೆ. ಹಾಗಾಗಿ ಮನರಂಜನೆ ಈಗ ಮನೆರಂಜನೆ ಆಗಿದೆ. ಆದರೆ ಇತ್ತೀಚೆಗೆ ಸಿನಿಮಾಗಳಿಗಿಂತ ಹೆಚ್ಚು ಸದ್ದು ಮಾಡ್ತಾ ಇರೋದು ಟಿವಿ ಧಾರಾವಾಹಿಗಳು. ಜನಪ್ರಿಯತೆಯ ವಿಷಯಕ್ಕೆ ಬಂದ್ರೆ ನಮ್ಮ ಹೋಮ್ಲೀ ಆಡಿಯೆನ್ಸ್‌ಗೆ ಧಾರಾವಾಹಿಗಳ ಪರಿಚಯ ಇದ್ದಷ್ಟು ಸಿನಿಮಾಗಳ ಬಗ್ಗೆ ಇರೋದಿಲ್ಲ. ಸಿನಿಮಾ ನಟರಲ್ಲಿ ಹಳೆ ತಲೆಗಳನ್ನು ಬಿಟ್ಟರೆ ಹೊಸಬರ ಬಗ್ಗೆ ಗೊತ್ತಿರಲ್ಲ. ಆದರೆ ಧಾರಾವಾಹಿಯ ನಟ, ನಟಿಯರನ್ನು ಮಾತ್ರ ಮನೆ ಮಕ್ಕಳಂತೇ ನೋಡುತ್ತಾರೆ. ಇನ್ನು ಕಮರ್ಷಿಯಲ್ ವಿಷಯಕ್ಕೆ ಬಂದರೆ ವರ್ಷದಲ್ಲಿ ನೂರಾರು ಸಿನಿಮಾಗಳು ಬಿಡುಗಡೆ ಆದ್ರೂ ಅವುಗಳಲ್ಲಿ ಜನರನ್ನು ತಲುಪೋದು ಮೂರು ಮತ್ತೊಂದು ಎನ್ನುವಷ್ಟು ಮಾತ್ರ. ಸಿನಿಮಾ ಮಾಡಿ ಮನೆ-ಮಠ ಕಳೆದುಕೊಂಡ ಎಷ್ಟೋ ಜನ ನಮಗೆ ಕಾಣಸಿಗುತ್ತಾರೆ. ಆದರೆ, ಧಾರಾವಾಹಿ ಮಾಡಿ ಹಣ ಕಳೆದುಕೊಂಡೆ ಅನ್ನೋರು ಸಿಗೋದು ಕಷ್ಟ. ಹಾಗಾಗಿ ಈಗ ಈ ಧಾರಾವಾಹಿಗಳು ಹಣಗಳಿಕೆಯಲ್ಲೂ ಸಿನಿಮಾಗಳಿಗಿಂತ ಮುಂದೆ ಇವೆ. ಆದ್ದರಿಂದ ಜಾಹೀರಾತುಗಳಿಗೂ ಸೀರಿಯಲ್ ಉದ್ಯಮದವರು ಸಾಕಷ್ಟು ಖರ್ಚು ಮಾಡುತ್ತಿದ್ದಾರೆ. ಸಿನಿಮಾದವರೇ ಯಾವುದೇ ಪ್ರಚಾರ ಇಲ್ಲದೆ ಇದ್ದಕ್ಕಿದ್ದಂತೆ ಸಿನಿಮಾ ಬಿಡುಗಡೆ ಮಾಡುತ್ತಾರೆ. ಅದಕ್ಯಾಕೆ ಮತ್ತಷ್ಟು ಖರ್ಚು, ಮತ್ತಷ್ಟು ಲಾಸು ಅನ್ನೋ ಮನೋಭಾವ ಇದು. ಆದರೆ ಧಾರಾವಾಹಿಗಳು ಹಾಗಲ್ಲ. ಹೊಸ ಧಾರಾವಾಹಿ ಶುರು ಆಗ್ತಾ ಇದೆ ಅಂದ್ರೆ, ಎಲ್ಲ ಪತ್ರಿಕೆಗಳಲ್ಲೂ ಫುಲ್ ಪೇಜ್ ಜಾಹೀರಾತು. ಅಷ್ಟೇ ಅಲ್ಲದೆ ಊರಿನ ಗೋಡೆಗಳ ಮೇಲೆ ವಾಲ್ ಪೋಸ್ಟರ್ ಕೂಡಾ ಅಂಟಿಸಲಾಗುತ್ತದೆ. ಆಟೋ, ಸಿಟಿ ಬಸ್ಸುಗಳಲ್ಲೂ ಧಾರಾವಾಹಿಗಳ ಅಬ್ಬರ. ಹಾಗಾಗಿ ಈಗ ಟಿವಿ ಧಾರಾವಾಹಿಗಳು ಸಿನಿಮಾಗಿಂತ ಒಂದು ಹೆಜ್ಜೆ ಮುಂದಿವೆ ಮತ್ತು ಹಣಕಾಸಿನ ವಿಷಯದಲ್ಲಿ ಸೇಫ್ ಎನಿಸಿಕೊಂಡಿವೆ.

ಸಂಪಾದಕರ ಸದ್ಯಶೋಧನೆ

ತುರ್ತುಸ್ಥಿತಿ ಅಲ್ಲದ ತುರ್ತುಸ್ಥಿತಿ

ಜೂನ್ 28, 2025. ಎಮಿರೇಟ್ಸ್‌ನ ಫ್ಲೈಟ್ EK 203 ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ (DXB) ಬೆಳಗ್ಗೆ 2:50ರ ಸುಮಾರಿಗೆ ಹೊರಟು, ನ್ಯೂಯಾರ್ಕ್‌ನ ಜಾನ್ ಎಫ್.ಕೆನಡಿ (ಜೆಎಫ್‌ಕೆ) ವಿಮಾನ ನಿಲ್ದಾಣಕ್ಕೆ 13 ಗಂಟೆ 43 ನಿಮಿಷಗಳ ಕಾಲ ಪ್ರಯಾಣಿಸಿ ಬಂದಿಳಿಯಿತು. ವಿಮಾನವು ಅಮೆರಿಕದ ಈಶಾನ್ಯ ಭಾಗದ ಮೇಲೆ ಹಾರುತ್ತಿರುವಾಗ, ಒಂದು ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಂಡುಬಂದಿತು. ಆಗ ಪೈಲಟ್ ತಕ್ಷಣ ಎಡಭಾಗದ ರೋಲ್ಸ್-ರಾಯ್ಸ್ ಟ್ರೆಂಟ್ 972 ಎಂಜಿನ್‌ನ ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸಿದ. ಎ-380 ವಿಮಾನವು ನಾಲ್ಕು ಎಂಜಿನ್‌ಗಳನ್ನು ಹೊಂದಿದ್ದು, ಮೂರು ಎಂಜಿನ್‌ಗಳಿಂದಲೂ ಸುರಕ್ಷಿತವಾಗಿ ಹಾರಾಟ ನಡೆಸಬಲ್ಲದು. ಆದರೂ, ಈ ಸಂದರ್ಭವು ತುರ್ತುಸ್ಥಿತಿಯನ್ನು ಒಡ್ಡಿತು. ಇದಕ್ಕೆ ತಕ್ಷಣದ ಕ್ರಿಯೆ ಮತ್ತು ಸಮನ್ವಯತೆ ಅಗತ್ಯವಾಗಿತ್ತು. ಎ-380 ವಿಮಾನವು ವಿಶ್ವದ ಅತಿದೊಡ್ಡ ಪ್ರಯಾಣಿಕ ವಿಮಾನವಾಗಿದ್ದು, ಇದರ ನಾಲ್ಕು ಎಂಜಿನ್‌ಗಳು, ಒಂದು ಎಂಜಿನ್ ವಿಫಲವಾದರೂ ಸುರಕ್ಷಿತ ಹಾರಾಟಕ್ಕೆ ಸಾಕಷ್ಟು ಶಕ್ತಿಯನ್ನು ಒದಗಿಸುತ್ತವೆ. ಈ ಘಟನೆಯಲ್ಲಿ, ವಿಮಾನವು ತನ್ನ ಗಮ್ಯಸ್ಥಾನವಾದ ಜೆಎಫ್‌ಕೆ ವಿಮಾನ ನಿಲ್ದಾಣಕ್ಕೆ ತಲುಪಲು ಸಾಕಷ್ಟು ಶಕ್ತಿಯನ್ನು ಹೊಂದಿತ್ತು, ಆದ್ದರಿಂದ ಬೇರೆ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ (diversion) ಮಾಡುವ ಅಗತ್ಯ ಉಂಟಾಗಲಿಲ್ಲ. ವಿಮಾನದಲ್ಲಿ 24.8 ಟನ್ ಇಂಧನ ಉಳಿದಿತ್ತು, ಇದು ಸುಮಾರು ಒಂದು ಗಂಟೆಯ ಹಾರಾಟಕ್ಕೆ ಸಾಕಾಗಿತ್ತು. ಒಟ್ಟು 450 ಪ್ರಯಾಣಿಕರು ಮತ್ತು ಸಿಬ್ಬಂದಿ ವಿಮಾನದಲ್ಲಿದ್ದರು. ವಿಮಾನವು ಬೋಸ್ಟನ್ ಸೆಂಟರ್‌ನ ನಿಯಂತ್ರಣದಲ್ಲಿದ್ದಾಗ, ಎಟಿಸಿ (ಏರ್ ಟ್ರಾಫಿಕ್ ಕಂಟ್ರೋಲ್) ಸಿಬ್ಬಂದಿಯು ವಿಮಾನದ ಎಂಜಿನ್ ಸ್ಥಿತಿಯ ಬಗ್ಗೆ ಖಚಿತಪಡಿಸಿಕೊಂಡರು. ಪೈಲಟ್‌ಗಳು ಎಂಜಿನ್ ಸಂಖ್ಯೆ 1 ಸ್ಥಗಿತಗೊಂಡಿರುವುದನ್ನು ದೃಢಪಡಿಸಿದರು. ಈ ಸಂದರ್ಭದಲ್ಲಿ, ಬೋಸ್ಟನ್ ಸೆಂಟರ್‌ನಿಂದ ನಿಯಂತ್ರಣವನ್ನು ನ್ಯೂಯಾರ್ಕ್ ಅಪ್ರೋಚ್‌ಗೆ ವರ್ಗಾಯಿಸಲಾಯಿತು ಮತ್ತು ತುರ್ತುಸ್ಥಿತಿಯನ್ನು ಘೋಷಿಸಲಾಯಿತು. ಇದರಿಂದ ವಿಮಾನಕ್ಕೆ ಆದ್ಯತೆಯ ಲ್ಯಾಂಡಿಂಗ್ ಅನುಮತಿ ಮತ್ತು ತುರ್ತುಸೇವೆಗಳ ಸಿದ್ಧತೆ ಖಾತರಿಯಾಯಿತು. ನ್ಯೂಯಾರ್ಕ್ ಅಪ್ರೋಚ್‌ನ ಎಟಿಸಿ ನಿಯಂತ್ರಕರು ವಿಮಾನವನ್ನು ಜೆಎಫ್‌ಕೆಯ ರನ್‌ವೇ ಮೇಲೆ ಭೂಸ್ಪರ್ಶಕ್ಕೆ ಮಾರ್ಗದರ್ಶನ ಮಾಡಿದರು. ಇದು ವಿಮಾನ ನಿಲ್ದಾಣದ ಅತಿ ಉದ್ದದ ರನ್‌ವೇ ಆಗಿದೆ. ಇದಕ್ಕೆ ಕಾರಣ, ಎ-380 ಒಂದು ದೊಡ್ಡ ವಿಮಾನವಾಗಿದ್ದು, ತುರ್ತು ಭೂಸ್ಪರ್ಶಕ್ಕೆ ಉದ್ದದ ರನ್‌ವೇ ಅಗತ್ಯ. ಪೈಲಟ್‌ಗಳು ಇಂಧನದ ಪ್ರಮಾಣ, ಸ್ಥಳೀಯ ಒತ್ತಡದ ಮಾಪನ (inches of mercury) ಮತ್ತು ಇತರ ತಾಂತ್ರಿಕ ವಿವರಗಳನ್ನು ಎಟಿಸಿಯೊಂದಿಗೆ ತಕ್ಷಣವೇ ಹಂಚಿಕೊಂಡರು. ಎಂಜಿನ್ ಸ್ಥಗಿತಗೊಂಡರೂ, ಪೈಲಟ್‌ಗಳು ಶಾಂತವಾಗಿರುವುದರ ಜತೆಗೆ ವಿಮಾನವನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿಟ್ಟರು. ಅವರು ಎಟಿಸಿಯಿಂದ ಕೇಳಲಾದ ಎಲ್ಲ ಮಾಹಿತಿಯನ್ನು (ಇಂಧನದ ಪ್ರಮಾಣ, ಒತ್ತಡದ ಮಾಪನ) ತಕ್ಷಣವೇ ಒದಗಿಸಿದರು. ಎಟಿಸಿ ನಿಯಂತ್ರಕರು ತುರ್ತುಸ್ಥಿತಿಯನ್ನು ಘೋಷಿಸಿ, ವಿಮಾನಕ್ಕೆ ಆದ್ಯತೆಯ ಲ್ಯಾಂಡಿಂಗ್ ಅವಕಾಶ ಕಲ್ಪಿಸಿದರು. ಅವರು ವಿಮಾನದ ಇಳಿಕೆ, ವೇಗ ಮತ್ತು ಭೂಸ್ಪರ್ಶದ ತಯಾರಿಗಳಿಗೆ ಸ್ಪಷ್ಟ ಮಾರ್ಗದರ್ಶನ ನೀಡಿದರು. ವಿಮಾನವು ಸ್ಥಳೀಯ ಕಾಲಮಾನ ಬೆಳಗ್ಗೆ 8:57ಕ್ಕೆ ನಿಗದಿತ ರನ್‌ವೇ ಮೇಲೆ ಸುರಕ್ಷಿತವಾಗಿ ಭೂಸ್ಪರ್ಶ ಮಾಡಿತು. ತುರ್ತುಸೇವೆಗಳು ಸಿದ್ಧವಾಗಿದ್ದವು, ಆದರೆ ಯಾವುದೇ ತೊಡಕು ಉಂಟಾಗಲಿಲ್ಲ. ವಿಮಾನವು ತನ್ನ ಶಕ್ತಿಯಿಂದಲೇ ಗೇಟ್‌ಗೆ ತಲುಪಿತು. ಆದರೆ, ಎಂಜಿನ್ ಸಮಸ್ಯೆಯಿಂದಾಗಿ ವಿಮಾನವನ್ನು ಜೆಫ್‌ಕೆಯಲ್ಲಿ ಒಂದು ವಾರದವರೆಗೆ ಗ್ರೌಂಡ್ ಮಾಡಲಾಯಿತು. ಈ ಸಮಯದಲ್ಲಿ, ಎಂಜಿನ್‌ನ ತಪಾಸಣೆ ಮತ್ತು ದುರಸ್ತಿಗಾಗಿ ತಾಂತ್ರಿಕ ಸಿಬ್ಬಂದಿವರ್ಗವು ಕೆಲಸ ಮಾಡಿತು. ಎಂಜಿನ್ ಸ್ಥಗಿತದ ನಿಖರ ಕಾರಣವನ್ನು ತಕ್ಷಣ ಬಹಿರಂಗಪಡಿಸಲಿಲ್ಲ, ಆದರೆ ತನಿಖೆಯನ್ನು ಆರಂಭಿಸಲಾಯಿತು. ಈ ಘಟನೆಯಿಂದ ಎಮಿರೇಟ್ಸ್‌ಗೆ ಕಾರ್ಯಾಚರಣೆಯ ತೊಂದರೆಯಾಯಿತು. ವಿಮಾನವು ಒಂದು ವಾರ ಗ್ರೌಂಡ್ ಆಗಿದ್ದರಿಂದ, ನಿಗದಿತವಾಗಿದ್ದ ರಿಟರ್ನ್ ಫ್ಲೈಟ್ ರದ್ದಾಯಿತು. ಇದರಿಂದ ಎಮಿರೇಟ್ಸ್‌ನ ವೇಳಾಪಟ್ಟಿಯಲ್ಲಿ ತೊಂದರೆಯಾಯಿತು ಮತ್ತು ಪ್ರಯಾಣಿಕರಿಗೆ ಪರ್ಯಾಯ ವಿಮಾನಗಳನ್ನು ಒದಗಿಸಬೇಕಾಯಿತು. ಎಂಜಿನ್ ದೋಷಕ್ಕೆ ಕಾರಣವನ್ನು ತಕ್ಷಣ ಗುರುತಿಸಲಾಗಲಿಲ್ಲ. ಆದರೆ ಇಂಥ ಘಟನೆಗಳು ರೋಲ್ಸ್-ರಾಯ್ಸ್ ಟ್ರೆಂಟ್ ಎಂಜಿನ್‌ಗಳಲ್ಲಿ ಹಿಂದೆಯೂ ಕಂಡುಬಂದಿವೆ.

ಇದು ಭೂತಾನ್ ಜಗತ್ತಿಗೆ ನೀಡಿದ ಅನನ್ಯ ಮಾದರಿ!

ಭೂತಾನ್ ತನ್ನ ಶ್ರೀಮಂತ ಸಂಸ್ಕೃತಿ ಮತ್ತು ಬೌದ್ಧ ಧರ್ಮದ ಮೌಲ್ಯಗಳನ್ನು ಕಾಯ್ದುಕೊಳ್ಳಲು ಬಹಳ ಮಹತ್ವ ನೀಡುತ್ತದೆ. ಸಾಂಪ್ರದಾಯಿಕ ಉಡುಗೆ-ತೊಡುಗೆ, ವಾಸ್ತುಶಿಲ್ಪ, ಸಂಗೀತ, ನೃತ್ಯ ಮತ್ತು ಆಚರಣೆಗಳು ರಾಷ್ಟ್ರೀಯ ಗುರುತನ್ನು ಬಲಪಡಿಸುತ್ತವೆ. ಇದು ಜನರಲ್ಲಿ ಒಗ್ಗಟ್ಟು ಮತ್ತು ಸೇರಿದ ಭಾವನೆಯನ್ನು ಬೆಳೆಸುತ್ತದೆ. ಇದು ಸಂತೋಷಕ್ಕೆ ಅತಿ ಮುಖ್ಯ. ಮಾನಸಿಕ ಯೋಗಕ್ಷೇಮ, ಆರೋಗ್ಯ, ಸಮಯದ ಬಳಕೆ, ಶಿಕ್ಷಣ ಈ ಎಲ್ಲ ಅಂಶಗಳು ಭೂತಾನಿನ ಜನರ ಸಂತೋಷದ ಜೀವನಕ್ಕೆ ಕಾರಣವಾಗಿವೆ.

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಭೂತಾನಿನಲ್ಲಿ ಒಂದು ವಾರ ಸುತ್ತಾಡಿದಾಗ ನನಗೆ ಎದ್ದು ಕಂಡ, ತುಸು ಅಚ್ಚರಿ ಹುಟ್ಟಿಸಿದ ಸಂಗತಿ ಅಂದ್ರೆ, ಅಲ್ಲಿನ ನಿಧಾನ ಗತಿಯ ಜೀವನ ವಿಧಾನ. ಇಡೀ ದೇಶ ಅಲ್ಲಿನ ಗಿರಿಶಿಖರ, ಪಹಾಡಿಗಳಂತೆ ನಿರುಮ್ಮಳ. ಜೀವನವೇ ಒಂದು ಮೌನ ಕಣಿವೆಯಂತೆ ಭಾಸ. ಎಲ್ಲೂ ಹರಿಬರಿ ಇಲ್ಲ. ಧಾವಂತ ಇಲ್ಲವೇ ಇಲ್ಲ. ದೇಶದಲ್ಲಿ ಎಲ್ಲೂ, ಒಂದೂ ಟ್ರಾಫಿಕ್ ಲೈಟ್ ಸಹ ಇಲ್ಲ. ಹಾರನ್ ಸಪ್ಪಳ ಅಪ್ಪಳಿಸುವುದಿಲ್ಲ. ಅಲ್ಲಿನ ಪತ್ರಿಕೆಗಳನ್ನು ತಿರುವಿ ಹಾಕಿದರೆ, ಕ್ರೈಂ ಪೇಜ್ ಕಣ್ಣಿಗೆ ಕಾಣುವುದಿಲ್ಲ. ರಾಜಕೀಯ, ಕರ್ಮಕಾಂಡ, ಹಗರಣ, ಟೀಕೆ-ಟಿಪ್ಪಣಿ, ಆರೋಪ-ಪ್ರತ್ಯಾರೋಪಗಳ ಭರಾಟೆಯೂ ಇಲ್ಲ. ಜನ ಮತ್ತು ಅವರ ಜೀವನ ಅಲ್ಲಿನ ಮಾನಸ, ಜಲಧಕ ಮತ್ತು ಗದಾಧರ ನದಿಗಳಂತೆ ವಿಶಾಲ ಮತ್ತು ಪ್ರಶಾಂತ. ಯಾರೂ ಪೈಪೋಟಿಗೆ ಬಿದ್ದವರಂತೆ, ಇನ್ನೊಬ್ಬರನ್ನು ಹಿಂದಿಕ್ಕಿ ಮುನ್ನುಗ್ಗುವ ಪ್ರವೃತ್ತಿಯವರೂ ಅಲ್ಲ. ಇಡೀ ವ್ಯವಸ್ಥೆ ತನಗರಿವಿಲ್ಲದೇ ಒಂದು ಶಿಸ್ತಿಗೆ, ಅಚ್ಚುಕಟ್ಟುತನಕ್ಕೆ ಒಳಗಾಗಿರುವುದು ಎದ್ದು ಕಾಣುತ್ತದೆ.

ಇಡೀ ಜಗತ್ತು ಯಾವುದನ್ನು ಅಭಿವೃದ್ಧಿ ಎಂದು ಪರಿಗಣಿಸಿದೆಯೋ, ಯಾವುದಕ್ಕೆ ಇನ್ನಿಲ್ಲದ ಪ್ರಾಶಸ್ತ್ಯ, ಪ್ರಾಮುಖ್ಯ ನೀಡುತ್ತಿದೆಯೋ, ಭೂತಾನ್ ಅವನ್ನು ಅಪಸವ್ಯವೆಂದು ಭಾವಿಸಿ, ತನ್ನ ಜನರ ಜೀವನ ನೆಮ್ಮದಿಗೆ ಬೇಕಾದವುಗಳನ್ನೇ ಅಭಿವೃದ್ಧಿ ಎಂದು ಭಾವಿಸಿದೆ. ಸಂತೋಷ (ಹ್ಯಾಪಿನೆಸ್)ಕ್ಕಿಂತ ಮಿಗಿಲಾದ ಅಭಿವೃದ್ಧಿ ಯಾವುದೂ ಇಲ್ಲ ಎಂಬುದು ಭೂತಾನಿಗಳ ಗಟ್ಟಿ ನಿಲುವು. ಜಗತ್ತಿನ ಬಹುತೇಕ ದೇಶಗಳು ತಮ್ಮ ಪ್ರಗತಿಯನ್ನು ಅಳೆಯಲು ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟ್ (GDP) ಅನ್ನು ಪ್ರಮುಖ ಮಾನದಂಡವಾಗಿ ಬಳಸುತ್ತವೆ. ಜಿಡಿಪಿ ಎಂಬುದು ಒಂದು ದೇಶದಲ್ಲಿ ಉತ್ಪಾದನೆಯಾದ ಸರಕು ಮತ್ತು ಸೇವೆಗಳ ಒಟ್ಟು ಆರ್ಥಿಕ ಮೌಲ್ಯ. ಇದು ಆರ್ಥಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಆದರೆ, ಭೂತಾನ್ ಎಂಬ ಪುಟ್ಟ ಹಿಮಾಲಯ ರಾಷ್ಟ್ರವು ಆರ್ಥಿಕ ಲಾಭಕ್ಕಿಂತಲೂ ಮಿಗಿಲಾದ ಮಾನವ ಕಲ್ಯಾಣ ಮತ್ತು ಸಂತೋಷಕ್ಕೆ ಹೆಚ್ಚಿನ ಆದ್ಯತೆ ನೀಡುತ್ತದೆ. ಈ ಆದರ್ಶವನ್ನೇ ಆ ದೇಶ 'ಗ್ರಾಸ್ ನ್ಯಾಷನಲ್ ಹ್ಯಾಪಿನೆಸ್' (ಜಿಎನ್‌ಎಚ್) ಎಂದು ಕರೆದಿದೆ.

ಜಿಎನ್‌ಎಚ್ ಎಂಬುದು ಕೇವಲ ಒಂದು ಘೋಷವಾಕ್ಯವಲ್ಲ, ಬದಲಾಗಿ ದೇಶದ ಆಡಳಿತ, ನೀತಿಗಳು ಮತ್ತು ಅಭಿವೃದ್ಧಿ ಯೋಜನೆಗಳ ಆಧಾರಸ್ತಂಭವಾಗಿದೆ. ಇದು ಆಧುನಿಕ ಜಗತ್ತಿನ ಆರ್ಥಿಕ ಯಶಸ್ಸಿನ ವ್ಯಾಖ್ಯಾನವನ್ನು ಪ್ರಶ್ನಿಸಿ, ಮಾನವನ ಒಟ್ಟಾರೆ ಸಂತೋಷ, ಯೋಗಕ್ಷೇಮ ಮತ್ತು ಪರಿಸರ ಸಮತೋಲನಕ್ಕೆ ಪ್ರಾಮುಖ್ಯ ನೀಡಿರುವುದು ವಿಶ್ವದಲ್ಲಿಯೇ ಅನನ್ಯವಾದ ಅಭಿವೃದ್ಧಿ ಮಾದರಿಯಾಗಿದೆ. ಇದು ಜನರ ಸಂತೋಷ, ಯೋಗಕ್ಷೇಮ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಆಧರಿಸಿದ ಬಹುಮುಖಿ ಮಾಪಕವಾಗಿದೆ. ಇದು ಭೂತಾನ್‌ನ ಅಭಿವೃದ್ಧಿ ನೀತಿಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಮತ್ತು ಆರ್ಥಿಕ ಬೆಳವಣಿಗೆಯ ಜತೆಗೆ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಪರಿಸರ ಸಮತೋಲನವನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಭೂತಾನ್‌ನ ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್ಚುಕ್ ಅವರು 1970ರ ದಶಕದಲ್ಲಿ 'ಗ್ರಾಸ್ ನ್ಯಾಷನಲ್ ಹ್ಯಾಪಿನೆಸ್, ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟ್‌ಗಿಂತ ಹೆಚ್ಚು ಮುಖ್ಯ' ಎಂದು ಘೋಷಿಸಿದಾಗ ಈ ಪರಿಕಲ್ಪನೆಯು ಜಗತ್ತಿನ ಗಮನ ಸೆಳೆಯಿತು. ಅವರು ಯುವಕರಾಗಿದ್ದಾಗಲೇ ಜಿಡಿಪಿಯನ್ನು ಸಮಾಜದ ಸಂತೋಷ ಮತ್ತು ಯೋಗಕ್ಷೇಮದ ಏಕೈಕ ಮಾಪಕವನ್ನಾಗಿ ಪರಿಗಣಿಸುವುದನ್ನು ಪ್ರಶ್ನಿಸಿದರು ಮತ್ತು ಸಂತೋಷವನ್ನು ಪ್ರಗತಿಪರ ಅಭಿವೃದ್ಧಿಯ ಸೂಚಕವನ್ನಾಗಿ ಬಳಸಬೇಕೆಂದು ಪ್ರತಿಪಾದಿಸಿದರು. ಇದು ಭೂತಾನ್‌ನ 1629ರ ಪ್ರಾಚೀನ ಕಾನೂನು ಸಂಹಿತೆಯಿಂದ ಪ್ರೇರಿತವಾಗಿದ್ದು, ಅದರಲ್ಲಿ ಸರಕಾರದ ಉದ್ದೇಶ ಜನರ ಸಂತೋಷವನ್ನು ಸೃಷ್ಟಿಸುವುದು ಎಂದು ಹೇಳಲಾಗಿದೆ. ಇದು ಬೌದ್ಧ ತತ್ವಗಳಾದ ಕರುಣೆ, ಪ್ರಕೃತಿಯೊಂದಿಗೆ ಸಾಮರಸ್ಯ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಸಮತೋಲನವನ್ನು ಆಧರಿಸಿದೆ.

ಜಿಎನ್‌ಎಚ್ ಅನ್ನು ಆಚರಣೆಗೆ ತರಲು ಮತ್ತು ಅಳೆಯಲು ಭೂತಾನ್ ಸರಕಾರವು ನಾಲ್ಕು ಪ್ರಮುಖ ಆಧಾರಸ್ತಂಭಗಳನ್ನು ಸ್ಥಾಪಿಸಿದೆ. ಇವುಗಳು ಪರಸ್ಪರ ಸಂಬಂಧ ಹೊಂದಿದ್ದು, ಸಮತೋಲಿತ ಅಭಿವೃದ್ಧಿಯನ್ನು ಖಚಿತಪಡಿಸುತ್ತವೆ. ಈ ಪೈಕಿ ಮೊದಲನೆಯದು, ಉತ್ತಮ ಆಡಳಿತ (Good Governance). ಇದು ಜಿಎನ್‌ಎಚ್‌ನ ಪ್ರಮುಖ ಸ್ತಂಭವಾಗಿದೆ. ಪಾರದರ್ಶಕತೆ, ಕಾನೂನು ಸುವ್ಯವಸ್ಥೆ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತವು ನಾಗರಿಕರಲ್ಲಿ ನಂಬಿಕೆಯನ್ನು ಮೂಡಿಸಿ, ಸಂತೋಷಕ್ಕೆ ಅಗತ್ಯವಾದ ಪರಿಸರವನ್ನು ಸೃಷ್ಟಿಸುತ್ತದೆ. ಭೂತಾನ್ 2008ರಲ್ಲಿ ಅರಸೊತ್ತಿಗೆಯಿಂದ ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಪರಿವರ್ತನೆಗೊಂಡಿತು. ಇದು ಉತ್ತಮ ಆಡಳಿತದ ಬಗೆಗಿನ ಅದರ ಬದ್ಧತೆಯನ್ನು ತೋರಿಸುತ್ತದೆ.

ಭೂತಾನ್ ಪ್ರಜಾಪ್ರಭುತ್ವಕ್ಕೆ ತಿರುಗಿದ ನಂತರ, ದೇಶದ ಸಂವಿಧಾನದಲ್ಲಿ ಜಿಎನ್‌ಎಚ್ ಅನ್ನು ಪ್ರೋತ್ಸಾಹಿಸುವ ಸ್ಥಿತಿಗಳನ್ನು ಸೃಷ್ಟಿಸುವುದು ಸರಕಾರದ ಜವಾಬ್ದಾರಿ ಎಂದು ಸೇರಿಸಲಾಯಿತು. ಆರಂಭದಲ್ಲಿ ಇದು ಉದಾತ್ತ ಆಕಾಂಕ್ಷೆಯಾಗಿದ್ದರೂ, ವಿಶ್ವದ ಗಮನ ಸೆಳೆದ ನಂತರ ಅದನ್ನು ಪರಿಮಾಣಾತ್ಮಕ ಸಾಧನವನ್ನಾಗಿ ಅಭಿವೃದ್ಧಿಪಡಿಸಲಾಯಿತು.

ಆರಂಭದಲ್ಲಿ ವಿಶ್ವದ ಅನೇಕ ದೇಶಗಳು ಜಿಎನ್‌ಎಚ್ ಪರಿಕಲ್ಪನೆಯನ್ನು ಲೇವಡಿ ಮಾಡಿದ್ದವು. ಆದರೆ ಮುಂದಿನ ಐದು ವರ್ಷಗಳಲ್ಲಿ ವಿಶ್ವಸಂಸ್ಥೆ, ವಿಶ್ವ ಬ್ಯಾಂಕ್, ಒಇಸಿಡಿ (Organisation for Economic Co-operation and Development) ಮುಂತಾದ ಜಾಗತಿಕ ಸಂಸ್ಥೆಗಳು ಇದೊಂದು ಅನನ್ಯವಾದ ಕಲ್ಪನೆ ಎಂದು ಮಾನ್ಯತೆ ನೀಡಿದ ಬಳಿಕ ತಮ್ಮ ರಾಗವನ್ನು ಬದಲಿಸಿದವು.

ಎರಡನೆಯದು, ಸುಸ್ಥಿರ ಮತ್ತು ಸಮಾನ ಆರ್ಥಿಕ ಅಭಿವೃದ್ಧಿ (Sustainable and Equitable Socio-Economic Development). ಜಿಎನ್‌ಎಚ್ ಆಧ್ಯಾತ್ಮಿಕ ಸಂತೋಷದ ಬಗ್ಗೆ ಮಾತ್ರ ಮಾತನಾಡುವುದಿಲ್ಲ, ಇದು ಆರ್ಥಿಕ ಅಭಿವೃದ್ಧಿಯನ್ನು ಒಳಗೊಳ್ಳುತ್ತದೆ. ಆದರೆ ಅದನ್ನು ಪರಿಸರಕ್ಕೆ ಹಾನಿಯಾಗದಂತೆ ಮತ್ತು ಸಮಾಜದಲ್ಲಿ ಎಲ್ಲರಿಗೂ ಸಮಾನವಾಗಿ ಲಾಭವಾಗುವಂತೆ ವಿನ್ಯಾಸಗೊಳಿಸಿದೆ. ಆದಾಯದ ಅಂತರವನ್ನು ಕಡಿಮೆ ಮಾಡುವುದು, ಬಡತನ ನಿರ್ಮೂಲನೆ ಮತ್ತು ಬದುಕಿನ ಗುಣಮಟ್ಟವನ್ನು ಸುಧಾರಿಸುವುದು ಇದರ ಮುಖ್ಯ ಗುರಿ. ಮೂರನೆಯದು, ಸಂಸ್ಕೃತಿಯ ಸಂರಕ್ಷಣೆ ಮತ್ತು ಉತ್ತೇಜನ (Preservation and Promotion of Culture). ಭೂತಾನ್ ತನ್ನ ಶ್ರೀಮಂತ ಸಂಸ್ಕೃತಿ ಮತ್ತು ಬೌದ್ಧ ಧರ್ಮದ ಮೌಲ್ಯಗಳನ್ನು ಕಾಯ್ದುಕೊಳ್ಳಲು ಬಹಳ ಮಹತ್ವ ನೀಡುತ್ತದೆ. ಸಾಂಪ್ರದಾಯಿಕ ಉಡುಗೆ-ತೊಡುಗೆ, ವಾಸ್ತುಶಿಲ್ಪ, ಸಂಗೀತ, ನೃತ್ಯ ಮತ್ತು ಆಚರಣೆಗಳು ರಾಷ್ಟ್ರೀಯ ಗುರುತನ್ನು ಬಲಪಡಿಸುತ್ತವೆ. ಇದು ಜನರಲ್ಲಿ ಒಗ್ಗಟ್ಟು ಮತ್ತು ಸೇರಿದ ಭಾವನೆಯನ್ನು ಬೆಳೆಸುತ್ತದೆ. ಇದು ಸಂತೋಷಕ್ಕೆ ಅತಿ ಮುಖ್ಯ.

ನಾಲ್ಕನೆಯದು, ಪರಿಸರ ಸಂರಕ್ಷಣೆ (Environmental Conservation). ಭೂತಾನ್ ತನ್ನ ಪರಿಸರವನ್ನು ಅತಿ ಪ್ರಮುಖ ಆಸ್ತಿ ಎಂದು ಪರಿಗಣಿಸುತ್ತದೆ. ಜಿಎನ್‌ಎಚ್ ಪ್ರಕಾರ, ಮಾನವ ಮತ್ತು ಪ್ರಕೃತಿಯ ನಡುವೆ ಸಾಮರಸ್ಯ ಇರಬೇಕು. ಈ ತತ್ವದ ಆಧಾರದ ಮೇಲೆ, ಭೂತಾನ್ ತನ್ನ ಸಂವಿಧಾನದಲ್ಲಿ ಕನಿಷ್ಠ ಶೇ.60 ಭೂಪ್ರದೇಶವನ್ನು ಅರಣ್ಯದಿಂದ ಆವರಿಸಿರಬೇಕು ಎಂದು ಕಾನೂನು ಮಾಡಿದೆ. ಪ್ರಸ್ತುತ, ದೇಶದ ಶೇ.70 ಕ್ಕಿಂತ ಹೆಚ್ಚು ಭಾಗವು ಅರಣ್ಯದಿಂದ ಕೂಡಿದೆ. ಇದು ಜಾಗತಿಕ ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಭೂತಾನ್‌ನ ಬದ್ಧತೆಯನ್ನು ತೋರಿಸುತ್ತದೆ.

ಜಿಎನ್‌ಎಚ್ ತತ್ವವನ್ನು ಇನ್ನಷ್ಟು ವೈಜ್ಞಾನಿಕವಾಗಿ ಮತ್ತು ಪ್ರಾಯೋಗಿಕವಾಗಿ ಅಳೆಯಲು, ಸಂಶೋಧಕರು ಮತ್ತು ಆಡಳಿತಗಾರರು ಒಂಬತ್ತು ಕಾರ್ಯಕ್ಷೇತ್ರ (ಡೊಮೇನ್) ಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಕಾರ್ಯಕ್ಷೇತ್ರಗಳು ವ್ಯಕ್ತಿ ಮತ್ತು ಸಮುದಾಯದ ಒಟ್ಟಾರೆ ಯೋಗಕ್ಷೇಮವನ್ನು ವ್ಯಾಪಕವಾಗಿ ಅಳೆಯುತ್ತವೆ. ಇವುಗಳೆಂದರೆ, ಮಾನಸಿಕ ಯೋಗಕ್ಷೇಮ (Psychological Wellbeing), ಆರೋಗ್ಯ (Health), ಸಮಯದ ಬಳಕೆ ಮತ್ತು ಸಮತೋಲನ (Time Use and Balance), ಶಿಕ್ಷಣ (Education), ಸಾಂಸ್ಕೃತಿಕ ವೈವಿಧ್ಯ ಮತ್ತು ಸ್ಥಿರತೆ (Cultural Diversity and Resilience), ಉತ್ತಮ ಆಡಳಿತ (Good Governance), ಸಮುದಾಯ ಚೈತನ್ಯ (Community Vitality), ಪರಿಸರ ವೈವಿಧ್ಯ ಮತ್ತು ಸ್ಥಿರತೆ (Ecological Diversity and Resilience) ಮತ್ತು ಜೀವನ ಮಟ್ಟ (Living Standards). ಈ ಒಂಬತ್ತು ಕಾರ್ಯಕ್ಷೇತ್ರಗಳನ್ನು ಬಳಸಿಕೊಂಡು ಪ್ರತಿ ಐದು ವರ್ಷಗಳಿಗೊಮ್ಮೆ 'ಜಿಎನ್‌ಎಚ್ ಸಮೀಕ್ಷೆ'ಯನ್ನು ನಡೆಸಲಾಗುತ್ತದೆ. ಈ ಸಮೀಕ್ಷೆಯ ಆಧಾರದ ಮೇಲೆ ಸರಕಾರವು ನೀತಿಗಳನ್ನು ರೂಪಿಸುತ್ತದೆ ಮತ್ತು ಮುಂದಿನ ಪಂಚವಾರ್ಷಿಕ ಯೋಜನೆಗಳಿಗೆ ಮಾರ್ಗದರ್ಶನ ಪಡೆಯುತ್ತದೆ.

ಜಿಡಿಪಿ (Gross Domestic Product) ಸಂಪೂರ್ಣವಾಗಿ ಆರ್ಥಿಕ ಬೆಳವಣಿಗೆಯ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ. ಹೆಚ್ಚಿದ ಉತ್ಪಾದನೆ, ಮಾರಾಟ ಮತ್ತು ಸೇವೆಯು ಜಿಡಿಪಿಯನ್ನು ಹೆಚ್ಚಿಸುತ್ತದೆ. ಆದರೆ, ಇದು ಸಾಮಾಜಿಕ ಅಸಮಾನತೆ, ಪರಿಸರ ಮಾಲಿನ್ಯ ಅಥವಾ ಜನರ ಸಂತೋಷದ ಮಟ್ಟವನ್ನು ಪರಿಗಣಿಸುವುದಿಲ್ಲ. ಉದಾಹರಣೆಗೆ, ಪರಿಸರ ಮಾಲಿನ್ಯವನ್ನು ತೊಡೆದುಹಾಕಲು ಖರ್ಚು ಮಾಡುವ ಹಣವು ಜಿಡಿಪಿಯನ್ನು ಹೆಚ್ಚಿಸಬಹುದು. ಆದರೆ ಅದು ಜನರ ಆರೋಗ್ಯ ಮತ್ತು ಪರಿಸರವನ್ನು ಸುಧಾರಿಸುವುದೇ ಎಂಬುದನ್ನು ಖಾತ್ರಿಪಡಿಸುವುದಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಜಿಎನ್‌ಎಚ್ (Gross National Happiness) ಆರ್ಥಿಕ ಮೌಲ್ಯವನ್ನು ಮಾತ್ರವಲ್ಲದೇ, ಜನರ ಸಮಗ್ರ ಯೋಗಕ್ಷೇಮ ಮತ್ತು ಜೀವನದ ಗುಣಮಟ್ಟವನ್ನು ಅಳೆಯಲು ಪ್ರಯತ್ನಿಸುತ್ತದೆ. ಜಿಎನ್‌ಎಚ್‌ನಲ್ಲಿ, ಪ್ರತಿಯೊಂದು ಅಭಿವೃದ್ಧಿ ನೀತಿಯನ್ನು ಈ ನಾಲ್ಕು ಆಧಾರಸ್ತಂಭಗಳು ಮತ್ತು ಒಂಬತ್ತು ಕಾರ್ಯಕ್ಷೇತ್ರಗಳ ಹಿನ್ನೆಲೆಯಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಉದಾಹರಣೆಗೆ, ಹೊಸ ಕೈಗಾರಿಕಾ ಯೋಜನೆಯು ಆರ್ಥಿಕವಾಗಿ ಲಾಭದಾಯಕವಾಗಿದ್ದರೂ, ಅದು ಪರಿಸರಕ್ಕೆ ಹಾನಿ ಮಾಡಿದರೆ ಅಥವಾ ಸ್ಥಳೀಯ ಸಂಸ್ಕೃತಿಗೆ ಧಕ್ಕೆಯುಂಟುಮಾಡಿದರೆ, ಜಿಎನ್‌ಎಚ್ ತತ್ವದ ಪ್ರಕಾರ ಅದನ್ನು ಉತ್ತಮ ಯೋಜನೆಯೆಂದು ಪರಿಗಣಿಸಲಾಗುವುದಿಲ್ಲ.

ಮಾನಸಿಕ ಯೋಗಕ್ಷೇಮ, ಆರೋಗ್ಯ, ಸಮಯದ ಬಳಕೆ (ಕೆಲಸ ಮತ್ತು ವೈಯಕ್ತಿಕ ಜೀವನದ ಸಮತೋಲನ), ಶಿಕ್ಷಣ, ಸಾಂಸ್ಕೃತಿಕ ವೈವಿಧ್ಯ ಮತ್ತು ಸ್ಥಿತಿಸ್ಥಾಪಕತ್ವ, ಉತ್ತಮ ಆಡಳಿತ, ಸಮುದಾಯದ ಚೈತನ್ಯ, ಪರಿಸರ ವೈವಿಧ್ಯ ಮತ್ತು ಸ್ಥಿತಿಸ್ಥಾಪಕತ್ವ ಮತ್ತು ಜೀವನ ಮಟ್ಟ... ಈ ಎಲ್ಲ ಅಂಶಗಳು ಭೂತಾನಿನ ಜನರ ಸಂತೋಷದ ಜೀವನಕ್ಕೆ ಕಾರಣವಾಗಿವೆ. ಅಲ್ಲಿನ ಜನರು ಆಧುನಿಕ ಜಗತ್ತಿನ ಭರಾಟೆಯಿಂದ ದೂರವಿದ್ದು, ಸರಳ, ಸಮುದಾಯ ಆಧಾರಿತ ಮತ್ತು ಪ್ರಕೃತಿಗೆ ಹತ್ತಿರವಾದ ಜೀವನಶೈಲಿಯನ್ನು ಅಳವಡಿಸಿಕೊಂಡಿರುವುದು ಎಂಥವರಿಗಾದರೂ ಅನುಭವಕ್ಕೆ ಬರದೇ ಹೋಗುವುದಿಲ್ಲ. ಬೌದ್ಧ ಧರ್ಮದ ಪ್ರಭಾವದಿಂದಾಗಿ, ಸಹಾನುಭೂತಿ, ಸಹನೆ ಮತ್ತು ಅಹಿಂಸೆಯಂಥ ಮೌಲ್ಯಗಳು ಅವರ ಜೀವನದಲ್ಲಿ ಆಳವಾಗಿ ಬೇರೂರಿವೆ. ಹೀಗಾಗಿ, ಭೂತಾನಿನ ಸಂತೋಷದ ಮೂಲ ಕೇವಲ ಆರ್ಥಿಕ ಸಮೃದ್ಧಿಯಲ್ಲಿಲ್ಲ, ಬದಲಾಗಿ ಸಮಗ್ರ ಮತ್ತು ಸಮತೋಲಿತ ಜೀವನ ದೃಷ್ಟಿಯಲ್ಲಿದೆ.

ಒಟ್ಟಾರೆಯಾಗಿ, ಗ್ರಾಸ್ ನ್ಯಾಷನಲ್ ಹ್ಯಾಪಿನೆಸ್ ಕೇವಲ ಆರ್ಥಿಕ ಲಾಭಕ್ಕಿಂತ ಜನರ ಸಂತೋಷ ಮತ್ತು ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡುವ ಒಂದು ಅಭಿವೃದ್ಧಿ ಮಾದರಿಯಾಗಿದೆ. ನಿಜವಾದ ಪ್ರಗತಿ ಅಂದ್ರೆ ಕೇವಲ ಆರ್ಥಿಕ ಬೆಳವಣಿಗೆಯಲ್ಲ, ಬದಲಾಗಿ ಮಾನವ ಜೀವನದ ಸಮಗ್ರ ಗುಣಮಟ್ಟವನ್ನು ಹೆಚ್ಚಿಸುವುದು ಎಂಬ ಅಮೋಘ ಪಾಠವನ್ನು ಭೂತಾನ್ ಜಗತ್ತಿಗೆ ನೀಡಿದೆ. ತನ್ನ ಈ ವಿಶಿಷ್ಟ ಜಿಎನ್‌ಎಚ್ ತತ್ವದ ಮೂಲಕ, ಆಧುನಿಕ ಜಗತ್ತಿನ ಆರ್ಥಿಕ ಪ್ರಗತಿಯನ್ನೇ ಪ್ರಗತಿ ಎಂದು ಪರಿಗಣಿಸುವ ಮನೋಭಾವಕ್ಕೆ ಒಂದು ಪರ್ಯಾಯ ಮಾದರಿಯನ್ನು ಭೂತಾನ್ ಒದಗಿಸಿದೆ. ಇದು ಪ್ರಗತಿಯ ವ್ಯಾಖ್ಯಾನವನ್ನು ಪುನಃ ಪರಿಶೀಲಿಸಲು ಮತ್ತು ಮಾನವೀಯ ಮೌಲ್ಯಗಳನ್ನು ಆಳವಾಗಿ ಅಳವಡಿಸಲು ಪ್ರಪಂಚಕ್ಕೆ ಸ್ಫೂರ್ತಿ ನೀಡಿದಂತಾಗಿದೆ. ಭೂತಾನಿನಲ್ಲಿ ಒಂದು ವಾರ ಓಡಾಡಿದವರಿಗೆ ಜಿಎನ್‌ಎಚ್ ಅಂದ್ರೆ ಏನು ಎಂಬುದು ಅರ್ಥವಾಗದೇ ಹೋಗದು.

ಮಿಸ್ಟರ್ ಮುನೀರ್, ಎಲ್ಲಿ ಕುಣಿಯುತ್ತಿದ್ದೀರಿ ಗೊತ್ತಾ?

ನಮ್ಮ ದೇಶದ ಮುಕೇಶ್ ಅಂಬಾನಿಯ ಸಂಪತ್ತು ಪಾಕಿಸ್ತಾನದ ಬಜೆಟ್‌ನ ಎರಡು ಪಟ್ಟು! ಮುನೀರ್ ಅವರಿಗೆ ಅವರದೇ ಹಳೆಯ ಪೂರ್ವ ಭಾಗದ ಕತೆ ನೆನಪಿರಬೇಕಿತ್ತು. ಪಾಕಿಸ್ತಾನೀಯರಿಗೆ ಅಸಂಬದ್ಧ ಮಾತನಾಡುವುದು ಖಯಾಲಿಯಾಗಿಬಿಟ್ಟಿದೆ. ಆದರೆ ಅಜ್ಞಾನಕ್ಕೂ ಒಂದು ಮಿತಿಯಿದೆ. ಮುನೀರ್ ಸರ್, ವಿದೂಷಕನಂತೆ ವೇಷ ಹಾಕಿಕೊಂಡು ತಿರುಗಾಡುವುದಕ್ಕೂ ಒಂದು ಲಿಮಿಟ್ಟಿದೆ!

ಹಿರಿಯ ಪತ್ರಿಕೋದ್ಯಮಿ
ಡಾ.ವಿಜಯ್ ದರಡಾ
vveditoped@gmail.com

ನಾವೆಲ್ಲರೂ ಒಂದಲ್ಲಾ ಒಂದು ಸಲ ಸರ್ಕಸ್‌ಗೆ ಹೋಗಿರುತ್ತೇವೆ. ಅಲ್ಲಿ ಏನೇನೋ ಸಾಹಸಗಳು ನಡೆಯುತ್ತಿರುತ್ತವೆ. ಅವುಗಳ ಮಧ್ಯೆ ಯಾವಾಗಲೂ ಒಬ್ಬ ವಿದೂಷಕ ಬಂದು ಹೋಗುತ್ತಿರುತ್ತಾನೆ. ಅವನು ಏನೇನೋ ಮಂಗಾಟಗಳನ್ನು ಮಾಡಿ ಪ್ರೇಕ್ಷಕರನ್ನು ನಗಿಸುತ್ತಾನೆ. ಹಾಗೆ ಮಾಡುವ ಮೂಲಕ ಸರ್ಕಸ್‌ನ ಇನ್ನಿತರ ಪ್ರದರ್ಶನಗಳನ್ನು ನೋಡಿ ಕಂಗಾಲಾಗಿರುವ ಜನರ ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತಾನೆ. ನಾನೇಕೆ ಇಲ್ಲಿ ಇದ್ದಕ್ಕಿದ್ದಂತೆ ಸರ್ಕಸ್‌ನ ವಿಷಯ ಹೇಳುತ್ತಿದ್ದೇನೆ ಎಂದು ನಿಮಗೆ ಆಶ್ಚರ್ಯವಾಗಬಹುದು. ಕಾರಣ ಇದೆ. ಪಾಕಿಸ್ತಾನಿ ಸೇನೆಯ ಮುಖ್ಯಸ್ಥ ಜನರಲ್ ಅಸೀಂ ಮುನೀರ್‌ನ ಇತ್ತೀಚಿನ ಹುಚ್ಚಾಟಗಳನ್ನು ನೋಡಿ ಇದೆಲ್ಲ ನೆನಪಾಯಿತು. ಮುನೀರ್‌ನ ಮಂಗಾಟಗಳು ಸರ್ಕಸ್‌ನ ವಿದೂಷಕನ ಮಂಗಾಟಗಳಿಗಿಂತ ಯಾವ ರೀತಿಯಲ್ಲೂ ಕಮ್ಮಿಯಿಲ್ಲ! ಜಗತ್ತಿನಾದ್ಯಂತ ಅಮೆರಿಕದ ತೆರಿಗೆ ಸಮರದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಈ ಮುನೀರ್ ಭಾರತದ ಮೇಲೆ ಪೂರ್ವದಿಂದ ದಾಳಿ ನಡೆಸುವ ಬಗ್ಗೆ ಮಾತನಾಡುತ್ತಾರೆ. ಇದು ಟೆನ್ಷನ್ ಮರೆತು ನಗೆ ಉಕ್ಕುವಂತೆ ಮಾಡುವ ಹೇಳಿಕೆಯಲ್ಲದೆ ಇನ್ನೇನು!

ನಿಜ ಹೇಳಬೇಕೆಂದರೆ, ನನಗೆ ಮುನೀರ್‌ನನ್ನು ವಿದೂಷಕ ಎಂದು ಕರೆಯುವುದಕ್ಕೂ ಮನಸ್ಸಿಲ್ಲ. ಏಕೆಂದರೆ ವಿದೂಷಕರ ಬಗ್ಗೆ ನನಗೆ ಅಪಾರ ಗೌರವವಿದೆ. ಅವರು ಜನರ ಮುಖದಲ್ಲಿ ನಗು ತರಿಸುತ್ತಾರೆ. ಅವರು ಇಡೀ ಜಗತ್ತಿಗೆ ಸಂತೋಷವನ್ನು ಹರಡುತ್ತಾರೆ. ಆದರೆ ಈ ಮುನೀರ್ ಅಷ್ಟೊಳ್ಳೆಯ ವ್ಯಕ್ತಿಯೇನೂ ಅಲ್ಲ. ಹಿಂದಿಯಲ್ಲೊಂದು ಮಾತಿದೆ. ''ಬೇಗಾನಿ ಶಾದಿ ಮೇ ಅಬ್ದುಲ್ಲಾ ದೀವಾನಾ'' ಅಂತ. ಯಾರದೋ ಮದುವೆಯಲ್ಲಿ ಅಬ್ದುಲ್ಲಾ ಹುಚ್ಚೆದ್ದು ಕುಣಿದನಂತೆ! ನೀವೂ ನೋಡಿರುತ್ತೀರಿ. ಸಾಮಾನ್ಯವಾಗಿ ಮದುವೆಯ ದಿಬ್ಬಣದಲ್ಲಿ ಕೆಲವರು ಎಲ್ಲಿಂದಲೋ ಬಂದು ಸೇರಿಕೊಂಡು ಇದ್ದಕ್ಕಿದ್ದಂತೆ ಕುಣಿಯಲು ಶುರುಮಾಡುತ್ತಾರೆ. ಅವರಿಗೂ ಮದುವೆಗೂ ಸಂಬಂಧವೇ ಇರುವುದಿಲ್ಲ. ಆದರೂ ತಾನೇ ಮದುಮಗನ ಖಾಸಾ ಸ್ನೇಹಿತ ಎಂಬಂತೆ ಬಿಂಬಿಸಿಕೊಳ್ಳುತ್ತಾರೆ. ಜನರು ಅವರ ಮೇಲೆ ಹಣ ಎಸೆದರಂತೂ ಮುಗಿದೇಹೋಯಿತು, ತಾನು ಮದುಮಗನ ಅಗ್ದೀ ಖಾಸಾ ಗೆಳೆಯ ಎಂದು ಅವರೇ ನಂಬಿಕೊಂಡುಬಿಡುತ್ತಾರೆ! ಮುನೀರ್‌ನ ಸ್ಥಿತಿಯೂ ಹೆಚ್ಚುಕಮ್ಮಿ ಇದೇ. ಆದರೆ ಮುನೀರ್ ಸರ್, ಕೊನೆಯ ಪಕ್ಷ ನೀವು ಎಲ್ಲಿ ಡ್ಯಾನ್ಸ್ ಮಾಡುತ್ತಿದ್ದೀರಿ ಎಂಬುದನ್ನಾದರೂ ನೋಡಿಕೊಳ್ಳಿ. ಯಾರಿಗಾಗಿ ಕುಣಿಯುತ್ತಿದ್ದೀರಿ? ಯಾಕಾಗಿ ಕುಣಿಯುತ್ತಿದ್ದೀರಿ? ಏನು ಹೇಳುತ್ತಿದ್ದೀರಿ? ಅದರ ಅರ್ಥವೇನು ಎಂಬುದು ನಿಮಗೆ ಗೊತ್ತೆ? ಬರೀ ಅಪಾರ್ಥದ ಮಾತುಗಳನ್ನೇ ಆಡಬೇಡಿ.

''ಆ ಮುನೀರ್‌ನನ್ನು ಯಾಕೆ ನೀವು 'ಸರ್' ಎಂದು ಸಂಬೋಧಿಸುತ್ತೀರಿ?'' ಎಂದು ನೀವೀಗ ಆಕ್ಷೇಪಿಸಬಹುದು. ಅದಕ್ಕೂ ಕಾರಣವಿದೆ. ಭಾರತದ ಮೇಲೆ ಪೂರ್ವದ ಕಡೆಯಿಂದ ದಾಳಿ ನಡೆಸುವ ಬಗ್ಗೆ ಅವರು ಮಾತನಾಡುವಾಗ ನನಗೆ 'ಪೂರಬ್ ಔರ್ ಪಶ್ಚಿಮ್' ಸಿನಿಮಾದ ''ಹೇ ಪ್ರೀತ್ ಜಹಾಂ ಕಿ ರೀತ್ ಸದಾ, ಮೇ ಗೀತ್ ವಹಾಂ ಕೇ ಗಾತಾ ಹೂಂ, ಭಾರತ್ ಕಾ ರೆಹನೇ ವಾಲಾ ಹೂಂ, ಭಾರತ್ ಕೀ ಬಾತ್ ಸುನಾತಾ ಹೂಂ'' ಹಾಡು ನೆನಪಾಯಿತು. ಈ ಹಾಡು ಮುಂದುವರಿದು, ''ಹಮೇ ಪ್ಯಾರ್ ನಿಭಾನಾ ಆತಾ ಹೈ'' ಎಂದು ಹೇಳುತ್ತದೆ. ಪಾಕಿಸ್ತಾನ ಹುಟ್ಟಿದ್ದು ಭಾರತದಿಂದಲೇ ಅಲ್ಲವೆ? ಆ ದೇಶಕ್ಕೆ ನಾವೇ ಅಪ್ಪ-ಅಮ್ಮ. ಹಾಗಾಗಿ ಕೊಂಚ ಔದಾರ್ಯದಿಂದ ಅಲ್ಲಿನ ಸೇನಾಪಡೆಯ ಮುಖ್ಯಸ್ಥನನ್ನು ಸರ್ ಎಂದು ಕರೆದರೆ ತಪ್ಪಿಲ್ಲ. ಅಂಥ ಹುದ್ದೆಯಲ್ಲಿದ್ದರೂ ಆತ ಪುಡಿರೌಡಿಯ ಥರ ವರ್ತಿಸುತ್ತಾರೆ ಅಂದರೆ ಅದು ಆತನ ಹಣೆಬರಹ. ಅದಕ್ಕೆ ನಾವೇನು ಮಾಡಲು ಸಾಧ್ಯ? ಆದರೆ, ಎಲ್ಲರನ್ನೂ ಪ್ರೀತಿಸುವುದು ನಮ್ಮ ನಡವಳಿಕೆಯಾಗಿರಬೇಕು.

ಅಮೆರಿಕದಲ್ಲಿ ನಿಂತುಕೊಂಡು ಭಾರತದ ಮೇಲೆ ಪೂರ್ವದ ಕಡೆಯಿಂದ ದಾಳಿ ನಡೆಸುವ ಮಾತನ್ನು ಮುನೀರ್ ಆಡುತ್ತಿರುವಾಗ ನನಗೆ ಈ ಮನುಷ್ಯ ಹಿಂದೊಮ್ಮೆ ತನ್ನದೇ ದೇಶದ ಪೂರ್ವ ಭಾಗದಲ್ಲಿ ನಡೆದಿದ್ದನ್ನು ಮರೆತುಬಿಟ್ಟರಾ ಎಂದು ಆಶ್ಚರ್ಯವಾಯಿತು. ಪಾಕಿಸ್ತಾನದ ಹಳೆಯ ಪೂರ್ವ ಭಾಗವನ್ನು ಈಗ ಬಾಂಗ್ಲಾದೇಶ ಎಂದು ಕರೆಯುತ್ತಾರೆ. ಮಿಸ್ಟರ್ ಮುನೀರ್, ನಿಮಗೆ 1971ರ ಯುದ್ಧದ ನೆನಪಿರಬೇಕಿತ್ತು. ನಿಮ್ಮನ್ನು ಕಾಪಾಡಲು ಅಮೆರಿಕದವರು ಯುದ್ಧನೌಕೆಯನ್ನು ಕಳುಹಿಸಿದ್ದರೂ ಭಾರತದ ಪ್ರಧಾನಿ ಇಂದಿರಾ ಗಾಂಧಿ ಪಾಕಿಸ್ತಾನವನ್ನು ಅಡ್ಡಡ್ಡ ಸೀಳಿ ಎರಡು ಭಾಗ ಮಾಡಿಬಿಟ್ಟಿದ್ದರು. ಅದನ್ನು ಮರೆತಿರಾ? ನಮ್ಮ ಸೇನಾಪಡೆಯ ಶೂರರು ನಿಮ್ಮ ದೇಶದ 99,000 ಯೋಧರು ಶರಣಾಗುವಂತೆ ಮಾಡಿದರು. ನಿಮ್ಮ ಸೇನೆಗೆ ನಿಮ್ಮದೇ ದೇಶದ ಪೂರ್ವ ಭಾಗವನ್ನೇ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಹಾಗಿರುವಾಗ ನೀವು ಭಾರತದ ಮೇಲೆ ಪೂರ್ವದಿಂದ ದಾಳಿ ನಡೆಸುವ ಕನಸು ಕಾಣುತ್ತಿದ್ದೀರಿ! ಎಂಥಾ ತಮಾಷೆಯಲ್ಲವೇ. ಅದು ಹೋಗಲಿ. ಕಾರ್ಗಿಲ್ ಯುದ್ಧವನ್ನೇ ಬೇಕಾದರೂ ನೆನಪು ಮಾಡಿಕೊಳ್ಳೋಣ. ಭಾರತವನ್ನು ಒಡೆಯಲು ನಿಮ್ಮ ಪರ್ವೇಜ್ ಮುಷರ್ರಫ್ ದೊಡ್ಡ ಷಡ್ಯಂತ್ರ ರಚಿಸಿದ್ದರು. ಆದರೆ ಅದಕ್ಕೆ ಭಾರತ ಕೊಟ್ಟ ಲಾತಾ ಎಷ್ಟು ಜೋರಾಗಿತ್ತು ಅಂದರೆ ನಿಮ್ಮ ಪ್ರಧಾನಿ ನವಾಜ್ ಷರೀಫ್ ಸೀದಾ ಹೋಗಿ ಅಮೆರಿಕದ ಕಾಲಿಗೆ ಬಿದ್ದುಬಿಟ್ಟಿದ್ದರು! ಮಿಸ್ಟರ್ ಮುನೀರ್, ಏಕೆ ನೀವು ಒಮ್ಮೆ ಕೊಂಚ ಪುರುಸೊತ್ತು ಮಾಡಿಕೊಂಡು ಪಾಕಿಸ್ತಾನದ ಇತಿಹಾಸದ ಪುಸ್ತಕದ ಹಾಳೆಗಳನ್ನು ತಿರುವಿಹಾಕಬಾರದು? ಯಾವ್ಯಾವುದೋ ದೇಶಕ್ಕೆ ಹೋಗಿ ಯಾರ್ಯಾರದೋ ಮಾತು ಕೇಳಿಕೊಂಡು ವಿದೂಷಕನ ರೀತಿಯಲ್ಲಿ ಹೇಳಿಕೆ ನೀಡಿ ನಿಮ್ಮ ದೇಶದ ಮರ್ಯಾದೆ ಏಕೆ ಕಳೆಯುತ್ತೀರಿ?

ನಾನು ಪಾಕಿಸ್ತಾನಕ್ಕೆ ಹಲವಾರು ಸಲ ಹೋಗಿಬಂದಿದ್ದೇನೆ. ವಿದೇಶಗಳಲ್ಲೂ ಅನೇಕ ಪಾಕಿಸ್ತಾನೀಯರನ್ನು ಭೇಟಿಯಾಗುತ್ತಿರುತ್ತೇನೆ. ಆ ಅನುಭವದಲ್ಲಿ ಒಂದು ಮಾತು ಹೇಳುತ್ತೇನೆ. ನಿಮ್ಮ ದೇಶದ ಜನಸಾಮಾನ್ಯರು ನಿಜವಾಗಿಯೂ ಬಹಳ ಒಳ್ಳೆಯವರು. ನೀವು ಅವರಿಗೇಕೆ ಮೋಸ ಮಾಡುತ್ತೀರಿ? ನಿಮಗೆ ಯುದ್ಧ ಮಾಡಲೇಬೇಕು ಎಂದು ಕೈ ತುರಿಸುತ್ತಿದ್ದರೆ ಖಂಡಿತ ಯುದ್ಧ ಮಾಡಿ. ಆ ಯುದ್ಧವನ್ನು ನಿಮ್ಮ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ವಿರುದ್ಧ ಮಾಡಿ. ನಿಮ್ಮಲ್ಲಿರುವ ಅಜ್ಞಾನದ ವಿರುದ್ಧ ಯುದ್ಧ ಮಾಡಿ. ಬಡತನದ ವಿರುದ್ಧ ಯುದ್ಧ ಮಾಡಿ. ಆಗ ಕೊನೆಯ ಪಕ್ಷ ನಿಮ್ಮ ದೇಶದ ಜನರಿಗೆ ಗೋಧಿ ಹಿಟ್ಟು, ಬೇಳೆಕಾಳು, ಅಡುಗೆ ಎಣ್ಣೆಯಾದರೂ ಸಿಗಬಹುದು! ಭಾರತದ ವಿರುದ್ಧ ವಿಷ ಕಾರುವುದರಿಂದ ಪಾಕಿಸ್ತಾನೀಯರ ಬದುಕು ಯಾವ

ರೀತಿಯಲ್ಲೂ ಸುಧಾರಿಸುವುದಿಲ್ಲ. ಪಾಕಿಸ್ತಾನದ ಸೇನಾಪಡೆ ಹಾಗೂ ಐಎಸ್‌ಐ ಮಾಡಿದ ಎಡವಟ್ಟುಗಳಿಂದಾಗಿಯೇ ಇಂದು ನಿಮ್ಮ ದೇಶದ ರೋಗಪೀಡಿತರು ಭಾರತಕ್ಕೆ ಬಂದು ಚಿಕಿತ್ಸೆ ಪಡೆದುಕೊಂಡು ಹೋಗುವುದಕ್ಕೂ ಸಾಧ್ಯವಾಗುತ್ತಿಲ್ಲ. ನೀವೀಗ ಅವರನ್ನೆಲ್ಲ ಅಮೆರಿಕಕ್ಕೆ ಚಿಕಿತ್ಸೆ ಪಡೆಯಲು ಕಳಿಸುತ್ತೀರಾ? ಆ ಶಕ್ತಿ ನಿಮಗೆ ಇದೆಯಾ?

ನಮ್ಮ ದೇಶದ ಖ್ಯಾತ ಉದ್ಯಮಿ ಮುಕೇಶ್ ಅಂಬಾನಿಯ ಬಗ್ಗೆಯೂ ಬೆದರಿಕೆಯ ಮಾತುಗಳನ್ನಾಡಿದ್ದೀರಿ. ಒಂದು ಕಿವಿಮಾತು ಹೇಳುತ್ತೇನೆ, ಕೇಳಿಸಿಕೊಳ್ಳಿ. ಮನುಷ್ಯನಿಗೆ ಅವನ ಮಿತಿಗಳು ಗೊತ್ತಿರಬೇಕು. ಮುಕೇಶ್ ಅಂಬಾನಿಯ ಬಗ್ಗೆ ಮಾತನಾಡುವುದಕ್ಕೂ ಮೊದಲು ನಿಮ್ಮ ಯೋಗ್ಯತೆಯೇನು ಎಂಬುದನ್ನು ಅರ್ಥ ಮಾಡಿಕೊಳ್ಳಿ! ಅದಕ್ಕಿಂತ ಹೆಚ್ಚಾಗಿ, ಮುಕೇಶ್ ಅಂಬಾನಿ ನಿಜಕ್ಕೂ ಯಾರು, ಅವರ ಸಾಮರ್ಥ್ಯವೇನು ಎಂಬುದನ್ನಾದರೂ ಸ್ವಲ್ಪ ತಿಳಿದುಕೊಳ್ಳುವ ಪ್ರಯತ್ನ ಮಾಡಿರಿ. ಅವರ ಬಗ್ಗೆ ನೀವು ಏನನ್ನೂ ಓದಿಲ್ಲ ಅಂತಾದರೆ ನಾನೇ ಹೇಳುತ್ತೇನೆ ಕೇಳಿಸಿಕೊಳ್ಳಿ. ಸದ್ಯ ಮುಕೇಶ್ ಅಂಬಾನಿಯ ಒಟ್ಟು ಸಂಪತ್ತು 8.5 ಲಕ್ಷ ಕೋಟಿ ರು.ಗಿಂತ ಹೆಚ್ಚು. ನಿಮ್ಮ ದೇಶದ ಬಜೆಟ್ ಗಾತ್ರ ಎಷ್ಟು ಅಂತ ನಿಮಗೆ ಗೊತ್ತಾ? 2024-25ನೇ ಸಾಲಿನಲ್ಲಿ ಪಾಕಿಸ್ತಾನದ ಕೇಂದ್ರ ಸರಕಾರ ಮಂಡಿಸಿದ ಬಜೆಟ್‌ನ ಗಾತ್ರ 4.5 ಲಕ್ಷ ಕೋಟಿ ಭಾರತೀಯ ರುಪಾಯಿ! ಅಂದರೆ ಭಾರತದ ಮುಕೇಶ್ ಅಂಬಾನಿಯೊಬ್ಬರೇ ಪಾಕಿಸ್ತಾನದ ಒಂದಿಡೀ ವರ್ಷದ ವಾರ್ಷಿಕ ಆದಾಯದ ದುಪ್ಪಟ್ಟು ಬೆಲೆಬಾಳುತ್ತಾರೆ. ನಾವು ಭಾರತೀಯರು ಮುಕೇಶ್ ಅಂಬಾನಿಯನ್ನು ಕೇವಲ ದುಡ್ಡಿನಲ್ಲಿ ಅಳೆಯುವುದಿಲ್ಲ ಅಥವಾ ಅವರನ್ನೊಬ್ಬ ಉದ್ಯಮಿಯಾಗಿ ಮಾತ್ರ ನೋಡುವುದಿಲ್ಲ. ಅವರು ಸ್ವತಃ ಒಂದು ಔದ್ಯೋಗಿಕ ವಿಶ್ವವಿದ್ಯಾಲಯ ಇದ್ದಂತೆ. ನಮಗೆ ಅವರ ಬಗ್ಗೆ ಬಹಳ ಹೆಮ್ಮೆಯಿದೆ. ಹೋಗಲಿ ಬಿಡಿ, ನಿಮ್ಮ ಕ್ಷಿಪಣಿಗಳು ಜಾಮ್‌ನಗರಕ್ಕೆ ಬಂದು ತಲುಪುವವರೆಗೆ ನಾವು ಆಕಾಶ ನೋಡುತ್ತಾ ಸುಮ್ಮನೆ ಕುಳಿತಿರುತ್ತೇವೆ ಎಂದುಕೊಂಡಿರಾ? ನೀವು ಊಹೆ ಕೂಡ ಮಾಡಲಾರದ ರೀತಿಯಲ್ಲಿ ತಿರುಗಿಸಿ ಹೊಡೆಯುತ್ತೇವೆ! ಯಾಕೆ ಸುಖಾಸುಮ್ಮನೆ ಮೂರ್ಖತನದ ಹೇಳಿಕೆಗಳನ್ನು ನೀಡಿ ಸಣ್ಣವರಾಗುತ್ತೀರಿ?

ಮೂರ್ಖತನದ ಬಗ್ಗೆ ಮಾತನಾಡುವಾಗ ನನಗೆ ನಿಮ್ಮದೇ ದೇಶದ ಮಾಜಿ ಮಂತ್ರಿ ಶೇಖ್ ರಶೀದ್‌ರ ನೆನಪಾಗುತ್ತದೆ. ಪಾಕಿಸ್ತಾನ ಒಂದು ವಿಶಿಷ್ಟ ಆಟಂ ಬಾಂಬ್ ತಯಾರಿಸಿದೆ, ಅದು ಕಾಲು ಕೆ.ಜಿ. ತೂಗುತ್ತದೆ, ಅದಕ್ಕೆ ಯಾರು ಯಾವ ಧರ್ಮದವರು ಎಂದು ಗುರುತಿಸಿ ದಾಳಿ ನಡೆಸುವ ಸ್ವಯಂಶಕ್ತಿಯಿದೆ ಎಂದು ರಶೀದ್ ಹಿಂದೊಮ್ಮೆ ಬುರುಡೆ ಬಿಟ್ಟಿದ್ದರು! ಎಂಥಾ ಅಜ್ಞಾನಿಯಾಗಿದ್ದ ಆ ಮನುಷ್ಯ! ಆತ ಈಗ ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಹೋಗಲಿ ಬಿಡಿ, ನಿಮ್ಮ ಬಗ್ಗೆಯೇ ಮಾತನಾಡೋಣ. ಈಗ ನೀವು ಹಾಕುತ್ತಿರುವ ಪರಮಾಣು ಬಾಂಬ್ ದಾಳಿಯ ಬೆದರಿಕೆ ಕೂಡ ಹೊಸದಲ್ಲ. ''ನಾವಂತೂ ಮುಳುಗುತ್ತೇವೆ, ಜತೆಗೆ ನಿಮ್ಮನ್ನೂ ಮುಳುಗಿಸುತ್ತೇವೆ'' ಎಂಬ ಮಾತಿನಂತೆ ನಿಮ್ಮ ಬೆದರಿಕೆಯಿದೆ. ನಾವು ಶಾಂತಿ ಕಾಪಾಡುವ ಉದ್ದೇಶದಿಂದ ಅಣ್ವಸ್ತ್ರಗಳನ್ನು ಇರಿಸಿಕೊಂಡಿದ್ದೇವಾದರೂ ಕನಿಷ್ಠ ಪಕ್ಷ ಅವುಗಳ ಪ್ರಮಾಣವನ್ನು ಒಮ್ಮೆ ಗಮನಿಸಿ. ಪಾಕಿಸ್ತಾನದ ಬಳಿಯಿರುವ ಇಷ್ಟೇ ಇಷ್ಟು ಅಣ್ವಸ್ತ್ರಕ್ಕೆ ನಮ್ಮಲ್ಲಿರುವ ಅಣ್ವಸ್ತ್ರಗಳನ್ನು ಹೋಲಿಕೆ ಕೂಡ ಮಾಡಲು ಸಾಧ್ಯವಿಲ್ಲ. ಏನೋ ಎಡವಟ್ಟಾಗಿ ಭಾರತ ಮತ್ತು ಪಾಕಿಸ್ತಾನ ದೇಶಗಳು ಅಣ್ವಸ್ತ್ರಗಳನ್ನು ಬಳಸಿ ಯುದ್ಧ ಮಾಡಿದವು ಅಂತಲೇ ಇಟ್ಟುಕೊಳ್ಳಿ. ಆಗ ನಮ್ಮ ದೇಶದ ಒಂದಷ್ಟು ಭಾಗಗಳಾದರೂ ಉಳಿದುಕೊಳ್ಳುತ್ತವೆ. ಆದರೆ, ''ತೇರಾ ಕ್ಯಾ ಹೋಗಾ ಕಾಲಿಯಾ!'' ನಿಮ್ಮ ದೇಶದ ಕತೆ ಏನಾಗುತ್ತದೆಯೆಂದು ಗೊತ್ತಲ್ಲವೇ? ಪಾಕಿಸ್ತಾನವೆಂಬ ಒಂದು ದೇಶ ಇಲ್ಲಿತ್ತು ಎಂದು ವಿಶ್ವದ ಭೂಪಟದಲ್ಲಿ ಮಕ್ಕಳು ಗುರುತಿಸುವುದಕ್ಕೂ ಪರದಾಡುವ ಸ್ಥಿತಿ ಬರುತ್ತದೆ, ನೆನಪಿರಲಿ!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

- **ಸತೀಶ್ ಎಲ್.ವಿ., ಮೈಸೂರು**
ಭಟ್ರೇ, ಹುಡುಗಿಯರ ನೋಟ ಏಕೆ ಅಷ್ಟೊಂದು ಭಯಂಕರ?
– **ಅದು ನೋಡುವವರನ್ನು ಅವಲಂಬಿಸಿರುತ್ತದೆ!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಅಸ್ಥಿಪಂಜರ ಸಿಗದೇ ಹೋದರೂ ಆ ಅನಾಮಿಕ ಯಾಕೆ ಇನ್ನೂ ಅಗೆಸುತ್ತಿದ್ದಾನೆ?
– **ಅದಾಯ್ತು.. ಅಗೆಯುವವರಿಗೂ ಬುದ್ಧಿ ಇಲ್ಲವಾ? ನಿಧಿ ಸಿಗಬಹುದು ಅಂತ ಅಗೆಯುತ್ತಿದ್ದಾರಾ?**

- **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, 'ಒಳ್ಳೆಯ ಹುಡುಗ' ಬಿರುದನ್ನು ನಿಮಗೆ ಕೊಟ್ಟರೆ ಹೇಗೆ?
– **ಸುಮ್ನಿರ್ತೀರ್ಯಾ.. ಜೀವನದಲ್ಲಿ ಸ್ವಲ್ಪ ಕೆಟ್ಟ ಕೆಲಸ ಮಾಡೋಣ ಅಂತಿದೀನಿ!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹಣ ಗಳಿಸುವಾಗ ಇರುವ ಶಕ್ತಿ ಅದನ್ನು ಅನುಭವಿಸುವಾಗ ಇರುವುದಿಲ್ಲವಲ್ಲ?
– **ಗಳಿಸುವ ಶಕ್ತಿಯಂತೆ ಅನುಭವಿಸುವ ಶಕ್ತಿಯನ್ನೂ ಬೆಳೆಸಿಕೊಳ್ಳಬೇಕು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಕಾಶ್ಮೀರ ಫೈಲ್ಸ್, ಕೇರಳ ಫೈಲ್ಸ್, ಉದಯಪುರ ಫೈಲ್ಸ್ ಸಿನಿಮಾ ಮಾಡಿದಂತೆ ಇನ್ಯಾವ ಸಿನಿಮಾ ಮಾಡಬಹುದು?
– **ಅಶ್ವತ್ಥ್ ನಾರಾಯಣ 'ಕಲಬುರ್ಗಿ ಫೈಲ್ಸ್' ಸಿನಿಮಾ ಮಾಡಬಹುದೇನೋ?!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ರಾಜಮೌಳಿಯ ವಿಎಫ್‌ಎಕ್ಸ್‌ಗಿಂತ ಹೆಚ್ಚು ಸುದ್ದಿ ಮಾಡುತ್ತಿರುವುದೇನು?
– **ನಟಿ ಭಾವನಾಳ ಐವಿಎಫ್!**

- **ಸಂಜಯನಗರ ಕಿಟ್ಟಿ, ಬೆಂಗಳೂರು**
ಭಟ್ರೇ, ಬೆಂಗಳೂರಿನ ಹೆಬ್ಬಾಳ ಮೇಲ್ಸೇತುವೆಯನ್ನು ಕಾಲಾಂತರದಲ್ಲಿ ಡಿಕೆಶಿ ಅಭಿಮಾನಿಗಳು ಏನೆಂದು ಆಡಿಕೊಂಡಾರು?
– **ಹೆಬ್ಬಾಳ್ಕರ್ ಮೇಲ್ಸೇತುವೆ ಎನ್ನಲಿಕ್ಕಿಲ್ಲ!**

- **ರಾಘಣ್ಣ, ಮೈಸೂರು**
ಭಟ್ರೇ, ಪುಸ್ತಕಮನೆ ಹರಿಹರಪ್ರಿಯ, ರವಿ ಹಂಜ್ ಕೈಲಿ ಬೈಸಿಕೊಳ್ಳುವವರು ಯಾಕೆ ಸಮಾಧಾನಚಿತ್ತರಾಗಿರುತ್ತಾರೆ?
– **ಬೈಗುಳದಲ್ಲೂ ಒಂದು ತರಹ ಹಿತ!**

- **ಬಿ.ಎಸ್.ನಾಡಗೌಡರ, (ಇಮೇಲ್ ಮೂಲಕ)**
ಭಟ್ರೇ, ಅಮೃತ ನುಂಗಿದವ ದೇವ, ವಿಷ ನುಂಗಿದವ ಮಹಾದೇವ, ನೋವು ನುಂಗಿದವ?
– **'ದೇವೇ'ಗೌಡ!**

ಇವು ಯಾರ ಜಪ್ತಿಗೂ ಸಿಗದ ನವಿಲುಗಳು!

ಕಾಡುದಾರಿ

ಹರೀಶ್ ಕೇರ
vveditoped@gmail.com

ಬೆಂಗಳೂರಿನ ನಮ್ಮ ಮನೆಯ ಪಕ್ಕದಲ್ಲೇ ಒಂದೆರಡು ಖಾಲಿ ಸೈಟುಗಳಿವೆ. ಅಲ್ಲಿ ಒಂದಿಷ್ಟು ಹುಲ್ಲು, ಗಿಡ, ಮರ ಬೆಳೆದುಕೊಂಡಿವೆ. ಒಂದು ದಿನ ಬೆಳಗ್ಗೆ ಬೀದಿನಾಯಿಗಳು ಸೇರಿಕೊಂಡು ಏನನ್ನೋ ಗುರಾಯಿಸುತ್ತಿದ್ದವು. ಕುತೂಹಲದಿಂದ ನೋಡಿದರೆ ಒಂದು ಗಂಡು ನವಿಲು. ತನ್ನ ಇಷ್ಟುದ್ದದ ರೆಕ್ಕೆಗಳನ್ನು ನೀಳವಾಗಿ ಬಿಟ್ಟುಕೊಂಡು ಕಂಪೌಂಡ್ ಮೇಲೆ ಕೂತಿತ್ತು. ನಾಯಿಗಳು ಹೊರಟುಹೋದ ಬಳಿಕ ತನ್ನ ಪಾಡಿಗೆ ಹೋಗಬಹುದು ಎಂದುಕೊಂಡೆ. ಒಂದೆರಡು ದಿನ ಕಳೆದ ನಂತರವೂ ಅದು ಅಲ್ಲಿಯೇ ಓಡಾಡುತ್ತಿತ್ತು. ಒಂದು ವಾರ ಕಳೆದ ನಂತರ, ಪಕ್ಕದಲ್ಲೇ ಇದ್ದ ಮಾರ್ವಾಡಿಯ ಮನೆಯೊಂದರ ಟೆರೇಸಿನಲ್ಲಿ ಒಣಹಾಕಿದ್ದ ಮೆಣಸನ್ನು ರಾಜಾರೋಷವಾಗಿ ತಿಂದುಹೋಯಿತು. ಮೊನ್ನೆ ನೋಡಿದರೆ ಒಂದು ಪುಟ್ಟ ನಾಯಿಮರಿಯನ್ನು ಅಟ್ಟಾಡಿಸಿಕೊಂಡು ಹೋಗಿ ಕುಕ್ಕುತ್ತಿತ್ತು. ಆ ಮರಿಯ ಜಾತಿಬಾಂಧವರು ಸಹಾಯಕ್ಕೆ ಬಾರದೇ ಹೋಗಿದ್ದರೆ ಬಹುಶಃ ಹಳೆಯ ಸೇಡು ತೀರಿಸಿಯೇ ಬಿಡುತ್ತಿತ್ತೋ ಏನೋ. ಇದೀಗ ಆ ಖಾಲಿ ಸೈಟುಗಳ ಅಕ್ಕಪಕ್ಕದ ಮನೆಯವರು ತಮ್ಮ ಮನೆಯಲ್ಲಿರುವ ಬೆಕ್ಕಿನ ಮರಿಗಳನ್ನು ಕಟ್ಟೆಚ್ಚರದಿಂದ ನೋಡಿಕೊಳ್ಳುತ್ತಿದ್ದಾರೆ ಎಂಬ ಸುದ್ದಿ.

ಸುತ್ತಮುತ್ತ ಕಟ್ಟಡಗಳೇ ಇರುವ, ಎಲ್ಲೂ ಕಾಡಿಲ್ಲದ ಈ ನಗರದ ನಡುವೆ ಈ ನವಿಲು ಎಲ್ಲಿಂದ ಬಂತು ಎಂಬುದು ಕುತೂಹಲದ ಸಂಗತಿ. ಅಲ್ಲಿಂದ ಒಂದೆರಡು ಕಿಲೋಮೀಟರ್ ದೂರದಲ್ಲಿ ಒಂದು ಸಣ್ಣ ಗುಡ್ಡವೂ ನೈಸ್ ರಸ್ತೆಯ ಆಸುಪಾಸಿನ ಕುರುಚಲು ಕಾಡೂ ಇದೆ. ಅಲ್ಲಿ ಒಂದಷ್ಟು ನವಿಲುಗಳಿವೆ. ಸಂಜೆ ಆ ಪ್ರದೇಶದಲ್ಲಿ ವಾಕಿಂಗ್‌ಗೆ ಹೋದವರಿಗೆ ಹತ್ತಾರು ನವಿಲುಗಳ ಕೂಗು, ಗಂಡು ನವಿಲುಗಳ ಲೈಂಗಿಕ ಸಾಹಸದ ರಣಕೇಕೆಗಳು ಕೇಳಿಸುತ್ತವೆ. ಅಲ್ಲಿಂದ ತಪ್ಪಿಸಿಕೊಂಡು ಬಂದ ಈ ನವಿಲು ಎರಡೇ ಸೈಟುಗಳ ಖಾಲಿ ಪ್ರದೇಶದಲ್ಲಿ ಬಾಡಿಗೆ ಮನೆ ಮಾಡಿದೆ. ಬಹುಶಃ ಅಲ್ಲಿಯೇ ಅದು ಮುಂದೆ ಸಂಸಾರವನ್ನೂ ಹೂಡಬಹುದು. ನಗರವಾಸಿಗಳು ಗಂಡು ನವಿಲುಗಳ ಪುರುಷತ್ವ ಪ್ರದರ್ಶನದ ನರ್ತನದ ಪುಗಸಟ್ಟೆ ಆನಂದವನ್ನೂ ಅನುಭವಿಸಬಹುದು.

ಗಂಡು ನವಿಲನ್ನು ಮೊದಲ ಬಾರಿಗೆ ನೋಡುವಾಗ ಖುಷಿಯಾಗುತ್ತದೆ. ಅದು ಕುಣಿವ ಪರಿ ಚಂದ. ಅದೇನೂ ನಿಮಗೆ ಖುಷಿಯಾಗಲಿ ಎಂದು ನರ್ತಿಸುವುದಿಲ್ಲ. ಅದರ ಪ್ರಧಾನ ಉದ್ದೇಶ ಹೆಣ್ಣನ್ನು ಸೆಳೆಯುವುದು. ತನ್ನ ಪುಕ್ಕಗಳು ಹೆಚ್ಚು ಉದ್ದವಾಗಿವೆ, ಹೆಚ್ಚು ಬಲಿಷ್ಠವಾಗಿವೆ ಎಂದು ಸಾಬೀತುಪಡಿಸಿದರಷ್ಟೇ ಆ ಗಂಡಿಗೆ ಹೆಣ್ಣಿನ ಅಂತರಂಗದ ವಲಯಕ್ಕೆ ಪ್ರವೇಶ. ಮೊನ್ನೆ ಹೀಗೇ ವಾಕ್ ಹೋದಾಗ ನೈಸ್ ರಸ್ತೆಯ ಪಕ್ಕದ ಕಾಡಿನ ಅಂಚಿನಲ್ಲಿ ಒಂದು ಗಂಡು ನವಿಲು ತನ್ನ ಪುಕ್ಕಗಳನ್ನೆಲ್ಲಾ ಕೆದರಿಕೊಂಡು 'ಝುಲ್ ಝುಲ್' ಎಂದು ಸದ್ದು ಮಾಡುತ್ತ ಸ್ವಲ್ಪ ದೂರದಲ್ಲಿದ್ದ ಹೆಣ್ಣನ್ನು ಸರಸಮಯ ಸಮಯಕ್ಕೆ ಆಹ್ವಾನಿಸುತ್ತಿತ್ತು. ವಾಕಿಂಗ್‌ಗೆ ಬಂದ ನಾಲ್ಕಾರು ಮಂದಿ ನವಿಲುಗಳ ಈ ತೀರಾ ಖಾಸಗಿ ಸಂಗತಿಯನ್ನು ಮೊಬೈಲ್‌ಗಳಲ್ಲಿ ವಿಡಿಯೋ ಮಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿ ನರಪೇತಲ ಬೀದಿನಾಯಿಯೊಂದು ಹೆಣ್ಣು ನವಿಲಿನ ಮೇಲೆ ದಾಳಿ ಮಾಡಲು ಸಮೀಪಿಸಿತು. ಗಂಡು ನವಿಲು ರೋಷಾವೇಶದಿಂದ ಆ ನಾಯಿಯನ್ನು ಅಟ್ಟಿಸಿಕೊಂಡು ಹೋಯಿತು. ಬಲಿಷ್ಠವಾಗಿದ್ದ ಈ ನವಿಲಿನ ಕೊಕ್ಕಿನ ಆಘಾತಕ್ಕೆ ಬೆದರಿ ಆ ನಾಯಿ ಸತ್ತೆನೋ ಕೆಟ್ಟೆನೋ ಎಂದು ಸ್ಥಳದಿಂದ ಪರಾರಿಯಾಯಿತು. ಪುಕ್ಕದ ಕೆದರುವಿಕೆಯ ಜತೆಗೆ ಹೆಣ್ಣನ್ನು ಇಂಪ್ರೆಸ್ ಮಾಡಲು ತನ್ನ ಕೊಕ್ಕಿನ ಶಕ್ತಿಯನ್ನೂ ಬಳಸಿಕೊಂಡು ಬೀಗಿದ ಆ ಗಂಡು, ಜತೆಗಿದ್ದ ಆ ಹೆಣ್ಣಿನ ಮನಸ್ಸನ್ನು ಗೆದ್ದುಕೊಂಡಿರಬಹುದು ಎಂಬುದು ನನ್ನ ಊಹೆ!

ಬೆಂಗಳೂರಿನಂಥ ಮೆಟ್ರೋ ನಗರದಲ್ಲಿ ಈ ಕತೆಯಾದರೆ, ಹಳ್ಳಿಗಳ ಕತೆಯೇನು? ಮೊದಲು ಅಭಯಾರಣ್ಯಗಳ ಸಂಗತಿ ನೋಡಿ. ಈಗ ನೀವು ನಾಗರಹೊಳೆ ಅಥವಾ ಬಂಡೀಪುರ ಕಡೆಗೆ ಹೋದರೆ, ಸಫಾರಿಯೇ ಹೋಗಬೇಕೆಂದಿಲ್ಲ, ಕಾಡಿನ ನಡುವೆ ಹಾದುಹೋಗುವ ರಸ್ತೆಯಲ್ಲಿ ಸುಮ್ಮನೇ ಹೋದರೂ ಸಾಕು ಹತ್ತಾರು ನವಿಲುಗಳು ಸ್ವಚ್ಛಂದವಾಗಿ ಓಡಾಡುವುದನ್ನು ಕಾಣಬಹುದು. ಮೊದಮೊದಲು ಇವುಗಳನ್ನು ನೋಡುತ್ತ ಆನಂದವಾಗಿತ್ತು. ನಾನು ಹುಟ್ಟಿ ಬೆಳೆದ ಮಲೆನಾಡಿನ ದಟ್ಟ ಕಾಡಿನ ಪರಿಸರದಲ್ಲಿ ನವಿಲಿನ ಸಂತತಿಯೇ ಇರಲಿಲ್ಲ. ಹೀಗಾಗಿ ಜೀವಂತ ನವಿಲು ನೋಡಲು ಸಿಕ್ಕಿದ್ದು ಮೈಸೂರಿನ ಮೃಗಾಲಯಕ್ಕೆ ಪ್ರವಾಸಕ್ಕೆ ಬಂದಾಗಲೇ. ಮೊದಲ ಬಾರಿ ಹೆಣ್ಣು ನವಿಲು ನೋಡಿ, ಅದಕ್ಕೆ ಬಾಲವಿಲ್ಲದ್ದನ್ನೂ ಅದು ಕುಣಿಯದೇ ಇದ್ದುದನ್ನೂ ಕಂಡು, ಈ ಕವಿಗಳೆಲ್ಲಾ ವರ್ಣಿಸಿದ್ದು ಹಸಿಸುಳ್ಳು ಎನಿಸಿ ಸಿಟ್ಟೇ ಬಂದಿತ್ತು.

ಇತ್ತೀಚೆಗೆ ಅವು ಹಳ್ಳಿಗಳಲ್ಲೂ ಪೇಟೆಗಳಲ್ಲೂ ಬೀದಿನಾಯಿಗಳ ಥರ ರಸ್ತೆ ಬದಿಯಲ್ಲೇ ಅಬ್ಬೇಪಾರಿಗಳಂತೆ ಓಡಾಡುವುದನ್ನು ಕಂಡರೆ ಜುಗುಪ್ಸೆಯೇ ಉಕ್ಕುತ್ತದೆ. ಜುಗುಪ್ಸೆ ನವಿಲುಗಳ ಬಗೆಗಲ್ಲ, ಈ ಹಕ್ಕಿಗಳು ಸೂಚಿಸುತ್ತಿರುವ ನಮ್ಮ ಪರಿಸರದ ದುಃಸ್ಥಿತಿಯ ಬಗೆಗೆ. ಇಷ್ಟುದ್ದ ಭಾರದ ತಮ್ಮ ದೇಹವನ್ನು ಹೊತ್ತುಕೊಂಡು ಓಡಾಡಬೇಕಾದ, ಮರದಿಂದ ಮರಕ್ಕೆ ಹಾರುವ ಶಕ್ತಿಯಿಲ್ಲದ, ಬೀದಿನಾಯಿಗಳಿಂದ ತಪ್ಪಿಸಿಕೊಳ್ಳಲು ಪರದಾಡುವ ಈ ಹಕ್ಕಿಗಳು ಇಷ್ಟೊಂದು ಸಂಖ್ಯೆಯಲ್ಲಿ ನಮ್ಮ ಹಳ್ಳಿಗಳ ನಡುವೆ ಬಂದುದಾದರೂ ಹೇಗೆ?

ಮಲೆನಾಡು-ಬಯಲುಸೀಮೆ ನಡುವಿನ ಹಲವು ಹಳ್ಳಿಗಳಲ್ಲಿ ಈಗ ರೈತರು ಅತಿ ಹೆಚ್ಚು ಗಾಬರಿಯಾಗುತ್ತಿರುವುದು ನವಿಲುಗಳ ಬಗ್ಗೆ. ತೋಟ, ಹೊಲಗಳಿಗೆ ನುಗ್ಗಿ ಬೆಳೆಯನ್ನು ತಿಂದು ಮುಗಿಸುತ್ತಿವೆ. ರಾಗಿ, ಅವರೆಕಾಯಿ, ಹುರುಳಿ, ಭತ್ತ, ಹೆಸರು, ಟೊಮೆಟೊ, ಮೆಣಸಿನಕಾಯಿ ಸೇರಿದಂತೆ ಎಲ್ಲಾ ಬೆಳೆಗಳೂ ಕಾಳು ಕಟ್ಟುವ ಹಂತದಲ್ಲೆ ನವಿಲುಗಳಿಂದ ಸ್ವಾಹಾ. ಇದನ್ನು ಮನುಷ್ಯ-ವನ್ಯಮೃಗ ಸಂಘರ್ಷ ಎಂದು ಕರೆಯೋಣವೆ? ಊಹೂಂ, ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಕಾಡಾನೆ, ಜಿಂಕೆ, ಹಂದಿ ಸೇರಿದಂತೆ ಇತರ ಕಾಡು ಪ್ರಾಣಿಗಳಿಂದ ಸಂಭವಿಸುವ ಬೆಳೆಹಾನಿಗೆ ಅರಣ್ಯ ಇಲಾಖೆಯಿಂದ ರೈತರಿಗೆ ಪರಿಹಾರ ನೀಡಲಾಗುತ್ತದೆ. ಆದರೆ ನವಿಲಿನಿಂದ ಸಂಭವಿಸುವ ಬೆಳೆಹಾನಿಗೆ ಯಾವುದೇ ಪರಿಹಾರ ಇಲ್ಲ.

ಕ್ರಿಮಿಕೀಟ, ಹಾವುಗಳನ್ನು ಭಕ್ಷಿಸುವ ನವಿಲು ರೈತನ ಮಿತ್ರ ಅಲ್ಲವೆ? ಅದು ಯಾವಾಗಿನಿಂದ ಶತ್ರುವಾಯಿತು ಎಂದು ನೀವು ಕೇಳಬಹುದು. ಪರಿಸರದ ಆಹಾರ ಸರಪಳಿ ಸರಿಯಾಗಿ ಇದ್ದಾಗ ಎಲ್ಲವೂ ಚೆನ್ನಾಗಿಯೇ ನಡೆದುಕೊಂಡು ಹೋಗುತ್ತದೆ. ಒಮ್ಮೆ ಆ ಸರಪಳಿ ತುಂಡಾಯಿತೆಂದರೆ ಸಮಸ್ಯೆ ಶುರು. ನವಿಲುಗಳು ಇಲಿ, ಹೆಗ್ಗಣ, ಹಾವುಗಳಿಂದ ಹಿಡಿದು ಅಕ್ಕಿ, ರಾಗಿಯವರೆಗೆ ಎಲ್ಲವನ್ನೂ ತಿನ್ನುತ್ತವೆ. ಹೀಗಾಗಿ ಇವು ಒಂಥರಾ ಮನುಷ್ಯನಂತೆಯೇ ಆಹಾರ ಸರಪಳಿಯ ಮೇಲ್ಭಾಗದಲ್ಲಿವೆ. ನವಿಲುಗಳನ್ನು ಭಕ್ಷಿಸಬಲ್ಲಂಥವು ಹುಲಿ, ಚಿರತೆ, ಕಾಡು ನಾಯಿ, ನರಿ, ತೋಳ ಮಾತ್ರ. ಊರಿನ ನಾಯಿಗಳಿಗೆ ಬೇಟೆಯಾಡಿ ಅಭ್ಯಾಸ ಇರುವುದಿಲ್ಲವಾದ್ದರಿಂದ ಸುಲಭವಾಗಿ ಹಿಡಿಯಲಾರವು. ಇನ್ನು ಮನುಷ್ಯ ನವಿಲನ್ನು ಕೊಂದರೆ ಜೈಲುವಾಸ ಖಚಿತ. ಹೀಗಾಗಿ ಇವು ಎಗ್ಗಿಲ್ಲದೆ ಹೆಚ್ಚಿಕೊಂಡಿವೆ. ಇದು ಈ ಹಕ್ಕಿಗಳ ಹೆಚ್ಚಳದ ಒಂದು ಮುಖ.

ತಜ್ಞರು ಈ ಬೆಳವಣಿಗೆಯ ಇನ್ನೊಂದು ಆತಂಕಕಾರಿ ಆಯಾಮವನ್ನು ಮುಂದಿಡುತ್ತಾರೆ. ಇದೇನೂ ಹೊಸ ವಿಚಾರವಲ್ಲ. 2020ರಲ್ಲೇ ಬಿಡುಗಡೆಯಾದ 'ಭಾರತದ ಪಕ್ಷಿಗಳ ಸ್ಥಿತಿಗತಿ' ಎಂಬ ವರದಿಯ ಪ್ರಕಾರ ಕಳೆದ 30 ವರ್ಷಗಳಲ್ಲಿ ಕರ್ನಾಟಕದಲ್ಲಿ ನವಿಲುಗಳ ಸಂಖ್ಯೆಯಲ್ಲಿ ಶೇ. 491ರಷ್ಟು ಏರಿಕೆಯಾಗಿದೆ! ಇದೇ ಕಾಲಕ್ಕೆ ದೇಶದಲ್ಲಿ ಒಟ್ಟಾರೆಯಾಗಿ ನವಿಲುಗಳ ಏರಿಕೆ ಶೇ. 149ರಷ್ಟು. ಕಳೆದ 7-8 ವರ್ಷಗಳಲ್ಲಿ ಸುಮಾರು ಶೇ. 400ರಷ್ಟು ಏರಿಕೆ ಕಂಡುಬಂದಿದೆಯಂತೆ. ಇದಕ್ಕಿರುವ ಇನ್ನೊಂದು ಕೋನವೆಂದರೆ, ಇತರ ಹಲವಾರು ಜಾತಿಯ ಪಕ್ಷಿಗಳ ಸಂಖ್ಯೆಯಲ್ಲಿನ ಕುಸಿತ. ಅಂದರೆ ಬೇರೆ ಹಕ್ಕಿಗಳ ಜಾಗವನ್ನು ಕೂಡ ನವಿಲು ಆಕ್ರಮಿಸಿಕೊಳ್ಳುತ್ತಿದೆ. ಇದು ಜೀವವೈವಿಧ್ಯಕ್ಕೆ ಪೂರಕ ಅಲ್ಲವೇ ಅಲ್ಲ.

ಚಾರ್ಲ್ಸ್ ಡಾರ್ವಿನ್ನನ 'ಸರ್ವೈವಲ್ ಆಫ್ ದಿ ಫಿಟ್ಟೆಸ್ಟ್' ತತ್ವಕ್ಕೆ ನವಿಲು ಉದಾಹರಣೆ. ಫಿಟ್ ಎಂದರೆ ಬಲಿಷ್ಠ ಎಂದಲ್ಲ, 'ಪರಿಸರಕ್ಕೆ ತಕ್ಕಂತೆ ಬದಲಾಗಬಲ್ಲ ಗುಣ ಹೊಂದಿದ' ಎಂದರ್ಥ. ನವಿಲು ತಾನಿರುವ ಪರಿಸರಕ್ಕೆ ಸಂಪೂರ್ಣ ಹೊಂದಿಕೊಂಡು ಬದುಕಬಲ್ಲದು. ನಗರಗಳ ಖಾಲಿ ಸೈಟುಗಳಲ್ಲಿ ಬಿಡಾರ ಹೂಡಿ ಬದುಕಿಕೊಂಡಿರುವುದೇ ಅದಕ್ಕೆ ಸಾಕ್ಷಿ. ನಗರಗಳಲ್ಲಿ ಅದು ಏನನ್ನು ಭಕ್ಷಿಸಿ ಬದುಕುತ್ತದೆ ಎಂಬುದೊಂದು ಪ್ರಶ್ನೆ. ಅದರ ಆಹಾರವಾದ ಇಲಿ, ಹೆಗ್ಗಣಗಳು ಪುಷ್ಕಳವಾಗಿ ಸಿಗುತ್ತಿರಬೇಕು. ಇದರಲ್ಲಿ ಸಂಶಯವಿಲ್ಲ ಯಾಕೆಂದರೆ ನಾವು ತಿಂದು ಹೆಚ್ಚಾಗಿ ಎಸೆಯುವ ಆಹಾರ, ಬೇಳೆಕಾಳು ಮತ್ತಿತರ ಆಹಾರಗಳಿಂದ ಇಲಿ, ಹೆಗ್ಗಣಗಳು ಹೆಚ್ಚಿಕೊಂಡಿವೆ. ಇಲಿಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಹಾವುಗಳೂ ಹೆಚ್ಚುವುದು ಸ್ವಾಭಾವಿಕ. ಬೀದಿನಾಯಿಗಳೇನೂ ಇಲಿ-ಹಾವುಗಳನ್ನು ತಿನ್ನುವುದಿಲ್ಲವಲ್ಲ. ಇವುಗಳ ನಿಯಂತ್ರಣಕ್ಕೆ ನವಿಲೇ ಆಗಬೇಕಷ್ಟೆ.

ವಿಸ್ತಾರವಾದ ಆಯಾಮದಿಂದ ನೋಡಿದರೆ ಈ ಬೆಳವಣಿಗೆ ನಮ್ಮ ಪರಿಸರದ ಆರೋಗ್ಯದ ಕುಸಿತವನ್ನೂ ಸೂಚಿಸುವಂಥದು. ನವಿಲುಗಳು ಒಣಕಾಡುಗಳಲ್ಲಿ ಬದುಕುವ ಪಕ್ಷಿಗಳು. ಮಲೆನಾಡಿನಲ್ಲೂ ಇವುಗಳ ಸಂಖ್ಯೆಯ ಏರಿಕೆಯಾಗುತ್ತಿರುವುದು ಏನನ್ನು ಸೂಚಿಸುತ್ತಿದೆ? ಮಲೆನಾಡು ಕೂಡ ಒಣಭೂಮಿಯಾಗುತ್ತಿದೆ ಎಂಬುದನ್ನೇ ಹೊರತು ಇನ್ನೇನಲ್ಲ. ಈಗ ಭಯಂಕರ ಮಳೆ ಸುರಿಯುತ್ತಿರುವ ಮಲೆನಾಡನ್ನು ನೀವು ಏಪ್ರಿಲ್-ಮೇ ತಿಂಗಳಲ್ಲಿ ಒಂದು ಸಲ ಹೊಕ್ಕು ನೋಡಿ. ಹಳ್ಳಕೊಳ್ಳಗಳು ಬತ್ತಿ ಗಾಬರಿಯಾಗಿ ಕಂಗೆಡುವಷ್ಟು ಒಣಗುತ್ತವೆ. ಅವು ನಿಧಾನವಾಗಿ ಮರುಭೂಮಿಗಳಾಗುತ್ತಿವೆ. ಹಾಗಾದರೆ ಜೂನ್-ಜುಲೈನಲ್ಲಿ ಸುರಿದ ಮಳೆಯೆಲ್ಲ ಎಲ್ಲಿ ಹೋಯಿತು? ಅದನ್ನು ನಾವು ಗೌರವಪೂರ್ವಕವಾಗಿ ಸಮುದ್ರಕ್ಕೆ ಕಳಿಸಿಕೊಟ್ಟೆವು. ನೀರು ಇಂಗಬೇಕಾದ ಜಾಗಗಳಲ್ಲಿ ಕಾಂಕ್ರೀಟು, ಡಾಮರು ಮೆತ್ತಿದೆವು. ಚಳಿಗಾಲದಲ್ಲಿ ಬೆಚ್ಚಗಿರಲು ಕಂಬಳಿಗಳು ಬೇಕಾಗುತ್ತಿದ್ದವು. 'ಒಂದು ಕಂಬಳಿ ಚಳಿ, ಎರಡು ಕಂಬಳಿ ಚಳಿ' ಎಂಬ ನುಡಿಗಟ್ಟುಗಳನ್ನು ನೀವು ಕೇಳಿರಬಹುದು. ಈಗ ಮಲೆನಾಡಿನಲ್ಲಿ ಚಳಿಯೇ ಇರುವುದಿಲ್ಲ.

ಹಾಗಾದರೆ ಪ್ರತಿಯೊಂದು ಪ್ರಾಣಿ, ಪಕ್ಷಿ, ಕ್ರಿಮಿಕೀಟದ ಸಂಖ್ಯೆಯ ಏರಿಕೆ ಅಥವಾ ಇಳಿಕೆಯೂ ಪರಿಸರದ ಒಂದೊಂದು ಬದಲಾವಣೆಯ ಸೂಚಕವೇ? ಹೌದು. ಜೇನುಹುಳಗಳು, ಗುಬ್ಬಚ್ಚಿಗಳು, ಕಾಗೆಗಳು ಕಡಿಮೆಯಾಗುತ್ತಿವೆ. ಪಾರಿವಾಳಗಳ ಸಂಖ್ಯೆ ಏರಿಕೆಯಾಗುತ್ತಿದೆ. ಇವುಗಳಂತೂ ಆಧುನಿಕ ಹಾಗೂ ಪಾರಂಪರಿಕ ಕಟ್ಟಡಗಳನ್ನೆಲ್ಲಾ ಹಿಕ್ಕೆಯಿಂದ ತುಂಬಿಸಿ ಅವುಗಳ ಅಂದ-ಚಂದವನ್ನೆಲ್ಲ ಸರ್ವನಾಶ ಮಾಡುವಷ್ಟು ಹೆಚ್ಚಿಕೊಂಡಿವೆ. ಅವೂ ಮನುಷ್ಯನಿಗೆ ಹೊಂದಿಕೊಂಡಿವೆ. ನವಿಲುಗಳೂ ಇನ್ನು ಕೆಲದಿನಗಳಲ್ಲಿ ಪಾರಿವಾಳಗಳಷ್ಟು ಸರ್ವೇಸಾಮಾನ್ಯ ಆಗಲಿವೆ.

ಒದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಖರ್ಚು ಯಾರ ಬುರುಡೆಗೆ?

ಧರ್ಮಸ್ಥಳದಲ್ಲಿ ಶವಗಳನ್ನು ಹೂತಿದ್ದೇನೆಂದು ಬುರುಡೆ ಬಿಟ್ಟವನ ಮಾತನ್ನು ನಂಬಿ ಸರಕಾರವು ನಡೆಸಿದ ಬುರುಡೆ ಶೋಧದ ಖರ್ಚನ್ನು ಯಾರ ಬುರುಡೆ ಭರಿಸುತ್ತದೆ ಎಂಬುದೀಗ ಪ್ರಶ್ನೆಯಾಗಿದೆ. ಏಕೆಂದರೆ, ಬುರುಡೆ ಶೋಧವೆಂಬ ಸರಕಾರಿ ಮಟ್ಟದಲ್ಲಿನ ಮಹತ್ತರ ಕೆಲಸಕ್ಕೆ ತುಂಬಾ ಖರ್ಚಾಗಿದೆ ಅಂತ ಈಗಾಗಲೇ ಕೆಲವು ಸುದ್ದಿಗಳು ಪ್ರಚಾರದಲ್ಲಿವೆ. ದಿನವೊಂದಕ್ಕೆ ಲಕ್ಷ ರುಪಾಯಿ ದಾಟಿದ ಖರ್ಚಿನಿಂದಾಗಿ ಈವರೆಗಿನ ವೆಚ್ಚವು ಕೋಟಿಯನ್ನು ದಾಟಿದೆ ಎಂಬ ಸುದ್ದಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಅದೆಷ್ಟೇ ಇರಲಿ, ಆ ಖರ್ಚನ್ನು ಸರಕಾರವೇ ಭರಿಸುತ್ತದಾ ಅಥವಾ ಯಾರದಾದರೂ 'ಬುರುಡೆ'ಗೆ ಅದನ್ನು ಕಟ್ಟಲಾಗುತ್ತದಾ? ಎಂಬುದು ಪ್ರಶ್ನೆ. ಏಕೆಂದರೆ, ಅನಾಮಿಕನೊಬ್ಬ 'ಅಲ್ಲಿ ಅಗೀರಿ, ಇಲ್ಲಿ ಅಗೀರಿ' ಅಂತ ಸಾಕಷ್ಟು ದಿನಗಳವರೆಗೆ ಕಂಡಕಂಡಲ್ಲಿ ಅಗೆಸಿದ. ಅದರಿಂದಾಗಿ ಏನೆಲ್ಲಾ ಅಧ್ವಾನಗಳು ಆದವು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಅನಾಮಿಕನೊಬ್ಬ ವ್ಯವಸ್ಥೆಯನ್ನು ಹೀಗೂ ಅಲ್ಲಾಡಿಸಲು ಸಾಧ್ಯವೇ ಅಂತ ಜನರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಗಿದೆ.

ಸದ್ಯಕ್ಕೆ ಖರ್ಚಿನ ಬಾಬತ್ತಿನ ಕುರಿತೇ ಮಾತಾಡೋಣ. ಬುರುಡೆ ತಂದು ಬುರುಡೆ ಬಿಟ್ಟ ಆ ಅನಾಮಿಕನೇ ಇಷ್ಟೆಲ್ಲಾ ಖರ್ಚಿಗೆ ಕಾರಣ. ಆದ್ದರಿಂದ, ಈವರೆಗೆ ಆದ ಎಲ್ಲ ಖರ್ಚು-ವೆಚ್ಚಗಳನ್ನೂ ಅವನ ಬುರುಡೆಗೇ ಕಟ್ಟಬೇಕು. ಇಷ್ಟು ದಿನಗಳ ಸಮಯವನ್ನು ವ್ಯರ್ಥಮಾಡಿದ್ದಕ್ಕೂ ಆ 'ಅನಾಮಿಕ ಬುರುಡೆ'ಗೇ ದಂಡ ಹಾಕಬೇಕು, ಸರಕಾರ ಮತ್ತು ಕಾನೂನನ್ನು ಅವಮಾನಿಸಿದ್ದರಿಂದ ಸೂಕ್ತ ಶಿಕ್ಷೆಯನ್ನೂ ನೀಡಬೇಕು. ಅದನ್ನು ಬಿಟ್ಟು ಸರಕಾರವೇ 'ಬುರುಡೆ ಶೋಧ'ದ ಖರ್ಚನ್ನು ಭರಿಸಿದರೆ ಅದು ಜನತೆಗೆ ಮಾಡಿದ ದ್ರೋಹವಾಗುತ್ತದೆ. ಯಾರೋ ಅಡ್ಡಕಸುಬಿಗಳ ಅಜೆಂಡಾಕ್ಕೆ ವಶವಾಗಿ ಜನರ ದುಡ್ಡನ್ನು ಇಂಥ 'ಕೆಲಸಕ್ಕೆ ಬಾರದ' ಕೆಲಸಗಳಿಗೆ ವೆಚ್ಚಮಾಡುವುದು ಅಪವ್ಯಯವೇ ಸರಿ. ಜನರ ದುಡ್ಡನ್ನು ಇಂಥ ಕೆಲಸಗಳಿಗೆ ವಿನಿಯೋಗಿಸುವುದನ್ನು ಶ್ರೀ ಮಂಜುನಾಥಸ್ವಾಮಿ ಸುತರಾಂ ಒಪ್ಪುವುದಿಲ್ಲ.

ಬುರುಡೆ ಬಿಟ್ಟವನು (ಅವನಿಗೆ 'ಭೀಮ' ಎಂದು ಹೆಸರಿಸಿದ್ದು ಸರಿಯಲ್ಲ, ಮತ್ತಾವುದನ್ನಾದರೂ ಇಡಬೇಕಿತ್ತು!) ತಾನು ತಮಿಳುನಾಡಿನಲ್ಲಿ ಇದ್ದುದಾಗಿಯೂ, 2023ರಲ್ಲಿ ಒಂದು ಗುಂಪು ತನ್ನನ್ನು ಸಂಪರ್ಕಿಸಿದ್ದಾಗಿಯೂ ಒಪ್ಪಿಕೊಂಡ ಸುದ್ದಿ ವಾಹಿನಿಯೊಂದರಲ್ಲಿ ಬಿತ್ತರವಾಗಿದೆ. ಹಾಗೆ ಸಂಪರ್ಕಿಸಿದವರನ್ನು ಹುಡುಕಿ, ಬುರುಡೆ ಶೋಧಕ್ಕೆ ಆದ ಖರ್ಚಿನ ಎರಡು ಪಟ್ಟನ್ನು ಅವರಿಂದ ಸರಕಾರವು ವಸೂಲಿ ಮಾಡಿದರೆ, ಇಂಥ 'ಬುರುಡೆ' ಪ್ರಕರಣಗಳು ಮತ್ತೆಂದೂ ತಲೆಯೆತ್ತಲಾರವು.

– ಟಿ. ದೇವಿದಾಸ್, ಮಂಗಳೂರು

ಇದು ಪ್ರತಿಷ್ಠೆಯ ಕಾಳಗ

ಪೋಷಕರ ಪ್ರತಿಷ್ಠೆಯ ಕಾಳಗದಲ್ಲಿ ಅವರ ಮಕ್ಕಳು ಬಲಿಯಾಗುವಂತಾಗಿದೆ. ಭಗವಂತನು ನೀಡಿದ ವರವಾದ ಮುಗ್ಧ ಮನಸ್ಸಿನ ಹಸುಳೆಗಳು ಮಣಭಾರದ ಪುಸ್ತಕದ ಚೀಲವನ್ನು ಬೆನ್ನ ಮೇಲೆ ಹೊರುವ ಬಾಲಕಾರ್ಮಿಕರಾಗಿದ್ದಾರೆ. ಮೊದಲೆಲ್ಲಾ ಊರುಗಳಲ್ಲಿ ಸರಕಾರಿ ಶಾಲೆಯ ಜತೆಗೆ ಒಂದೆರಡು ಖಾಸಗಿ ಶಾಲೆಗಳಿರುತ್ತಿದ್ದವು; ಆದರೆ ಈಗ ಕಾಲ ಬದಲಾಗಿದೆ. ಗಲ್ಲಿ ಗಲ್ಲಿಗೊಂದು ಖಾಸಗಿ ಶಾಲೆಗಳು ಶುರುವಾಗಿವೆ. ಜತೆಗೆ ಅವಿಭಕ್ತ ಕುಟುಂಬಗಳು ಕಡಿಮೆಯಾಗಿ, ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಬದಲಾದ ಬದುಕಿನ ಶೈಲಿಯಿಂದಾಗಿ ಮಕ್ಕಳಿಗೆ ಅಜ್ಜ-ಅಜ್ಜಿಯ ಸಾಂಗತ್ಯ ಸಿಗುತ್ತಿಲ್ಲ. ಮುಂದೆ ಶಾಲೆಗೆ ಹೋಗಲು ಅಭ್ಯಾಸವಾಗಲೆಂದು 2-3 ವರ್ಷದ ಕಂದಮ್ಮಗಳನ್ನು ಪ್ಲೇಹೋಮ್‌ಗೆ ಸೇರಿಸಲಾಗುತ್ತಿದೆ; ಅವು ಅಳುತ್ತಲೇ ಕಷ್ಟಪಟ್ಟುಕೊಂಡು ಅಲ್ಲಿ ಏಗಿದ ನಂತರ ಎಲ್‌ಕೆಜಿ-ಯುಕೆಜಿ-ಒಂದನೇ ತರಗತಿ ಹೀಗೆ ಅಭ್ಯಾಸ ಶುರುವಾಗುತ್ತದೆ.

ಪೋಷಕರು ತಮ್ಮ ಪ್ರತಿಷ್ಠೆಯನ್ನು ಕಾಪಿಟ್ಟುಕೊಳ್ಳಲೆಂದು, ಪ್ರತಿಷ್ಠಿತ ಶಾಲೆಯನ್ನೇ ಹುಡುಕಿ, ಸಾಲವನ್ನಾದರೂ ಮಾಡಿ ಅಲ್ಲಿಗೆ ಮಕ್ಕಳನ್ನು ಸೇರಿಸುತ್ತಾರೆ. ಬೆಳ್ಳಂಬೆಳಗ್ಗೆಯೇ ಮಗುವನ್ನು ಎಬ್ಬಿಸಿ ಬ್ರೆಡ್-ಬಿಸ್ಕೆಟ್ ಅನ್ನೋ, ಎರಡು ನಿಮಿಷದ ಮ್ಯಾಗಿಯನ್ನೋ ಟಿಫಿನ್ ಬಾಕ್ಸ್‌ಗೆ ತುಂಬಿಸಿ ಮಗುವನ್ನು ಶಾಲೆಗೆ ಕಳಿಸುತ್ತಾರೆ. ಒಂದಾದ ಮೇಲೊಂದರಂತೆ ಪಾಠಗಳನ್ನು ಕೇಳಿಸಿಕೊಂಡ ಮಗು, ಡಬ್ಬಿಯಲ್ಲಿನ ತಿಂಡಿಯನ್ನು ಅರ್ಧ ತಿಂದು ಉಳಿದಿದ್ದನ್ನು ಅದರಲ್ಲೇ ಇಟ್ಟುಕೊಂಡು ಮನೆಗೆ ಬರುತ್ತದೆ. ಆಗಲೂ ಮನೆಯಲ್ಲಿ ಅದನ್ನು ಮುದ್ದಾಡುವವರಿಲ್ಲ, ಕಾರಣ, ಮಗು ಟ್ಯೂಷನ್‌ಗೆ ಹೋಗಲು ಸಿದ್ಧವಾಗಬೇಕು. ಟ್ಯೂಷನ್‌ನಲ್ಲಿ ಮತ್ತೊಂದು ಸುತ್ತಿನ ಪಾಠಗಳಿಗೆ ಒಡ್ಡಿಕೊಳ್ಳಬೇಕು!

ಹೊಟ್ಟೆ ಹಿಡಿಯುವಷ್ಟನ್ನು ಮಾತ್ರವೇ ತಿನ್ನಲಿಕ್ಕೆ ಸಾಧ್ಯ, ಹೆಚ್ಚು ತುರುಕಿದರೆ ಅದು ವಾಂತಿಯಾಗುತ್ತದೆ. ಅದೇ ರೀತಿ, ಮಕ್ಕಳ ಮುಗ್ಧತೆಯನ್ನು ಅರ್ಥಮಾಡಿಕೊಳ್ಳದೆ ಶಿಕ್ಷಣದ ಹೆಸರಲ್ಲಿ ಮಕ್ಕಳ ಮನಸ್ಸಿನ ಮೇಲೆ ಹೇರಿಕೆ ನಡೆಯುತ್ತಿದೆ. ಸಾಲದೆಂಬಂತೆ, ಆ ಮಗುವು ಸದಾ ಕ್ಲಾಸ್‌ಗೆ ಫಸ್ಟ್ ಬರಲೇಬೇಕೆಂಬ ಒತ್ತಡ. ಒಂದೊಮ್ಮೆ ಹಾಗಾಗದಿದ್ದರೆ, ಹೆಚ್ಚಿನ ಅಂಕವನ್ನು ತೆಗೆದಿರುವ ಮತ್ತೊಂದು ಮಗುವಿನೊಂದಿಗೆ ಹೋಲಿಸಿ ಸ್ವಂತ ಮಗುವಿನ ಅಭಿರುಚಿಯನ್ನೇ ಕೊಲ್ಲುತ್ತಾರೆ ಕೆಲ ಹೆತ್ತವರು. ತಮ್ಮ ಮಕ್ಕಳು ಐಎಎಸ್, ಐಪಿಎಸ್ ಓದಬೇಕು ಅಥವಾ ವೈದ್ಯ, ಎಂಜಿನಿಯರ್ ಆಗಬೇಕೆಂದು ಬಯಸುವವರು ಸ್ವತಃ ತಮ್ಮ ಜೀವನದಲ್ಲಿ ಅಂಥ ಉನ್ನತ ಸ್ಥಾನಗಳಿಗೆ ಏಕೆ ತಲುಪಲಿಲ್ಲ ಎಂಬುದು ಯಕ್ಷಪ್ರಶ್ನೆ! ಏಕೆಂದರೆ, ಇಂಥ ಪೋಷಕರನ್ನು ಅವರ ಅಪ್ಪ-ಅಮ್ಮ 'ಮಕ್ಕಳ ರೀತಿಯಲ್ಲಿ' ಬೆಳೆಸಿದರು, ಆದರೆ ಈಗ ಮಕ್ಕಳನ್ನು 'ರೋಬೋಟ್ ರೀತಿಯಲ್ಲಿ' ಬೆಳೆಸಲಾಗುತ್ತಿದೆ. ಮಗುವಿಗೆ ಶಿಕ್ಷಣ ಮುಖ್ಯ ಎಂಬುದು ಒಪ್ಪುವ ಮಾತೇ, ಆದರೆ ಒಮ್ಮೆ ಹೋದ ಬಾಲ್ಯ ಮರಳಿ ಬಾರದು, ಅಲ್ಲವೇ? ಆದ್ದರಿಂದ, ಶಿಕ್ಷಣದ ಜತೆಜತೆಗೆ ಬಾಲ್ಯವನ್ನೂ ಅನುಭವಿಸುವುದಕ್ಕೂ ಮಕ್ಕಳಿಗೆ ಅನುವುಮಾಡಿಕೊಡಬೇಕು. ಹಿಂದೆಲ್ಲಾ, ಮಗುವು ಮನೆಯಲ್ಲಿ ಮಾತು ಕೇಳದಿದ್ದರೆ ತಾಯಿಯು ಸ್ವತಃ ಶಾಲಾ ಶಿಕ್ಷಕರಿಗೆ ಹೇಳಿ ಅದಕ್ಕೆ ಎರಡೇಟು ಹಾಕಿಸುತ್ತಿದ್ದಳು; ಆದರೆ ಬದಲಾದ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳನ್ನು ಶಿಕ್ಷಕರು ಹೊಡೆಯುವುದಿರಲಿ, ಕೋಪದಿಂದ ಗದರುವಂತೆಯೂ ಇಲ್ಲ. ಹಾಗೇನಾದರೂ ಆದಲ್ಲಿ ಮರುದಿನವೇ ಪೋಷಕರು ಶಾಲೆಗೆ ಹಾಜರಾಗಿ ಶಿಕ್ಷಕರ ಜತೆ ಜಗಳಕ್ಕಿಳಿಯುತ್ತಾರೆ. ಮಕ್ಕಳ ಮುಂದೆಯೇ ಹೀಗೆ ಶಿಕ್ಷಕರನ್ನು ಚಿಕ್ಕವರನ್ನಾಗಿಸಿದರೆ ಅವರಿಗೆ ಭಯ-ಭಕ್ತಿ-ವಿದ್ಯೆ ಎಲ್ಲಿಂದ ಹುಟ್ಟಬೇಕು? ಪರಿಣಾಮವಾಗಿ ಮಕ್ಕಳು ಮುಂದೊಮ್ಮೆ ಹೆತ್ತವರನ್ನೂ ಗೌರವಿಸುವುದಿಲ್ಲ. ಮಕ್ಕಳಲ್ಲಿ ಈ ನೆಲದ ಸಂಸ್ಕೃತಿಯನ್ನು ಬೆಳೆಸಬೇಕು, ಇದರಲ್ಲಿ ಕುಟುಂಬದ ಪಾತ್ರ ಮಹತ್ವದ್ದು. ಮಕ್ಕಳನ್ನು ಪ್ರೀತಿಸಬೇಕಾದಾಗ ಪ್ರೀತಿಸಬೇಕು, ದಂಡಿಸುವ ಸಂದರ್ಭದಲ್ಲಿ ದಂಡಿಸಬೇಕು. ಅಲ್ಲವೇ?

– ಪರಮ್ ಕಿತ್ಲಿ, ಹುಬ್ಬಳ್ಳಿ

ಸ್ಮರಣೀಯ ನಡೆ

ಸುರೇಂದ್ರ ಪೈ ಅವರು 'ಸಕಾಲಿಕ' ಅಂಕಣದಲ್ಲಿ (ಆ.20) ದೇಶದ ಪ್ರಥಮ ಪ್ರಜೆಯ ನಡೆಯು ಮುಂದಿನ ಪೀಳಿಗೆಯವರಿಗೆ ಒಂದೊಳ್ಳೆಯ ಪಾಠ ಎಂಬುದನ್ನು ವಿವರವಾಗಿ ವ್ಯಾಖ್ಯಾನಿಸಿದ್ದಾರೆ. ಸ್ವಾತಂತ್ರ್ಯ ಎಂಬುದು ಕೊಟ್ಟದ್ದಲ್ಲ, ಅದು ಪಡೆದುಕೊಂಡದ್ದು. ಅದೆಷ್ಟೋ ಹೋರಾಟಗಾರರ ಪರಿಶ್ರಮ, ತ್ಯಾಗ-ಬಲಿದಾನಗಳ ಫಲವಾಗಿ ನಾವಿಂದು ಸ್ವಾತಂತ್ರ್ಯದ ಸವಿಯನ್ನು ಅನುಭವಿಸುತ್ತಿದ್ದೇವೆ. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮ್ಮ ಶ್ರೇಷ್ಠ ವ್ಯಕ್ತಿತ್ವದ ಮೂಲಕ ರಾಷ್ಟ್ರಪತಿ ಸ್ಥಾನವನ್ನೂ, ರಾಷ್ಟ್ರಪತಿ ಭವನವನ್ನೂ ಜನಸ್ನೇಹಿಯಾಗಿಸಿದ್ದು ಖರೆ. ದೇಶದ ಪ್ರಥಮ ಪ್ರಜೆಯಾಗಿ ತಮಗಿದ್ದ ವಿಶೇಷ ಸೌಲಭ್ಯಗಳನ್ನು ನಿರಾಕರಿಸಿದ ಅವರು, ಸಾಮಾನ್ಯ ನಾಗರಿಕರಂತೆ ದೇಶಭಕ್ತಿಯನ್ನು ಪ್ರಕಟಪಡಿಸಿದ್ದು ನಮಗೆಲ್ಲಾ ಆದರ್ಶಪ್ರಾಯವಾಗಿದೆ. ಇಂಥ ಗಣ್ಯರ ವರ್ತನೆಗಳು ಎಲ್ಲಾ ಕಾಲಕ್ಕೂ ಅನುಕರಣೀಯವಾಗಿರುತ್ತವೆ ಎಂಬುದನ್ನು ಈಗಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ನಡೆಯು ಸಾಬೀತುಪಡಿಸಿದೆ.

– ಪರಮೇಶ್ವರ ಜಿ.ಎಂ., ಸಂಡೂರು

ಸಮಾಜದಲ್ಲಿ ಬದಲಾಗುತ್ತಿದೆ ಉಳಿತಾಯದ ಪರಿಭಾಷೆ!

ಭಾರತೀಯರು ಒಡವೆಗಳ ಮೂಲಕ ಚಿನ್ನ ಉಳಿಸುವುದರಲ್ಲಿ ಸಿದ್ಧಹಸ್ತರು. ಅವಕಾಶ, ಹೂಡಿಕೆಗಳ ವ್ಯಾಪ್ತಿ ಬದಲಾದಂತೆ ಷೇರು ಮಾರುಕಟ್ಟೆ, ಬಂಡವಾಳ ಹೂಡಿಕೆಗಳಂಥ ಹೆಚ್ಚು ರಿಸ್ಕ್ ಇರುವ ಕ್ಷೇತ್ರಗಳಲ್ಲೂ ಇವರು ಪ್ರವೇಶಿಸುತ್ತಿರುವುದು ವೈಯಕ್ತಿಕ ಮತ್ತು ದೇಶದ ಆರ್ಥಿಕತೆಯ ವಿಚಾರದಲ್ಲಿ ಅಭಿವೃದ್ಧಿ ಸೂಚಕವಾಗಿದೆ.

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ಹಳ್ಳಿಗಳಿಂದ ನಗರ-ಪಟ್ಟಣಗಳವರೆಗೆ, ಬಡವರಿಂದ ಸಿರಿವಂತರವರೆಗೆ ಸಮ್ಮಿಳಿತಗೊಂಡ ದೇಶ ನಮ್ಮದು. ಸಿರಿವಂತರು ತಮ್ಮ ಆದಾಯವನ್ನು ದ್ವಿಗುಣಗೊಳಿಸಲು ಹೂಡಿಕೆಗಳ ಬಗ್ಗೆ ಯೋಚಿಸುತ್ತಿದ್ದರೆ, ಸಾಮಾನ್ಯರು ನಿತ್ಯದ ಖರ್ಚು-ವೆಚ್ಚ ಕಳೆದು, ಉಳಿದ ಹಣವನ್ನು ಮುಂದಿನ ಕಷ್ಟಕಾಲಕ್ಕೆ ಸಹಾಯವಾಗಲಿ ಎಂದು ಉಳಿತಾಯದ ಬಗ್ಗೆ ಯೋಚಿಸುತ್ತಾರೆ.

ಉಳಿತಾಯದ ಪರಿಭಾಷೆ ಬಗ್ಗೆ ಹೇಳುವುದಾದರೆ, ಯಾರು ಎಷ್ಟು ಉಳಿಸಬೇಕು? ತಿಂಗಳಿಗಾಗುವಷ್ಟಾ ಅಥವಾ ಮೂರು ತಲೆಮಾರುಗಳಿಗೆ ಆಗುವಷ್ಟಾ? ಎಂದೆಲ್ಲ ಪ್ರಶ್ನೆ ಬರುತ್ತದೆ. ಖಾಸಗಿ ಉಳಿತಾಯಗಳು ಸುರಕ್ಷಿತವಾ? ಸರಕಾರಿ ಉಳಿತಾಯ ಯೋಜನೆಗಳು ಕೈಹಿಡಿಯುತ್ತವಾ? ಎಂದೆಲ್ಲ ಅನುಮಾನಗಳಿರುತ್ತವೆ. ಮಹಿಳೆಯರು ಉಳಿತಾಯವನ್ನು ಒಂದು ಸಾಂಪ್ರದಾಯಿಕ ಪದ್ಧತಿ ಎಂಬಂತೆಯೇ ಪಾಲಿಸುತ್ತ ಬಂದಿದ್ದಾರೆ. ಇದರಲ್ಲಿ ಚಿನ್ನಕ್ಕೆ ವಿಶೇಷ ಸ್ಥಾನಮಾನವಿದೆ. ಚಿನ್ನವು ಕೇವಲ ಆಭರಣವಾಗಿರದೆ, ಮಹಿಳೆಯರ ವೈಯಕ್ತಿಕ ಗಳಿಕೆಯ ಜತೆಗೆ ಆರ್ಥಿಕ ಭದ್ರತೆಯ ಸಾಧನವೂ ಆಗಿದೆ.

ದೇಶದಲ್ಲಿ ಕುಟುಂಬಗಳು ಮಾಡಿರುವ ಒಟ್ಟು ಉಳಿತಾಯದಲ್ಲಿ ಶೇ.70ರಷ್ಟು ಚಿನ್ನವು ಮಹಿಳೆಯರ ಆಭರಣ ರೂಪದಲ್ಲಿದ್ದು, ಅಕ್ಕಿ ಗಂಟಿನಲ್ಲಿ, ಸಾಸಿವೆ ಡಬ್ಬಗಳಲ್ಲಿ ಇಟ್ಟಂಥ ಕಿವಿಯೋಲೆ, ಮೂಗುಬೊಟ್ಟು, ಚೈನು, ಕೈಬಳೆಗಳೂ ಇದರಲ್ಲಿ ಸೇರಿವೆ. 2023ರ ವರದಿ ಪ್ರಕಾರ, ಭಾರತೀಯ ಮಹಿಳೆಯರು ಹೊಂದಿರುವ ಚಿನ್ನದ ಪ್ರಮಾಣ 25 ಸಾವಿರ ಟನ್ ಆಗಿದೆ. ಇದು ಕೆಲ ದೇಶಗಳ ಒಟ್ಟು ಚಿನ್ನದ ಸಂಗ್ರಹಕ್ಕಿಂತಲೂ ಹೆಚ್ಚು ಎಂದು ವರದಿಯಾಗಿದೆ. ಇತಿಹಾಸಪೂರ್ವ ಕಾಲದಲ್ಲಿ ಮೊದಲು ಆಹಾರವನ್ನು ಸಂಗ್ರಹಿಸಿಡುವ ಪದ್ಧತಿ ಆರಂಭವಾಯಿತೆಂದು ತಿಳಿದುಬರುತ್ತದೆ. ದವಸ-ಧಾನ್ಯಗಳನ್ನು, ಗೆಡ್ಡೆ-ಗೆಣಸುಗಳನ್ನು ಕಷ್ಟಕಾಲದಲ್ಲಿ ಉಪಯೋಗವಾಗಲೆಂದು ಗಟ್ಟಿಕೆಸರಿನಲ್ಲಿ ಅದ್ದಿ ಒಣಗಿಸಿ, ವರ್ಷಗಟ್ಟಲೇ ಕೂಡಿಟ್ಟುಕೊಳ್ಳುತ್ತಿದ್ದರು. ಮಾಂಸಗಳನ್ನು ಸುಟ್ಟು ಒಣಗಿಸಿ ಮಳೆಗಾಲಕ್ಕೆ ಕೂಡಿಟ್ಟುಕೊಳ್ಳುತ್ತಿದ್ದರು. ಉಳಿತಾಯದ ಮಹತ್ವವು ಆಹಾರದಿಂದ ಧಾನ್ಯಗಳಿಗೆ ಕಾಲಾಂತರದಲ್ಲಿ ಹಣಕ್ಕೆ ಪರಿವರ್ತನೆಯಾಗುತ್ತ ಬಂದಿತು. ಆಹಾರ ಮತ್ತು ಬೇಟೆಯಾಡುವ ಶಸ್ತ್ರಗಳು ಮಾನವನ ಉಳಿತಾಯ ಖಾತೆಗೆ ಸೇರಿದ ಮೊದಲ ವಸ್ತುಗಳಾಗಿದ್ದವು!

ನಾಗರಿಕತೆಗಳ ಪ್ರಾರಂಭಿಕ ಕಾಲದಲ್ಲಿ ಜನರು ಧಾನ್ಯಗಳ ಲೆಕ್ಕವನ್ನು ಫಲಕಗಳಲ್ಲಿ ದಾಖಲಿಸಿಕೊಳ್ಳುತ್ತಿದ್ದರು. ರೈತರು ಧಾನ್ಯವನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಜನರು ಜಾನುವಾರು, ಧಾನ್ಯ, ಚಿನ್ನ-ಬೆಳ್ಳಿ ರೂಪದಲ್ಲಿ ಉಳಿತಾಯ ಮಾಡುತ್ತಿದ್ದರು. ಹಣಕ್ಕೂ ಮೊದಲು ವಸ್ತುವಿನಿಮಯ ಪದ್ಧತಿ (Barter System) ಚಾಲ್ತಿಯಲ್ಲಿತ್ತು. ಹಣದ ಕಲ್ಪನೆ ಹುಟ್ಟಿಕೊಂಡ ಮೇಲೆ ದೇವಸ್ಥಾನಗಳನ್ನು ಹಣ, ವಸ್ತು ಸಂಗ್ರಹಿಸಲು ಬಳಸುತ್ತಿದ್ದರು. ಮೌರ್ಯರ ಕಾಲದ ಭಾರತದಲ್ಲಿ ಕೌಟಿಲ್ಯರ ಅರ್ಥಶಾಸ್ತ್ರದಲ್ಲಿ ಉಳಿತಾಯ, ಖಜಾನೆ ಮತ್ತು ಸಂಪತ್ತು ಸಂಗ್ರಹದ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ನಾಣ್ಯಗಳ ವ್ಯಾಪ್ತಿಯು ಚೀನಾ, ಭಾರತದಿಂದ ಹಿಡಿದು ಗ್ರೀಸ್, ರೋಮ್‌ವರೆಗೂ ವ್ಯಾಪಿಸಿತ್ತು. ಮಧ್ಯಯುಗದ ಆಸುಪಾಸಿನಲ್ಲಿ ಇಟಲಿಯ ವೆನಿಸ್, ಫ್ಲಾರೆನ್ಸ್‌ನಲ್ಲಿ ಪ್ರಥಮ ಆಧುನಿಕ ಬ್ಯಾಂಕುಗಳು ಶುರುವಾದವು. 16ನೇ ಶತಮಾನದಲ್ಲಿ ಸಾರ್ವಜನಿಕ ಸಂಸ್ಥೆಗಳು, ಹಣವನ್ನು ಬ್ಯಾಂಕ್‌ನಲ್ಲಿ ಉಳಿಸುವ ಅಭ್ಯಾಸವನ್ನು ಜನರಿಗೆ ಮಾಡಿಸಲಾರಂಭಿಸಿದವು. 19ನೇ ಶತಮಾನದಲ್ಲಿ ಉಳಿತಾಯ ಬ್ಯಾಂಕುಗಳು ಮತ್ತು ಪೋಸ್ಟ್ ಆಫೀಸ್ ಸೇವೆಗಳು ಸಾಮಾನ್ಯ ಜನರಿಗೆ ಪರಿಚಯವಾದವು. ತನ್ಮೂಲಕ 20ನೇ ಶತಮಾನದಲ್ಲಿ ಸರಕಾರದ ಬಾಂಡ್‌ಗಳು, ಪಿಂಚಣಿ ಯೋಜನೆಗಳು, ವಿಮಾ ಯೋಜನೆಗಳವರೆಗೆ ಉಳಿತಾಯದ ವಿವಿಧ ಹಂತಗಳು ಬಂದು ನಿಂತಿವೆ ಎನ್ನಬಹುದು. ಇದಕ್ಕೆ ಪೂರಕವಾಗಿ, ಉಳಿತಾಯ ಮಾಡುವಲ್ಲಿ ಡಿಜಿಟಲ್ ವಾಲೆಟ್‌ಗಳು, ಮ್ಯೂಚುವಲ್ ಫಂಡ್‌ಗಳು, ನಿವೃತ್ತಿ ನಿಧಿಗಳು (Retirement Funds) ಹೊಸರೂಪದ ಉಳಿತಾಯ ವಿಧಾನಗಳನ್ನು ಒಳಗೊಳ್ಳುತ್ತ ಉಳಿತಾಯ ಕ್ಷೇತ್ರ ಬೆಳೆದುಬಂದಿದೆ.

ಸಾಮಾನ್ಯ ಜನರ ಆರ್ಥಿಕ ಭದ್ರತೆಗೆ ಉಳಿತಾಯ (Savings), ಹೂಡಿಕೆ (Investment) ಮತ್ತು ಜೀವನ ಸುರಕ್ಷತೆಗಳು (Life Security) ಪ್ರಮುಖ ಪಾತ್ರವಹಿಸುತ್ತವೆ. ಕೇಂದ್ರ, ರಾಜ್ಯ ಸರಕಾರಗಳು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳು ಜನತೆಗೆ ವಿಭಿನ್ನ ರೀತಿಯ ಯೋಜನೆಗಳನ್ನು ನೀಡುತ್ತಿವೆ. ಪೋಸ್ಟ್ ಆಫೀಸ್ ಸೇವಿಂಗ್ಸ್ ಅಕೌಂಟ್ (Post Office Savings Account) ಮತ್ತು ಸೆಕ್ಷನ್ 80-ಸಿ ಅಡಿಯಲ್ಲಿ ತೆರಿಗೆ ವಿನಾಯಿತಿಯುಳ್ಳ ಪಬ್ಲಿಕ್ ಪ್ರಾವಿಡೆಂಟ್ ಫಂಡ್ (PPF) ಇರಬಹುದು, ಹೆಣ್ಣುಮಕ್ಕಳ ಶಿಕ್ಷಣ ಮತ್ತು ಮದುವೆ ಖರ್ಚಿಗೆ ನೆರವಾಗುವ, ಹೆಚ್ಚಿನ ಬಡ್ಡಿದರ ಮತ್ತು ತೆರಿಗೆ ವಿನಾಯಿತಿಯುಳ್ಳ 'ಸುಕನ್ಯಾ ಸಮೃದ್ಧಿ' ಯೋಜನೆಯಾಗಿರಬಹುದು, ನಿವೃತ್ತ ಹಿರಿಯ ನಾಗರಿಕರಿಗೆ ಉಳಿತಾಯ ಭದ್ರತೆಯೊದಗಿಸುವ 'ಸೀನಿಯರ್ ಸಿಟಿಜನ್ ಸೇವಿಂಗ್ಸ್ ಸ್ಕೀಮ್' (SCSS) ನಂಥ ಯೋಜನೆಗಳು ಇರಬಹುದು- ಇವೆಲ್ಲವೂ ಬಡ ಮತ್ತು ಮಧ್ಯಮ ವರ್ಗದವರಿಗೆ ಸಹಕಾರಿಯಾಗಿವೆ.

ಸಾಮಾನ್ಯವಾಗಿ Fixed Deposit ಎಂದು ಕರೆಯಲಾಗುವ ಠೇವಣಿಯನ್ನು Term Deposit ಎಂದೂ ಕರೆಯುತ್ತಾರೆ. ಉಳಿತಾಯ ಖಾತೆಗಿಂತ ಹೆಚ್ಚು ಬಡ್ಡಿದರ ಇದರಲ್ಲಿ ಸಿಗುತ್ತದೆ ಮತ್ತು ಬ್ಯಾಂಕುಗಳು DICGC (Deposit Insurance and Credit Guarantee Corporation) ಮೂಲಕ 5 ಲಕ್ಷ ರುಪಾಯಿವರೆಗೆ ವಿಮಾರಕ್ಷಣೆ ಒದಗಿಸುತ್ತವೆ. ಕನಿಷ್ಠ 7 ದಿನಗಳಿಂದ 10 ವರ್ಷಗಳವರೆಗೆ ಅಂಚೆ, ಬ್ಯಾಂಕ್, NBFC ಗಳಲ್ಲಿ ವಿವಿಧ ಬಡ್ಡಿದರಗಳಲ್ಲಿ ಹೂಡಿಕೆ ಮಾಡಬಹುದಾಗಿದೆ. ಮಾಸಿಕ, ತ್ರೈಮಾಸಿಕ, ವಾರ್ಷಿಕವಾಗಿ ಇದರ ಬಡ್ಡಿ ಪಡೆಯಬಹುದಾಗಿದ್ದು, Regular FD, Tax saving FD, Senior Citizen FD, Flexi FD, Post Office Time Deposit (POTD) ಎಂದೆಲ್ಲ ಹೂಡಿಕೆ ಮಾಡಬಹುದು.

ಹೂಡಿಕೆ ಎಂಬುದು ಹಣವನ್ನು ಉತ್ಪಾದಕ ರೀತಿಯಲ್ಲಿ ಉಪಯೋಗಿಸಿ, ಭವಿಷ್ಯದಲ್ಲಿ ಲಾಭ ಪಡೆಯುವ ಮಾರ್ಗವಾಗಿದ್ದು, ಮ್ಯೂಚ್ಯುವಲ್ ಫಂಡ್ಸ್ (Mutual Funds), ಷೇರು ಮಾರುಕಟ್ಟೆ (Stock Market), ಭೂಮಿ, ಮನೆ, ವಾಣಿಜ್ಯ ಕಟ್ಟಡಗಳಲ್ಲಿ ಹಾಗೂ ಸ್ಥಿರಾಸ್ತಿ ರೂಪದ ರಿಯಲ್ ಎಸ್ಟೇಟ್‌ನಲ್ಲಿ (Real Estate Investment) ಹಾಗೂ ಚಿನ್ನ ಮತ್ತು ಬೆಳ್ಳಿಯಲ್ಲಿ ಹೂಡಿಕೆ ಮಾಡಬಹುದು. ಇತ್ತೀಚೆಗೆ ಜಾರಿಗೆ ತರಲಾದ RBIನ 'ಸಾವರಿನ್ ಗೋಲ್ಡ್ ಬಾಂಡ್' (SGB) ರೂಪದಲ್ಲೂ ಹೂಡಿಕೆ ಮಾಡಲು ಅವಕಾಶವಿದೆ.

ಹಣಕಾಸು ಆಸ್ತಿ ಕುರಿತಂತೆ 2024ರ ಮಾರ್ಚ್ ಅಂತ್ಯದವರೆಗೆ ಲಭ್ಯವಿದ್ದ ಮಾಹಿತಿ ಪ್ರಕಾರ, ಭಾರತೀಯ ಕುಟುಂಬಗಳ ಒಟ್ಟಾರೆ ಚರ ಮತ್ತು ಸ್ಥಿರಾಸ್ತಿ ರು.32 ಲಕ್ಷ ಕೋಟಿಯಷ್ಟಿದ್ದರೆ, ಸುಮಾರು ರು.12 ಲಕ್ಷ ಕೋಟಿಯಷ್ಟು ಸಾಲವಿದೆ ಎನ್ನಲಾಗಿದೆ. ಈ ಆಸ್ತಿಯ ಭಾಗವಾಗಿ, ಹಣಕಾಸು ವರ್ಷ 2024ರಲ್ಲಿ ರು.35 ಲಕ್ಷ ಕೋಟಿಯಷ್ಟು ಹೂಡಿಕೆಗಳನ್ನು (Financial Savings) ಮಾಡಲಾಯಿತು. ಇದು ಹಣಕಾಸು ವರ್ಷ 2023ರ ರು.29 ಲಕ್ಷ ಕೋಟಿಯನ್ನು ಮೀರಿದೆ. ಒಂದೇ ವರ್ಷದಲ್ಲಿ 6 ಲಕ್ಷ ಕೋಟಿಯಷ್ಟು ಕೌಟುಂಬಿಕ ಹೂಡಿಕೆ ಹೆಚ್ಚಾಗಿದೆ. ಹೂಡಿಕೆಯ ವಿಧಗಳನ್ನು ಗಮನಿಸಿದಾಗ, ಭಾರತೀಯ ಕುಟುಂಬಗಳು Household asset ನಲ್ಲಿ ಶೇ.8ರಷ್ಟು ಪಾಲು ಹೊಂದಿವೆ. ರಿಯಲ್ ಎಸ್ಟೇಟ್‌ನಲ್ಲಿ ಶೇ.55, ಚಿನ್ನದಲ್ಲಿ ಶೇ. 20, ಬ್ಯಾಂಕ್ ಡಿಪಾಸಿಟ್‌ನಲ್ಲಿ ಶೇ.14, ಪ್ರಾವಿಡೆಂಟ್ ಫಂಡ್ ಮತ್ತು ಪೆನ್ಷನ್‌ನಲ್ಲಿ ಶೇ.11ರಷ್ಟು ಹೂಡಿಕೆ ಮಾಡಿವೆ.

ಮ್ಯೂಚ್ಯುವಲ್ ಫಂಡ್‌ನಲ್ಲಿ SIP (Systematic Investment Plans) ಹೂಡಿಕೆಯು ತೀವ್ರವಾಗಿ ಬೆಳೆಯುತ್ತಿದೆ. 2019 ರಿಂದ 2024ರವರೆಗೆ (Asset under management- AUM) SIP ಮೂಲಕ ಹೂಡಿಕೆಯು 12,400 ಕೋಟಿ ರು. ತಲುಪಿದೆ ಎಂದು ವರದಿಯಾಗಿದೆ. ವೈಯಕ್ತಿಕವಾಗಿ ಭಾರತೀಯರು ವಿದೇಶದಲ್ಲಿ ವೈಯಕ್ತಿಕ ಹೂಡಿಕೆ (LRS- Liberalised Remittance Scheme) ಮೂಲಕ ಮೇ 2025ರ ಅಂತ್ಯಕ್ಕೆ 2 ಸಾವಿರ ಕೋಟಿಯಷ್ಟು (2.3 ಬಿಲಿಯನ್ ಡಾಲರ್) ಹೂಡಿಕೆ ಮಾಡಿದ್ದರೆ, ಭಾರತೀಯ ಕಂಪನಿಗಳ ಒಟ್ಟು ವಿದೇಶ ಹೂಡಿಕೆ OFDI (Outward Foreign Direct Investment) 3 ಲಕ್ಷ ಕೋಟಿ (38 ಬಿಲಿಯನ್ ಡಾಲರ್)ಗಳಷ್ಟಾಗಿದೆ ಎಂದು ವರದಿಯಾಗಿದೆ. Praxis Global Alliance ಪ್ರಕಾರ, Household Wealth pool ಸಹಿತ NRI Assets ಹಣಕಾಸು ವರ್ಷ 2023ರಲ್ಲಿದ್ದ 620 ಲಕ್ಷ ಕೋಟಿಯಿಂದ ಹಣಕಾಸು ವರ್ಷ 2027ರ ವೇಳೆಗೆ 935 ಲಕ್ಷ ಕೋಟಿವರೆಗೆ ವೃದ್ಧಿಯಾಗುವ ಲಕ್ಷಣವಿದೆ.

ದೇಶದೊಳಗೆ ಮತ್ತು ಹೊರಗೆ ಭಾರತೀಯರು ಮಾಡುತ್ತಿರುವ ಹೂಡಿಕೆ ಗಣನೀಯ ಮಟ್ಟದಲ್ಲಿ ಏರಿಕೆಯಾಗಿದ್ದು, ವೈಯಕ್ತಿಕವಾಗಿ ಉಳಿತಾಯ ಮಾಡುತ್ತಿರುವವರಿಗೆ PPF ಒಂದು ಬಹುದೊಡ್ಡ ಯೋಜನೆಯಾಗಿದೆ. Public Provident Fund ಯೋಜನೆಯನ್ನು 1968ರಲ್ಲಿ ಭಾರತ ಸರಕಾರವು ಪರಿಚಯಿಸಿತು. ಇದೆಲ್ಲ ಭವಿಷ್ಯದ ಭದ್ರತೆ ಕುರಿತ ಆಲೋಚನೆಗಳಾಗಿದ್ದರೆ, ಯಾವಾಗ ಬೇಕಾದರೂ ಅನಾರೋಗ್ಯ ಬರುವ ಕಾರಣದಿಂದ ಆರೋಗ್ಯ ವಿಮೆಯು ಇಂದಿನ ದಿನಗಳಲ್ಲಿ ಅತ್ಯಂತ ಅವಶ್ಯಕವೆನಿಸಿದೆ. ವಾರ್ಷಿಕ ಪ್ರೀಮಿಯಂ ಕಟ್ಟುತ್ತ ಹೋಗುವ ಈ ಯೋಜನೆಗಳಲ್ಲಿ ಅಗತ್ಯ ಬಿದ್ದಾಗ, Cashless Reimbursement ರೂಪದಲ್ಲಿ ಇದರ ಲಾಭ ಪಡೆಯಬಹುದಾಗಿದೆ.

ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ನರೇಂದ್ರ ಮೋದಿ ಅವರ ಸರಕಾರವು 'ಅಮೃತಕಾಲ-2047' ಎಂಬ ದೂರದೃಷ್ಟಿಯುಳ್ಳ ನೀಲನಕ್ಷೆ ಹಾಕಿಕೊಂಡು ಪ್ರತಿಯೊಬ್ಬರೂ ಬ್ಯಾಂಕ್, ವಿಮೆ, ಪೆನ್ಷನ್ ಮೂಲಕ ಶೇ.100ರಷ್ಟು ಆರ್ಥಿಕವಾಗಿ ಒಳಗೊಳ್ಳುವಂತೆ ಯೋಜಿಸಲಾಗಿದೆ. ಜನರು ಚಿನ್ನ, ಭೂಮಿಯಂಥ 'ಭೌತಿಕ ಆಸ್ತಿ'ಗೆ ಬದಲಾಗಿ ಬ್ಯಾಂಕ್, ಬಾಂಡ್, ಮ್ಯೂಚುವಲ್ ಫಂಡ್‌ನಂಥ 'ಆರ್ಥಿಕ ಆಸ್ತಿ' ಕಡೆಗೆ ಗಮನವಿಡಲು ಪ್ರೋತ್ಸಾಹಿಸಲಾಗುತ್ತಿದೆ. ಇವುಗಳಿಗೆ ಅನುಗುಣವಾಗಿ ಉತ್ಸಾಹಿ ತರುಣರಿಗೆ ಹೊಸದಾಗಿ ಉದ್ಯಮ ಸ್ಥಾಪಿಸಲು ಇದ್ದ ಕಾನೂನು ತೊಡಕುಗಳನ್ನು ನಿವಾರಿಸಿ, ತೆರಿಗೆ ನೀತಿಗಳನ್ನು ಬದಲಾಯಿಸಿ, MSME ಗಳಿಗೆ ಪ್ರೋತ್ಸಾಹ ನೀಡಲಾಗಿದೆ.

2047ರ ಒಳಗೆ ಆರ್ಥಿಕವಾಗಿ ಪ್ರಬಲ, ಸಶಕ್ತ ಮತ್ತು ಸಂಪೂರ್ಣ ಸ್ವಾವಲಂಬಿ ಭಾರತವನ್ನು ವಿಶ್ವಮಟ್ಟದಲ್ಲಿ ಸ್ಥಾಪಿಸುವ ಮಹತ್ತರ ಗುರಿಯನ್ನು ಮೋದಿಯವರ ಸರಕಾರ ಹೊಂದಿದೆ. ಇಂಥ ಸಂದರ್ಭದಲ್ಲಿ ಯುವಜನರು ಸಮರ್ಪಕವಾಗಿ ಹೊಸತನಕ್ಕೆ ಕೈಹಾಕಲು ಧೈರ್ಯವಾಗಿ ಮುಂದೆ ಬರುತ್ತಿದ್ದಾರೆ. ಹೊಸ ಯುನಿಕಾರ್ನ್ ಉದ್ಯಮಿಗಳಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ಇಂದಿನ ಯುವಕರು ದುಡಿಯುವ ಸಂಬಳದ ಮೇಲೆ ಮಾತ್ರವೇ ಅವಲಂಬಿತರಾಗದೆ, ಮ್ಯೂಚುವಲ್ ಫಂಡ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರಿಸುತ್ತಿರುವುದು ಕೂಡ ಒಳ್ಳೆಯ ಬೆಳವಣಿಗೆ. ಇಂಥ ಯುವಜನಾಂಗಕ್ಕೆ ವಿಶೇಷವಾಗಿ ಉಳಿತಾಯದ ಬಗ್ಗೆ ಶಿಕ್ಷಣ ಕೊಡುವುದು, ಕಾರ್ಯಾಗಾರ ಹಮ್ಮಿಕೊಳ್ಳುವುದು ಮುಖ್ಯವಾಗಿದೆ. ಖಾಸಗಿ ಹೂಡಿಕೆಗಳಲ್ಲಿ ಅಪಾಯಕ್ಕೊಳಗಾಗದಂತೆ ಬಿಗಿನಿಯಮಗಳನ್ನು ತರಬೇಕಿದೆ.

ಸರಕಾರಿ ವ್ಯವಸ್ಥೆಯಲ್ಲಿ ಆಕರ್ಷಣೆಯಿದ್ದು, ಆದಾಯವೂ ಹೆಚ್ಚಾಗುವಂಥ ನಿಯಮಗಳು, ಯೋಜನೆಗಳು ವ್ಯವಸ್ಥಿತವಾಗಿ ಜಾರಿಗೆ ಬಂದಲ್ಲಿ ಸುಸ್ಥಿರ ಅಭಿವೃದ್ಧಿ ಮತ್ತು ಸುರಕ್ಷಿತವಾದ ಆರ್ಥಿಕ ಭದ್ರತೆಯುಳ್ಳ ಯುವಪೀಳಿಗೆಯನ್ನು ಬೆಳೆಸಿದಂತಾಗುತ್ತದೆ. ಇಂಥ ನಿರ್ಧಾರಗಳು ಅವರ ವೈಯಕ್ತಿಕ ಭವಿಷ್ಯವನ್ನು ಮಾತ್ರವಲ್ಲದೆ ನಮ್ಮ ರಾಷ್ಟ್ರದ ಆರ್ಥಿಕ ಬಲವನ್ನೂ ರೂಪಿಸುತ್ತವೆ. ನಾವೆಲ್ಲ ಆರ್ಥಿಕವಾಗಿ ಬಲಗೊಳ್ಳಲು ಶ್ರಮಿಸೋಣ. ಮುಂದಿನ ಪೀಳಿಗೆಗಾಗಿ ಸುರಕ್ಷಿತ ಮತ್ತು ಸಮೃದ್ಧ ನಾಳೆಗಳನ್ನು ನಿರ್ಮಿಸಲು ಸಂಕಲ್ಪಿಸೋಣ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:219

ಸಮಾಚಾರ ಸಣ್ಣದಲ್ಲ

ಕಾಣೆಯಾಗಿದ್ದ ವಕೀಲೆ ನೇಪಾಳ ಗಡೀಲಿ ಪತ್ತೆ

ಲಖನೌ: ಮಧ್ಯಪ್ರದೇಶದಲ್ಲಿ 12 ದಿನಗಳ ಹಿಂದೆ ರೈಲಿನಿಂದ ಕಾಣೆಯಾಗಿದ್ದ ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠದ ತರಬೇತಿ ವಕೀಲೆ ಅರ್ಚನಾ ತಿವಾರಿ ಉತ್ತರ ಪ್ರದೇಶದ ಲಖಿಂಪುರ ಖೇರಿ ನಗರ ಸಮೀಪದ ನೇಪಾಳ ಗಡಿಯಲ್ಲಿ ಪತ್ತೆಯಾಗಿದ್ದಾರೆ. ಭೋಪಾಲ್ ರೈಲ್ವೆ ಪೊಲೀಸರು ಅರ್ಚನಾರನ್ನು ಪತ್ತೆಹಚ್ಚಿದ್ದು, ಭೋಪಾಲ್‌ಗೆ ಕರೆದೊಯ್ದು ವಿಚಾರಣೆ ನಡೆಸುವುದಾಗಿ ಹೇಳಿದ್ದಾರೆ. ಸಿವಿಲ್ ನ್ಯಾಯಾಧೀಶರ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ ಅರ್ಚನಾ, ರಕ್ಷಾಬಂಧನ ಹಬ್ಬಕ್ಕಾಗಿ ಆ7ರ ರಾತ್ರಿ ಇಂದೋರ್‌ನಿಂದ ಕಟ್ನೆಗೆ ರೈಲಿನಲ್ಲಿ ಹೊರಟಿದ್ದವರು ಕಟ್ನೆ ತಲುಪಿರಲಿಲ್ಲ. ಇಟಾರ್ಸಿ ರೈಲು ನಿಲ್ದಾಣದಲ್ಲಿ ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಬಳಿಕ ನಾಪತ್ತೆ ದೂರು ದಾಖಲಾಗಿ ದೇಶಾದ್ಯಂತ ದೊಡ್ಡ ಸುದ್ದಿಯಾಗಿತ್ತು. ಅವರು ಹಾಗೇಕೆ ನಾಪತ್ತೆಯಾದರು ಎಂಬುದು ನಿಗೂಢವಾಗಿದ್ದು, ವಿಚಾರಣೆ ಬಳಿಕ ತಿಳಿಯಬಹುದು ಎನ್ನಲಾಗಿದೆ.

ದೆಹಲಿಯಲ್ಲಿ ಕಟ್ಟಡ ಕುಸಿದು ಮೂರು ಸಾವು

ದೆಹಲಿ: ಕೇಂದ್ರ ದೆಹಲಿಯ ದರಿಯಾಗಂಜ್‌ನ ಸದ್ಭಾವನಾ ಪಾರ್ಕ್ ಬಳಿ ಬುಧವಾರ ಹಳೆಯ 3 ಮಹಡಿಗಳ ಕಟ್ಟಡವೊಂದು ಮಧ್ಯಾಹ್ನ 12.14ರ ವೇಳೆ ಕುಸಿದಿದ್ದು, ಅವಶೇಷಗಳಡಿ ಸಿಲುಕಿದ್ದವರಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಮೂವರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ತೆರಳಿದ ಅಗ್ನಿಶಾಮಕ ದಳ ಸಿಬ್ಬಂದಿ ರಕ್ಷಣಾ ಕಾರ್ಯ ನಡೆಸಿದ್ದಾರೆ.

ಆಫ್ಘನ್ ಬಸ್ ಭಸ್ಮ: 79 ಮಂದಿ ಸಜೀವ ದಹನ

ಅಫ್ಘಾನಿಸ್ತಾನ: ವಲಸಿಗರು ಪ್ರಯಾಣಿಸುತ್ತಿದ್ದ ಬಸ್ ಅಫ್ಘಾನಿಸ್ತಾನದ ಪಶ್ಚಿಮ ಹೆರಾತ್ ಪ್ರಾಂತ್ಯದಲ್ಲಿ ಬುಧವಾರ ಮೋಟಾರ್ ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ಬೆಂಕಿಗೆ ಆಹುತಿಯಾಗಿದೆ. 16 ಮಕ್ಕಳೂ ಸೇರಿ ಬಸ್‌ನಲ್ಲಿದ್ದ 79 ಪ್ರಯಾಣಿಕರು ಮತ್ತು ಚಾಲಕ ವರ್ಗದವರು ಸಜೀವ ದಹನವಾಗಿದ್ದಾರೆ. ಗುಜಾರಾ ಜಿಲ್ಲೆಯ ಹೆರಾತ್ ನಗರದ ಹೊರವಲಯದಲ್ಲಿ ಬಸ್‌ಗೆ ಬೆಂಕಿ ಹೊತ್ತಿದೆ. ಇರಾನ್‌ನಿಂದ ಹಿಂದಿರುಗಿದ ಜನರನ್ನು ರಾಜಧಾನಿ ಕಾಬೂಲ್‌ಗೆ ಬಸ್‌ನಲ್ಲಿ ಕರೆದೊಯ್ಯಲಾಗುತ್ತಿತ್ತು. ಇರಾನ್ ಸರಕಾರ ದೇಶದಿಂದ ಇವರನ್ನು ಬಲ ಪ್ರಯೋಗಿಸಿ ಹೊರಹಾಕಲಾಗಿತ್ತು ಎಂದು ಪ್ರಾಂತೀಯ ಸರಕಾರದ ವಕ್ತಾರ ಮೊಹಮ್ಮದ್ ಯೂಸುಫ್ ಸಯೀದಿ ತಿಳಿಸಿದ್ದಾರೆ.

ಮತದಾರರಿಗೆ ಸೂಚನೆ

ಪಟನಾ: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮೊದಲ ಹಂತದಲ್ಲಿ ಕೈಬಿಡಲಾಗಿರುವ 65 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರು, ಕೈಬಿಡಲು ಕಾರಣವೇನು ಎಂಬ ವಿವರಗಳನ್ನು ಈಗಾಗಲೇ ಪ್ರಕಟಿಸಿರುವ ಚುನಾವಣಾ ಆಯೋಗ, ಮತದಾರರು ಅರ್ಹರೇ ಆಗಿದ್ದಲ್ಲಿ ಆಧಾರ್ ಗುರುತಿನ ಚೀಟಿಯೊಂದಿಗೆ ಆಯೋಗಕ್ಕೆ ಅರ್ಜಿ ಸಲ್ಲಿಸುವ ಮೂಲಕ ಮರಳಿ ಬಿಹಾರ ರಾಜ್ಯ ಮತದಾರರ ಪಟ್ಟಿಗೆ ಸೇರ್ಪಡೆ ಆಗಬಹುದು ಎಂದು ತಿಳಿಸಿದೆ. ಆ.1ರಂದು ಬಿಹಾರ ರಾಜ್ಯ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿದ್ದು, ಅದರಲ್ಲಿ ಹೆಸರು ಇರದ ಮತದಾರರು ತಮ್ಮ 'ಎಪಿಕ್' ಕಾರ್ಡ್‌ನ ಕ್ರಮಸಂಖ್ಯೆ ಬಳಸಿ ಮರುನೋಂದಣಿ ಬಗ್ಗೆ ಮಾಹಿತಿ ಪಡೆಯಬಹುದು. ಬಳಿಕ ಆಧಾರ್ ಕಾರ್ಡ್ ಪ್ರತಿಯೊಂದಿಗೆ ಅರ್ಜಿ ಸಲ್ಲಿಸಬಹುದು ಎಂದು ಬಿಹಾರ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ವಿನೋದ್ ಸಿಂಗ್ ಗುಂಜಿಯಾಲ್ ಸೂಚನೆ ನೀಡಿದ್ದಾರೆ.

ಫೆಬ್ರವರಿ ತಿಂಗಳಲ್ಲಿ ಬಾಂಗ್ಲಾ ಚುನಾವಣೆ

ಢಾಕಾ: ಮುಂದಿನ ವರ್ಷ ಫೆಬ್ರವರಿಯಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲು ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಬದ್ಧವಾಗಿದೆ ಎಂದು ಕಾನೂನು ಸಲಹೆಗಾರ ಆಸಿಫ್ ನಜ್ರುಲ್ ಹೇಳಿದ್ದಾರೆ. ಮುಂದಿನ ವರ್ಷ ಫೆಬ್ರವರಿಯಲ್ಲಿ ಪ್ರಮುಖ ಸುಧಾರಣೆಗಳಿಲ್ಲದೆ ಮತ್ತು ಮಧ್ಯಂತರ ಸರಕಾರ ಪ್ರಾರಂಭಿಸಿದ ವಿಚಾರಣೆಗಳನ್ನು ಪೂರ್ಣಗೊಳಿಸದೆ ಚುನಾವಣೆಗಳು ನಡೆಯುವ ಸಾಧ್ಯತೆ ಬಗ್ಗೆ ನಾನಾ ರಾಜಕೀಯ ಪಕ್ಷಗಳು ಅನುಮಾನ ವ್ಯಕ್ತಪಡಿಸಿದ ಬೆನ್ನಿಗೇ ಈ ಸ್ಪಷ್ಟನೆ ಬಂದಿದೆ. ಚುನಾವಣೆಗಳನ್ನು ನಡೆಸುವ ಜವಾಬ್ದಾರಿ ಅಂತಿಮವಾಗಿ ಸರಕಾರದ್ದೇ ಹೊರತು ಯಾವುದೇ ರಾಜಕೀಯ ಪಕ್ಷದ್ದಲ್ಲ. ಫೆಬ್ರವರಿಯಲ್ಲಿ ಚುನಾವಣೆ ಪೂರ್ಣಗೊಳ್ಳುತ್ತದೆ ಎಂದು ನಾವು ನಿಸ್ಸಂದಿಗ್ಧವಾಗಿ ಹೇಳುತ್ತಿದ್ದೇವೆ ಎಂದು ಅವರು ಹೇಳಿದರು. ಬಾಂಗ್ಲಾ ಚುನಾವಣಾ ಆಯೋಗವು ಫೆಬ್ರವರಿ ತಿಂಗಳ ಮೊದಲ ವಾರದಲ್ಲಿ ಚುನಾವಣೆಗಳು ನಡೆಯಲಿವೆ. ಈ ವಾರದೊಳಗೆ ಚುನಾವಣೆ ವೇಳಾಪಟ್ಟಿ ಪ್ರಕಟಿಸುವುದಾಗಿ ತಿಳಿಸಿದೆ.

{ **ಅಮಿತ್ ಶಾ** } ಕೇಂದ್ರ ಗೃಹ ಸಚಿವ

ಉತ್ತರ ಪ್ರದೇಶ ರಾಜ್ಯದ ಶಹಜಹಾನ್‌ಪುರ ಜಿಲ್ಲೆಯಲ್ಲಿನ ಜಲಾಲಾಬಾದ್ ಪಟ್ಟಣಕ್ಕೆ 'ಪರಶುರಾಮಪುರಿ' ಎಂದು ಮರುನಾಮಕರಣ ಮಾಡಲಾಗಿದೆ. ಉತ್ತರ ಪ್ರದೇಶ ಸರಕಾರ ಈ ಸಂಬಂಧ ಸಲ್ಲಿಸಿದ್ದ ಪ್ರಸ್ತಾವನೆಗೆ ಕೇಂದ್ರ ಗೃಹ ಸಚಿವಾಲಯದ ಅನುಮೋದನೆ ನೀಡಲಾಗಿದೆ.

1.17 ಕೋಟಿ ಬಿಪಿಎಲ್ ಕಾರ್ಡ್ ರದ್ದತಿಗೆ ಕ್ರಮ

ಆದಾಯ ತೆರಿಗೆಪಾವತಿ, ನಾಲ್ಕು ಚಕ್ರದ ವಾಹನವಿದ್ದರೆ ಬಿಪಿಎಲ್ ರದ್ದು
ಕೇಂದ್ರದಿಂದ ಕಠಿಣ ನಿರ್ಧಾರ: ರಾಜ್ಯ-ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ
ಸೆ.30ರೊಳಗೆ ಅನರ್ಹ ಬಿಪಿಎಲ್ ಕಾರ್ಡ್‌ಗಳ ರದ್ದತಿಗೆ ಸ್ಪಷ್ಟ ಸೂಚನೆ

ದೆಹಲಿ: ದೇಶಾದ್ಯಂತ ಅನರ್ಹರ ಬಳಿ ಇರುವ 1.17 ಕೋಟಿ ಕುಟುಂಬಗಳ ಬಿಪಿಎಲ್(ಬಡತನ ರೇಖೆಯಿಂದ ಕೆಳಗೆ) ಕಾರ್ಡ್ ರದ್ದು ಮಾಡುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಕೇಂದ್ರ ಸರಕಾರ ಮುಂದಾಗಿದೆ. ಅನರ್ಹರಾಗಿದ್ದರೂ ನಕಲಿ ದಾಖಲೆ, ಸುಳ್ಳು ಮಾಹಿತಿ ನೀಡಿ, ವಶೀಲಿ ಮೂಲಕ ಬಿಪಿಎಲ್ ಕಾರ್ಡ್ ಪಡೆದುಕೊಂಡಿರುವ 1.17 ಕೋಟಿ ಕುಟುಂಬಗಳಿಗೆ ದೊಡ್ಡ ಆಘಾತ ಉಂಟಾಗುವಂತೆ ಮಾಡಲಿದೆ.

ಸೆ.30ರ ಬಳಿಕ ಆದೇಶ ಜಾರಿ

ಈ 1.17 ಕೋಟಿ ಜನರಲ್ಲಿ 4 ಚಕ್ರಗಳ ವಾಹನ ಹೊಂದಿರುವವರು, ಕುಟುಂಬದಲ್ಲೊಬ್ಬರು ಆದಾಯ ತೆರಿಗೆ ಪಾವತಿದಾರರು, ಖಾಸಗಿ ಕಂಪನಿಗಳಲ್ಲಿ ನಿರ್ದೇಶಕರಾಗಿರುವ ಜನರೂ ಸೇರಿದ್ದಾರೆ. ಹಾಗಾಗಿ, ಸೆ.30 ರೊಳಗೆ ಅನರ್ಹ ಬಿಪಿಎಲ್ ಕಾರ್ಡ್‌ದಾರರನ್ನು ಪಟ್ಟಿಯಿಂದ ತೆಗೆದುಹಾಕಲು ತ್ವರಿತಗತಿಯಲ್ಲಿ ಪರಿಶೀಲನೆಯನ್ನು ನಡೆಸುವಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸೇರಿದಂತೆ ದೇಶದ ಎಲ್ಲಾ ರಾಜ್ಯ ಸರಕಾರಗಳ ವಿವಿಧ ಇಲಾಖೆಗಳಿಗೆ ಕೇಂದ್ರ ಸರಕಾರ ನಿರ್ದೇಶನ ನೀಡಿದೆ.

ಭಾರತದಲ್ಲಿ ಸದ್ಯ 76.10 ಕೋಟಿ ಜನರು ತಾವು 'ಬಡತನ ರೇಖೆಯಿಂದ ಕೆಳಗಿರುವವರು' ಎಂದು ಹೇಳಿ ತಮ್ಮ ಕುಟುಂಬಕ್ಕೆ ಬಿಪಿಎಲ್ ಪಡಿತರ ಚೀಟಿ ಪಡೆದುಕೊಂಡಿದ್ದಾರೆ. ಅಂದರೆ, ಬಿಪಿಎಲ್ ಕಾರ್ಡ್ ಪಡೆದವರ ಸಂಖ್ಯೆಯೇ ದೇಶದ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿದೆ!

ಆದರೆ, ಕಳೆದ 11 ವರ್ಷಗಳ ಆಡಳಿತ ಕಾಲದಲ್ಲಿ ಕೋಟ್ಯಂತರ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ಕೇಂದ್ರದ ಎನ್‌ಡಿಎ ಸರಕಾರಕ್ಕೆ, ಈ ಅಂಕಿ ಅಂಶವೇ ಮುಜುಗರಕ್ಕೀಡು ಮಾಡುತ್ತಿದೆ. ಹಾಗಾಗಿಯೇ ಹಣವಂತರ, ಆದಾಯ ತೆರಿಗೆ ಪಾವತಿದಾರರಿರುವ ಕುಟುಂಬಗಳ ಬಿಪಿಎಲ್ ಕಾರ್ಡ್ ರದ್ದುಗೊಳಿಸುವ ಕ್ರಮಕ್ಕೆ ಮುಂದಾಗಿದೆ.

ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಪಟ್ಟಿಯನ್ನು ಆಧಾರ್, ಪರ್ಮನೆಂಟ್ ಅಕೌಂಟ್ ನಂಬರ್ (ಪ್ಯಾನ್), ವಾಹನ ಮಾಲೀಕತ್ವ, ಕಂಪನಿ ಒಡೆತನ ಮತ್ತಿತರ ದಾಖಲೆ-ದತ್ತಾಂಶಗಳನ್ನು ಪರಿಶೋಧಿಸಿ ಹೋಲಿಕೆ ಮಾಡಿ ನೋಡಿರುವ ಕೇಂದ್ರ ಸರಕಾರ, ಬಿಪಿಎಲ್ ಪಟ್ಟಿಯಲ್ಲಿ ವಿಂಗಡಣೆ ಪ್ರಕ್ರಿಯೆ ನಡೆಸಿದೆ. ಆ ಮೂಲಕವೇ ಉಚಿತ ಧಾನ, ಉಚಿತ ಆರೋಗ್ಯ ಸೇವೆಗಳಿಗೆ ಅರ್ಹರಲ್ಲದ ಕುಟುಂಬಗಳ ದೊಡ್ಡ ಪಟ್ಟಿ ಸಿದ್ಧಪಡಿಸಿದೆ. ದೇಶದ ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ 1.17 ಕೋಟಿ ಜನರು ಈ ಪಟ್ಟಿಯಲ್ಲಿದ್ದಾರೆ.

19.17 ಕೋಟಿ ಕಾರ್ಡ್: ದೇಶದಲ್ಲಿ ಆ.19ರವರೆಗಿನ ಮಾಹಿತಿ ಪ್ರಕಾರ ಒಟ್ಟು 19.17 ಕೋಟಿ ಪಡಿತರ ಚೀಟಿಗಳು ಬಳಕೆಯಲ್ಲಿವೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಒಟ್ಟು 76.10 ಕೋಟಿ ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡ್‌ನಿಂದ ಪ್ರಯೋಜನವಾಗುತ್ತಿದೆ ಎಂಬ ಮಾಹಿತಿ ಎನ್‌ಎಫ್‌ಎಸ್‌ಎನಿಂದ ಲಭ್ಯವಾಗಿದೆ. ನಿಯಮಗಳ ಪ್ರಕಾರ, ಸರಕಾರಿ ನೌಕರರು, ವಾರ್ಷಿಕ 1 ಲಕ್ಷ ರು.ಗಿಂತ ಹೆಚ್ಚಿನ ಆದಾಯವಿರುವ ಕುಟುಂಬ, 4 ಚಕ್ರದ ವಾಹನ ಮಾಲೀಕತ್ವ, ಆದಾಯ ತೆರಿಗೆ ಪಾವತಿದಾರರು ಬಿಪಿಎಲ್ ಕಾರ್ಡ್‌ಗೆ ಅರ್ಹರಲ್ಲ. ಈ ಅಂಶಕ್ಕೆ ಒತ್ತು ನೀಡಿರುವ ಕೇಂದ್ರ ಸರಕಾರ ಜು.8ರಂದು ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಲಹೆಗಾರರಿಗೆ ಪತ್ರ ಬರೆದು ಅನರ್ಹ ಬಿಪಿಎಲ್ ಪಡಿತರದಾರರ ಪಟ್ಟಿ ತಯಾರಿಸಲು ಸೂಚಿಸಿದೆ.

94.71 ಲಕ್ಷ ಜನ ಆದಾಯ ತೆರಿಗೆ ಪಾವತಿದಾರರು!

ಪಡಿತರ ಚೀಟಿದಾರ ಕುಟುಂಬ ಸದಸ್ಯರ ವಿವರಗಳನ್ನು ಕಲೆಹಾಕಿ, ಸರಕಾರದ ವಿವಿಧ ಇಲಾಖೆಗಳಲ್ಲಿರುವ ಮೂಲ ದತ್ತಾಂಶಗಳೊಂದಿಗೆ ಹೋಲಿಕೆ ಮಾಡಿ ಪರಿಶೀಲಿಸಲಾಗಿದೆ. ಈ ಕಾರ್ಯದಲ್ಲಿ ಆದಾಯ ತೆರಿಗೆ ಇಲಾಖೆ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು ರಸ್ತೆ ಸಾರಿಗೆ-ಹೆದ್ದಾರಿ ಸಚಿವಾಲಯದಲ್ಲಿನ ದತ್ತಾಂಶಗಳನ್ನು ಕಲೆಹಾಕಿ ಪರಿಶೀಲಿಸಲಾಗಿದೆ. ಅದರ ಪ್ರಕಾರವೇ 1.17 ಕೋಟಿ ಬಿಪಿಎಲ್ ಪಡಿತರ ಚೀಟಿದಾರರಲ್ಲಿ 94.71 ಲಕ್ಷ ಮಂದಿ ಆದಾಯ ತೆರಿಗೆ ಪಾವತಿದಾರರು ಇದ್ದಾರೆ. 17.51 ಲಕ್ಷ ಮಂದಿ ಸ್ವಂತಕ್ಕೆ 4 ಚಕ್ರದ ವಾಹನ ಹೊಂದಿದ್ದಾರೆ ಮತ್ತು 5.31 ಲಕ್ಷ ಜನರು ವಿವಿಧ ಕಂಪನಿಗಳಲ್ಲಿ ನಿರ್ದೇಶಕ ಹುದ್ದೆಯಲ್ಲಿದ್ದಾರೆ ಎಂಬುದನ್ನು ಕಂಡುಕೊಂಡಿದೆ.

ಈ ದತ್ತಾಂಶವನ್ನು ಆಧರಿಸಿಯೇ ರಾಜ್ಯ ಸರಕಾರಗಳ ಮೂಲಕ ಅನರ್ಹರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲು ನಿರ್ಧರಿಸಲಾಗಿದೆ. ಇದರಿಂದ ಬಿಪಿಎಲ್ ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸಿ ಕಾಯುತ್ತಿರುವ ನೈಜ ಫಲಾನುಭವಿಗಳನ್ನು ಗುರುತಿಸಿ ಅವರನ್ನು 'ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ'(ಎನ್‌ಎಫ್‌ಎಸ್‌ಎ) ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡಬಹುದಾಗಿದೆ ಎಂದು ಕೇಂದ್ರದ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಹೇಳಿದ್ದಾರೆ.

ದತ್ತಾಂಶ ಶುದ್ಧೀಕರಣ ಕಾರ್ಯ: ಸಂಜೀವ್ ಚೋಪ್ರಾ

ಪಡಿತರ ಚೀಟಿ ನಿರ್ವಹಣಾ ವ್ಯವಸ್ಥೆ (ಆರ್‌ಸಿಎಂಎಸ್) ಮೂಲಕ ಈಗಾಗಲೇ ನಕಲಿ ಫಲಾನುಭವಿಗಳು, ಮಡಿದವರು ಹಾಗೂ ನಿಷ್ಕ್ರಿಯ ಪಡಿತರ ಚೀಟಿಗಳನ್ನು ಗುರುತಿಸಲಾಗಿದೆ. ಇದರೊಟ್ಟಿಗೆ ವಿವಿಧ ಸಚಿವಾಲಯಗಳಲ್ಲಿ ಲಭ್ಯವಿರುವ ದತ್ತಾಂಶವನ್ನು ಹೋಲಿಕೆ ಮಾಡಿ ಪರಿಶೀಲಿಸಲಾಗಿದೆ. ಆ ಬಳಿಕವಷ್ಟೇ ಅನರ್ಹ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಕೇಂದ್ರದ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಹೇಳಿದ್ದಾರೆ. ಈ ಪಟ್ಟಿ ರಾಜ್ಯ ಸರಕಾರಗಳಿಗೆ 'ಎಪಿಐ' ಆಧಾರಿತ ಏಕೀಕರಣ ವ್ಯವಸ್ಥೆ ಮೂಲಕ ಲಭ್ಯವಾಗುವಂತೆ ಮಾಡಲಾಗಿದೆ. ರಾಜ್ಯ ಸರಕಾರಗಳು ಪಟ್ಟಿಯಲ್ಲಿರುವ ಅನರ್ಹ ಫಲಾನುಭವಿಗಳ ಮಾಹಿತಿಯನ್ನು ಮತ್ತೊಮ್ಮೆ ಪರಿಶೀಲಿಸಿ, ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಬೇಕು. ಆ ಮೂಲಕ ಇಲಾಖೆಯ ದತ್ತಾಂಶ ಶುದ್ಧಗೊಳಿಸಬೇಕು. ಈ ಪ್ರಕ್ರಿಯೆ 'ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ'(ಆರ್‌ಸಿಎಂಎಸ್)ಯ ನ್ಯಾಯಸಮ್ಮತ ಕ್ರಮ ಹಾಗೂ ಸಮಗ್ರತೆಯನ್ನು ಬಲಪಡಿಸುತ್ತದೆ. ಜತೆಗೆ, ಪ್ರಯೋಜನ ವಂಚಿತ ಬಡಕುಟುಂಬಗಳ ಜನರಿಗೆ ಪ್ರಯೋಜನ ಸಿಗುವಂತೆ ಮಾಡಲು ಅವಕಾಶ ಮಾಡಿಕೊಡುತ್ತದೆ ಎಂದು ಹೇಳಿದ್ದಾರೆ.

ಬಿಪಿಎಲ್ ಕಾರ್ಡ್ ಪ್ರಯೋಜನ!

ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಕ್ಕೆ ಸರಕಾರದಿಂದ ಅಕ್ಕಿ, ರಾಗಿ ಮತ್ತಿತರ ಆಹಾರ ಧಾನ್ಯಗಳು ಪಡಿತರ ವ್ಯವಸ್ಥೆಯಡಿ ಉಚಿತವಾಗಿ ಸಿಗುತ್ತಿವೆ. ಜತೆಗೆ ಲಕ್ಷಾಂತರ ರು. ವೆಚ್ಚದ ಶಸ್ತ್ರಚಿಕಿತ್ಸೆ, ಮಧುಮೇಹಿಗಳಿಗೆ ಉಚಿತ ಡಯಾಲಿಸಿಸ್, ಪ್ರಸೂತಿ, ಬಾಣಂತಿಯರಿಗೆ ಉಚಿತ ಪೌಷ್ಟಿಕ ಆಹಾರ ಸೇರಿದಂತೆ ಹಲವಾರು ಆರೋಗ್ಯ ಸೇವೆಗಳು ಉಚಿತವಾಗಿ ಲಭ್ಯವಾಗುತ್ತವೆ. ಗೃಹಲಕ್ಷ್ಮಿ ರೀತಿಯ ಆರ್ಥಿಕ ನೆರವು ಮತ್ತಿತರ ಯೋಜನೆಗಳ ಪ್ರಯೋಜನ, ಗ್ರಾಮೀಣಾಭಿವೃದ್ಧಿ ಯೋಜನೆ ಸೇರಿದಂತೆ ಹಲವಾರು ಪ್ರಯೋಜನಗಳಿಗೆ ಬಿಪಿಎಲ್ ಕಾರ್ಡ್ ಆಧಾರವಾಗಿದೆ.

ಟ್ರಂಪ್ ಪ್ರತಿ ಸುಂಕದ ಹಿಂದೆ ವ್ಯಾಪಾರ ಸಲಹೆಗಾರ ಪೀಟರ್

ಅಮೆರಿಕ-ಭಾರತ ಬಿರುಕಿಗೂ ನವರೊ ಕಾರಣ!

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವರೊ ಇತ್ತೀಚೆಗೆ ಭಾರತ ವಿರುದ್ಧ ನಕಾರಾತ್ಮಕ ಹೇಳಿಕೆಗಳಿಂದ ಈಗ ಭಾರೀ ಸುದ್ದಿಯಲ್ಲಿದ್ದಾರೆ. ಭಾರತ ಇತ್ತೀಚೆಗೆ ರಷ್ಯಾ ಮತ್ತು ಚೀನಾ ಜತೆ ಸ್ನೇಹ ಹೆಚ್ಚಿಸಿಕೊಳ್ಳುತ್ತಿದೆ ಎಂದು ಡೊನಾಲ್ಡ್ ಟ್ರಂಪ್ ಅವರ ತಲೆಗೆ ತುಂಬಿರುವ ಪೀಟರ್ ನವರೊ, ಅದೇ ಕಾರಣವಾಗಿ ಭಾರತದ ವಿರುದ್ಧ ಕಟುವಾಗಿ ಟೀಕೆ ಮಾಡಲಾರಂಭಿಸಿದ್ದಾರೆ.



'ಭಾರತ ದೊಡ್ಡ ಅವಕಾಶವಾದಿ ದೇಶ' ಎಂದು ಟೀಕಿಸಿರುವ ಪೀಟರ್, ಭಾರತಕ್ಕೆ ಸದ್ಯದಲ್ಲೇ ಹೆಚ್ಚು ನೋವು ತರುವ ಸ್ಥಳಕ್ಕೇ ಪೆಟ್ಟು ಬೀಳಲಿದೆ ಎಂದೂ ಬೆದರಿಕೆ ರೀತಿಯ ಮಾತನಾಡಿದ್ದಾರೆ. ಅಮೆರಿಕದ ಕಾರ್ಯತಂತ್ರ ಪಾಲುದಾರನಾಗಲು ಬಯಸುವ ಭಾರತ, ಅದಕ್ಕೆ ತಕ್ಕಂತೆಯೇ ವರ್ತಿಸಬೇಕಿದೆ ಎಂದೂ ಬುದ್ಧಿಮಾತು ಹೇಳಿದ್ದಾರೆ.

ಪೀಟರ್ ನವರೊ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದ ಅಮೆರಿಕದ ಅರ್ಥಶಾಸ್ತ್ರಜ್ಞ ಮತ್ತು ಪ್ರಾಧ್ಯಾಪಕ. ಮೊದಲು ಡೆಮಾಕ್ರಟಿಕ್ ಪಕ್ಷದ ಬೆಂಬಲಿಗರಾಗಿ ಉದಾರ ಆರ್ಥಿಕ ನೀತಿಯನ್ನು ಪ್ರತಿಪಾದಿಸುತ್ತಿದ್ದರು. ಈಗ ನೀತಿ ಬದಲಿಸಿ, 'ಅಮೆರಿಕವೇ ಮೊದಲು' ಎಂಬ ಮಂತ್ರ ಪಠಿಸಲಾರಂಭಿಸಿದ್ದಾರೆ. ಅದೇ ನೀತಿಯನ್ನು ಟ್ರಂಪ್‌ಗೂ ಬೋಧಿಸುತ್ತಿದ್ದಾರೆ ಎನ್ನಲಾಗಿದೆ.

ಡೊನಾಲ್ಡ್ ಟ್ರಂಪ್ ಮೊದಲ ಅವಧಿಯಲ್ಲಿ (2017-20) ಅಮೆರಿಕ ಅಧ್ಯಕ್ಷರಾದಾಗ ಪೀಟರ್ ಶ್ವೇತಭವನದಲ್ಲಿ ರಾಷ್ಟ್ರೀಯ ವ್ಯಾಪಾರ ಮಂಡಳಿ ನಿರ್ದೇಶಕರಾಗಿದ್ದರು. ಈಗ ಟ್ರಂಪ್ 2ನೇ ಅವಧಿಯಲ್ಲಿ ಪೀಟರ್, ವ್ಯಾಪಾರ-ಉತ್ಪಾದನೆ ವಿಭಾಗದ ಹಿರಿಯ ಸಲಹೆಗಾರರಾಗಿದ್ದಾರೆ. ಅದೇ ಕಾರಣವಾಗಿ ಅಮೆರಿಕ ಉತ್ಪನ್ನಗಳಿಗೆ ಆದ್ಯತೆ ನೀಡುತ್ತಿದ್ದಾರೆ ಎಂದು ಲಂಡನ್ ಡೈಲಿ ವರದಿ ಮಾಡಿದೆ. ಪೀಟರ್ ನವರೊ, ಟ್ರಂಪ್‌ರ ಸುಂಕ ನೀತಿಗಳ ಮಾಸ್ಟರ್ ಮೈಂಡ್ ಎಂದೇ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನವರೊ ರಚಿಸಿದ ಹಲವು ಪುಸ್ತಕಗಳಲ್ಲಿ 'ಚೀನಾದಿಂದ ಸಾವು' ಅತ್ಯಂತ ಪ್ರಸಿದ್ಧವಾಗಿದೆ. ಅದರಲ್ಲಿ ಪೀಟರ್ ಚೀನಾದ ಆರ್ಥಿಕ ನೀತಿಗಳನ್ನು ಟೀಕಿಸಿದ್ದಾರೆ. ಟ್ರಂಪ್ ಅಳಿಯ ಜೇರೆಡ್ ಕುಶ್ನರ್ ಈ ಪುಸ್ತಕ ಓದಿ ಪ್ರಭಾವಿತರಾಗಿ ಪೀಟರ್ ಅವರನ್ನು ಟ್ರಂಪ್ ಆಡಳಿತದ ಭಾಗವಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎನ್ನಲಾಗಿದೆ.

ಅಮೆರಿಕ ಮಿತ್ರರಿಂದ ದೂರ

ಅಮೆರಿಕಕ್ಕೆ ರಫ್ತು ಮಾಡುವ ದೇಶಗಳ ಮೇಲೆ ಭಾರೀ ಪ್ರಮಾಣದ ಪ್ರತಿಸುಂಕ ವಿಧಿಸಿದರೆ ಆ ದೇಶಗಳ ವಸ್ತುಗಳ ಮಾರಾಟ ಅಮೆರಿಕದಲ್ಲಿ ತಗ್ಗುತ್ತದೆ. ಇದರಿಂದ ಅಮೆರಿಕದ ಉತ್ಪಾದನಾ ವಲಯಕ್ಕೆ ಬೇಡಿಕೆ ಹೆಚ್ಚಳವಾಗುತ್ತದೆ. ಪರಿಣಾಮ ಉದ್ಯೋಗ ಸೃಷ್ಟಿ ಹೆಚ್ಚುತ್ತದೆ, ಅದು ದೇಶದ ಆರ್ಥಿಕತೆ ಮತ್ತಷ್ಟು ಬಲಪಡಿಸುತ್ತವೆ. ಅಲ್ಲದೇ ಸುಂಕ ಹೇರಿಕೆಯಿಂದ ವರ್ಷಕ್ಕೆ 60000 ಕೋಟಿ ಡಾಲರ್ ಆದಾಯ ಹೆಚ್ಚುವರಿಯಾಗಿ ಸರಕಾರಕ್ಕೆ ಬರುತ್ತದೆ ಎಂಬುದು ಪೀಟರ್ ನವರೊ ವಾದವಾಗಿದೆ. ಆದರೆ ತೆರಿಗೆ ಪ್ರತಿಷ್ಠಾನ ಮತ್ತು ಯೇಲ್ ವಿಶ್ವವಿದ್ಯಾಲಯದ ಬಜೆಟ್ ಲ್ಯಾಬ್‌ನಂತಹ ಸಂಸ್ಥೆಗಳು ಈ ಅಂಕಿ-ಅಂಶ ಅರ್ಧದಷ್ಟು ಫಲವನ್ನಷ್ಟೇ ಕೊಡಬಲ್ಲದು ಎಂದು ಹೇಳುತ್ತಿವೆ. ನವರೊ ಸುಂಕ ನೀತಿಯಿಂದಾಗಿ ಅಮೆರಿಕ, ಭಾರತದಂತಹ ಮಿತ್ರರಾಷ್ಟ್ರಗಳಿಂದ ನಿಧಾನವಾಗಿ ದೂರವಾಗುತ್ತಿದೆ ಎಂದೂ ಗಮನ ಸೆಳೆದಿವೆ.

ದೆಹಲಿ ಸಿಎಂ ರೇಖಾ ಗುಪ್ತಾ ಮೇಲೆ ಹಲ್ಲೆ, ಆರೋಪಿ ಸೆರೆ

ಗುಜರಾತ್ ಮೂಲದ ವ್ಯಕ್ತಿಗೆ ಮಾನಸಿಕ ಅಸ್ವಸ್ಥತೆ ಶಂಕೆ

ದೆಹಲಿ: ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಬುಧವಾರ ಬೆಳಗ್ಗೆ 7.30ರಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕಾರ-ಪರಿಹಾರ ಸೂಚನೆ ಕಾರ್ಯಕ್ರಮ ನಡೆಸಿದ್ದಾಗಲೇ ಅರ್ಜಿ ನೀಡುವ ನೆಪದಲ್ಲಿ ಬಂದಿದ್ದ 41 ವರ್ಷದ ವ್ಯಕ್ತಿಯೊಬ್ಬ ಹಠಾತ್ತನೆ ಸಿಎಂ ಕೈ ಹಿಡಿದೆಳೆದು ಹಲ್ಲೆ ಮಾಡಲೆತ್ನಿಸಿದ್ದಾನೆ. ಸ್ಥಳದಲ್ಲಿದ್ದ ಸಾರ್ವಜನಿಕರು, ಸಿಎಂ ಭದ್ರತಾ ಸಿಬ್ಬಂದಿ ತಕ್ಷಣವೇ ಹಲ್ಲೆಕೋರರನ್ನು ಹಿಡಿದು ಸಿಎಂ ನಿವಾಸದ ಆವರಣದಲ್ಲೇ ಇದ್ದ ದೆಹಲಿ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.

ಈ ನಡುವೆ ಪೊಲೀಸರು ನಡೆಸಿದ ಪ್ರಾಥಮಿಕ ತನಿಖೆಯಲ್ಲಿ ಹಲವು ವಿಚಾರಗಳು ಬೆಳಕಿಗೆ ಬಂದಿದ್ದು, ಮೇಲ್ನೋಟಕ್ಕೆ ಆತ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದನೆಂದು ತಿಳಿದುಬಂದಿದೆ.

ದೆಹಲಿಯ ಸಿವಿಲ್ ಲೈನ್ಸ್ ಬಳಿ ಇರುವ ತಮ್ಮ ನಿವಾಸದಲ್ಲಿ 'ಜನ್ ಸುನ್ವಾಯಿ'(ಜನರ ಅಹವಾಲು ಆಲಿಕೆ) ಕಾರ್ಯಕ್ರಮ ನಡೆಸಿದ್ದ ರೇಖಾ ಗುಪ್ತಾ ಮೇಲೆ ಹಲ್ಲೆ ನಡೆಸಿದವನನ್ನು ಗುಜರಾತ್‌ನ ರಾಜ್‌ಕೋಟ್ ಜಿಲ್ಲೆಯ ರಾಜೇಶ್ ಭಾಯಿ ಖಿಮ್ಜಿ ಭಾಯಿ ಸಕರಿಯಾ ಎಂದು ಗುರುತಿಸಲಾಗಿದೆ. ಈತ ತಿಹಾರ್ ಜೈಲಿನಲ್ಲಿದ್ದ ತನ್ನ ಸಂಬಂಧಿಕನನ್ನು ಬಿಡುಗಡೆ ಮಾಡಿಸಲು ನೆರವಾಗುವಂತೆ ಸಿಎಂಗೆ ಮನವಿ ಕೊಡಲು ಬಂದಿದ್ದ ಎನ್ನಲಾಗಿದೆ.

ಆದರೆ, ಗುಜರಾತ್‌ನಲ್ಲಿರುವ ಆತನ ತಾಯಿ, ನನ್ನ ಮಗ ಪ್ರಾಣಿಪ್ರೇಮಿ. ದೆಹಲಿಯಿಂದ ಬೀದಿನಾಯಿಗಳನ್ನು ಸ್ಥಳಾಂತರಿಸಲು ಸುಪ್ರೀಂ ಕೋರ್ಟ್ ಆದೇಶಿಸಿದ ಬಳಿಕ ಬಹಳ ಬೇಸರಗೊಂಡಿದ್ದ. ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲೂ ಭಾಗಿಯಾಗಿದ್ದ ಎಂದು ಹೇಳಿದ್ದಾರೆ. ಮಗ ಸ್ವಲ್ಪ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾನೆ ಎಂದೂ ಹೇಳಿದ್ದಾರೆಂದು ವರದಿಯಾಗಿದೆ.

ಎನ್‌ಸಿಇಆರ್‌ಟಿ ಪಠ್ಯದಲ್ಲಿ ಆಪರೇಷನ್ ಸಿಂದೂರ್

ದೆಹಲಿ: ಭಾರತೀಯ ಸೇನಾಪಡೆಗಳ 'ಆಪರೇಷನ್ ಸಿಂದೂರ್' ಕಾರ್ಯಾಚರಣೆ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು 'ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ'(ಎನ್‌ಸಿಇಆರ್‌ಟಿ) ಪಠ್ಯದ 2 ವಿಶೇಷ ಮಾದರಿಗಳನ್ನು ಬುಧವಾರ ಬಿಡುಗಡೆ ಮಾಡಿದೆ.

'ಆಪರೇಷನ್ ಸಿಂದೂರ್ ಎ ಸಾಗಾ ಆಫ್ ವೇಲರ್' ಶೀರ್ಷಿಕೆಯ ಮೊದಲ ಮಾದರಿ ಪಠ್ಯವನ್ನು ಪೂರ್ವಸಿದ್ಧತಾ ಮತ್ತು ಮಧ್ಯಮ ಹಂತದ ತರಗತಿಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. 'ಆಪರೇಷನ್ ಸಿಂದೂರ್ ಎ ಮಿಷನ್ ಆಫ್ ಹಾನರ್ ಅಂಡ್ ಬ್ರೇವರಿ' ದ್ವಿತೀಯ ಹಂತದ ಪಠ್ಯದಲ್ಲಿದ್ದು, ಎರಡನ್ನೂ ಆನ್‌ಲೈನ್‌ನಲ್ಲಿ ಬಿಡುಗಡೆ ಮಾಡಲಾಗಿದೆ.



ಮೇ 13ರಂದು ಆದಂಪುರದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೈನಿಕರನ್ನು ಭೇಟಿಯಾಗುವ ಚಿತ್ರವನ್ನು ಪಠ್ಯದಲ್ಲಿ ಬಳಸಲಾಗಿದೆ. 'ಆಪರೇಷನ್ ಸಿಂದೂರ್' ಸಾಮಾನ್ಯ ಸೇನಾ ಕಾರ್ಯಾಚರಣೆ ಅಲ್ಲ. ಅದು ಭಾರತದ ನೀತಿ, ಉದ್ದೇಶ ಮತ್ತು ನಿರ್ಣಾಯಕ ಸಾಮರ್ಥ್ಯದ ಸಂಗಮ ಎಂದು ಪ್ರಧಾನಿ ಮೋದಿ ಅವರ ನುಡಿಗಳನ್ನು ಚಿತ್ರದ ಶೀರ್ಷಿಕೆಯಾಗಿಸಲಾಗಿದೆ.

ಮಾಧ್ಯಮಿಕ ತರಗತಿ ಪಠ್ಯದಲ್ಲಿ ಭಾರತದಲ್ಲಿನ ಶಾಂತಿ ಕದಡಲು ಪಾಕ್ ನಡೆಸುತ್ತಾ ಬಂದ ಹುನ್ನಾರುಗಳು, 1947 ಮತ್ತು 1965 ಹಾಗೂ 1971ರ ಯುದ್ಧಗಳು ಮತ್ತು 1999ರ ಕಾರ್ಗಿಲ್ ಯುದ್ಧಗಳನ್ನು ಒಳಪಡಿಸಲಾಗಿದೆ. 2016ರ ಉರಿ ಸೇನಾ ನೆಲೆ ಮೇಲೆ ಉಗ್ರರ ದಾಳಿಯಲ್ಲಿ 19 ಸೈನಿಕರು ಹುತಾತ್ಮರಾಗಿದ್ದು, 2019ರ ಪುಲ್ವಾಮಾ ದಾಳಿಯಲ್ಲಿ 40 ಸಿಆರ್‌ಪಿಎಫ್ ಯೋಧರು ಹುತಾತ್ಮರಾಗಿದ್ದನ್ನು ವಿವರಿಸಲಾಗಿದೆ. ಪಾಕ್‌ನಲ್ಲಿನ ಉಗ್ರರ ಶಿಬಿರಗಳ ಮೇಲಿನ ದಾಳಿಗೆ ಭಾರತ ಬಳಸಿದ ಕ್ಷಿಪಣಿಗಳು ಮತ್ತು ನಕ್ಷೆಗಳನ್ನು ಬಳಸಲಾಗಿದೆ. 'ಆಪರೇಷನ್ ಸಿಂದೂರ್ ಕೇವಲ ಒಂದು ಹೆಸರಲ್ಲ, ದೇಶದ 140 ಕೋಟಿ ಜನರ ಭಾವನೆ' ಎಂಬುದನ್ನು ಪಠ್ಯದಲ್ಲಿ ಬಿಂಬಿಸಲಾಗಿದೆ.

97 ತೇಜಸ್ ವಿಮಾನ ಖರೀದಿಗೆ ಸಂಪುಟ ಅಸ್ತು

ದೆಹಲಿ: ಭಾರತೀಯ ವಾಯುಪಡೆಗೆ ಲೈಟ್ ಕಾಂಬ್ಯಾಟ್ ಏರ್‌ಕ್ರಾಫ್ಟ್(ಎಲ್‌ಸಿಎ) ಶ್ರೇಣಿಯ 97 'ತೇಜಸ್ ಮಾರ್ಕ್ -1ಎ' ಯುದ್ಧ ವಿಮಾನಗಳ ಖರೀದಿ ಸೇರಿದಂತೆ ವಿವಿಧ ಯುದ್ಧ ಸಾಮಗ್ರಿಗಳ ಖರೀದಿಯ ಒಟ್ಟು 85,500 ಕೋಟಿ ರು.ಗಳ ದೊಡ್ಡ ಒಪ್ಪಂದಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ.

97 ಎಲ್‌ಸಿಎ ತೇಜಸ್ ಮಾರ್ಕ್ 1ಎ ಯುದ್ಧ ವಿಮಾನಗಳ ಖರೀದಿ ವಹಿವಾಟಿಗೆ ರಕ್ಷಣಾ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದ ಉನ್ನತ ಸಚಿವ ಸಂಪುಟ ಮಟ್ಟದ ಸಭೆಯಲ್ಲಿ ಮಂಗಳವಾರ ಅನುಮೋದನೆ ನೀಡಲಾಗಿದೆ.

ಸರಕಾರದ ಈ ಕ್ರಮದಿಂದ ಭಾರತೀಯ ವಾಯುಪಡೆಯ ಶಕ್ತಿ ಮತ್ತಷ್ಟು ಹೆಚ್ಚಲಿದೆ. ಇನ್ನೊಂದೆಡೆ ಸರಕಾರಿ ಸ್ವಾಮ್ಯದ 'ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.'(ಎಚ್‌ಎಎಲ್)ಗೆ ಹೆಚ್ಚಿನ ಯುದ್ಧ ವಿಮಾನಗಳ ತಯಾರಿಕೆಗೆ ಅವಕಾಶ ಮಾಡಿಕೊಟ್ಟಂತಾಗಿದೆ. ಭಾರತದ ರಕ್ಷಣಾ ಕ್ಷೇತ್ರದಲ್ಲಿ 'ಆತ್ಮನಿರ್ಭರ ಭಾರತ' ಉಪಕ್ರಮ ಮತ್ತಷ್ಟು ಬಲಪಡಿಸಲು ಕೇಂದ್ರ ಸರಕಾರ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ.

ಇದಕ್ಕೂ ಮೊದಲು 2021ರಲ್ಲಿ 48,000 ಕೋಟಿ ರು.ಗಳ 83 ಯುದ್ಧ ವಿಮಾನಗಳ ಖರೀದಿಗೆ ಅನುಮೋದನೆ ನೀಡಲಾಗಿತ್ತು. ತೇಜಸ್ ಲಘು ಯುದ್ಧ ವಿಮಾನ ತಯಾರಿಕೆಯು ದೇಶೀ ರಕ್ಷಣಾ ಉತ್ಪಾದನೆಯಲ್ಲಿ ಮಹತ್ವದ ಮೈಲುಗಲ್ಲಾಗಿದೆ.

ಉಪ ರಾಷ್ಟ್ರಪತಿ: ಸಿಪಿಆರ್ ನಾಮಪತ್ರ

ಪ್ರಧಾನಿ ಮೋದಿ, ಸಚಿವ ಅಮಿತ್ ಶಾ, ಎನ್‌ಡಿಎ ಮಿತ್ರರು ಹಾಜರಿ

ದೆಹಲಿ: ಸೆ.9ರಂದು ನಡೆಯಲಿರುವ ಉಪ ರಾಷ್ಟ್ರಪತಿ ಚುನಾವಣೆಯಲ್ಲಿ 'ಎನ್‌ಡಿಎ' ಮೈತ್ರಿಕೂಟದ ಅಭ್ಯರ್ಥಿಯಾಗಿರುವ ಮಹಾರಾಷ್ಟ್ರದ ಹಾಲಿ ಗವರ್ನರ್ ಸಿ.ಪಿ.ರಾಧಾಕೃಷ್ಣನ್ ಅವರು ಬುಧವಾರ ಒಟ್ಟು 4 ಸೆಟ್‌ಗಳಲ್ಲಿ ನಾಮಪತ್ರ ಸಲ್ಲಿಸಿದರು. ಮೊದಲ ಸೆಟ್ ನಾಮಪತ್ರಕ್ಕೆ ಪ್ರಧಾನಿ ಮೋದಿ ಮುಖ್ಯ ಪ್ರತಿಪಾದಕರಾಗಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ಅಧ್ಯಕ್ಷರೂ ಆಗಿರುವ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹಾಗೂ ಮಾಜಿ ಕೇಂದ್ರ ಸಚಿವ ಪ್ರಫುಲ್ ಪಟೇಲ್ ಸೇರಿ ಎನ್‌ಡಿಎ ಮೈತ್ರಿಕೂಟದ ಪಕ್ಷಗಳ ಮುಖಂಡರೂ ಉಪಸ್ಥಿತರಿದ್ದರು. ರಾಧಾಕೃಷ್ಣನ್ ಅವರು ನಾಮಪತ್ರ ಸಲ್ಲಿಕೆಗೂ ಮುನ್ನ ಸಂಸತ್ ಆವರಣದಲ್ಲಿನ ಗಾಂಧಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದಿರುವ 68 ವರ್ಷ ವಯಸ್ಸಿನ ರಾಧಾಕೃಷ್ಣನ್ ಸಾರ್ವಜನಿಕ ಸೇವೆ ಮತ್ತು ಆಡಳಿತ ವಿಭಾಗಗಳಲ್ಲಿ 4 ದಶಕಗಳಿಗೂ ಹೆಚ್ಚು ಅನುಭವ ಹೊಂದಿದ್ದಾರೆ. ವಿಶ್ವಸಂಸ್ಥೆಯ ಮಹಾಸಭೆಯ ಸಂಸದೀಯ ನಿಯೋಗದ(2004) ಭಾಗವಾಗಿದ್ದರು. ಅಲ್ಲದೇ ತೈವಾನ್‌ಗೆ ತೆರಳಿದ್ದ ಮೊದಲ ಭಾರತೀಯ ನಿಯೋಗದ ಭಾಗವಾಗಿದ್ದರು.

ಚೀನಾ ನಂಟಿನಲ್ಲಿ ಪ್ರಗತಿ: ಮೋದಿ ಸಂತಸ

ದೆಹಲಿ: ಭಾರತ-ಚೀನಾ ಸಂಬಂಧ ಸುಧಾರಣೆ ಪ್ರಕ್ರಿಯೆಯಲ್ಲಿ ಸ್ಥಿರ ಪ್ರಗತಿ ಕಾಣಬಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಉಭಯ ದೇಶಗಳೂ ಕಳೆದ 10 ತಿಂಗಳ ಅವಧಿಯಲ್ಲಿ ಪರಸ್ಪರರ ಹಿತಾಸಕ್ತಿಗಳನ್ನೂ, ಸೂಕ್ಷ್ಮ ಸಂಗತಿಗಳನ್ನೂ ಗೌರವಿಸುತ್ತಾ ಬಂದಿರುವುದರಿಂದ ಇದು ಸಾಧ್ಯವಾಗಿದೆ ಮೋದಿ ಅಭಿಪ್ರಾಯಪಟ್ಟಿದ್ದಾರೆ. ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರನ್ನು ಮಂಗಳವಾರ ಭೇಟಿ ಮಾಡಿದ ನಂತರ ಮೋದಿ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

ವಾಂಗ್ ಯಿ ಅವರ ಭೇಟಿ ಸಂತಸ ತಂದಿದೆ. 2024ರ ಅಕ್ಟೋಬರ್‌ನಲ್ಲಿ ರಷ್ಯಾದ ಕಜನ್ ನಗರದಲ್ಲಿ 16ನೇ 'ಬ್ರಿಕ್ಸ್' ಶೃಂಗಸಭೆ ಸಂದರ್ಭ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜತೆ ಮಹತ್ವದ ಮಾತುಕತೆ ನಡೆದು ಎರಡೂ ದೇಶಗಳ ನಡುವಿನ ಉದ್ವಿಗ್ನತೆ ಕಡಿಮೆಯಾಗಲು ಆರಂಭಗೊಂಡಿತು ಎಂದು ಪ್ರಧಾನಿ ಮೋದಿ ನೆನಪಿಸಿಕೊಂಡಿದ್ದಾರೆ.

ಎಸ್‌ಸಿಒ ಶೃಂಗಸಭೆಗೆ ಆಹ್ವಾನಿಸಿದ್ದಕ್ಕಾಗಿ ಜಿನ್‌ಪಿಂಗ್ ಅವರಿಗೆ ಧನ್ಯವಾದ ಹೇಳಿರುವ ಮೋದಿ, 'ಎಸ್‌ಸಿಒ' ಶೃಂಗಸಭೆಗೆ ಆ.31ರಂದು ಚೀನಾದ ಟಿಯಾಂಜಿನ್ ನಗರಕ್ಕೆ ತೆರಳುತ್ತಿದ್ದೇನೆ. ಕ್ಸಿ ಜಿನ್‌ಪಿಂಗ್ ಜತೆಗಿನ ಸಭೆಯನ್ನು ಎದುರು ನೋಡುತ್ತಿದ್ದೇನೆ. ಭಾರತ-ಚೀನಾ ಸ್ಥಿರ-ರಚನಾತ್ಮಕ ಸಂಬಂಧಗಳು ಪ್ರಾದೇಶಿಕ-ಜಾಗತಿಕ ಶಾಂತಿ ಮತ್ತು ಸಮೃದ್ಧಿಗೆ ಗಮನಾರ್ಹ ಕೊಡುಗೆ ನೀಡುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೂರು ಪ್ರಮುಖ ಬೇಡಿಕೆ ಈಡೇರಿಕೆ

ಚೀನಾ ಅಪರೂಪದ ಭೂ ಖನಿಜಗಳು, ರಸಗೊಬ್ಬರಗಳು ಮತ್ತು ಸುರಂಗ ಕೊರೆವ ಯಂತ್ರಗಳನ್ನು ಭಾರತಕ್ಕೆ ಪೂರೈಸುವುದಾಗಿ ಒಪ್ಪಿಕೊಂಡಿದೆ. ಇದರಿಂದ ಭಾರತದ ದೀರ್ಘ ಕಾಲದ 3 ಬೇಡಿಕೆಗಳು ಈಡೇರಿದಂತಾಗಿದೆ. ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ- ವಿದೇಶಾಂಗ ಸಚಿವ ಎಸ್. ಜೈಶಂಕರ್ ನಡುವಿನ ಸಭೆಯಲ್ಲಿ ಚೀನಾದಿಂದ ಈ ಭರವಸೆ ಸಿಕ್ಕಿದೆ. ಚೀನಾದ ಈ ನಡೆ ಉಭಯ ದೇಶಗಳ ಸಂಬಂಧ ವೃದ್ಧಿಗೆ ಪ್ರಮುಖ ಸಂಕೇತವಾಗಿದೆ.

ಸಮಾಚಾರ ಸಣ್ಣದಲ್ಲ

ಮುಂಬೈ ಮಳೆಗೆ ನಟ, ನಟಿಯರ ಮನೆ ಜಲಾವೃತ

ಮುಂಬೈ: ಮಹಾನಗರಿ ಮುಂಬೈನಲ್ಲಿ ಕಳೆದು ಕೆಲವು ದಿನಗಳಿಂದ ನಿರಂತರ ಮಳೆಯಾಗುತ್ತಿದ್ದು, ಖ್ಯಾತ ಬಾಲಿವುಡ್ ನಟ, ನಟಿಯರ ಮನೆ ಜಲಾವೃತಗೊಂಡಿವೆ. ಬುಧವಾರ ಕೂಡ ಮುಂಬೈನಲ್ಲಿ ಭಾರೀ ಮಳೆಯಾಗಿದ್ದು, ಹಲವು ಜಿಲ್ಲೆಗಳಿಗೆ ರೆಡ್ ಅಲರ್ಟ್ ನೀಡಲಾಗಿದೆ. ಅಪಾರ ಪ್ರಮಾಣದ ಹಾನಿಯುಂಟಾಗಿದ್ದು, ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ. ಧಾರಾಕಾರ ಮಳೆಯಿಂದಾಗಿ ಬಾಲಿವುಡ್ ಸೆಲೆಬ್ರೆಟಿಗಳ ಮನೆಗೂ ನೀರು ನುಗ್ಗಿದೆ. ಅಮಿತಾಬ್ ಬಚ್ಚನ್, ಅಜಯ್ ದೇವಗನ್, ಸನ್ನಿ ಡಿಯೋಲ್, ಪ್ರಿಯಾಂಕಾ ಚೋಪ್ರಾ, ಸೇರಿದಂತೆ ಹಲವರ ಮನೆಗಳಿಗೆ ನೀರು ನುಗ್ಗಿ ಅವಾಂತರ ಉಂಟಾಗಿದೆ. ಈ ಕುರಿತು ವ್ಲಾಗರ್ ಓರ್ವ ವಿಡಿಯೋ ಮಾಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿದೆ. ಜುಹುವಿನಲ್ಲಿರುವ ಅಮಿತಾಬ್ ಬಚ್ಚನ್ ಅವರ ಎರಡನೇ ಮನೆಯಾದ 'ಪ್ರತೀಕ್ಷಾದ ಹೊರಗೆ ಕೆಸರು ತುಂಬಿಕೊಂಡಿದೆ. ಸ್ವತಃ ಅಮಿತಾಬ್ ಬಚ್ಚನ್ ಅವರೇ ವೈಪರ್‌ನಿಂದ ನೆಲ ಒರೆಸುತ್ತಿದ್ದರು ಎಂದು ಹೇಳಲಾಗುತ್ತಿದ್ದು, ಎಷ್ಟೇ ಶ್ರೀಮಂತರಾಗಿದ್ದರೂ, ಮುಂಬೈ ಮಳೆಯಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹಲವರು ಕಾಮೆಂಟ್ ಮಾಡಿದ್ದಾರೆ.

ಮಂತ್ರಾಲಯ ಹುಂಡಿ 3.35 ಕೋಟಿ ಸಂಗ್ರಹ

ರಾಯಚೂರು: ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಕಳೆದ 22 ದಿನಗಳ ಹುಂಡಿ ಎಣಿಕೆ ಮುಕ್ತಾಯವಾಗಿದ್ದು, ಭಕ್ತರಿಂದ 3.35 ಕೋಟಿ ರು. ಕಾಣಿಕೆ ಸಂಗ್ರಹವಾಗಿದೆ. ಆಗಸ್ಟ್ ತಿಂಗಳಲ್ಲಿ ಮಂತ್ರಾಲಯ ಮಠಕ್ಕೆ ಕೋಟ್ಯಂತರ ರೂಪಾಯಿ ಕಾಣಿಕೆ ಹರಿದು ಬಂದಿದ್ದು, ಸಂಗ್ರಹವಾದ ಕಾಣಿಕೆಯಲ್ಲಿ 3,24,52,256 ರು. ನೋಟುಗಳು, 10,79,500 ರು. ನಾಣ್ಯಗಳು ಸಂಗ್ರಹವಾಗಿವೆ. ಒಟ್ಟು ಕಳೆದ 22 ದಿನಗಳಲ್ಲೇ 3,35,31,756 ರು. ಕಾಣಿಕೆ ಸಂಗ್ರಹವಾಗಿದೆ. ಇನ್ನೂ 74 ಗ್ರಾಂ ಚಿನ್ನ, 1,440 ಗ್ರಾಂ ಬೆಳ್ಳಿ ಕಾಣಿಕೆ ರೂಪದಲ್ಲಿ ಬಂದಿದೆ. ಮಂಗಳವಾರ ಮಂತ್ರಾಲಯ ಮಠದಲ್ಲಿ ಪ್ರಾರಂಭವಾದ ಹುಂಡಿ ಎಣಿಕೆ ಕಾರ್ಯ ಬುಧವಾರ ಮುಕ್ತಾಯವಾಗಿದೆ. ಎಣಿಕೆ ಕಾರ್ಯ ದಲ್ಲಿ ಮಠದ ನೂರಾರು ಸಿಬ್ಬಂದಿ, ಭಜನಾ ಮಂಡಳಿ, ಕರಸೇವಕರು ಭಾಗಿಯಾಗಿದ್ದರು.

ಅಗ್ನಿ ಕ್ಷಿಪಣಿ-5 ಉಡಾವಣೆ ಯಶಸ್ವಿ

ಪುರಿ: ಭಾರತವು ಬುಧವಾರ ಒಡಿಶಾದ ಚಂಡಿಪುರದಲ್ಲಿರುವ ಸಮಗ್ರ ಪರೀಕ್ಷಾ ಶ್ರೇಣಿಯಿಂದ ಮಧ್ಯಂತರ ಶ್ರೇಣಿಯ 5000 ಕಿಮೀ ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣಿ ಅಗ್ನಿ 5ನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. ಇದು ದೇಶದ ಯುದ್ಧ ಸನ್ನದ್ಧತೆಗೆ ಗಮನಾರ್ಹ ಉತ್ತೇಜನವನ್ನು ನೀಡಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ದೀರ್ಘ ಶ್ರೇಣಿಯ, ಪರಮಾಣು ಸಾಮರ್ಥ್ಯದ ಬ್ಯಾಲಿಸ್ಟಿಕ್ ಕ್ಷಿಪಣಿಯಾದ ಅಗ್ನಿ-5 ಅನ್ನು ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಅಭಿವೃದ್ಧಿಪಡಿಸಿದೆ. ಇದು ಅಗ್ನಿ ಸರಣಿಯಲ್ಲಿ ಅತ್ಯಂತ ಮುಂದುವರಿದ ಕ್ಷಿಪಣಿಯಾಗಿದೆ. ಭಾರತವು ಈಗ ತನ್ನ ಅಗ್ನಿ ಸರಣಿಯ ಶಸ್ತ್ರಾಸ್ತ್ರ ಸಂಗ್ರಹದಲ್ಲಿ 700 ಕಿಮೀ ವ್ಯಾಪ್ತಿಯೊಂದಿಗೆ ಅಗ್ನಿ-1, 2000 ಕಿಮೀ ವ್ಯಾಪ್ತಿಯೊಂದಿಗೆ ಅಗ್ನಿ-2, 2500 ಕಿಮೀ ನಿಂದ 3500 ಕಿಮೀ ಗಿಂತ ಹೆಚ್ಚಿನ ವ್ಯಾಪ್ತಿಯೊಂದಿಗೆ ಅಗ್ನಿ-3 ಮತ್ತು ಅಗ್ನಿ-4 ಅನ್ನು ಹೊಂದಿದೆ. ಅಗ್ನಿ-5 ಕ್ಷಿಪಣಿಯ ಮೊದಲ ಪರೀಕ್ಷೆಯನ್ನು ಏಪ್ರಿಲ್ 19, 2012ರಂದು ನಡೆಸಲಾಗಿದೆ.

ಚನ್ನಪಟ್ಟಣ: ಲಾಕಪ್ ಡೆತ್ ಆರೋಪ

ಚನ್ನಪಟ್ಟಣ (ರಾಮನಗರ): ದೇವಸ್ಥಾನದಲ್ಲಿ ಕಳವು ಮಾಡಿದ ಆರೋಪದ ಮೇಲೆ ಬಂಧಿತ ನಾಗಿದ್ದ ತಾಲೂಕಿನ ದುಂಡನಹಳ್ಳಿ ಗ್ರಾಮದ ರಮೇಶ್ ಎಂಬಾತನ ಶವ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆಯ ಶೌಚಾಲಯದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಬುಧವಾರ ಪತ್ತೆಯಾಗಿದೆ. ರಮೇಶ್ ಕುಟುಂಬದವರು ಲಾಕಪ್ ಡೆತ್ ಆರೋಪ ಮಾಡಿದ್ದಾರೆ. ಘಟನೆಯ ಬೆನ್ನಲ್ಲೇ, ಎಸ್ಪಿ ಆರ್. ಶ್ರೀನಿವಾಸ ಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ಡಿವೈಎಸ್ಪಿ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶವವನ್ನು ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಸ್ಥಳಾಂತರಿಸ ಲಾಗಿದೆ. ತಾಲೂಕಿನ ಬೊಮ್ಮನಾಯಕನಹಳ್ಳಿ ದೇವಸ್ಥಾನದ ಕಳ್ಳತನ ನಡೆದಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಎಂ.ಕೆ. ದೊಡ್ಡಿ ಪೊಲೀಸರು, ರಮೇಶ್, ಅವರ ಮಗ ಮಂಜು ಹಾಗೂ ಕೋಲಾರದ ಅನಿಲ್ ಎಂಬುವವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿ ದ್ದರು. ಬುಧವಾರ ಬೆಳಗ್ಗೆ ಶೌಚಾಲಯಕ್ಕೆಂದು ಹೋಗಿದ್ದ ರಮೇಶ್, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ರಮೇಶ್ ಕುಟುಂಬ ದವರು ಲಾಕ್‌ಅಪ್ ಡೆತ್ ಆರೋಪ ಮಾಡಿರುವ ಹಿನ್ನೆಲೆಯಲ್ಲಿ, ಹಿರಿಯ ಪೊಲೀಸ್ ಅಧಿಕಾರಿಗಳು ಠಾಣಾಧಿಕಾರಿ ಹಾಗೂ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಆನ್‌ಲೈನ್ ಗೇಮಿಂಗ್‌ನಿಂದ ಬಳಕೆದಾರರಿಗೆ ಪ್ರತಿವರ್ಷ 20,000 ಕೋಟಿ ರು. ನಷ್ಟ | ಲೋಕಸಭೆಯಲ್ಲಿ ವಿಧೇಯಕ ಅಂಗೀಕಾರ

ಆನ್‌ಲೈನ್ ಗೇಮಿಂಗ್ ಕಡಿವಾಣಕ್ಕೆ ಮಸೂದೆ

ಮಸೂದೆಯ ಪ್ರಮುಖ ಉದ್ದೇಶ

ಸಕಾರಾತ್ಮಕ ಪರಿಣಾಮ ಬೀರುವ ಆಟಗಳಿಗೆ ಉತ್ತೇಜನ: ಇ-ಸ್ಪೋರ್ಟ್ಸ್ ಮತ್ತು ಸುರಕ್ಷಿತ ಸಾಮಾಜಿಕ ಅಥವಾ ಶೈಕ್ಷಣಿಕ ಆಟಗಳಿಗೆ ಪ್ರೋತ್ಸಾಹ.

ರಿಸ್ಕಿ ಮನಿ ಗೇಮ್‌ಗಳ ನಿಷೇಧ: ವ್ಯಸನ ಅಥವಾ ಆರ್ಥಿಕ ನಷ್ಟವನ್ನು ಉಂಟುಮಾಡುವ ಆನ್‌ಲೈನ್ ಜೂಜಾಟ, ಬೆಟ್ಟಿಂಗ್ ಗೇಮ್‌ಗಳ ನಿಷೇಧ.

ವಂಚನೆಯಿಂದ ರಕ್ಷಣೆ: ವಂಚನೆ, ಹಣ ವರ್ಗಾವಣೆ ಮತ್ತು ಇತರ ಆನ್‌ಲೈನ್ ಅಪಾಯಗಳಿಂದ ಬಳಕೆದಾರರ, ವಿಶೇಷವಾಗಿ ಯುವಕರ ರಕ್ಷಣೆ.

ಮಾರ್ಗಸೂಚಿ: ಭಾರತದ ಗೇಮಿಂಗ್ ಉದ್ಯಮವನ್ನು ಬೆಳೆಸಲು ನಿಯಮಗಳು ಮತ್ತು ಮಾರ್ಗಸೂಚಿಗಳ ಪರಿಚಯ.

ಕಾನೂನಿನ ಉಪಯೋಗ

ಆರ್ಥಿಕತೆಗೆ ಶಕ್ತಿ: ಜಗತ್ತಿನಲ್ಲೇ ಭಾರತವನ್ನು ಪ್ರಮುಖ ಗೇಮಿಂಗ್ ಹಬ್ ಆಗಿ ಪರಿವರ್ತಿಸುವುದು.

ಯುವ ಜನತೆಗೆ ಉತ್ತೇಜನ: ಕೌಶಲ್ಯ ಆಧಾರಿತ ಗೇಮಿಂಗ್ ಮತ್ತು ಇ-ಸ್ಪೋರ್ಟ್ಸ್‌ಗೆ ಪ್ರೋತ್ಸಾಹ.

ಸುರಕ್ಷತೆ: ಮನಿ ಗೇಮ್‌ನ ಜಾಲದಿಂದ ಕುಟುಂಬಗಳ ರಕ್ಷಣೆ.

ಜಾಗತಿಕ ನಾಯಕತ್ವ: ಜವಾಬ್ದಾರಿಯುತ ಗೇಮಿಂಗ್ ಮತ್ತು ಡಿಜಿಟಲ್ ನೀತಿಯಲ್ಲಿ ಭಾರತದ ಪಾತ್ರವನ್ನು ಬಲಪಡಿಸುವುದು.

ದೆಹಲಿ: ಜೂಜಾಟ, ಬೆಟ್ಟಿಂಗ್ ಸೇರಿದಂತೆ ಆನ್‌ಲೈನ್ ಗೇಮಿಂಗ್‌ನಿಂದ ಪ್ರತಿ ವರ್ಷ ದೇಶದಲ್ಲಿ ಅಂದಾಜು 45 ಕೋಟಿ ಜನರು ಸುಮಾರು 20,000 ಕೋಟಿ ರು.ಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎನ್ನುವ ಆಘಾತಕಾರಿ ಮಾಹಿತಿಯನ್ನು ಸರಕಾರಿ ಮೂಲಗಳು ಬಹಿರಂಗಪಡಿಸಿವೆ. ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ-2025 ಅನ್ನು ಲೋಕಸಭೆ ಅಂಗೀಕರಿಸುವ ಮೊದಲು ಈ ಬಗ್ಗೆ ಮಾಹಿತಿ ನೀಡಲಾಯಿತು.

ಆನ್‌ಲೈನ್ ಗೇಮಿಂಗ್ ವೇದಿಕೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ಮಂಡಿಸಲಾದ ಆನ್‌ಲೈನ್ ಗೇಮಿಂಗ್ ಮಸೂದೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ ಮಸೂದೆ-2025 ಅನ್ನು ಸಂಸತ್‌ನಲ್ಲಿ ಮಂಡಿಸಲಾಯಿತು.

ಆನ್‌ಲೈನ್ ಬೆಟ್ಟಿಂಗ್ ಅನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುವುದು, ಹಣ ಆಧಾರಿತ ಎಲ್ಲಾ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸುವುದು, ಆನ್‌ಲೈನ್ ಗೇಮಿಂಗ್‌ಗೆ ಸಂಬಂಧಿಸಿದ ಹಣಕಾಸು ವ್ಯವಹಾರ ನಡೆಸಲು ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಅನುಮತಿ ನಿಷೇಧಿಸುವ ಗುರಿಯನ್ನು ಇದು ಹೊಂದಿದೆ.

ಕೇಂದ್ರ ಐ.ಟಿ ಸಚಿವ ಅಶ್ವಿನಿ ವೈಷ್ಣವ್ ಮಂಡಿಸಿದ ಹೊಸ ಮಸೂದೆಯು, ಜೂಜಾಟದ ಅಪ್ಲಿಕೇಶನ್‌ಗೆ ದಂಡ ವಿಧಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಒಳಗೊಂಡಿದೆ. ಈ ಪ್ರಸ್ತಾವಿತ ಕಾನೂನು ಇ-ಸ್ಪೋರ್ಟ್ಸ್ ಮತ್ತು ಹೊರಾಂಗಣ ಆಟಗಳನ್ನು ಪ್ರೋತ್ಸಾಹಿಸಲೂ ಪ್ರಯತ್ನಿಸುತ್ತದೆ ಎಂದು ಮೂಲಗಳು ತಿಳಿಸಿವೆ.

ಮಸೂದೆಗೆ ವಿರೋಧ ಏಕೆ

ಮಸೂದೆಯನ್ನು ಅವಸರದಿಂದ ಮಂಡಿಸಲಾಗಿದೆ, ತಮ್ಮೊಂದಿಗೆ ಸರಿಯಾಗಿ ಸಮಾಲೋಚನೆ ನಡೆಸಿಲ್ಲ ಎಂದು ಪ್ರತಿಪಕ್ಷದ ನಾಯಕರು ಟೀಕಿಸಿದ್ದಾರೆ. ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಪ್ರಕಾರ 2,000ಕ್ಕೂ ಹೆಚ್ಚು ಗೇಮಿಂಗ್ ಸ್ಟಾರ್ಟ್‌ಅಪ್‌ಗಳು ಮತ್ತು 2 ಲಕ್ಷಕ್ಕೂ ಹೆಚ್ಚು ಐ.ಟಿ, ಎ.ಐ ಮತ್ತು ಡಿಸೈನ್ ಉದ್ಯೋಗದ ಮೇಲೆ ಪರಿಣಾಮ ಬೀರಬಹುದು. ಮಸೂದೆಯಿಂದಾಗಿ 4 ಲಕ್ಷ ಉದ್ಯೋಗ ಕಡಿತಗೊಳ್ಳುವ ಭೀತಿ ಇದೆ ಎಂದು ಮತ್ತೋರ್ವ ಕಾಂಗ್ರೆಸ್ ಮುಖಂಡ ಕಾರ್ತಿ ಚಿದಂಬರಂ ಹೇಳಿದ್ದಾರೆ. ಮಸೂದೆಯು 6 ಬಿಲಿಯನ್ ಡಾಲರ್ ಹೂಡಿಕೆಗಳ ಮೇಲೂ ಪರಿಣಾಮ ಬೀರಬಹುದು ಎಂದು ಕಾರ್ತಿ ಚಿದಂಬರಂ ಆತಂಕ ವ್ಯಕ್ತಪಡಿಸಿದ್ದಾರೆ. ಪ್ರತಿಪಕ್ಷದ ಪ್ರಕಾರ ಭಾರತವು ಜಿಎಸ್‌ಟಿ ಮತ್ತು ಆದಾಯ ತೆರಿಗೆ ನಷ್ಟದಿಂದ ವಾರ್ಷಿಕವಾಗಿ ಸುಮಾರು 20,000 ಕೋಟಿ ರು.ಗಳನ್ನು ಕಳೆದುಕೊಳ್ಳಬಹುದು. ಆನ್‌ಲೈನ್ ಗೇಮಿಂಗ್ ಪ್ರಸ್ತುತ ಶೇ. 28 ಜಿಎಸ್‌ಟಿ ಮತ್ತು ನಿವ್ವಳ ಗಳಿಕೆಯ ಮೇಲೆ ಶೇ. 30ರಷ್ಟು ತೆರಿಗೆಯನ್ನು ಒಳಗೊಂಡಿದೆ. ಆನ್‌ಲೈನ್ ಗೇಮಿಂಗ್ ನಿಷೇಧಿಸುವುದರಿಂದ ಬಳಕೆದಾರರು ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗುವ ಅಪಾಯವಿದೆ, ಜಾಹೀರಾತು, ಡೇಟಾ ಸೆಂಟರ್, ಪ್ರಾಯೋಜಕತ್ವ ಮತ್ತು ಸೈಬರ್ ಭದ್ರತೆಗಾಗಿ ವಾರ್ಷಿಕವಾಗಿ ಖರ್ಚು ಮಾಡುವ 7,000 ಕೋಟಿ ರು. ಆದಾಯ ಕಣ್ಮರೆಯಾಗಬಹುದು, ರಾಷ್ಟ್ರೀಯ ಭದ್ರತೆಗೆ ಅಪಾಯ ಉಂಟಾಗಬಹುದು ಎಂಬ ಆತಂಕವನ್ನು ಪ್ರತಿಪಕ್ಷದವರು ವ್ಯಕ್ತಪಡಿಸಿದ್ದಾರೆ.

ಉಲ್ಲಂಘಿಸಿದರೆ ಶಿಕ್ಷೆ

- ಆನ್‌ಲೈನ್ ಮನಿ ಗೇಮ್ ಒದಗಿಸಿದರೆ 3 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು / ಅಥವಾ 1 ಕೋಟಿ ರು. ದಂಡ.
- ಮನಿಗೇಮ್‌ಗಳ ಜಾಹೀರಾತಿಗೆ ಉತ್ತೇಜನ ನೀಡಿದರೆ 2 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು / ಅಥವಾ 50 ಲಕ್ಷ ರು. ದಂಡ.
- ಮನಿ ಗೇಮ್‌ಗೆ ಸಂಬಂಧಿಸಿದ ಆರ್ಥಿಕ ವಹಿವಾಟು ನಡೆಸಿದರೆ 3 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು / ಅಥವಾ 1 ಕೋಟಿ ರೂ. ದಂಡ.
- ಪುನರಾವರ್ತಿತ ಅಪರಾಧ ಕಂಡುಬಂದರೆ 3-5 ವರ್ಷಗಳ ಜೈಲು ಶಿಕ್ಷೆ ಮತ್ತು 2 ಕೋಟಿ ರು. ವರೆಗೆ ದಂಡ.
- ಕೆಲವು ಅಪರಾಧಗಳು ಜಾಮೀನು ರಹಿತ.
- ಅಪರಾಧಗಳಿಗೆ ಸಂಬಂಧಿಸಿದ ಡಿಜಿಟಲ್ / ಭೌತಿಕ ಆಸ್ತಿಯನ್ನು ಅಧಿಕಾರಿಗಳು ತನಿಖೆ ಮಾಡಬಹುದು, ಶೋಧಿಸಬಹುದು ಮತ್ತು ವಶಪಡಿಸಿಕೊಳ್ಳಬಹುದು.
- ಕೆಲವು ಪ್ರಕರಣಗಳಲ್ಲಿ ವಾರಂಟ್ ಇಲ್ಲದೇ ಶೋಧಿಸುವ ಮತ್ತು ಬಂಧಿಸುವ ಅಧಿಕಾರ.

ಗಣೇಶ ಮೂರ್ತಿ ವಿಸರ್ಜನೆಗೆ ಬಿಬಿಎಂಪಿ ಮಾರ್ಗಸೂಚಿ

ಬೆಂಗಳೂರು: 2025ನೇ ಸಾಲಿನ ಗೌರಿ-ಗಣೇಶ ಹಬ್ಬಕ್ಕೆ ಸಂಬಂಧಿಸಿದಂತೆ, ಗಣೇಶ ಮೂರ್ತಿಗಳ ತಯಾರಿಕೆ ಪ್ರಾರಂಭವಾಗಿದ್ದು, ಅದರಲ್ಲಿ ಬಳಸುವ ರಾಸಾಯನಿಕ ಬಣ್ಣಗಳು, ಥರ್ಮಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್‌ಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ನಿರ್ಬಂಧಿಸುವುದರ ಕುರಿತು ಹಾಗೂ ಆ ರೀತಿಯ ವಸ್ತುಗಳನ್ನು ಬಳಸಿ ತಯಾರಿಕೆಯಾಗುವ ಗಣೇಶ ಮೂರ್ತಿಗಳನ್ನು ವಶಪಡಿಸಿಕೊಂಡು ನಿಯಮಾನುಸಾರ ವಿಲೇವಾರಿ ಮಾಡುವ ಕುರಿತು ಹಾಗೂ ಹಬ್ಬಗಳ ಆಚರಣೆಯಿಂದ ಬರುವ ಹಸಿ ತ್ಯಾಜ್ಯವನ್ನು ಪಾಲಿಕೆಯ ಸಂಸ್ಕರಣಾ ಘಟಕಗಳಿಗೆ ಸಂಸ್ಕರಣೆಗಾಗಿ ಕಳುಹಿಸುವ ನಿಮಿತ್ತ ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಚರ್ಚೆ ನಡೆಸಲಾಯಿತು.

ನಗರದಲ್ಲಿ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಮಾತ್ರ ಪೂಜಿಸಲು ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್ ವಸ್ತುಗಳನ್ನು ಬಳಸಿ ಗಣೇಶ ಮೂರ್ತಿಗಳನ್ನು ತಯಾರಿಸಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕಾಗಿ ಈ ವೇಳೆ ತೀರ್ಮಾನಿಸಲಾಯಿತು.

ಈ ಬಗ್ಗೆ ಮಾತನಾಡಿರುವ ಅಧಿಕಾರಿಗಳು, ಗಣೇಶ ಹಬ್ಬದ ನಿಮಿತ್ತ ಸಾರ್ವಜನಿಕವಾಗಿ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುವ ಸಲುವಾಗಿ ಅನುಮತಿ ಪಡೆಯಲು ಉಪ ವಿಭಾಗದ ಮಟ್ಟದಲ್ಲಿ ನೋಡಲ್ ಅಧಿಕಾರಿಗಳಾಗಿ ನೇಮಿಸಲಾದ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳ ಕಾರ್ಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ನೋಡಲ್ ಅಧಿಕಾರಿಗಳು ಪೊಲೀಸ್, ಬೆಸ್ಕಾಂ, ಅಗ್ನಿಶಾಮಕ ಹಾಗೂ ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ ಪಡೆದು ಏಕಗವಾಕ್ಷಿಯಲ್ಲಿ ತ್ವರಿತವಾಗಿ ಅನುಮತಿ ನೀಡಲು ಕ್ರಮಕೈಗೊಳ್ಳುವುದು. ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಸಾಯನಿಕ ಬಣ್ಣಗಳು, ಥರ್ಮಾಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್ ವಸ್ತುಗಳನ್ನು ಬಳಸಿ ಗಣೇಶ ಮೂರ್ತಿಯ ತಯಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ವಸ್ತುಗಳನ್ನು ಬಳಸಿ ತಯಾರಿಸುವ, ಮಾರಾಟ ಮಾಡುವ ಪ್ರದೇಶಗಳನ್ನು ಸಂಬಂಧಪಟ್ಟ ಬಿಬಿಎಂಪಿಯ ಉಪ ವಿಭಾಗದ ನೋಡೆಲ್ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಅಗ್ನಿಶಾಮಕ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು ಈ ಬಗ್ಗೆ ಖುದ್ದಾಗಿ ಪರಿಶೀಲಿಸಿ ನೋಟೀಸ್ ನೀಡಬೇಕು. ಸ್ಥಳ ತನಿಖೆ ಕೈಗೊಂಡು ರಾಸಾಯನಿಕ ಬಣ್ಣಗಳು ಥರ್ಮಾಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್ ವಸ್ತುಗಳನ್ನು ಬಳಸಿ ಗಣೇಶ ಮೂರ್ತಿಯ ತಯಾರಿಕೆಯನ್ನು ನಡೆಸುತ್ತಿದ್ದಲ್ಲಿ ಹಾಗೂ ಮಾರಾಟ ಮಾಡುತ್ತಿದ್ದಲ್ಲಿ ದಂಡ ವಿಧಿಸಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ನಿಷೇಧಿಸಿದ ವಸ್ತುಗಳನ್ನು ವಶಪಡಿಸಿಕೊಳ್ಳಲು ಕ್ರಮವಹಿಸಬೇಕಾಗಿದ್ದು, ವಲಯ ಆಯುಕ್ತರು, ವಲಯ ಮಟ್ಟದಲ್ಲಿ ಮೇಲ್ವಿಚಾರಣೆ ನಡೆಸುವುದು. ವಶಪಡಿಸಿಕೊಳ್ಳಲಾದ ಮೇಲ್ಕಂಡ ವಸ್ತುಗಳನ್ನು ನಿಯಮಾನುಸಾರ ವಿಲೇವಾರಿಗೊಳಿಸಲು ಕ್ರಮವಹಿಸುವುದು ಎಂದು ಸ್ಪಷ್ಟಪಡಿಸಿದ್ದಾರೆ.

75 ಏಕಗವಾಕ್ಷಿ ಕೇಂದ್ರಗಳ ಸ್ಥಾಪನೆ: ಪಾಲಿಕೆ ವ್ಯಾಪ್ತಿಯಲ್ಲಿ ಗಣೇಶ ಪ್ರತಿಷ್ಠಾಪನೆಗಾಗಿ ಅನುಮತಿ ನೀಡುವ ಸಲುವಾಗಿ 75 ಉಪ ವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಹಾಗೂ ಅಗ್ನಿಶಾಮಕ ಅಧಿಕಾರಿಗಳು ಒಂದೇ ಸ್ಥಳದಲ್ಲಿದ್ದು, ಅನುಮತಿ ಪತ್ರವನ್ನು ನೀಡಲಿದ್ದಾರೆ.

ಸೂಚನೆಗಳೇನು?

- ಗಣೇಶಮೂರ್ತಿ ತಯಾರಿಕೆದಾರರಿಗೆ ಪರಿಸರಸ್ನೇಹಿ/ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ಮಾತ್ರ ತಯಾರಿಸಲು ಜಾಹೀರಾತು ನೀಡುವುದು.
- ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ತಮ್ಮ ಮನೆಗಳಲ್ಲಿ, ಬಕೆಟ್‌ಗಳಲ್ಲಿ ವಿಸರ್ಜನೆಗೊಳಿಸಿ, ಬರುವ ಮಣ್ಣನ್ನು ಕೈತೋಟಗಳಿಗೆ, ಹೂವಿನ ಕುಂಡಗಳಿಗೆ ಬಳಸಲು ಅರಿವು ಮೂಡಿಸುವುದು.
- ದೊಡ್ಡ ಗಾತ್ರದ ಮೂರ್ತಿಗಳ ವಿಸರ್ಜನೆಗೆ ಬಿಬಿಎಂಪಿ ವ್ಯಾಪ್ತಿಯ ವಾರ್ಡ್‌ಗಳಲ್ಲಿ ವಿಸರ್ಜನಾ ಸ್ಥಳಗಳನ್ನು ಗುರುತಿಸಿ, ಸದರಿ ಸ್ಥಳಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಚುರಪಡಿಸುವುದು. ಅವಶ್ಯವಿದ್ದಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಸಂಚಾರಿ ವಾಹನ ಮೂಲಕ ವಿಸರ್ಜನೆ ಅಗತ್ಯ ವ್ಯವಸ್ಥೆ ಕೈಗೊಳ್ಳುವುದು.
- ಪಾಲಿಕೆಯ ವ್ಯಾಪ್ತಿಯ ಕೆರೆ/ಕಲ್ಯಾಣಿಗಳಲ್ಲಿ ಗಣೇಶ ಮೂರ್ತಿ ವಿಸರ್ಜನೆಯಿಂದ ಉಂಟಾಗುವ ಮಾಲಿನ್ಯವನ್ನು ತಡೆಗಟ್ಟಲು ಸದರಿ ಸ್ಥಳಗಳ ಸಮೀಪದಲ್ಲಿ ತಾತ್ಕಾಲಿಕ ವಿಸರ್ಜನೆ ಸ್ಥಳಗಳನ್ನು ನಿರ್ಮಿಸುವುದು.
- ವಿಸರ್ಜನೆಯಿಂದ ಬರುವ ಮಣ್ಣು, ಪೂಜಾ ಹೂಗಳು ಹಾಗೂ ಪ್ಲಾಸ್ಟಿಕ್ ಇತ್ಯಾದಿ ವಸ್ತುಗಳನ್ನು ವಿಂಗಡಿಸಿ ಹಸಿತ್ಯಾಜ್ಯವನ್ನು ಹಸಿತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಹಾಗೂ ಒಣತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳಿಗೆ ರವಾನಿಸುವುದು, ವಿಸರ್ಜನಾ ಸ್ಥಳಗಳಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ಮೂರ್ತಿಗಳನ್ನು ವಿಸರ್ಜಿಸಲು ಪ್ರತ್ಯೇಕ ತಂಡಗಳನ್ನು ನೇಮಿಸುವುದು
- ಪ್ಲಾಸ್ಟಿಕ್ ನಿಷೇಧ ಆದೇಶ ಜಾರಿಯಲಿದ್ದು, ವಲಯ ವ್ಯಾಪ್ತಿಯಲ್ಲಿ ತಂಡಗಳನ್ನು ರಚಿಸಿ ಪ್ಲಾಸ್ಟಿಕ್ ಮಾರಾಟ ಮತ್ತು ಬಳಕೆ ಕಂಡುಬಂದಲ್ಲಿ ನಿಯಮಾನುಸಾರ ದಂಡ ವಿಧಿಸಿ ಕ್ರಮಕೈಗೊಳ್ಳುವುದು.

ಮೈಸೂರು-ಕುಶಾಲನಗರ ರಾಷ್ಟ್ರೀಯ ಹೆದ್ದಾರಿಗೆ ಅರಣ್ಯ ಇಲಾಖೆ ಅನುಮತಿ

ದೆಹಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 4,100 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಮೈಸೂರು-ಕುಶಾಲನಗರ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ 140 ಎಕರೆ ಕಾಡು ಬಳಸಲು ಕೇಂದ್ರ ಅರಣ್ಯ ಇಲಾಖೆಯ ಪ್ರಾದೇಶಿಕ ಉನ್ನತಾಧಿಕಾರ ಸಮಿತಿ ಷರತ್ತುಬದ್ಧ ಅನುಮತಿ ನೀಡಿದೆ.

ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಗಳಲ್ಲಿ ನಾಗರಹೊಳೆ ಹುಲಿ ಅಭಯಾರಣ್ಯ ಹಾಗೂ ಹುಣಸೂರು ಅರಣ್ಯ ವಿಭಾಗದ ಕಾಡನ್ನು ಹೆದ್ದಾರಿ ವಿಸ್ತರಣೆಗೆ ಬಳಸಿಕೊಳ್ಳಲಾಗುತ್ತದೆ. ಈ ಹೆದ್ದಾರಿ ವಿಸ್ತರಣೆ ಕಾಮಗಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು 2023ರಲ್ಲಿ ಚಾಲನೆ ನೀಡಿದ್ದರು.ಇದನ್ನೂ ಓದಿ:

ಯೋಜನೆಗೆ ಕಾಡು ಬಳಕೆಗಾಗಿ ಹೆದ್ದಾರಿ ಪ್ರಾಧಿಕಾರವು 2024ರ ಜುಲೈನಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು. ಹುಣಸೂರು ವೃತ್ತದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಸ್ಥಳ ಪರಿಶೀಲನೆ ನಡೆಸಿ, ವರದಿ ಸಲ್ಲಿಸಿದ್ದರು. ಹೆದ್ದಾರಿ ವಿಸ್ತರಣೆಗಾಗಿ ಹುಣಸೂರು ವಿಭಾಗದಲ್ಲಿ 571 ಮರಗಳನ್ನು ಕಡಿಯಲಾಗುತ್ತದೆ. ಈ ಅರಣ್ಯವು ರಾಷ್ಟ್ರೀಯ ಉದ್ಯಾನ ಅಥವಾ ವನ್ಯಜೀವಿಧಾಮದ ಭಾಗವಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಿದ್ದರು. ನಾಗರಹೊಳೆ ಹುಲಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ಈ ಯೋಜನೆಗಾಗಿ 40 ಎಕರೆ ಅರಣ್ಯ ಬಳಸಿಕೊಳ್ಳಲಾಗುತ್ತದೆ. ಇಲ್ಲಿನ ಡಿಸಿಎಫ್ ಪ್ರಕಾರ ಈ ಪ್ರದೇಶವು ಕಾವೇರಿ ಅಧಿಸೂಚಿತ ಅರಣ್ಯದ ವ್ಯಾಪ್ತಿಯಲ್ಲಿ ಬರುತ್ತದೆ.

40 ಎಕರೆ ಅರಣ್ಯವು ಅಭಯಾರಣ್ಯದ ಮೀಸಲು ಪ್ರದೇಶದ ಕಾವೇರಿ ಭಾಗದಲ್ಲಿ ಬರುತ್ತದೆಯೇ ಇಲ್ಲವೇ ಎಂಬ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟನೆ ನೀಡಬೇಕು. ಅಭಯಾರಣ್ಯದ ಮೀಸಲು ಪ್ರದೇಶದಲ್ಲಿ ಬಂದರೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಅನುಮೋದನೆ ಪಡೆಯಬೇಕು ಎಂದು ಉನ್ನತಾಧಿಕಾರ ಸಮಿತಿ ಷರತ್ತು ವಿಧಿಸಿದೆ.

ದೇವೇಗೌಡರ ಬೆಂಬಲ ಕೋರಿದ ಸಿಪಿಆರ್

ದೆಹಲಿ: ಎನ್‌ಡಿಎ ಉಪ ರಾಷ್ಟ್ರಪತಿ ಅಭ್ಯರ್ಥಿಯಾಗಿರುವ ಸಿ.ಪಿ ರಾಧಾಕೃಷ್ಣನ್‌ಗೆ ಮೈತ್ರಿ ಪಕ್ಷ ಜೆಡಿಎಸ್ ಬೆಂಬಲ ಘೋಷಿಸಿದೆ. ದೆಹಲಿಯ ದೇವೇಗೌಡರ ನಿವಾಸದಲ್ಲಿ ಉಪ ರಾಷ್ಟ್ರಪತಿ ಅಭ್ಯರ್ಥಿ ಸಿ.ಪಿ ರಾಧಾಕೃಷ್ಣನ್ ದೇವೇಗೌಡರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಭೇಟಿಯ ಸಮಯದಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಕುಮಾರಸ್ವಾಮಿ, ಸಂಸದರಾದ ಮಂಜುನಾಥ್ ಉಪಸ್ಥಿತರಿದ್ದರು. ಇದೇ ವೇಳೆ ಮಾತನಾಡಿದ ದೇವೇಗೌಡರು, 'ನನ್ನ 10 ವರ್ಷದ ಅನುಭವದಲ್ಲಿ ಮೋದಿ ಅವರ ಮನಸ್ಸನ್ನು ಯಾರು ಪತ್ತೆ ಹಚ್ಚಲು ಸಾಧ್ಯವಿಲ್ಲ. ಕೊನೆಯ ಗಳಿಗೆಯ ತನಕ ಗುಟ್ಟು ಬಿಟ್ಟು ಕೊಡುವುದಿಲ್ಲ, ರಾಧಾಕೃಷ್ಣನ್ ಅವರು ಅಂತಿಮವಾಗಿ ಆಯ್ಕೆಯಾದರು. ಎಲ್ಲಾ ದೃಷ್ಟಿಯಿಂದಲೂ ಸಮರ್ಥರು, ಅರ್ಹರು ಆಗಿರುವ ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಿದ್ದಾರೆ' ಎಂದರು. 'ರಾಜ್ಯಪಾಲರಾಗಿ, ಲೆಫ್ಟಿನೆಂಟ್ ಗವರ್ನರ್ ಆಗಿ, ಲೋಕಸಭಾದ ಹಲವು ಸಮಿತಿಗಳಲ್ಲಿ ಅವರು ಕಾರ್ಯ ನಿರ್ವಹಿಸಿದ್ದಾರೆ. ವಿವಿಧ ಸಮಿತಿಗಳ ಭಾಗವಾಗಿ 24 ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ಜನಸಾಮಾನ್ಯರ ಮಧ್ಯದಿಂದ ಬೆಳೆದು ಬಂದ ವ್ಯಕ್ತಿ, ನನಗೆ ತುಂಬಾ ಸಂತೋಷ ಆಗಿದೆ. ನಾನು ಒಬ್ಬ ಸಾಮಾನ್ಯ ಸದಸ್ಯನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ, ನಮ್ಮ ಪಕ್ಷದಿಂದ ಬೆಂಬಲ ಇದೆ' ಎಂದು ದೇವೇಗೌಡರು ಹೇಳಿದರು.

ರಷ್ಯಾಕ್ಕೆ ಒತ್ತಡ ಹಾಕಲು ಭಾರತಕ್ಕೆ ಭಾರೀ ಸುಂಕ

ವಾಷಿಂಗ್ಟನ್: ಉಕ್ರೇನ್ ಮೇಲಿನ ಯುದ್ಧ ಕೊನೆಗೊಳಿಸುವಂತೆ ರಷ್ಯಾ ಮೇಲೆ ಒತ್ತಡ ಹಾಕುವ ಸಲುವಾಗಿಯೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದ ಮೇಲೆ ಹೆಚ್ಚುವರಿ ಪ್ರತಿಸುಂಕ ವಿಧಿಸಿದ್ದಾರೆ ಎಂದು ಶ್ವೇತಭವನ ಪತ್ರಿಕಾ ಕಾರ್ಯದರ್ಶಿ ಕ್ಯಾರೊಲಿನಾ ಲೀವಿಟ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಭಾರತದ ಮೇಲೆ ಶೇ.25 ಮತ್ತೊಮ್ಮೆ ಶೇ.25ರಷ್ಟು (ಒಟ್ಟು ಶೇ.50) ಪ್ರತಿಸುಂಕ ವಿಧಿಸುವುದರ ಹಿಂದಿನ ಉದ್ದೇಶ ರಷ್ಯಾ ಮೇಲೆ ಒತ್ತಡ ತರುವುದೇ ಆಗಿತ್ತು. ಏಕೆಂದರೆ ರಷ್ಯಾ-ಉಕ್ರೇನ್ ಯುದ್ಧಕ್ಕೆ ಅಂತ್ಯಹಾಡುವಂತೆ ಜನರಿಂದ ಭಾರೀ ಒತ್ತಡವಿತ್ತು. ಹಾಗಾಗಿ ಟ್ರಂಪ್ ಈ ಕ್ರಮ ಕೈಗೊಂಡರು. ಆದಷ್ಟು ಬೇಗ ಯುದ್ಧ ನಿಲ್ಲಿಸಬೇಕು ಎಂದು ಟ್ರಂಪ್ ಕೂಡಾ ಬಯಸಿದ್ದರು ಎಂದು ಕ್ಯಾರೊಲಿನಾ ಹೇಳಿದ್ದಾರೆ.

ಭಾರತ-ಪಾಕ್ ಯುದ್ಧ ಕೊನೆಗೊಳಿಸಲು ಟ್ರಂಪ್ ಮಧ್ಯಸ್ಥಿಕೆ ವಹಿಸಿದ್ದರು. ವ್ಯಾಪಾರ ವಿಷಯ ಮುಂದಿಟ್ಟುಕೊಂಡೇ ಭಾರತ-ಪಾಕ್ ಸೇನಾ ಸಂಘರ್ಷ ಟ್ರಂಪ್ ಕೊನೆಗೊಳಿಸಿದರು. ಇಲ್ಲವಾಗಿದ್ದರೆ ಎರಡೂ ದೇಶಗಳ ನಡುವೆ ಪರಮಾಣು ಯುದ್ಧವೇ ನಡೆಯುತ್ತಿತ್ತು ಎಂದೂ ಕ್ಯಾರೊಲಿನಾ ಇದೇ ವೇಳೆ ಪುನರುಚ್ಚರಿಸಿದ್ದಾರೆ.

ಭಾರತ ಮೇಲೆ ಅಮೆರಿಕದ ಸುಂಕ ಒತ್ತಡ ಸರಿಯಲ್ಲ: ರಷ್ಯಾ ಆಕ್ಷೇಪ

ದೆಹಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದಕ್ಕೆ ಭಾರತದ ಮೇಲೆ ಅಮೆರಿಕದ ಸುಂಕ ಒತ್ತಡ ಸಮರ್ಥನೀಯವಲ್ಲ ಎಂದು ರಷ್ಯಾದ ಹಿರಿಯ ರಾಜತಾಂತ್ರಿಕರೊಬ್ಬರು ಪ್ರತಿಪಾದಿಸಿದ್ದಾರೆ.

ಈಗಿನದ್ದು ಭಾರತದ ಮಟ್ಟಿಗೆ ದೊಡ್ಡ ಸವಾಲಿನ ಪರಿಸ್ಥಿತಿ. ಅಮೆರಿಕ ಸೇರಿದಂತೆ ಯಾವುದೇ ಬಾಹ್ಯ ಒತ್ತಡವಿದ್ದರೂ ಭಾರತ-ರಷ್ಯಾ ನಡುವಿನ ಇಂಧನ ಖರೀದಿ-ಸಹಕಾರ ಈಗಿನಂತೆಯೇ ಮುಂದುವರಿಯುತ್ತದೆ ಎಂಬ ವಿಶ್ವಾಸವಿದೆ. ಭಾರತದೊಂದಿಗಿನ ಸಂಬಂಧದ ಬಗ್ಗೆ ದೃಢ ನಂಬಿಕೆ ಇದೆ ಎಂದು ರಷ್ಯಾದ ಉಪ ಮುಖ್ಯಸ್ಥ ಮಿಷನ್ ರೋಮನ್ ಬಾಬುಷ್ಕಿನ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

2019-20ನೇ ಹಣಕಾಸು ವರ್ಷದಲ್ಲಿ ಭಾರತದ ಒಟ್ಟು ತೈಲ ಆಮದು ವಹಿವಾಟಿನಲ್ಲಿ ರಷ್ಯಾದ ಪಾಲು ಕೇವಲ ಶೇ.1.7ರಷ್ಟು ಇದ್ದುದು, 2024-25ರ ವೇಳೆಗೆ ಶೇ.35.1ಕ್ಕೆ ಏರಿಕೆಯಾಗಿದೆ. ಭಾರತವೇ ರಷ್ಯಾದ ಎರಡನೇ ಅತಿದೊಡ್ಡ ತೈಲ ಆಮದುದಾರ ದೇಶವಾಗಿದೆ.

ರಾಜೀವ್ 81ನೇ ಜನ್ಮ ದಿನಾಚರಣೆ: ಮೋದಿ ಸೇರಿದಂತೆ ಗಣ್ಯರ ನಮನ

ದೆಹಲಿ: ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ 81ನೇ ಜನ್ಮ ದಿನಾಚರಣೆಯಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಹಲವಾರು ಕಾಂಗ್ರೆಸ್ ನಾಯಕರು ಅವರಿಗೆ ನಮನ ಸಲ್ಲಿಸಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅವರ ಸ್ಮಾರಕ ವೀರಭೂಮಿಯಲ್ಲಿ ಒಂದು ಸ್ಮರಣಾರ್ಥ ಕಾರ್ಯಕ್ರಮ ವನ್ನು ಆಯೋಜಿತ್ತು. ಪಕ್ಷದ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ ವೇಣುಗೋಪಾಲ್ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಉಪಸ್ಥಿತರಿದ್ದರು.

'ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರಿಗೆ ನನ್ನ ಗೌರವಗಳು' ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇಂದು ನಾವು ಸದ್ಭಾವನಾ ದಿವಸ್ ಆಚರಿಸುತ್ತಿರುವಾಗ, ಲಕ್ಷಾಂತರ ಜನರಲ್ಲಿ ಭರವಸೆಯನ್ನು ಪ್ರೆ?ರೇಪಿಸಿದ ಮತ್ತು ಭಾರತವನ್ನು 21 ನೇ ಶತಮಾನಕ್ಕೆ ಮುನ್ನಡೆಸಿದ ಅದ್ಭುತ ನಾಯಕ ರಾಜೀವ್ ಗಾಂಧಿಯನ್ನು ನಾವು ಸ್ಮರಿಸುತ್ತೆ?ವೆ ಎಂದು ಖರ್ಗೆ ತಿಳಿಸಿದ್ದಾರೆ.

ರಾಜೀವ್ ಗಾಂಧಿಯವರ ಅಧಿಕಾರಾವಧಿಯಲ್ಲಿನ ಸಾಧನೆಗಳನ್ನು ನೆನಪಿಸಿಕೊಳ್ಳುತ್ತಾ, ಖರ್ಗೆ ಅವರು, 'ಮತದಾನದ ವಯಸ್ಸನ್ನು 18 ವರ್ಷಗಳಿಗೆ ಇಳಿಸುವುದು, ಪಂಚಾಯತ್ ರಾಜ್ ಅನ್ನು ಬಲಪಡಿಸುವುದು, ಟೆಲಿಕಾಂ ಮತ್ತು ಐ.ಟಿ ಕ್ರಾಂತಿ, ಗಣಕೀಕರಣ ಕಾರ್ಯಕ್ರಮಗಳು, ಶಾಂತಿ ಒಪ್ಪಂದಗಳ ಮುಂದುವರಿಕೆ, ಮಹಿಳಾ ಸಬಲೀಕ ರಣ, ಸಾರ್ವತ್ರಿಕ ಲಸಿಕೆ ಕಾರ್ಯಕ್ರಮ ಮತ್ತು ಅಂತರ್ಗತ ಶಿಕ್ಷಣಕ್ಕೆ ಒತ್ತು ನೀಡುವ ಹೊಸ ಶಿಕ್ಷಣ ನೀತಿಯಂತಹ ಅಭೂತಪೂರ್ವ ಉಪಕ್ರಮಗಳು ದೇಶದಲ್ಲಿ ಪರಿವರ್ತನೆಯ ಬದಲಾವಣೆಗಳನ್ನು ತಂದವರು' ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ವೀರ ಭೂಮಿಯಲ್ಲಿ ತಮ್ಮ ಕುಟುಂಬದೊಂದಿಗೆ ಹಾಜರಿದ್ದ ಪ್ರಿಯಾಂಕಾ ಗಾಂಧಿ, ನಾವು ಕರುಣೆ, ಪ್ರೀತಿ ಮತ್ತು ದೇಶಭಕ್ತಿಯ ಧರ್ಮವನ್ನು ನಿಮ್ಮಿಂದ ಆನುವಂಶಿಕವಾಗಿ ಪಡೆದಿದ್ದೇವೆ ಎಂದರು.

ರೈಲ್ವೆ: ಪ್ಯಾರಾಮೆಡಿಕಲ್ ಹುದ್ದೆಗಳ ನೇಮಕ

ರೈಲ್ವೆ ನೇಮಕಾತಿ ಮಂಡಳಿಯು (ಆರ್‌ಆರ್‌ಬಿ) ಮತ್ತೊಂದು ಸುತ್ತಿನ ನೇಮಕಾತಿಗೆ ಮುಂದಾಗುತ್ತಿದೆ. ವಿವಿಧ ರೈಲ್ವೆ ಮಂಡಳಿಗಳಲ್ಲಿ ಲಭ್ಯವಿರುವ ನರ್ಸಿಂಗ್, ಅರೆವೈದ್ಯಕೀಯ ವಿಭಾಗದ ಹುದ್ದೆಗಳ ನೇಮಕಾತಿಗೆ ಕಿರು ಅಧಿಸೂಚನೆಯನ್ನು ಪ್ರಕಟಿಸಿದೆ. ಪ್ರಸಕ್ತ ಸಾಲಿನ ಕೇಂದ್ರಿಕೃತ ಮೂರನೇ ನೇಮಕಾತಿ ಅಧಿಸೂಚನೆ ಇದಾಗಲಿದ್ದು, ಒಟ್ಟು 434 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿದೆ. ಕಳೆದ ಬಾರಿ ಒಟ್ಟು 1376 ಹುದ್ದೆಗಳನ್ನು ಭರ್ತಿ ಮಾಡಲಾಗಿತ್ತು, ಹೀಗಾಗಿ ಹುದ್ದೆಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳಿವೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್-8

ವಿದ್ಯಾರ್ಹತೆಗಳು: ನರ್ಸಿಂಗ್, ಪದವಿ, ಡಿಪ್ಲೊಮಾ ಹಾಗೂ 10ನೇ ತರಗತಿ ಆಧಾರದಲ್ಲಿ ವಿವಿಧ ಲ್ಯಾಬ್ ಟೆಕ್ನಿಷಿಯನ್ ಕೋರ್ಸ್‌ಗಳನ್ನು ಪೂರ್ಣ ಗೊಳಿಸಿದವರು ಅರ್ಜಿ ಸಲ್ಲಿಸಲು ಅವಕಾಶವಿದೆ. ಇದಲ್ಲದೇ, ಇನ್ನು ಹಲವು ಹುದ್ದೆಗಳ ವಿವರ ಹಾಗೂ ವಿದ್ಯಾರ್ಹತೆಯನ್ನು ವಿಸ್ತೃತ ಅಧಿಸೂಚನೆ ಯಲ್ಲಿ ತಿಳಿಸಲಾಗುತ್ತದೆ.

ಯಾವ್ಯಾವ ಹುದ್ದೆಗಳು: ನರ್ಸಿಂಗ್ ಸೂಪರಿಟೆಂಡೆಂಟ್-272, ಡಯಾಲಿಸಿಸ್ ಟೆಕ್ನಿಷಿಯನ್-4, ಹೆಲ್ತ್ ಆ್ಯಂಡ್ ಮಲೇರಿಯಾ ಇನ್‌ಸ್ಪೆಕ್ಟರ್ (ಗ್ರೇ-11)-33, ಫಾರ್ಮಾಸಿಸ್ಟ್ (ಎಂಟ್ರಿ ಗ್ರೇಡ್)-105, ರೇಡಿಯೋಗ್ರಾಫರ್ (ಎಕ್ಸ್ ರೇ ಟೆಕ್ನಿಷಿಯನ್)-4, ಇಸಿಜಿ ಟೆಕ್ನಿಷಿಯನ್-4, ಲ್ಯಾಬ್ ಅಸಿಸ್ಟೆಂಟ್ (ಗ್ರೇಡ್-11)-12 ಹೀಗೆ ಒಟ್ಟು 434 ಹುದ್ದೆಗಳಿವೆ.

ವಯೋಮಿತಿ: ನರ್ಸಿಂಗ್ ಹುದ್ದೆಗಳಿಗೆ ಕನಿಷ್ಠ 20 ಹಾಗೂ ಗರಿಷ್ಠ 40 ವರ್ಷ ವಯೋಮಿತಿ ನಿಗದಿ ಮಾಡಲಾಗಿದೆ, ಫಾರ್ಮಾಸಿಸ್ಟ್ ಹುದ್ದೆಗಳಿಗೆ 20-35 ವರ್ಷದೊಳಗಿರಬೇಕು, ಇನ್ನುಳಿದ ಹುದ್ದೆಗಳ ಭರ್ತಿಗೆ 18-33 ವರ್ಷದೊಳಗಿನ ವಯೋಮಿತಿ ಹೊಂದಿರಬೇಕು.

ವೇತನ ಶ್ರೇಣಿ: ನರ್ಸಿಂಗ್ ಸೂಪರಿಟೆಂಡೆಂಟ್ ಹುದ್ದೆಗೆ ಏಳನೇ ಹಂತದ ವೇತನವಿದ್ದು, 44,900 ರು. ಆರಂಭಿಕ ವೇತನ ನೀಡಲಾ ಗುತ್ತದೆ. ಡಯಾಲಿಸಿಸ್ ಟೆಕ್ನಿಷಿಯನ್ ಹಾಗೂ ಹೆಲ್ತ್ ಆ್ಯಂಡ್ ಮಲೇರಿಯಾ ಇನ್‌ಸ್ಪೆಕ್ಟರ್ (ಗ್ರೇಡ್-11) ಹುದ್ದೆಗಳಿಗೆ ರು. 35,400. ಫಾರ್ಮಾಸಿಸ್ಟ್, ರೇಡಿಯೋಗ್ರಾಫರ್ ಹುದ್ದೆಗಳಿಗೆ 5ನೇ ಹಂತದ 29,200 ರು. ಆರಂಭಿಕ ವೇತನ ಎಂದು ನಿಗದಿ ಮಾಡಲಾಗಿದೆ. ಇಸಿಜಿ ಟೆಕ್ನಿಷಿಯನ್‌ಗೆ 25,500 ರು. ಮತ್ತು ಲ್ಯಾಬ್ ಅಸಿಸ್ಟೆಂಟ್ (ಗ್ರೇಡ್-11) ಹುದ್ದೆ 3ನೇ ಹಂತದ 21,700 ರು. ವೇತನ ನೀಡಲಾಗುತ್ತದೆ.

ಅರ್ಜಿ ಸಲ್ಲಿಕೆ ವಿಧಾನ: ಎಲ್ಲ ಆರ್‌ಆರ್‌ಬಿಗಳಲ್ಲೂ ಅಧಿಸೂಚನೆ ಪ್ರಕಟವಾಗಲಿದ್ದು, ಆಯಾ ಆರ್‌ಆರ್‌ಬಿಯನ್ನು ಆಧರಿಸಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ತಮಗಿಷ್ಟವಾಗುವ ಒಂದೇ ಆರ್‌ಆರ್‌ಬಿಗೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಅರ್ಜಿ ಶುಲ್ಕ: ಎಸ್‌ಸಿ, ಎಸ್‌ಟಿ, ಮಾಜಿ ಸೈನಿಕ, ಅಂಗವಿಕಲರು, ಮಹಿಳೆಯರಿಗೆ 250 ರು. ಆಗಿದೆ, ಇನ್ನುಳಿದವರು 500 ರು. ಪಾವತಿಸಬೇಕಿದೆ. ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಹಾಜರಾದ ಮೇಲೆ 500 ರು. ಪಾವತಿಸಿದವರಿಗೆ 400 ರು. ಹಾಗೂ ಉಳಿದವರಿಗೆ 250 ರು. ಮರುಪಾವತಿಸಲಾಗುತ್ತದೆ.

ನೇಮಕಾತಿ ವಿವರ: ಬೆಂಗಳೂರು ರೈಲ್ವೆ ನೇಮಕಾತಿ ಮಂಡಳಿ, ಚೆನ್ನೈ, ಮುಂಬೈ, ಸಿಕಂದರಾಬಾದ್ ಸೇರಿ ಒಟ್ಟು 21 ನೇಮಕಾತಿ ಮಂಡಳಿಗಳ ವ್ಯಾಪ್ತಿಯ ರೈಲ್ವೆ ವಲಯಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ.

ಆಧಾರ್ ದೃಢೀಕರಣ

ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡುವಾಗ ಅಭ್ಯರ್ಥಿಗಳು ಆಧಾರ್ ದೃಢೀಕರಣ ವಿಧಾನವನ್ನೇ ಅನುಸರಿಸುವಂತೆ ಮನವಿ ಮಾಡಲಾಗಿದೆ. ಇದರಿಂದ ಅಭ್ಯರ್ಥಿಯು ಫೋಟೋ ಅಪ್ ಲೋಡ್ ಮಾಡುವ, ಫೋಟೋ ಸರಿಯಿಲ್ಲದ ಕಾರಣಕ್ಕೆ ಅರ್ಜಿ ತಿರಸ್ಕೃತವಾಗುವ ಸಾಧ್ಯತೆಗಳಿಂದ ದೂರವಾಗಬಹುದು. ಜತೆಗೆ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ಇರುವಂತೆಯೇ ಹೆಸರು, ಜನ್ಮ ದಿನಾಂಕವನ್ನು ಆಧಾರ್ ಕಾರ್ಡ್‌ನಲ್ಲಿ ಅಪ್‌ಡೇಟ್ ಮಾಡಿಸಿದರೆ ದೃಢೀಕರಣವು ಸರಾಗವಾಗಲಿದೆ.

ಬಿ ಇ ಎಲ್: ಅರ್ಜಿ ಆಹ್ವಾನ

ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆ ಯು ಟ್ರೈನಿ ಇಂಜಿನಿಯರ್ (ಐ) ಹುದ್ದೆಗಳಿಗೆ ನೇಮಕಾತಿ ನಡೆಸಲಿದೆ.

ವಿದ್ಯಾರ್ಹತೆಗಳು: ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್, ಎಲೆಕ್ಟ್ರಾನಿಕ್ ಆ್ಯಂಡ್ ಟೆಲಿಕಮ್ಯುನಿಕೇಶನ್‌ನಲ್ಲಿ ನಾಲ್ಕು ವರ್ಷದ ಬಿ.ಇ/ ಬಿ.ಟೆಕ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು, ಕನಿಷ್ಠ ಆರು ತಿಂಗಳ ಸೇವಾನುಭವ ನಿರೀಕ್ಷಿಸುತ್ತಿದೆ.

ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಸೆಪ್ಟೆಂಬರ್ 3.

ವಯೋಮಿತಿ ಎಷ್ಟು: 28 ವರ್ಷ ವಯೋಮಿತಿ ನಿಗದಿ, ನಿಯಮಾನುಸಾರ ಮೀಸಲಾತಿ ವ್ಯಾಪ್ತಿಗೆ ಒಳಪ ಡುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುತ್ತದೆ.

ಅರ್ಜಿ ಶುಲ್ಕ: ಎಸ್‌ಸಿ, ಎಸ್‌ಟಿ, ವಿಶೇಷಚೇತನ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದೆಲ್ಲ ವರ್ಗದ ಅಭ್ಯರ್ಥಿಗಳು ಶೇ.18ರಷ್ಟು ಜಿಎಸ್‌ಟಿ ಮತ್ತು 150 ರು.ಅರ್ಜಿ ಶುಲ್ಕ ಸೇರಿಸಿ ಪಾವತಿಸಬೇಕು.

ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ.

ವೇತನ: ಮಾಸಿಕ 30,000 ರು. ವೇತನ ಇರಲಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://bel-india.in

ಕ್ರೀಡಾ ಪ್ರಾಧಿಕಾರದಲ್ಲಿ ಕೋಚ್ ಹುದ್ದೆಗಳು

ಸ್ಪೋರ್ಟ್ಸ್ ಆಥಾರಿಟಿ ಆಫ್ ಇಂಡಿಯಾ, ದೇಶಾದ್ಯಂತ ತನ್ನ ವಿವಿಧ ಘಟಕಗಳಲ್ಲಿ 111 ಕೋಚ್ ಮತ್ತು ಸೀನಿಯರ್ ಕೋಚ್ ಹುದ್ದೆಗಳಿಗೆ ನೇಮಕಾತಿ ನಡೆಸಲಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್ 8.

ವಿದ್ಯಾರ್ಹತೆಗಳು: ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ವಯೋಮಿತಿ: 56 ವರ್ಷದ ಒಳಗಿನ ಅಭ್ಯರ್ಥಿಗಳು ಈ ಹುದ್ದೆಗಳ ಅರ್ಜಿ ಸಲ್ಲಿಸಬಹುದು.

ಆಯ್ಕೆ ಪ್ರಕ್ರಿಯೆ: ಸಂದರ್ಶನದ ಮೂಲಕ ಅಭ್ಯರ್ಥಿಗಳ ನೇಮಕಾತಿ ನಡೆಯಲಿದೆ.

ವೇತನ: ಮಾಸಿಕ 56,100 ರು.ನಿಂದ 2,15,900 ರು.ವರೆಗೆ ವೇತನ ಇರಲಿದೆ.

ಆಯ್ಕೆ ಪ್ರಕ್ರಿಯೆ:ಸಂದರ್ಶನದ ಮೂಲಕ.

ಅರ್ಜಿ ಸಲ್ಲಿಸಬೇಕಾದ ವಿಳಾಸ: Office of the Deputy Director (Recruitment), Sports Authority of India, Head Office, Gate No.10 (East Gate), Jawaharlal Nehru Stadium, Lodhi Road, New Delhi-110003

ಮಾಹಿತಿಗೆ ಸಂಪರ್ಕಿಸಿ: sportsauthorityofindia.nic.in

NIACLನಲ್ಲಿ 550 ಹುದ್ದೆಗಳಿಗೆ ನೇಮಕಾತಿ

ಕೇಂದ್ರ ಸರಕಾರದ ಅಧೀನದಲ್ಲಿರುವ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿದೆ.

ಹುದ್ದೆಗಳ ವಿವರ: 550 ಆಡಳಿತ ಅಧಿಕಾರಿ ಹುದ್ದೆಗಳಿಗೆ ನೇಮಕಾತಿ ನಡೆಸಲಿದ್ದು, ಹಲವು ರೀತಿಯ ಹುದ್ದೆಗಳಿವೆ. ಇವುಗಳಲ್ಲಿ ರಿಸ್ಕ್ ಎಂಜನೀಯರ್ಸ್-50, ಆಟೋ ಮೊಬೈಲ್ ಇಂಜಿನಿಯರ್-75, ಕಾನೂನು ತಜ್ಞರು-50, ಅಕೌಂಟೆನ್ಸಿ ತಜ್ಞರು-25, ಆರೋಗ್ಯ ಅಧಿಕಾರಿಗಳು-50, ಐಟಿ ತಜ್ಞರು- 25, ವ್ಯವಹಾರ ವಿಶ್ಲೇಷಕರ ಹುದ್ದೆಗಳು-25, ಕಂಪನಿ ಕಾರ್ಯದರ್ಶಿ ಹುದ್ದೆಗಳು-2 ಮತ್ತು ಆಕ್ಚುರಿಯಲ್ ತಜ್ಞರ ಹುದ್ದೆಗಳು-5 ಸೇರಿವೆ, ಇದಲ್ಲದೆ 193 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ.

ಅರ್ಜಿ ಸಲ್ಲಿಸಬಹುದಾದ ಕೊನೆಯ ದಿನಾಂಕ: ಆಗಸ್ಟ್ 30, 2025

ಅಗತ್ಯ ವಿದ್ಯಾರ್ಹತೆಗಳು: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು, ಇಂಜಿನಿಯರಿಂಗ್, ಕಾನೂನು, ಮ್ಯಾನೇಜ್‌ಮೆಂಟ್ ಸೇರಿದಂತೆ ಆಯಾ ವಿಭಾಗಕ್ಕೆ ಸಂಬಂಧ ಪಟ್ಟ ವಿಷಯಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದಿರಬೇಕು.

ವಯೋಮಿತಿ ವಿವರ: ಕನಿಷ್ಠ 21 ವಷ, ಗರಿಷ್ಠ 30 ವರ್ಷ, ಅಂದರೆ ಅಭ್ಯರ್ಥಿಗಳು 1995ರ ಆಗಸ್ಟ್ 2ರ ಮೇಲ್ಪಟ್ಟು 2004ರ ಆಗಸ್ಟ್ 1ರ ನಡುವೆ ಜನಿಸಿರಬೇಕು. ಪರಿಶಿಷ್ಟ ಜಾತಿ, ಪ. ಪಂಗಡ, ಮಾಜಿ ಸೈನಿಕರಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ವಿಶೇಷ ಚೇತನ ಅಭ್ಯರ್ಥಿಗಳಿಗೆ 10 ವರ್ಷ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗಿದೆ.

ಅರ್ಜಿ ಶುಲ್ಕ ವಿವರ: ಸಾಮಾನ್ಯ, ಇತರೆ ಹಿಂದುಳಿದ ವರ್ಗ, ಆರ್ಥಿಕ ದುರ್ಬಲ ವರ್ಗದ ಅಭ್ಯರ್ಥಿಗಳು ಜಿಎಸ್‌ಟಿ, ಇಂಟಿಮೇಶನ್ ಫೀ ಸೇರಿ ಒಟ್ಟು 850 ರು.ಅರ್ಜಿ ಶುಲ್ಕ ಪಾವತಿಸಬೇಕು. ಉಳಿದಂತೆ ಎಸ್.ಸಿ, ಎಸ್.ಟಿ, ವಿಶೇಷ ಚೇತನರು 100 ರು.ಇಂಟಿಮೇಶನ್ ಚಾರ್ಜ್ ಅನ್ನು ಮಾತ್ರ ಪಾವತಿಸಬೇಕು.

ಪರೀಕ್ಷಾ ಪೂರ್ವ ತರಬೇತಿ: ಎಸ್.ಸಿ/ಎಸ್.ಟಿ/ ಮತ್ತು ವಿಶೇಷ ಚೇತನ ಅಭ್ಯರ್ಥಿಗಳಿಗೆ ಸಂಸ್ಥೆಯ ವತಿಯಿಂದಲೇ ಪರೀಕ್ಷಾ ಪೂರ್ವ ತರಬೇತಿ ನೀಡಲಾಗುತ್ತದೆ, ಅಗತ್ಯವಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗಲೇ ಮಾಹಿತಿ ಸಲ್ಲಿಸಬೇಕು.

ಪರೀಕ್ಷಾ ದಿನಾಂಕ?: ಪೂರ್ವಭಾವಿ ಪರೀಕ್ಷೆ: ಸೆಪ್ಟೆಂಬರ್-14, 2025, ಮುಖ್ಯ ಪರೀಕ್ಷೆ ಅಕ್ಟೋಬರ್-29, 2025

ಪರೀಕ್ಷಾ ಕೇಂದ್ರಗಳ ಮಾಹಿತಿ: ಬೆಂಗಳೂರು,ಬೆಳಗಾವಿ, ಕಲಬುರಗಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಉಡುಪಿ.

ಮುಖ್ಯ ಪರೀಕ್ಷೆ: ಬೆಂಗಳೂರು ಮಾತ್ರ.

ನಿರೀಕ್ಷಣಾ ಅವಧಿ: ನೇಮಕಗೊಂಡ ಅಭ್ಯರ್ಥಿಗಳಿಗೆ ಒಂದು ಅಥವಾ ಎರಡು ವರ್ಷ ಪ್ರೊಬೇಷನರಿ ಅವಧಿ ಇರುತ್ತದೆ.

ವೇತನ ಶ್ರೇಣಿ: 56,925-96,765 ರು. ಹಾಗೂ ಇತರೆ ಭತ್ಯೆ ಪಡೆಯುತ್ತಾರೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಅಧಿಕೃತ ಜಾಲ ತಾಣ: www.newindia.co.in

ನೇಮಕ ವಿಧಾನ

ಪ್ರಿಲಿಮಿನರಿ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ಪ್ರಿಲಿಮನರಿ ಪರೀಕ್ಷೆ 100 ಅಂಕಗಳಿಗೆ ನಡೆಯಲಿದ್ದು, ಒಂದು ಗಂಟೆ ಕಾಲಾವಕಾಶ ನೀಡಲಾಗಿದೆ. ಪ್ರಶ್ನೆಪತ್ರಿಕೆಯು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಇರಲಿದೆ. ಮುಖ್ಯ ಪರೀಕ್ಷೆಯು 200 ಅಂಕಗಳಿಗೆ ನಡೆಯಲಿದ್ದು, ಎರಡೂವರೆ ಗಂಟೆಗಳ ಸಮಯವಿರಲಿದೆ. ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಸಂದರ್ಶನಕ್ಕೆ ಆಹ್ವಾನಿಸಿ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತದೆ.

ಯೂನಿಯನ್ ಬ್ಯಾಂಕ್: ವೆಲ್ತ್ ಮ್ಯಾನೇಜರ್ಸ್ ನೇಮಕಾತಿ

ಸಾರ್ವಜನಿಕ ವಲಯದ ಪ್ರಮುಖ ಬ್ಯಾಂಕ್ ಆಗಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (ಯು.ಬಿ.ಐ) ದೇಶಾದ್ಯಂತ ತನ್ನ ವಿವಿಧ ಘಟಕಗಳಲ್ಲಿ ಖಾಲಿಯಿರುವ 250 'ವೆಲ್ತ್ ಮ್ಯಾನೇಜರ್' ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ.

ವರ್ಗವಾರು ಹುದ್ದೆಗಳ ವಿವರ ಹೀಗಿದೆ: ಸಾಮಾನ್ಯ -103, ಎಸ್.ಸಿ-37, ಎಸ್.ಟಿ-18, ಓಬಿಸಿ-67, ಇಡಬ್ಲ್ಯುಎಸ್-25

ಒಟ್ಟು ಹುದ್ದೆಗಳು: 250

ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಆಗಸ್ಟ್-25.

ವಿದ್ಯಾರ್ಹತೆಗಳು: ಮಾನ್ಯತೆ ಪಡೆದ ವಿ.ವಿಯಿಂದ ಎಂಬಿಎ/ ಎಂಎಂಎಸ್/ ಪಿಜಿಡಿಬಿಎ/ಪಿಜಿಡಿಬಿಎಂ/ಪಿಜಿಎ/ಪಿಜಿಡಿಎಂ ಕೋರ್ಸ್‌ಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಠ 3 ವರ್ಷ ಕಾರ್ಯನಿರ್ವಹಿಸಿದ ಅನುಭವವಿರಬೇಕು.

ವಯೋಮಿತಿ: ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು 2025ರ ಆ.1ಕ್ಕೆ ಅನ್ವಯವಾಗುವಂತೆ ಕನಿಷ್ಠ 25 ಹಾಗೂ ಗರಿಷ್ಠ 35 ವರ್ಷ.

ಅರ್ಜಿ ಸಲ್ಲಿಕೆಯ ವಿಧಾನ: ಆಸಕ್ತ ಅಭ್ಯರ್ಥಿಗಳು ibps.in ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಅರ್ಜಿ ಶುಲ್ಕ ವಿವರ: ಸಾಮಾನ್ಯ/ಹಿಂದುಳಿದ ಅಭ್ಯರ್ಥಿಗಳಿಗೆ ರು.1,180 ಹಾಗೂ ಪ.ಜಾತಿ/ ಪ. ಪಂಗಡ/ಅಂಗವಿಕಲ/ ಮಹಿಳಾ ಅಭ್ಯರ್ಥಿಗಳಿಗೆ ರು.177 ಅರ್ಜಿ ಶುಲ್ಕ.

ವೇತನ: ಆಯ್ಕೆಯಾದ ಅರ್ಹರಿಗೆ 64,820-93,960 ರು. ವೇತನಶ್ರೇಣಿ ನೀಡಲಾಗುತ್ತದೆ. ಇದಲ್ಲದೆ ತುಟ್ಟಿ ಭತ್ಯೆ, ವಿಶೇಷ ಭತ್ಯೆ ಮತ್ತು ಇತರ ಭತ್ಯೆಗಳನ್ನು ಬ್ಯಾಂಕಿನಲ್ಲಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ನೀಡಲಾಗುತ್ತದೆ.

ನೆನಪಿಡಿ: ಸಂವಹನ ಉದ್ದೇಶಕ್ಕಾಗಿ ಇ-ಮೇಲ್ ಐ.ಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಅರ್ಜಿಯಲ್ಲಿ ನೋಂದಾಯಿಸಬೇಕು ಹಾಗೂ ಸಕ್ರಿಯವಾಗಿ ಇರಬೇಕು.

ಆಯ್ಕೆ ಪಕ್ರಿಯೆ: ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸಿ ಅರ್ಹರನ್ನು ಶಾರ್ಟ್‌ಲಿಸ್ಟ್ ಗೊಳಿಸಿ ಕಂಪ್ಯೂಟರ್ ಆಧಾರಿತ ಆನ್‌ಲೈನ್ ಪರೀಕ್ಷೆ, ಗುಂಪು ಚರ್ಚೆ ಹಾಗೂ ಸಂದರ್ಶದ ಮೂಲಕ ಆಯ್ಕೆ ಮಾಡಲಾಗುತ್ತದೆ.

ಪ್ರೊಬೇಶನರಿ ಅವಧಿ: ಅಯ್ಕೆಯಾದ ಅಭ್ಯರ್ಥಿಗಳಿಗೆ 2 ವರ್ಷದ ಪ್ರೊಬೇಶನರಿ ಅವಧಿ ಇರುತ್ತದೆ. ಅಧಿಸೂಚನೆಗೆ ಜಾಲತಾಣ ಕೊಂಡಿ: www.unionbankofindia.co.in

ಪರೀಕ್ಷೆ ಹೀಗಿರಲಿದೆ

25 ಪ್ರಶ್ನೆ ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್, 25 ಪ್ರಶ್ನೆ ರೀಸನಿಂಗ್, ಇಂಗ್ಲಿಷ್ ವಿಷಯಾಧಾರಿತ 25 ಪ್ರಶ್ನೆಗಳಿ ರಲಿವೆ. ಹುದ್ದೆಗಳಿಗೆ ಸಂಬಂದಿಸಿದ ವಿಷಯಾಧಾರಿತ 75 ಪ್ರಶ್ನೆಗಳಿಗೆ 150 ಅಂಕಗಳು ಇರಲಿವೆ. ಪರೀಕ್ಷೆಯಲ್ಲಿ ಒಟ್ಟು 150 ಪ್ರಶ್ನೆಗಳಿಗೆ 225 ಅಂಕ ಇರಲಿದ್ದು ಎರಡೂವರೆ ತಾಸು ಸಮಯ ನಿಗದಿ ಮಾಡಲಾಗಿದೆ.ಆನ್‌ಲೈನ್ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಗುಂಪು ಚರ್ಚೆ, ವಯಕ್ತಿಕ ಸಂದರ್ಶನಕ್ಕೆ ಹಾಜರಾಗಬೇಕು. ಸಂದರ್ಶನಕ್ಕೆ 50 ಅಂಕಗಳು. ಒಂದುವೇಳೆ ಆನ್‌ಲೈನ್ ಪರೀಕ್ಷೆ ನಡೆಸದಿದ್ದರೆ, ಗುಂಪು ಚರ್ಚೆ ಮತ್ತು ವೈಯಕ್ತಿಕ ಸಂದರ್ಶನದ ಮೂಲಕ ಆಯ್ಕೆಯನ್ನು ಮಾಡಲಾಗುತ್ತದೆ.

ಗಮನಕ್ಕೆ

ಈ ಅಂಕಣದಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೇಖಕರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದಾಗ್ಯೂ, ವಿಷಯದ ಸಂಪೂರ್ಣತೆ, ನಿಖರತೆ ಅಥವಾ ಸಮಯೋಚಿತತೆಯನ್ನು ಖಾತರಿಪಡಿಸು ವುದಿಲ್ಲ. ಹಾಗಾಗಿ ಅರ್ಜಿ ಸಲ್ಲಿಸುವ ಮೊದಲು ಆಯಾಯ ವೈಬ್‌ಸೈಟ್ ನೋಡಿ ಖಚಿತಪಡಿಸು ವುದು ಉತ್ತಮ. ಯಾವುದೇ ಲೋಪದೋಷಗಳಿಗೆ ಪತ್ರಿಕೆ ಇಲ್ಲವೇ ಲೇಖಕರು ಜವಾಬ್ದಾರರಲ್ಲ.



ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

ಆರ್‌ಟಿಐ ಹೆಸರಲ್ಲಿ ವಸೂಲಿಗಿಳಿದ ಸಂಘಟನೆಗಳು । ನರೇಗಾ ಅಕ್ರಮ ದೂರುಗಳ ಬಗ್ಗೆ ಸಿಇಒಗಳಿಗೆ ಪತ್ರ । ಪಿಡಿಒಗಳಿಗೆ ಭಯ ಮುಕ್ತ ವಾತಾವರಣಕ್ಕೆ ಸೂಚನೆ

ದಾಖಲೆ ಇದ್ದರೆ ಆರ್‌ಟಿಐ ದೂರು ಸ್ವೀಕಾರ

ಬಸವರಾಜ ನಾಗಡದಿನ್ನಿ, ರಾಯಚೂರು

ಗ್ರಾಮಾಭ್ಯುದಯಕ್ಕಾಗಿ ಗ್ರಾಮ ಪಂಚಾಯಿತಿಗಳ ರಚನೆ ಮಾಡಲಾಗಿದೆ. ಪಂಚಾಯಿತಿಗೊಬ್ಬ ಅಭಿವೃದ್ಧಿ ಅಧಿಕಾರಿಯನ್ನೂ ನೇಮಕ ಮಾಡಲಾಗಿದೆ. ಆದರೆ ಇಂದು ಪಂಚಾಯತಿ ಅಭಿವೃದ್ಧಿ (ಪಿಡಿಒ) ಅಧಿಕಾರಿಗಳಿಗೆ ಮುಕ್ತವಾಗಿ ಅಧಿಕಾರ ಚಲಾಯಿಸಲಾಗದೆ, ಸದಾ ಆತಂಕದಲ್ಲೇ ಕರ್ತವ್ಯ ನಿರ್ವಹಿಸುವಂತಾಗಿದೆ. ಪಿಡಿಒಗಳಿಗೆ ಭಯ ಮುಕ್ತ ಕರ್ತವ್ಯ ನಿರ್ವಹಣೆಯ ವಾತಾವರಣ ಕಲ್ಪಿಸುವಂತೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆದು ಸೂಚನೆ ನೀಡಿದೆ.

ದೂರು ನೀಡುವ ಕಾಯಕ: ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಹಳ್ಳಿ ವಾಸಿಗಳು ಕೆಲಸವನ್ನರಸಿ ಮಹಾನಗರಗಳಿಗೆ ವಲಸೆ ಹೋಗುವುದನ್ನು ತಡೆಯಲು ಗ್ರಾಮಗಳ ಅಭಿವೃದ್ಧಿಗೆ ಕೋಟ್ಯಂತರ ರು.ಅನುದಾನ ಬರುತ್ತಿದೆ. ಕಾಮಗಾರಿ

ಪ್ರಸ್ತಾವನೆಯ ಅನುಮೋದನೆ ಪಡೆದು ಪಿಡಿಒಗಳು ಕೆಲಸ ಮಾಡಿಸುತ್ತಾರೆ. ಈ ಕಾಮಗಾರಿಯಲ್ಲಿ ಹಲವು ಲೋಪಗಳು ಅಲ್ಲಲ್ಲಿ ಕಂಡು ಬಂದು ಪಿಡಿಒಗಳು ನಿಯಮಾನುಸಾರ ಶಿಕ್ಷೆಗೂ ಗುರಿಯಾಗುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಸಂಘಟನೆಗಳು, ಮಾಹಿತಿ ಹಕ್ಕುದಾರರು ದುರುಪಯೋಗ ಪಡಿಸಿಕೊಂಡು ಪಿಡಿಒಗಳ ಮೇಲೆ ಯಾವುದೇ ದಾಖಲಾತಿ ನೀಡದೆ, ಜಿಲ್ಲಾ ಪಂಚಾಯತಿಗೆ ದೂರು ನೀಡುತ್ತಿರುವುದನ್ನೇ ನಿತ್ಯ ಕಾಯಕ ಮಾಡಿಕೊಂಡಿದ್ದಾರೆ.

ಬ್ಲಾಕ್ ಮೇಲ್ ದಂಧೆ : ಗ್ರಾಮ ಪಂಚಾಯಿತಿ ನರೇಗಾ ಯೋಜನೆಯ ಕಾಮಗಾರಿ ಮತ್ತು ಪಾವತಿಸಿದ ಬಿಲ್‌ಗಳನ್ನು ಆನ್‌ಲೈನ್ ನಲ್ಲಿ ಪಡೆದುಕೊಂಡು ಕಳಪೆ ಕಾಮಗಾರಿ, ಕಾಮಗಾರಿಯೇ ಮಾಡದೆ ಹಣ ದುರ್ಬಳಕೆ ಎಂದು ಪಿಡಿಒಗಳ ವಿರುದ್ಧ ದೂರು ಕೊಡುತ್ತಿದ್ದಾರೆ. ದೂರು ನೀಡಿದ ನಂತರ ಪಿಡಿಒಗಳಿಗೆ ಕರೆ ಮಾಡಿ ಹಣ ನೀಡಿದರೆ, ದೂರು ಹಿಂಪಡೆಯುವುದಾಗಿ ಹೇಳಿ ಬ್ಲಾಕ್ ಮೇಲ್ ದಂಧೆ ಮಾಡುತ್ತಿದ್ದಾರೆ. ಪಿಡಿಒಗಳು ತಪ್ಪು ಮಾಡಿದ್ದರೆ, ಇಲಾಖೆ ಶಿಸ್ತು ಕ್ರಮ ಕೈಗೊಳ್ಳಲಿದೆ. ಸಂಘ ಸಂಸ್ಥೆಗಳ ಹೆಸರಿನಲ್ಲಿ ಹೆದರಿಸಿ ಹಣ ಕೇಳುವ ಪ್ರಕ್ರಿಯೆಗಳು ಹೆಚ್ಚಾಗಿರುವ ಬಗ್ಗೆ ರಾಜ್ಯ ಪಿಡಿಒಗಳ ಸಂಘ ಗ್ರಾಮೀಣಾಭಿವೃದ್ಧಿ ಆಯುಕ್ತರಿಗೆ ದೂರು ಸಲ್ಲಿಸಿತ್ತು. ಈ ಬಗ್ಗೆ ಪರಿಶೀಲಿಸಿದ ಆಯುಕ್ತಾಲಯ ಪಿಡಿಒಗಳ ವಿರುದ್ಧ ಬರುವ ದೂರುಗಳಿಗೆ ಸೂಕ್ತ ಪೂರಕ ದಾಖಲೆಗಳಿದ್ದರೆ ಮಾತ್ರ ಪರಿಣಿಸಿ, ದಾಖಲೆಗಳು ಇಲ್ಲದಿದ್ದರೆ ಪರಿಗಣಿಸಬಾರದು ಎಂದು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಸುತ್ತೋಲೆ ಮೂಲಕ ಸೂಚನೆ ನೀಡಿದ್ದಾರೆ.



ಆಯುಕ್ತಾಲಯದ ಸ್ಪಷ್ಟನೆ

ಪಿಡಿಒಗಳಿಗೆ ಬ್ಲಾಕ್ ಮೇಲ್ ಮಾಡುವ ಉದ್ದೇಶದಿಂದ ಕೆಲ ಸಂಘಟನೆಗಳು ದೂರು ನೀಡುತ್ತಿದ್ದು, ಜಿಪಂ ಅಧಿಕಾರಿಗಳು ದೂರು ಪರಿಗಣಿಸಿದರೆ, ಪಿಡಿಒಗಳು ಲೋಕಾಯುಕ್ತ ಸೇರಿದಂತೆ ಹಲವು ತನಿಖೆ ಎದುರಿಸುವಂತಾಗಿದೆ. ಸಾಲದೆಂಬಂತೆ ದೂರುದಾರರು ಪತ್ರಿಕೆಗಳಿಗೂ ಹಣ ಲೂಟಿಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆ ನೀಡುವುದರಿಂದ ಪಿಡಿಒಗಳ ಮಾನ ಹರಾಜು ಆಗುವಂತಿದೆ. ಹಾಗಾಗಿ ಪಿಡಿಒಗಳು ಕಾಮಗಾರಿ ಮಾಡದೆ ಹಣ ದುರ್ಬಳಕೆ ಮಾಡಿದ್ದರೆ ಅಥವಾ ಗುಣಮಟ್ಟದ ಕಾಮಗಾರಿ ಮಾಡದಿದ್ದರೆ ಸೂಕ್ತ ದಾಖಲೆಗಳ ಜತೆ ಯಾರೇ ದೂರು ಸಲ್ಲಿಸಿದರೆ, ಪರಿಗಣಿಸುವಂತೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಸ್ಪಷ್ಟವಾಗಿ ಸೂಚನೆ ಬಂದಿದೆ.

» ನರೇಗಾ ಕಾಮಗಾರಿ ಕುರಿತು ಆರ್‌ಟಿಐ ಅರ್ಜಿಗಳ ಸಲ್ಲಿಕೆ

» ಆರ್‌ಟಿಐ ಹೆಸರಲ್ಲಿ ಪಿಡಿಒಗಳಿಗೆ ಧಮ್ಕಿ, ಹಣಕ್ಕೆ ಬೇಡಿಕೆ

» ಮುಕ್ತವಾಗಿ ಪಿಡಿಒಗಳು ಕೆಲಸ ನಿರ್ವಹಿಸಲಾಗದ ಸ್ಥಿತಿ

» ಕೆಲ ಸಂಘಟನೆಗಳಿಂದ ದೂರು ನೀಡಿ ಬೆದರಿಸುವ ತಂತ್ರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಆದೇಶದಿಂದ ಸಂತೋಷವಾಗಿದೆ. ಗ್ರಾಪಂ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದು, ಮಾಹಿತಿ ಹಕ್ಕನ್ನು ಕೆಲವರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮಗಳ ಅಭಿವೃದ್ಧಿ ಹೆಸರಿನಲ್ಲಿ ಬ್ಲಾಕ್ ಮೇಲ್ ಮಾಡುವುದೇ ಕೆಲ ಸಂಘಟನೆಗಳ ದಂಧೆಯಾಗಿದೆ. ನಿತ್ಯ ಆತಂಕದಲ್ಲೇ ಕೆಲಸ ಮಾಡುವಂತಾಗಿದ್ದು, ಆಯುಕ್ತರ ಆದೇಶದಿಂದ ನಿರಾತಂಕವಾಗಿ ಕೆಲಸ ಮಾಡಬಹುದು.

-ಹೆಸರು ಹೇಳಲಿಚ್ಛಿಸದ ಪಿಡಿಒ, ರಾಯಚೂರು

ಕಾಮಗಾರಿ ಆನ್‌ಲೈನ್ ಪ್ರಿಂಟ್ ಪಡೆದು ಬ್ಲಾಕ್‌ಮೇಲ್ !

ಗ್ರಾಮ ಪ.ಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕೆಲಸ ಮಾಡುವ ಸೂಕ್ತ ವಾತಾವರಣ ನಿರ್ಮಿಸಲು ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಸೂಚನೆ ನೀಡಲಾಗಿದೆ. ಗ್ರಾಮ ಪಂಚಾಯತಿ ಎಲ್ಲ ಕಾಮಗಾರಿಗಳ ವಿವರಗಳನ್ನ ಆನ್ ಲೈನ್ ಹಾಕಲಾಗುತ್ತಿದೆ. ಇದನ್ನು ಸಂಘಟನೆಗಳ ಮುಖಂಡರು, ಆರ್‌ಟಿಐ ಕಾರ್ಯಕರ್ತರು ಆನ್ ಲೈನ್ ಪ್ರಿಂಟ್ ಪಡೆದು ಕಾಮಗಾರಿ ಗುಣಮಟ್ಟದ ಬಗ್ಗೆ ಮತ್ತು ಹಣ ದುರುಪಯೋಗ ಕುರಿತು ಜಿಲ್ಲಾ ಪಂಚಾಯಿತಿಗೆ ದೂರು ಸಲ್ಲಿಸುತ್ತಿದ್ದರು. ಹೀಗೆ ದೂರು ಬಂದ ಕೂಡಲೇ ಜಿಲ್ಲಾ ಪಂಚಾಯತಿ ಅಧಿಕಾರಿಗಳು ಪಿಡಿಒಗಳಿಗೆ ದೂರಿನ ಕುರಿತು ನೋಟಿಸ್ ನೀಡಿ ಅವರಿಂದ ಉತ್ತರ ಪಡೆಯಬೇಕು ಹೌದು. ಆದರೆ ಸಂಘಟನೆಕಾರರು ಪ್ರತಿಭಟನೆಗೆ ಮುಂದಾಗವುದಾಗಿ ಎಚ್ಚರಿಸಿ ಬ್ಲಾಕ್ ಮೇಲ್ ಮಾಡುತ್ತಿದ್ದರು. ಇಂಥ ಪ್ರಕರಣದಲ್ಲಿ ಕೆಲವೊಮ್ಮೆ ಪಿಡಿಒಗಳು ಬಲಿಪಶು ಆಗುತ್ತಿದ್ದರು. ಕೆಲವರನ್ನು ನೇರವಾಗಿ ಅಮಾನತು ಮಾಡಲಾಗುತ್ತಿದೆ. ಇದರಿಂದ ಪಿಡಿಒಗಳ ಸಂಘ ತಮ್ಮ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ನಡೆಯುತ್ತಿದೆ ಎಂದು ಇಲಾಖೆಯ ರಾಜ್ಯ ಕಚೇರಿಗೆ ಮೊರೆ ಹೋಗಿದ್ದರು. ಇದೀಗ ಸೂಕ್ತ ದಾಖಲಾತಿಗಳನ್ನು ನೀಡಿದರೇ ಮಾತ್ರ ಮಾಹಿತಿ ನೀಡತಕ್ಕದ್ದು ಎಂದು ಆಯುಕ್ತಾಲಯ ಸುತ್ತೋಲೆ ಹೊರಡಿಸಿದೆ.

ಜಾರಕಿಹೊಳಿಯ ಭದ್ರ ಕೋಟೆಗೆ ಕತ್ತಿ ಎಂಟ್ರಿ । ಹೊಸ ಅಧ್ಯಾಯ ಸೃಷ್ಟಿಗೆ ಸತೀಶ್ ರಣತಂತ್ರ । ಜಿಲ್ಲೆಯ ಎರಡು ಪ್ರಭಾವಿ ಕುಟುಂಬಗಳ ಸೆಣೆಸಾಟ

ಪವರ್‌ಗಾಗಿ ಸಾಹುಕಾರಗಳ ಗುದ್ದಾಟ

ವಿನಾಯಕ ಮಠಪತಿ, ಬೆಳಗಾವಿ

ದೇಶದ ಮೊದಲ ವಿದ್ಯುತ್ ಸಹಕಾರ ಸಂಘ ಎಂಬ ಹೆಗ್ಗಳಿಕೆಗೆ ಹೊಂದಿರುವ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘಕ್ಕೆ ಭರ್ತಿ 56 ವರ್ಷ. ಸದ್ಯ ಈ ಸಂಘದ ಆಡಳಿತ ಚುಕ್ಕಾಣಿ ಹಿಡಿಯಲು ಜಿಲ್ಲೆಯ ಎರಡು ಪ್ರಭಾವಿ ಕುಟುಂಬಗಳ ನಡುವೆ ಗುದ್ದಾಟ ನಡೆಯುತ್ತಿದೆ. ಜಾರಕಿಹೊಳಿ ಹಾಗೂ ಕತ್ತಿ ಕುಟುಂಬದ ನಡುವೆ ಪ್ರಾರಂಭವಾಗಿರುವ ಈ ರಾಜಕೀಯ ಯುದ್ಧ ಮುಂದೆ ಯಾವುದೇ ಹಂತಕ್ಕೆ ತಲುಪಿದರೂ ಅಚ್ಚರಿಯಿಲ್ಲ.

ಸೆ.28ಕ್ಕೆ ಮತದಾನ

ಕತ್ತಿ ಕುಟುಂಬದ ಹಿಡಿತದಲ್ಲಿರುವ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಚುನಾವಣೆ ಮುಂಬರುವ ಸೆಪ್ಟೆಂಬರ್ 28 ರಂದು ನಡೆಯಲಿದೆ. ಈ ಬಾರಿ ಆಡಳಿತ ಚುಕ್ಕಾಣಿ ಹಿಡಿಯುವ ಉದ್ದೇಶದಿಂದ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹುಕ್ಕೇರಿ ಕ್ಷೇತ್ರದಲ್ಲಿ ಚುನಾವಣಾ ಪೂರ್ವಭಾವಿ ಸಭೆ ನಡೆಸುತ್ತಿದ್ದರೇ, ಅತ್ತ ಮಾಜಿ ಸಂಸದ ರಮೇಶ್ ಕತ್ತಿ ತಮ್ಮದೇ ಪಡೆ ಕಟ್ಟಿಕೊಂಡು ಜಾರಕಿಹೊಳಿ ಸಹೋದರರ ವಿರುದ್ಧ ರಣತಂತ್ರ ಹೆಣೆಯುತ್ತಿದ್ದಾರೆ.

ಮೊದಲ ವಿದ್ಯುತ್ ಸಹಕಾರಿ

ಸ್ವಾತಂತ್ರ್ಯ ಹೋರಾಟಗಾರ ದಿ. ಅಪ್ಪಣ್ಣಗೌಡ ಪಾಟೀಲ್ ಅವರ ದೂರದೃಷ್ಟಿ ಆಲೋಚನೆ ಫಲವಾಗಿ 1969 ರ ಜುಲೈ 21 ರಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ ಅಸ್ತಿತ್ವಕ್ಕೆ ಬಂತು. ಇದರ ಪ್ರಮುಖ ಉದ್ದೇಶ ಗ್ರಾಮೀಣ ಭಾಗದಲ್ಲಿ ಪರಿಣಾಮಕಾರಿಯಾಗಿ ಹಾಗೂ ರೈತರಿಗೆ ಅನುಕೂಲ ಮಾಡುವ ಉದ್ದೇಶದಿಂದ ಸಂಘದ ಮೂಲಕ ಗ್ರಾಹಕರಿಗೆ ವಿದ್ಯುತ್ ಪೂರೈಕೆ ಮಾಡುವುದಾಗಿದೆ.

ಹುಕ್ಕೇರಿ ತಾಲೂಕಿನ 60 ಕ್ಕೂ ಅಧಿಕ ಗ್ರಾಮಗಳಿಗೆ ಇದೇ ವಿದ್ಯುತ್ ಸಹಕಾರಿ ಸಂಘದಿಂದ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. 15 ಸದಸ್ಯ ಬಲದ ಈ ಸಂಘದಲ್ಲಿ ಗ್ರಾಹಕರೇ ನೇರವಾಗಿ ಮತ ನೀಡಿ ಸದಸ್ಯರ ಆಯ್ಕೆ ಮಾಡುತ್ತಾರೆ. 2020 ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಕತ್ತಿ ಬೆಂಬಲಿತ 15 ಸದಸ್ಯರು ಆಯ್ಕೆಯಾಗಿದ್ದರು.

ಕತ್ತಿ ಮನೆತನದ ಹಿಡಿತ

ದಿ. ವಿಶ್ವನಾಥ ಕತ್ತಿ ಅವರ ನಂತರದಲ್ಲಿ ದಿ. ಉಮೇಶ್ ಕತ್ತಿಯವರ ಅಧಿಕಾರಾವಧಿಯಿಂದ ಹಿಡಿದು ಸುದೀರ್ಘ 30 ವರ್ಷಗಳಿಂದ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಕ್ಕೆ ಚುನಾವಣೆ ನಡೆದಿಲ್ಲ, ಕತ್ತಿ ಕುಟುಂಬದ ಹಿಡಿತದ ಕಾರಣಕ್ಕೆ ಪ್ರತಿ ಅವಧಿಗೂ ಅವಿರೋಧ ಆಯ್ಕೆ ನಡೆಯುತ್ತಾ ಬಂದಿದೆ. ಇದೇ ಮೊದಲಬಾರಿಗೆ ಸಚಿವ ಸತೀಶ್ ಜಾರಕಿಹೊಳಿ ಚುನಾವಣೆ ತಯಾರಿ ನಡೆಸಿದ್ದು ಅಖಾಡ ರಂಗೇರುತ್ತಿದೆ.

ಅಖಾಡಕ್ಕೆ ಸಾಹುಕಾರ್

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಚುನಾವಣಾ ಅಖಾಡಕ್ಕೆ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಇಳಿದಿದ್ದು ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಸ್ವತಃ ಸಚಿವರೇ ಪ್ರತಿನಿಧಿಸುವ ಯಮಕನಮರಡಿ ವಿಧಾನಸಭಾ ಕ್ಷೇತ್ರದ ಅನೇಕ ಮತದಾರರು ವಿದ್ಯುತ್ ಸಂಘದ ಗ್ರಾಹಕರಾಗಿದ್ದು ಅವರ ಮತಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ತಮ್ಮ ಬೆಂಬಲಿತ ಅಭ್ಯರ್ಥಿಗಳ ಗೆಲುವಿಗೆ ಕಸರತ್ತು ನಡೆಸಿದ್ದಾರೆ.



» ದೇಶದ ಮೊದಲ ವಿದ್ಯುತ್ ಸಹಕಾರಿ ಸಂಘ

» ಹುಕ್ಕೇರಿ ಸಹಕಾರಿ ಸಂಘ ಚುನಾವಣೆ ಸೆ.28ಕ್ಕೆ

ಬಾಲಚಂದ್ರ/ಸತೀಶ್

ಈಗಾಗಲೇ ಬೆಳಗಾವಿ ಡಿಸಿಸಿ ಬ್ಯಾಂಕ್ ನಿರ್ದೇಶಕರ ಚುನಾವಣೆ ವಿಚಾರವಾಗಿ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಯವರು ರಮೇಶ್ ಕತ್ತಿ ವಿರುದ್ಧ ಬಹಿರಂಗವಾಗಿ ಆಕ್ರೋಶ ಹೊರಹಾ ಕುತ್ತಿದ್ದಾರೆ. ಈ ಮಧ್ಯೆ ಸಚಿವ ಸತೀಶ್ ಜಾರಕಿ ಹೊಳಿ ಚುನಾವಣಾ ಪ್ರಚಾರದ ವೇಳೆ ರಮೇಶ್ ಕತ್ತಿ ಕುಟುಂಬದ ಭ್ರಷ್ಟಾಚಾರ ಬಯಲಿಗೆಳೆಯುವ ಸವಾಲು ಹಾಕಿದ್ದಾರೆ. ಸದ್ಯ ಜಾರಕಿಹೊಳಿ ಸಹೋದರರ ಟಾರ್ಗೆಟ್ ರಮೇಶ್ ಕತ್ತಿ ಆಗಿದ್ದಂತು ಸುಳ್ಳಲ್ಲ.

ಕತ್ತಿ ಗುಡುಗು

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹುದ್ದೆ ಹಾಗೂ ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ ಆಡಳಿತ ಚುಕ್ಕಾಣಿ ಕೈತಪ್ಪಿದ್ದರ ಹಿಂದೆ ಜಾರಕಿಹೊಳಿ ಸಹೋದರರ ಪಾತ್ರದ ಕುರಿತು ಸಿಡಿದೆದ್ದಿರುವ ಮಾಜಿ ಸಂಸದ ರಮೇಶ್ ಕತ್ತಿ ಬಹಿರಂಗ ಸಮರಕ್ಕೆ ಇಳಿದಿದ್ದಾರೆ. ಶತಾಯಗತಾಯ ಈ ಬಾರಿ ಹುಕ್ಕೇರಿ ವಿದ್ಯುತ್ ಸಹಕಾರಿ ಸಂಘದ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಜಾರಕಿಹೊಳಿ ಸಹೋದರರಿಗೆ ಪ್ರತ್ಯುತ್ತರ ನೀಡುವ ಹುಮ್ಮಸ್ಸಿನಲ್ಲಿ ರಮೇಶ್ ಕತ್ತಿ ಇದ್ದಾರೆ.

ಗೋಕಾಕ್ ಭೇಟಿ

ಯಾವಾಗ ಜಾರಕಿಹೊಳಿ ಸಹೋದರರು ಕತ್ತಿ ಮನೆತನ ಪ್ರತಿನಿಧಿಸುವ ಹುಕ್ಕೇರಿ ಮತಕ್ಷೇತ್ರದಲ್ಲಿ ಹಸ್ತಕ್ಷೇಪ ಹೆಚ್ಚಿಸಿದಂತೆ, ಇತ್ತ ಮಾಜಿ ಸಂಸದ ರಮೇಶ್ ಕತ್ತಿ ಜಾರಕಿಹೊಳಿ ಭದ್ರಕೋಟೆಗೆ ಲಗ್ಗೆ ಇಟ್ಟಿದ್ದಾರೆ. ಗೋಕಾಕ್ ಕ್ಷೇತ್ರಕ್ಕೆ ಭೇಟಿ ನೀಡಿ ಇತ್ತೀಚಿಗೆ ನವೀಕರಣಗೊಂಡ ಮಹಾಲಕ್ಷ್ಮಿ ದೇವಸ್ಥಾನಕ್ಕೆ ಆಗಮಿಸಿ ದೇವಿ ಆಶೀರ್ವಾದ ಪಡೆದುಕೊಳ್ಳುವ ಮೂಲಕ ರಾಜಕೀಯ ವಿರೋಧಿಗಳಿಗೆ ಸೂಕ್ಷ್ಮ ಸಂದೇಶ ರವಾನಿಸಿದ್ದಾರೆ.

ವಿಶ್ವವಾಣಿ
@vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 21-08-2025 ಗುರುವಾರ

ಚಿತ್ತವಿಹಾರ

ಸಾಧಕರೊಂದಿಗೆ ಸಾಧನೆ

• ಮಾಯಾ ಬಾಲಚಂದ್ರ

ನಾವು ಯಾರ ಜೊತೆ ಹೆಚ್ಚಿನ ಸಮಯವನ್ನು ಕಳೆಯುತ್ತೇವೆಯೋ ಅವರಂತೆಯೇ ಆಗಿಬಿಡುತ್ತೇವೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ, ನಮ್ಮ ಸಾಮರ್ಥ್ಯದ ಅರಿವು ನಮ್ಮ ಗಮನಕ್ಕೆ ಬಾರದೆ ಹೋಗಿಬಿಡುತ್ತದೆ. ನಮ್ಮ ಚಿಂತನೆ, ಕಲ್ಪನೆ, ನಡವಳಿಕೆ ಎಲ್ಲವೂ ಜೊತೆಗಾರರ ಸಾಮರ್ಥ್ಯದ ಮಿತಿಯಲ್ಲಿಯೇ ಉಳಿದುಬಿಡುತ್ತದೆ. ನಮ್ಮ ಸಾಮರ್ಥ್ಯವನ್ನು ಗುರುತಿಸಿಕೊಳ್ಳದ ಮನಸ್ಥಿತಿಗೆ, ತಿಳಿಯದೆ ತಲುಪಿ ಬಿಡುತ್ತೇವೆ.

ಒಂದು ಬಾರಿ ಹದ್ದು ಒಂದು ತನ್ನ ಮೊಟ್ಟೆಗಳನ್ನು ಕೋಳಿಯ ಗೂಡಿನಲ್ಲಿ ಇಷ್ಟು ಹಾರಿ ಹೋಯಿತು. ಮತ್ತೆ ಅದು ಮರಳಿ ಬರಲೇ ಇಲ್ಲ. ಕೋಳಿ ತನ್ನ ಮೊಟ್ಟೆಗಳೊಂದಿಗೆ ಹದ್ದಿನ ಮೊಟ್ಟೆಗೂ ಕಾವು ಕೊಡಲು ಆರಂಭಿಸಿತು. ಒಂದು ದಿನ ಮೊಟ್ಟೆ ಒಡೆದು ಮರಿ ಹೊರಬಂದಿತು. ಗಾತ್ರದಲ್ಲಿ, ಆಕಾರದಲ್ಲಿ ಹದ್ದಿನ ಮರಿ ಭಿನ್ನವೇ ಆಗಿತ್ತು. ಯಾವುದನ್ನೂ ಅರಿಯದ ಮರಿ, ಬೇರೆಲ್ಲ ಮರಿಗಳೊಂದಿಗೆ ತಾನೂ ಕೋಳಿಯ ಮರಿಯೇ ಎಂದು ಭಾವಿಸಿ, ಬೆಳೆಯ ತೊಡಗಿತು. ಬೆಳೆಯುತ್ತಾ ಬೆಳೆಯುತ್ತಾ ಕೋಳಿಯ ಮರಿಗಳಂತೆ ಕಾಲಿನಲ್ಲಿ ಕಾಳುಗಳನ್ನು ಕೆದಕುತ್ತಾ, ಅದನ್ನೇ ತಿನ್ನುತ್ತಾ, ಕೋಳಿಯಂತೆಯೇ ವರ್ತಿಸುತ್ತಾ ಹೋಯಿತು. ತನಗೆ ಹಾರಲು ಸಾಧ್ಯವಿದೆ ಎನ್ನುವ ಕಲ್ಪನೆಯು ಸಹ ಹದ್ದಿನ ಮರಿಯಲ್ಲಿ ಮೂಡಲಿಲ್ಲ. ಹಾಗಾಗಿ ಅದು ಹಾರುವ ಪ್ರಯತ್ನವನ್ನೇ ಮಾಡಲಿಲ್ಲ.

ಒಮ್ಮೆ ಹದ್ದಿನ ಮರಿ, ಆಕಾಶದಲ್ಲಿ ಎತ್ತರದಲ್ಲಿ ಹಾರಾಡುತ್ತಿದ್ದ ಹದ್ದನ್ನು ಕಂಡು, ಕೋಳಿಯ ಬಳಿ ''ಇಷ್ಟು ಸುಂದರವಾದ ಪಕ್ಷಿ ಯಾವುದು? ಎಷ್ಟು ಎತ್ತರದಲ್ಲಿ ಹಾರುತ್ತಿದೆ! ಅದರ ರೆಕ್ಕೆಗಳೆಷ್ಟು ಬಲಿಷ್ಠವಾಗಿವೆಯಲ್ಲವೇ?''ಎಂದು ಆಶ್ಚರ್ಯ ವ್ಯಕ್ತಪಡಿಸಿತು. ಅದಕ್ಕೆ ಕೋಳಿ ''ಅದು ಹದ್ದು. ಅತ್ಯಂತ ಎತ್ತರದಲ್ಲಿ ಹಾರುವ ಪಕ್ಷಿ. ಅದು ಪಕ್ಷಿಗಳಲ್ಲಿಯೇ ಅತ್ಯಂತ ಶಕ್ತಿಶಾಲಿಯಾದ ಪಕ್ಷಿಯೂ ಹೌದು. ಅದು ಮೋಡಗಳಿಗಿಂತ ಎತ್ತರದಲ್ಲಿ ಹಾರುತ್ತದೆ. ಆದರೆ ನಿನಗದು ಸಾಧ್ಯವಿಲ್ಲ. ಏಕೆಂದರೆ ನೀನು ಕೋಳಿ'' ಎಂದಿತು. ಹದ್ದಿನ ಮರಿ ತನ್ನನ್ನು ತಾನು ಪರಾಂಬರಿಸಿ ನೋಡಿಕೊಳ್ಳುವ ಪ್ರಯತ್ನವನ್ನೇ ಮಾಡಲಿಲ್ಲ. ತನ್ನ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಸಾಹಸವನ್ನೂ ಮಾಡಲಿಲ್ಲ. ಕೋಳಿ ಹೇಳಿದ ಮಾತನ್ನು ಪೂರ್ಣವಾಗಿ ನಂಬಿಬಿಟ್ಟಿತು. ಆ ಮಾತನ್ನು ಸ್ವಲ್ಪವಾದರೂ ವಿಮರ್ಶಿಸಬೇಕು ಎಂದು ಅದಕ್ಕೆ ಹೊಳೆಯಲೇ ಇಲ್ಲ. ತನ್ನ ಜೀವಿತಾವಧಿಯನ್ನೆಲ್ಲಾ ಕೋಳಿಯಾಗಿಯೇ ಬದುಕಿ ಬಿಟ್ಟಿತು. ತಾನು ಯಾರೆಂಬುದನ್ನು ಸಹ ತಿಳಿಯದೆ ಅದರ ಅಂತ್ಯವಾಯಿತು.

ಹದ್ದಿನಂತೆ ಹಾರಾಡಬೇಕಾದರೆ ಅದರ ರೀತಿ, ನೀತಿಗಳನ್ನು ಕಲಿಯಬೇಕು. ಹಾಗೆ ಕಲಿಯಬೇಕಾದರೆ ಹದ್ದುಗಳ ಜೊತೆಯಲ್ಲೇ ಇರಬೇಕು. ಸಾಧಕರೊಂದಿಗೆ ಸಾಧನೆ ಮಾಡಬಹುದಾದರೆ, ಚಿಂತಕರೊಂದಿಗೆ ಚಿಂತನೆ ನಡೆಸಬಹುದು.ಎತ್ತರದಲ್ಲಿ ಹಾರಾಡಲು ಎತ್ತರದ ಜ್ಞಾನ ವಿ ಇರಬೇಕು. ಅದಕ್ಕಾಗಿ ಅಂತದೇ ಕನಸುಗಳು ಬೇಕು. ಕನಸು ಕಾಣಲು ಸ್ವ ಸಾಮರ್ಥ್ಯದ ಅರಿವಿರಬೇಕು.

ಗ್ರಾಮೀಣ ಪ್ರದೇಶದ ಕಲಾವಿದರನ್ನು ಕಟ್ಟಿಕೊಂಡು, ಉತ್ತಮ ನಾಟಕ ಪ್ರದರ್ಶಿಸುವುದು ಸವಾಲಿನ ಕೆಲಸ. ಇಂತಹ ಕಲಾಸೇವೆಯನ್ನು ಮಾಡುತ್ತಿದ್ದಾರೆ, ರಂಗಶಿವ ಕಲಾಬಳಗದ ಮೂಲಕ ಶ್ರೀಮತಿ ಹೇಮಾವತಿ ವೀ. ಹೆಗ್ಗಡೆ ಅವರು.

ದಶಮಾನೋತ್ಸವದ ಮುದ್ದಣ್ಣನ ಮನೋರಮೆ

ವೇದಿಕೆಯಲ್ಲಿ ಮೂರು ರೀತಿಯಲ್ಲಿ ಅಂದರೆ ಮುದ್ದಣ್ಣ ಕವಿಯಾಗಿ ಹೇಗೆ ಕಷ್ಟ ಪಡುತ್ತಿದ್ದರು? ಅವರ ಬಡತನ ಹೇಗಿತ್ತು? ಮುದ್ದಣ್ಣ ಮತ್ತು ಮನೋರಮೆಯರ ಸಲ್ಲಾಪ ಮತ್ತು ಮಧ್ಯದಲ್ಲಿ ರಾಮಶ್ವಮೇಧದ ಕಥೆ ಹೀಗೆ ಮೂರು ಸನ್ನಿವೇಶಗಳನ್ನು ಏಕಕಾಲದಲ್ಲಿ ವೇದಿಕೆಗೆ ತರುವ ಪ್ರಯತ್ನ ಇಲ್ಲಿ ನಡೆದಿದೆ. ಮನೋರಮೆಯನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ. ಅವಳು ಮನಸ್ಸು ರಾಮಾಶ್ವಮೇಧ ನಡೆಯುವಲ್ಲಿಗೆ ಹೋಗುತ್ತದೆ. ರಾಮನಿಗೂ ಬೈಯುತ್ತಾಳೆ. ಕ್ಷಯರೋಗಿಯಾಗಿ ಮಲಗಿರುವ ಲಕ್ಷ್ಮೀನಾರಾಯಣಪ್ಪನ ಮನೆಗೂ ಮದ್ದು ತೆಗೆದುಕೊಂಡು ಹೋಗುತ್ತಾಳೆ. ಹೀಗೆ ಮುದ್ದಣ್ಣನ ಮನೋರಮೆಯನ್ನು ಇಂದಿನ ದಿನಗಳಿಗೆ ತಕ್ಕಂತೆ ಬದಲಾಗಿದೆ.

ರಂಗಶಿವ ಕಲಾಬಳಗ

• ಡಾ. ಚಂದ್ರಹಾಸ್ ಚಾರ್ಮಾಡಿ

ಒಂದು ನಾಟಕ ತಂಡವನ್ನು ಕಟ್ಟಿ, ಕಲಾವಿದರನ್ನು ಒಟ್ಟುಗೂಡಿಸಿ ತಿಂಗಳುಗಟ್ಟಲೆ ಅಭ್ಯಾಸ ನಡೆಸಿ ನಾಟಕವನ್ನು ಪ್ರದರ್ಶಿಸಬೇಕಾದರೆ ಒಂದಷ್ಟು ಆರ್ಥಿಕ ಸಂಪನ್ಮೂಲದ ಅಗತ್ಯತೆ ಇದ್ದೇ ಇರುತ್ತದೆ. ಕರಾವಳಿಯಲ್ಲಂತೂ ತುಳು ನಾಟಕಗಳಿಗೆ ದೊರೆತಷ್ಟು ಪ್ರೇಕ್ಷಕರ ಬೆಂಬಲ ಕನ್ನಡ ನಾಟಕಗಳಿಗೆ ಸಿಗುವುದು ಅಪೂರ್ವ. ಹಾಗೆಂದು, ಕರಾವಳಿಯಲ್ಲಿ ಕನ್ನಡ ನಾಟಕ ತಂಡಗಳಿಗೇನು ಕೊರತೆಯಿಲ್ಲ. ಬೆರಳೆಣಿಕೆಯಷ್ಟು ಕಲಾವಿದರು ಕನ್ನಡ ನಾಟಕಗಳ ರಸದೌತಣವನ್ನು ಪ್ರೇಕ್ಷಕರಿಗೆ ಉಣಬಡಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ.

ಈ ಮಾತಿಗೆ ಉತ್ತಮ ಉದಾಹರಣೆ ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀಮತಿ ಹೇಮಾವತಿ ವೀ. ಹೆಗ್ಗಡೆಯವರ ಮಾರ್ಗದರ್ಶನದ 'ರಂಗಶಿವ ಕಲಾಬಳಗ' ನಾಟಕ ತಂಡ. ಪ್ರತಿವರ್ಷ ವಿನೂತನ ಕಥೆಯನ್ನು ಆಯ್ದುಕೊಂಡು ಒಂದೆರಡು ತಿಂಗಳುಗಳ ಕಾಲ ಅಭ್ಯಾಸ ನಡೆಸಿ ನಂತರ ಉಚಿತವಾಗಿ ನಾಲ್ಕೈದು ಪ್ರದರ್ಶನವನ್ನು ನೀಡುವ ಈ ನಾಟಕ ತಂಡ ಕರಾವಳಿಯಲ್ಲಿ ಸಾವಿರಾರು ಪ್ರೇಕ್ಷಕರನ್ನು ಹುಟ್ಟುಹಾಕಿದೆ. ಪ್ರಚಾರವನ್ನು ಬಯಸದೆ ಕಲಾ ಸೇವೆಯಲ್ಲಿ ತೊಡಗಿರುವ 'ರಂಗಶಿವ ಕಲಾಬಳಗ' ಇದೀಗ ದಶಕದ ಸಂಭ್ರಮದಲ್ಲಿದೆ. ತನ್ನ ದಶಮಾನೋತ್ಸವವನ್ನು ಕೂಡಾ ಒಂದು ದಿನದ ಆಡಂಬರದ ಕಾರ್ಯಕ್ರಮಕ್ಕೆ ಮೀಸಲಾಗಿಸುವ ಬದಲು ಶ್ರೀಮತಿ ಹೇಮಾವತಿ ವೀ. ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಆಸುಪಾಸಿನ ನಾಲ್ಕೈದು ಊರಿನ ಆಸಕ್ತರಿಗೆ ನಾಟಕ ತರಬೇತಿ ನೀಡಿ, ಅವರುಗಳನ್ನು ಗುರುತಿಸಿ, ಗೌರವಿಸಿ, ಆ ಮೂಲಕ ನಾಟಕ ರಂಗಭೂಮಿಯ ಬಗ್ಗೆ ಅವರಲ್ಲಿ ಆಸಕ್ತಿ ಹುಟ್ಟಿಸುವ ವಿನೂತನ ಪ್ರಯತ್ನವು ನಡೆಯಲಿದೆ.

ಕಥೆಯ ಆಯ್ಕೆ: ಕಥೆಯ ಆಯ್ಕೆ, ಪ್ರಸ್ತುತ ಕಾಲಘಟ್ಟ ಮತ್ತು ಪರಿಸರಕ್ಕೆ ಸರಿಹೊಂದುವಂತೆ ಕಥೆಯನ್ನು ಪೋಣಿಸುವ, ಸಂಭಾಷಣೆ ರಚನೆ, ಗೀತೆ, ಬೆಳಕು, ವೇಷ-ಭೂಷಣ, ಸಂಗೀತ ಹೀಗೆ ಎಲ್ಲವುಗಳನ್ನು ಆಯ್ಕೆ ಮಾಡಿ ನಾಟಕವೊಂದರ ಆರಂಭದಿಂದ ನಾಟಕ ಪ್ರದರ್ಶನದವರೆಗೆ ತಾವೇ ಖುದ್ದು ಕಲಾವಿದರ ಜೊತೆಗಿದ್ದು ಅವರನ್ನು ಪ್ರೋತ್ಸಾಹಿಸುತ್ತಿರುವ ಮಾತೃಶ್ರೀಯವರ ಶ್ರಮ ಇದೀಗ ಸಾರ್ಥಕಗೊಂಡಿದೆ. ನಟನೆ ಎಂದರೆ ಏನೆಂದೇ ಗೊತ್ತಿರದ, ಕ್ಷೇತ್ರದ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳನ್ನು ಗುರುತಿಸಿ ನಿಮ್ಮೊಳಗೊಬ್ಬ ಕಲಾವಿದನಿದ್ದಾನೆ ಎಂಬ ಧೈರ್ಯ ತುಂಬಿ, ವೇದಿಕೆಗೆ ಕರೆತಂದು ಇಂದು ಓರ್ವ ಯಶಸ್ವಿ ಕಲಾವಿದರನ್ನಾಗಿ ರೂಪಿಸಿದ ಹೆಗ್ಗಳಿಕೆ ಅವರದ್ದು.

ರಂಗಶಿವ ಕಲಾಬಳಗದ ಹುಟ್ಟು: ಹಿಂದೆ ವರ್ಷಕ್ಕೊಮ್ಮೆ ಶ್ರೀ ಹೆಗ್ಗಡೆಯವರ ಪಟ್ಟಾಭಿಷೇಕದ ದಿನದಂದು ಕ್ಷೇತ್ರದ ಸಿಬ್ಬಂದಿಗಳೇ ಸೇರಿಕೊಂಡು ನಾಟಕ ಪ್ರದರ್ಶನವನ್ನು ಮಾಡುತ್ತಿದ್ದರು. ಮುಂದೆ, ಇಲ್ಲಿನ ನೌಕರರಲ್ಲಿರುವ ಕಲಾಪ್ರತಿಭೆ ಇಲ್ಲಿಗೆ ನಿಲ್ಲಬಾರದು, ಕನ್ನಡದ ನಾಟಕಗಳನ್ನು ನೋಡುವ ಆಸಕ್ತಿ ಹಳ್ಳಿ ಮಂದಿಯಲ್ಲೂ ಚಿಗುರೊಡೆಯಬೇಕು. ಆ ಮೂಲಕ ರಾಮಾಯಣ, ಮಹಾಭಾರತದ ಕಥೆಗಳಲ್ಲಿರುವ ನಿತ್ಯ ಬದುಕಿಗೆ ಬೇಕಾದ ಸಂದೇಶ ಎಲ್ಲೆಡೆ ಪಸರಿಸಬೇಕೆಂಬ ನಿಟ್ಟಿನಲ್ಲಿ ಶ್ರೀಮತಿ ಹೇಮಾವತಿ ವೀ. ಹೆಗ್ಗಡೆಯವರೇ ಮುಂದೆ ನಿಂತು 2015ರಲ್ಲಿ ಆಸಕ್ತ ನೌಕರರನ್ನು ಒಟ್ಟು ಸೇರಿಸಿ ನಾಟಕ ತಂಡವೊಂದನ್ನು ಕಟ್ಟಿದರು. ನಾಟಕಗಳಿಗೆ ನಿರ್ದೇಶನ ನೀಡುವುದಕ್ಕಾಗಿ ನೀನಾಸಂನಲ್ಲಿ ತರಬೇತಿ ಪಡೆದ ಸುನಿಲ್ ಶೆಟ್ಟಿ ಕಲ್ಲೊಕ್ಕೊಪ್ಪರವರನ್ನು ಕರೆತಂದರು.

ಇವರ ಪ್ರಯತ್ನವನ್ನು ಶ್ರೀ ಹೆಗ್ಗಡೆಯವರು ಪ್ರೋತ್ಸಾಹಿಸಿದರು. ಈ ನಾಟಕ ತಂಡಕ್ಕೆ 'ರಂಗಶಿವ ಕಲಾಬಳಗ' ಎಂಬ ಹೆಸರನ್ನಿತ್ತರು.

ಪ್ರದರ್ಶನಗೊಂಡ ನಾಟಕಗಳು

ಸಹಸ್ರಮಲ್ಲ, ಸಾಹೇಬರು ಬರುತ್ತಾರೆ, ಕೃಷ್ಣ ಸಂಧಾನ, ನೆಮ್ಮದಿ ಅಪಾರ್ಟ್‌ಮೆಂಟ್, ಬರ್ಬರೀಕ, ಯಡವಟ್ರಾಜ, ಕೇಳೇಸಖಿ ಚಂದ್ರಮುಖಿ, ಮುದ್ದಣ್ಣನ ಮನೋರಮೆ ಹೀಗೆ ಪ್ರತಿವರ್ಷ ಒಂದು ನಾಟಕವನ್ನು ಅಭ್ಯಾಸ ನಡೆಸಿ ಪ್ರದರ್ಶನ ಪಡಿಸಲಾಗುತ್ತಿದೆ.

ನಾಟಕಗಳಲ್ಲದೆ 2018ರ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಮೂರು ಸಾವಿರ ಕಲಾವಿದರ ಒಗ್ಗೂಡುವಿಕೆಯಲ್ಲಿ ಮೂವತ್ತು ಗಂಟೆಗಳ ಕಾಲ ನಡೆದ ಬಾಹುಬಲಿ ಸ್ವಾಮಿಯ ಬಾಲ್ಯದಿಂದ ಕೈವಲ್ಯದವರೆಗಿನ ಪಂಚಮಹಾವೈಭವ ದೃಶ್ಯ ರೂಪಕವನ್ನು ಜನಮನಗೆದ್ದಿತು. ಲಕ್ಷ ದೀಪೋತ್ಸವದ ಕೊನೆಯ ದಿನ ಸಮವಸರಣ ಪೂಜೆಯ ಸಂದರ್ಭದಲ್ಲಿ ಜೈನ ತತ್ವಗಳನ್ನೊಳಗೊಂಡ ದಿವ್ಯದರ್ಶನ, ಷಡ್ಲೇಶ್ಯ, ಸಂಕಲ್ಪ ಹಿಂಸೆ, ಕಾಲಲಬ್ಧಿ, ಭರತೇಶ ವೈಭವ, ಜಿನಾಗಮ ದರ್ಶನ ಮುಂತಾದ ಕಿರುನಾಟಕ ಮತ್ತು ದೃಶ್ಯರೂಪಕಗಳನ್ನು ಪ್ರಸ್ತುತ ಪಡಿಸುತ್ತಿದ್ದಾರೆ.

ಬೀದಿ ನಾಟಕಗಳಿಗೆ ಪ್ರೋತ್ಸಾಹ: ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕೇಂದ್ರದ ಸದಸ್ಯರ ಮೂಲಕ ರಾಜ್ಯದ್ಯಾಂತ ಆಯಾ ಪ್ರದೇಶದಲ್ಲಿರುವ ನಾಟಕಕಾರರನ್ನು ಕರೆಸಿ ಬೀದಿ ನಾಟಕಗಳ ಮೂಲಕ ಮಹಿಳೆಯರ, ಆ ಊರಿನ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವೂ ನಡೆಯುತ್ತಿದೆ. ಇನ್ನು 'ಜ್ಞಾನವಿಕಾಸ' ಯೂಟ್ಯೂಬ್ ವಾಹಿನಿಯ ಮೂಲಕ ಬೆವರಿನ ಬೆಲೆ, ಲಾಕ್‌ಡೌನ್ ನಾವೇಷ್ಟು ಜಾವಾಬ್ದಾರರು? ಎಂಬ ಕಿರುಚಿತ್ರ, ದೀವಿಗೆ ಬಾಳ ದಾರಿಗೆ, ಪುಕ್ಕಟೆ ಸಲಹೆ ಎನ್ನುವ ಕಿರುನಾಟಕ, ದೃಶ್ಯ ಮತ್ತು ನೃತ್ಯ ರೂಪಕಗಳು ಹೀಗೆ ಮಹಿಳೆಯರಿಗಾಗಿ ಹಲವು ಕಲಾಪ್ರಕಾರಗಳನ್ನು ನೀಡುತ್ತಿದ್ದಾರೆ. ಮಾತ್ರವಲ್ಲದೆ ಒಳ್ಳೆಯ ಸಿನಿಮಾಗಳನ್ನು ಪ್ರದರ್ಶಿಸಿ ಅದರ ಬಗ್ಗೆ ವಿಮರ್ಶೆ ಮಾಡುವ ಕಾರ್ಯಕ್ರಮವು ಜ್ಞಾನವಿಕಾಸ ಕೇಂದ್ರಗಳಲ್ಲಿವೆ.

ಮಕ್ಕಳಿಗೂ ಅವಕಾಶ: ವರ್ಷಕ್ಕೊಮ್ಮೆ ಮಕ್ಕಳ ನಾಟಕವನ್ನು ಮಾಡುತ್ತಾರೆ. ಈಗಾಗಲೇ ಮಕ್ಕಳಿಂದ ಪ್ರದರ್ಶನಗೊಂಡ ಕಿಂದರಿಜೋಗಿ, ಇಸ್ಪೀಟ್ ರಾಜ್ಯ, ಪುಷ್ಪರಾಣಿ, ಕತ್ತಲೆನಗರ ತಲೆಕೆಟ್ಟ ರಾಜ, ಗೆದ್ದಲುಗಳ ಗದ್ದಲ, ನಾಣಿಭಟ್ಟನ ಸ್ವರ್ಗದ ಕನಸು, ಅಲಿಬಾಬಾ ಮತ್ತು ನಲುವತ್ತು ಕಳ್ಳರು, ಗಿಡ್ಡು ಟೈಲರ್, ನಿದ್ರಾ ನಗರಿ, ತಿರುಕನ ಕನಸು, ಕೋತಿ ಬಂತು ಕೋತಿ, ಗುಡು ಗುಡು ಗುಮ್ಮಟ ದೇವರು, ಬಾವಿ ಕಥೆ, ಜಾಣ ಗಿಳಿ, ತುಳು ನಾಟಕಗಳಾದ ಅಪ್ಪದ ಅಡ್ಯೆ, ತೆಂಬರೆ ಉಜ್ಜೇಲ್ ತಡ್ಪೆ, ರಾವೋ ರಾವೋ ಕೊರಂಗು ಮುಂತಾದ ನಾಟಕಗಳು ಜನಮನ ಗೆದ್ದಿವೆ.

ಮೊದಲ ನಾಟಕದ ಅನುಭವ: ಮೊದಲ ನಾಟಕ 'ಸಹಸ್ರಮಲ್ಲ' ಇದು ಸಣ್ಣ ಕಥಾ ಹಂದರವನ್ನು ಹೊಂದಿತ್ತು. ಅದರಲ್ಲಿ ನಿಗದಿತ ಪಾತ್ರಗಳಿದ್ದವು. ಆದರೆ ನಟನೆ ಮಾಡಲು ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಸುಮಾರು ಐವತ್ತು ಮಂದಿ ಕಲಾವಿದರಿಗೆ ಪಾತ್ರಗಳನ್ನು ನೀಡಬೇಕಾಯಿತು. ಹಾಗಾಗಿ ನಾಟಕದ ಕಥೆಯನ್ನು ವಿಸ್ತರಿಸುತ್ತಾ ಹೋದೆ. ಸಹಸ್ರಮಲ್ಲ ನಾಟಕ ಒಬ್ಬ ಕಳ್ಳ ಮೋಸ ಮಾಡಿ ತನ್ನ ಕೆಲಸವನ್ನು ಹೇಗೆ ಮಾಡಿಕೊಳ್ಳುತ್ತಿದ್ದ ಎಂದು ಹೇಳುವ ಕಥೆ. ಕಳ್ಳತನವನ್ನು ಬೇರೆಬೇರೆ ರೀತಿಯಲ್ಲಿ ಆಯೋಜನೆ ಮಾಡಿ ಎಲ್ಲಾ ಕಲಾವಿದರಿಗೆ ಸಣ್ಣಪುಟ್ಟ ಪಾತ್ರಗಳನ್ನು ಕೊಟ್ಟು ನಾಟಕವನ್ನು ಮಾಡಿದೆವು ಎನ್ನುತ್ತಾರೆ ಹೇಮಾವತಿ ವೀ. ಹೆಗ್ಗಡೆಯವರು.

'ಕೃಷ್ಣ ಸಂಧಾನ' ನಾಟಕದಲ್ಲಿ ನಾಟಕ ಅಭ್ಯಾಸದ ಒಂದು ಭಾಗವನ್ನೇ ನಾಟಕವನ್ನಾಗಿ ಮಾಡಲಾಗಿದೆ. ಹಾಗಾಗಿ ಅಭ್ಯಾಸದ ಸಂದರ್ಭದಲ್ಲಿ ಆಗುವ ಅಭಾಸಗಳು, ಜಗಳ, ಇವೆಲ್ಲವನ್ನು ಇಲ್ಲಿ ತೋರಿಸಲಾಗಿದೆ. ಆ ಮೂಲಕ ನಾಟಕ ಪ್ರಯೋಗದಲ್ಲಿ ಒಂದು ಹೊಸತನವನ್ನು ಕಂಡುಕೊಳ್ಳಲು ಪ್ರಯತ್ನ ನಡೆದಿದೆ. ಹೀಗೆ ಪ್ರತಿಯೊಂದು ನಾಟಕವು ಸಮಾಜಕ್ಕೆ ಒಂದು ಉತ್ತಮ ಸಂದೇಶವನ್ನು ನೀಡುವ ಕೆಲಸವನ್ನು ಮಾಡುತ್ತಿದೆ.

ರಂಗಶಿವ ಕಲಾಬಳಗದ ಪ್ರೇರಕ ಶಕ್ತಿಯಾಗಿರುವ ಶ್ರೀಮತಿ ಹೇಮಾವತಿ ವೀ. ಹೆಗ್ಗಡೆಯವರ ಈ ಪ್ರಯತ್ನ ಕನ್ನಡ ರಂಗಭೂಮಿಯಲ್ಲಿ ಸೇವೆಗೈಯಲು ಇಚ್ಛಿಸುವ ಕನ್ನಡ ಮನಸ್ಸುಗಳಿಗೆ ಪ್ರೇರಣೆಯಾಗುವುದರಲ್ಲಿ ಎರಡು ಮಾತಿಲ್ಲ.

ಶಕ್ತಿ-ಯುಕ್ತಿ ಎರಡೂ ಮೇಳೈಸಿದ ಬಲರಾಮ

ದೇವಕಿಯ ಅಣ್ಣ ಮತ್ತು ದುಷ್ಟ ರಾಜನಾದ ಕಂಸನು ದೇವಕಿಯ ಎಲ್ಲ ಮಕ್ಕಳನ್ನು ಕೊಲ್ಲುವ ಹೊಂಚು ಹಾಕಿದ್ದನು. ಇದಕ್ಕೆ ಕಾರಣ ದೇವಕಿಯ ಎಂಟನೇ ಸಂತಾನ ದುಷ್ಟ ಕಂಸನ ಹತ್ಯೆ ಮಾಡುವುದೆಂಬ ಅಶರೀರವಾಣಿ. ಈ ಕಾರಣದಿಂದ ಕಂಸನು ದೇವಕಿ ಮತ್ತು ವಸುದೇವನನ್ನು ಬಂಧನದಲ್ಲಿಟ್ಟು ಅವರ ಮಕ್ಕಳನ್ನು ಹುಟ್ಟಿದ ಕೂಡಲೇ ಕೊಲ್ಲುತ್ತಾ ಬಂದನು. ಕಾಲಾನಂತರ ದೇವಕಿ ಏಳನೇ ಸಲ ಗರ್ಭಿಣಿಯಾದಳು.

ಆದರೆ ಈ ಬಾರಿ ಗರ್ಭದಲ್ಲಿದ್ದ ಮಗುವನ್ನು ವಿಷ್ಣು ಮಧ್ಯಪ್ರವೇಶಿಸಿ, ತನ್ನ ಮಾಯೆಯಿಂದ ದೇವಕಿಯ ಗರ್ಭದಿಂದ ವಸುದೇವನ ಮೊದಲ ಪತ್ನಿ ರೋಹಿಣಿ ಗರ್ಭಕ್ಕೆ ವರ್ಗಾಯಿಸಿದನು. ಹೀಗೆ ಜನಿಸಿದವನೇ ಬಲರಾಮ. ಇದೇ ಕಾರಣದಿಂದ ಬಲರಾಮನ ಇನ್ನೊಂದು ಹೆಸರು ಸಂಕರ್ಷಣ ಎಂದು. ಮಗುವಿನ ಹೆಸರು ರಾಮ ಎಂದಿದ್ದರೂ, ಅವನ ಅತೀವ ಶಕ್ತಿಯ ಕಾರಣ ಬಲರಾಮ ಎಂದು ಕರೆಯಲಾಯಿತು. ಹೀಗೆ ರೋಹಿಣಿ ಬಲರಾಮನಿಗೆ ಜನ್ಮ ಕೊಟ್ಟು ಪಾಲಿಸಿದಳು. ಬಲರಾಮನು ತನ್ನ ಬಾಲ್ಯವನ್ನು ಸಹೋದರ ಕೃಷ್ಣನ ಜೊತೆ ಹಸುಗಳನ್ನು ಕಾಯುವ ಗೋಪಾಲನಾಗಿ ಕಳೆದನು.

ಬಲರಾಮ ಕಂಸನಿಂದ ಕಳುಹಿಸಲ್ಪಟ್ಟ ಅಸುರನಾದ ಪ್ರಲಂಬ ಮತ್ತು ಮುಷ್ಟಿಕ ಎನ್ನುವ ಕುಸ್ತಿಪಟುಗಳನ್ನು ಕೊಂದನು. ಕೃಷ್ಣನು ಕಂಸನನ್ನು ಕೊಲ್ಲುತ್ತಿದ್ದಾಗ, ಬಲರಾಮನು ಕಂಸನ ಬಲಿಷ್ಠ ಸೇನಾಪತಿಯಾದ ಕಾಲವಕ್ರನನ್ನು ಕೊಂದನು. ದುಷ್ಟ ರಾಜನನ್ನು ಕೊಂದ ನಂತರ, ಬಲರಾಮ ಮತ್ತು ಕೃಷ್ಣರು ತಮ್ಮ ಶಿಕ್ಷಣಕ್ಕಾಗಿ ಉಜ್ಜಯಿನಿಯ ಋಷಿ ಸಾಂದೀಪನಿ ಆಶ್ರಮಕ್ಕೆ ಹೋದರು. ಬಲರಾಮ ನಂತರ ರಾಜ ಕಕುದ್ಮಿಯ ಮಗಳಾದ ರೇವತಿಯನ್ನು ವಿವಾಹವಾದರು. ಅವರಿಗೆ ಇಬ್ಬರು ಗಂಡು ಮಕ್ಕಳಿದ್ದರು - ನಿಶಾತ ಮತ್ತು ಉಲ್ಮುಕಾ, ಮತ್ತು ಮಗಳು - ವತ್ಸಲಾ.ಬಲರಾಮನ ಶಕ್ತಿ ಮತ್ತು ಸಮಾಧಾನ ಎರಡನ್ನೂ ಬಿಂಬಿಸುವ ಈ ಘಟನೆ ಅವನ ವ್ಯಕ್ತಿತ್ವದ ಬಗ್ಗೆ ಬೆಳಕು ಚೆಲ್ಲುತ್ತದೆ.

ಶ್ರೀಕೃಷ್ಣನ ಮಗನಾದ ಸಾಂಬನು ದುರ್ಯೋಧನನ ಮಗಳು ಲಕ್ಷ್ಮಣೆಯನ್ನು ವಿವಾಹವಾಗಲು ಸ್ವಯಂವರದ ಸಭೆಯಿಂದ ಅವಳನ್ನು ಅಪಹರಿಸಿಕೊಂಡು ಹೋದನು. ಇದರಿಂದ ಕುಪಿತರಾದ ಕೌರವರು ಸಾಂಬನನ್ನು ಬಂಧಿಸಿದರು. ಶಾಂತಿಯ ಪ್ರತಿಪಾದಕನಾದ ಬಲರಾಮನು ಕೌರವರೊಂದಿಗೆ ಯುದ್ಧ ಮಾಡುವುದು ಬೇಡ, ತಾನೇ ಅವರೊಡನೆ ಮಾತನಾಡಿ ಸಾಂಬನನ್ನು ಅವನ ಹೆಂಡತಿ ಲಕ್ಷ್ಮಣೆಯನ್ನು ಕರೆತರುತ್ತೇನೆ ಎಂದು ಯಾದವರಿಗೆ ಹೇಳಿ, ಹಸ್ತಿನಾಪುರಕ್ಕೆ ಬರುತ್ತಾನೆ.

ಕೌರವರಿಗೆ ತಾನು ಬಂದಿರುವ ವಿಷಯವನ್ನು ಹೇಳಿ ಕಳುಹಿಸುತ್ತಾನೆ. ಆದರೆ ಕೌರವರು ಯಾದವರನ್ನು ತಮ್ಮ ದಾಸರೆಂದೂ, ತಾವು ಯಾರ ಅಪ್ಪಣೆಯನ್ನು ಪಾಲಿಸುವುದಿಲ್ಲವೆಂದೂ ಹೇಳಿದರು. ಶಾಂತಿ ಸಂಧಾನಕ್ಕೆ ಬಂದಿದ್ದ ಬಲರಾಮನು ಎಷ್ಟು ಕುಪಿತನಾದನೆಂದರೆ ಇಡೀ ಬ್ರಹ್ಮಾಂಡವನ್ನು ಸುಟ್ಟು ಬೂದಿ ಮಾಡುವ ಹಾಗೆ ಕಂಡನು. ಅವನು ತನ್ನ ಹಲಾಯುಧವನ್ನು ತೆಗೆದುಕೊಂಡು ಅದರಿಂದ ನೆಲವನ್ನು ಕುಟ್ಟಲು ಪ್ರಾರಂಭಿಸಿದನು.

ಇದರಿಂದ ಇಡೀ ಹಸ್ತಿನಾಪುರವು ಭೂಮಿಯಿಂದ ಬೇರೆಯಾಯಿತು. ಆನಂತರ ಬಲರಾಮನು ಹಸ್ತಿನಾಪುರವನ್ನು ಹರಿಯುತ್ತಿದ್ದ ಗಂಗೆಯ ನೀರಿನ ಕಡೆಗೆ ಎಳೆಯಲು ಪ್ರಾರಂಭಿಸಿದನು. ಇದನ್ನು ನೋಡಿ ಹೆದರಿದ ಕೌರವರು ತತ್‌ಕ್ಷಣ ಸಾಂಬನನ್ನು ಅವನ ಪತ್ನಿ ಲಕ್ಷ್ಮಣೆಯನ್ನು ಬಲರಾಮನಿಗೆ ತಂದೊಪ್ಪಿಸಿ ಅವನ ಕ್ಷಮೆ ಬೇಡಿದರು.

ಹೀಗೆ ಬಲರಾಮನ ಯುಕ್ತಿ, ಶಕ್ತಿ ಅಪರಮಿತ. ಅವನು ಶ್ರೀ ಕೃಷ್ಣನ ವಿಸ್ತರಣೆಯಂತೆ. ಬಲರಾಮ ಸರ್ವಶಕ್ತ. ಬಲವೆಂದರೆ ಕೇವಲ ದೈಹಿಕ ಬಲವಲ್ಲ, ಆಧ್ಯಾತ್ಮಿಕ ಶಕ್ತಿ ಕೂಡ. ಜೀವನದಲ್ಲಿ ಏನೇ ಬಂದರೂ ಮೊದಲು ಅದನ್ನು ಸಮಾಧಾನದಿಂದ ಪರಿಹರಿಸುವ ಪ್ರಯತ್ನ ಮಾಡಬೇಕು. ಅದು ನಡೆಯದಿದ್ದಾಗ ಮುಂದಿನ ಹೆಜ್ಜೆ. ಸಾಮ ದಾನ, ಭೇದ ,ದಂಡ ಇವು ಯಾವುದೇ ಕೆಲಸವನ್ನು ಸಾಧಿಸಲು ಇರುವ ಚತುರೋಪಾಯಗಳು. ಒಳ್ಳೆಯ ಮಾತುಕತೆಯಿಂದ, ದಾನ ಅಂದರೆ ಉಪಕಾರ ಮಾಡುವುದರಿಂದ ಅದು ಆಗದಿದ್ದಾಗ ಭೇದ ಅಂದರೆ ಒಡೆದು ಕಾರ್ಯ ಸಿದ್ಧಿ ಮಾಡಿಕೊಳ್ಳುವುದು. ಕೊನೆಯದಾಗಿ ದಂಡ ಪ್ರಯೋಗಿಸಬೇಕು. ದುಷ್ಟರನ್ನು ಸದೆಬಡಿಯಲು ದಂಡವೇ ಸಾಧನ. ಆದರೆ ಬೇರೆ ಎಲ್ಲವೂ ನಿರುಪಯುಕ್ತವಾದಾಗ ಮಾತ್ರ. ಈ ಚತುರೋಪಾಯಗಳು ನಮಗೆ ತಿಳಿದಿರಲಿ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಮತ್ಸರ ಕೂಡದು ಕ್ಷಮೆ ಬೇಕು

ಪೆರ್ಮೆಯ ಗುಣಂಗಳಿನ್ನೂರು ಶಾಸ್ತ್ರೋಕ್ತದವು ।
ಸರ್ವೋತ್ತಮಗಳೆರಡು ಸರ್ವಕಠಿನಗಳು ॥
ನಿರ್ಮತ್ಸರತೆಯೊಂದು ದೋಷಿಯೊಳ್ ಕ್ಷಮೆಯೊಂದು ।
ಬ್ರಾಹ್ಮಕಾಭ್ಯಾಸವದು - ಮಂಕುತಿಮ್ಮ ॥

ಮನುಷ್ಯನ ಮಾನಸಿಕ ಉನ್ನತಿಗಾಗಿ ನೂರಿನ್ನೂರು ಸದ್ಗುಣಗಳ ಪಾಠಗಳು, ಪ್ರವಚನಗಳು, ಶಾಸ್ತ್ರಗಳು, ಪುರಾಣಗಳು ನಮ್ಮ ಪರಂಪರೆಯಲ್ಲಿ ಹಿಂದಿನಿಂದಲೂ ಬಂದಿವೆ. ಇದರಲ್ಲಿ ಶಾಂತಿ, ಶಿಸ್ತು, ತಾಳ್ಮೆ, ಪ್ರೀತಿ, ವಿಶ್ವಾಸ, ಭ್ರಾತೃತ್ವ, ಸಹಿಷ್ಣುತೆಗಳ ನೀತಿಗಳು ಇವೆ. ಆದರೆ ಎಲ್ಲಕ್ಕಿಂತ ಮಿಗಿಲಾಗಿ ಮನುಷ್ಯನನ್ನು ಔನ್ನತಿಗೆ ಏರಿಸುವುದು ತಪ್ಪು ಮಾಡಿದಂತಹ ವ್ಯಕ್ತಿಗೆ ಕ್ಷಮೆ ನೀಡುವುದು ಹಾಗೂ ಮತ್ತೊಬ್ಬರನ್ನು ದ್ವೇಷಿಸುವ ಮತ್ಸರದ ಕುತ ಬುದ್ಧಿಯನ್ನು ಬೆಳೆಸಿಕೊಳ್ಳದೆ ಇರುವುದಾಗಿದೆ. ಆದುದರಿಂದ ಜ್ಞಾನಿಯೇ ಇರಲಿ, ಪಾಮರನೇ ಇರಲಿ ಕ್ಷಮೆ ನೀಡುವುದು ಹಾಗೂ ಮತ್ಸರವನ್ನು ಸಾಧಿಸದೆ ಇದರುವುದು ಮನುಷ್ಯನ ನಿಜವಾದ ಧರ್ಮ ಪರಂಪರೆ ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ಶುಭೋದಯಕ್ಕೊಂದು
ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಮನುಷ್ಯನ ಜೀವನವನ್ನು ಉನ್ನತೀಕರಣದಲ್ಲಿ ರಬೇಕು ಎಂಬ ದೂರದೃಷ್ಟಿಯಿಂದಲೇ ಎಲ್ಲಾ ಧರ್ಮಗಳೂ, ಪರಂಪರೆಗಳು, ಪುರಾಣಗಳು, ಶಾಸ್ತ್ರಗಳು, ನೀತಿಭೋಧೆಗಳು ಇರುವುದು. ಎಲ್ಲಾ ಧರ್ಮಗಳ ಸಾರವೂ ಮನುಷ್ಯನು ದುಷ್ಕೃತ್ಯ ಎಸಗದೆ ಆತನು ಇರುವ ಜೀವನವನ್ನು ಸುಖ, ನೆಮ್ಮದಿ, ಶಿಸ್ತು, ಸಮೃದ್ಧಿಯಿಂದ ಜೀವನಮಾಡಿ, ತನ್ನ ಜೀವನವನ್ನು ಸಂಪನ್ನಗೊಳಿಸಲಿ ಎಂಬ ಆಶಯಗಳಿಂದಲೇ ಈ ಧರ್ಮಗಳು, ನೀತಿಗಳು, ಶಾಸ್ತ್ರಗಳು, ಪುರಾಣ ಪುಣ್ಯಕಥೆಗಳು ಉದ್ಭವಿಸಿದ್ದಾಗಿದೆ. ಎಲ್ಲಾ ಪುರಾತನ ಪರಂಪರೆಯ ಬಳುವಳಿಗಳೆಲ್ಲವೂ ಸಹ ಪ್ರೀತಿ, ವಿಶ್ವಾಸ, ಭ್ರಾತೃತ್ವ, ಕರುಣೆ, ಕ್ಷಮೆಗಳನ್ನೇ ಭೋದಿಸುತ್ತಿವೆ. ಇಂಥಹ ಭೋದನೆಗಳಿಂದ, ಪ್ರವಚನಗಳಿಂದ ಮನುಷ್ಯನ ಹೃದಯದಲ್ಲಿಯ ವಿಕಾರಗಳಾದ ಕಾಮ, ಕ್ರೋಧ, ಮಧ, ಮೋಹ, ಮಾತ್ಸರ್ಯಗಳು ಕಡಿಮೆ ಮಾಡಿಕೊಳ್ಳುವುದೇ ಆಗಿದೆ. ಈ ಎಲ್ಲಾ ಅಂಶಗಳಿಗಿಂತ ಯಾರೊಬ್ಬ ವ್ಯಕ್ತಿಯು ತಪ್ಪು ಮಾಡಿದಾಗ ಆತನಿಗೆ ಶಿಕ್ಷೆ ವಿಧಿಸಿ ಮನಸ್ಸನ್ನು ಪರಿವರ್ತನೆ ಮಾಡುವುದಕ್ಕಿಂತ ಆತನ ತಪ್ಪಿಗೆ ಕ್ಷಮೆ ನೀಡುವುದು ಹಾಗೂ ಆತನು ಮಾಡಿದ ತಪ್ಪಿಗೆ ಆತನ ವಿರುದ್ಧ ದ್ವೇಷ ಸಾಧಿಸದೆ ಇರುವಂತಹ ಎರಡು

ಗುಣಗಳು ಇತರೆ ಎಲ್ಲಾ ಗುಣಗಳಿಗಿಂತಲೂ ಮೇಲು, ಆ ಕ್ಷಮೆ ಹಾಗೂ ಮತ್ಸರ ಸಾಧಿಸದ ಗುಣಗಳೇ

ಮನುಷ್ಯನನ್ನು ಔನ್ನತ್ಯಕ್ಕೆ ಏರಿಸಲಾಗುತ್ತದೆ ಎಂಬುದು ಸತ್ಯವೂ ಆಗಿದೆ.

ಜಗತ್ತಿನಲ್ಲಿಯ ಈ ಹಿಂದಿನ ಯಾವುದೇ ದಾರ್ಶನಿಕರನ್ನು ಉದಾಹರಣೆಗೆ ತಗೆದುಕೊಂಡರೂ ಸಹ ಅವರೆಲ್ಲರೂ ಕ್ಷಮೆಯನ್ನು ನೀಡಿರುವುದರ ಮುಖಾಂತರ, ಕುತ ಮತ್ಸರವನ್ನು ಸಾಧಿಸದೆ ಇರುವುದರ ಮುಖಾಂತರವೇ ಈ ಸಮಾಜಕ್ಕೆ ದಾರಿದೀಪವಾಗಿದ್ದಾರೆ. ಏಸು ಕ್ರಿಸ್ತನಿಗೆ ಶಿಲುಬೆಗೆ ಏರಿಸಿ ಆತನಿಗೆ ಹಲವಾರು ರೀತಿಯ ಚಿತ್ರಹಿಂಸೆ ನೀಡುವಾಗಲೂ ಸಹ ಏಸು ಕ್ರಿಸ್ತನು 'ಹೇ ಭಗವಂತಾ ಇವರಿಗೆ ತಾವು ಮಾಡುತ್ತಿರುವ ತಪ್ಪು ಅರಿವಾಗುತ್ತಿಲ್ಲ, ಅವರಿಗೆ ಅರಿವು ಇದ್ದಿದ್ದರೆ ಇಂಥಹ ತಪ್ಪುಗಳನ್ನು ಮಾಡುತ್ತಿರಲಿಲ್ಲ, ಅವರನ್ನು ಕ್ಷಮಿಸಿಬಿಡು ಪ್ರಭುವೇ' ಎಂದು ತನಗೆಷ್ಟೇ ಚಿತ್ರಹಿಂಸೆ, ನರಕ ದರ್ಶನವಾಗುತ್ತಿದ್ದರೂ, ತನಗೆ ಹಿಂಸೆ ಕೊಟ್ಟವರ ಬಗ್ಗೆ ಆ ಭಗವಂತನಲ್ಲಿ ಪ್ರಾರ್ಥಿಸುತ್ತಾರೆ. ಹೀಗೆ ಕ್ಷಮೆಯನ್ನು ನೀಡುವುದರ ಮುಖೇನ, ದ್ವೇಷಿಸದ ಮತ್ಸರ ಬುದ್ಧಿ ಇರದಿದ್ದರಿಂದಲೇ ಏಸುವು ದೈವ ಪಟ್ಟಕ್ಕೇರಿದ್ದು. ಆದುದರಿಂದ ಮನುಷ್ಯನ ಜೀವನದಲ್ಲಿ ನಿಜವಾದ ತಪವೆಂದರೆ 'ಮತ್ತೊಬ್ಬರನ್ನು ದ್ವೇಷಿಸದೆ ಇರುವುದು ಹಾಗೂ ಕ್ಷಮೆ ನೀಡುವುದು' ಎಂದು ಈ ಪದ್ಯದಲ್ಲಿ ಡಿವಿಜಿಯವರು ಹೇಳಿದ್ದಾರೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಅಡ್ಡಿ ಅಥವಾ ಬಾಧೆ (3)
3. ಉರಗಕ್ಕೆ ಇನ್ನೊಂದು ಹೆಸರು (3)
6. ಲಂಕೆಯ ಅಧೀಶ್ವರ (3)
7. ಮರದ ಮೇಲೇರಿದೆ ನವಿಲು (3)
8. ಮರಕ್ಕೆ ಇದೇ ಆಧಾರ (2)
10. ಛಳಿಯ ಕಾರಣ ಉಂಟಾದ ಕಂಪನ (3)
13. ದಾಕ್ಷಿಣ್ಯ ಅಥವಾ ಸಂಕೋಚ (4)
14. ಮದುವೆಯ ಗಂಡಿನ ಆದಾಯ (4)
15. ಸಮರ (3)
18. ಕೊರಳು, ಗೋಣು (2)
19. ಮಳೆಯ ಅಧಿದೇವತೆ (3)
20. ಮಾಡಿದ ಕೆಲಸಕ್ಕೆ ಸಿಕ್ಕ ಸಂಬಳ (3)
22. ಹಡಗು (3)
23. ಕಳ್ಳ ಇದರಲ್ಲಿ ಮುಖ ನೋಡಲಿ! (3)

ಮೇಲಿಂದ ಕೆಳಕ್ಕೆ

1. ಕುತ್ತಿಗೆ, ಕೊರಳು (2)
2. ಕಾರು ಕೊಳ್ಳಲು ಒಪ್ಪಂದ (3)
3. ಶಪಥ ಮಾಡು (4)
4. ರಾಗಬದ್ಧವಾಗಿ ಹಾಡುವ ಕಾವ್ಯ (3)
5. ಖಾರವಲ್ಲ, ಉಪ್ಪು (2)
9. ಸಾಗರ, ಕಡಲು (3)
10. ಸ್ವರ್ಗದ ವಿರೋಧ ಪದ (3)
11. ವನದಲ್ಲಿ ಬರೆದ ಪದ್ಯ (3)
12. ಮುಖ, ವದನ (3)
16. ದಾಖಲೆ ಪತ್ರ (4)
17. ಧಾನ್ಯ ಸಂಗ್ರಹಿಸಿಡುವ ಸ್ಥಳ (3)
18. ಯಾವ ಕಡೆಯಿಂದ ನೋಡಿದರೂ ಚಿನ್ನವೇ (3)
19. ಗದೆಯಿಂದಲೂ ಇದು ಸಾಧ್ಯ (2)
21. ಚಿಗುರು (2)

ಉತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಅರ್ಹರಿಗೆ ಸವಲತ್ತು ಸಿಗಲು ಬೆಂಬಲ

ಬೆಂಗಳೂರು: ಡೆಲಾಯ್ಟ್ ಇಂಡಿಯಾ ಪ್ಯಾರಾಒಲಿಂಪಿಕ್‌ನಲ್ಲಿ ಚಿನ್ನದ ಪದಕ ಪಡೆದ ಬಿಲ್ಲುಗಾರ್ತಿ ಶೀತಲ್ ದೇವಿ ಅವರೊಂದಿಗೆ ಒಡಂಬಡಿಕೆಯೊಂದನ್ನು ಘೋಷಿಸಿದ್ದು, ಪ್ಯಾರಾ ಒಲಿಂಪಿಕ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಹಾಗೂ ಅರ್ಹರ ಪ್ರತಿಭೆಗೆ ಬೆಂಬಲ ನೀಡಲು ಮುಂದಾಗಿದೆ. ಈ ಕುರಿತು ಮಾತನಾಡಿದ ಡೆಲಾಯ್ಟ್ ದಕ್ಷಿಣ ಏಷ್ಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೋಮಲ್ ಶೆಟ್ಟಿ, 15ನೇ ವಯಸ್ಸಿನಲ್ಲಿ ಬಿಲ್ಲು ಎತ್ತುವ ಮೂಲಕ ಶೀತಲ್ ತನ್ನ ಪ್ರತಿಭೆಯನ್ನು ಇಡೀ ಜಗತ್ತಿಗೆ ತಿಳಿಸಿದರು, 16ನೇ ವಯಸ್ಸಿನಲ್ಲಿ ವಿಶ್ವದ ನಂ. 1 ಬಿಲ್ಲುಗಾರ್ತಿ ಆಗುವುದಷ್ಟೇ ಅಲ್ಲದೆ, 17ನೇ ವಯಸ್ಸಿನಲ್ಲಿ ಅರ್ಜುನ ಪ್ರಶಸ್ತಿ ಮತ್ತು ಪ್ಯಾರಾ ಒಲಿಂಪಿಕ್ ಕಂಚಿನ ಪದಕವನ್ನು ಗಳಿಸಿದರು, ಇಂತಹ ಪ್ರತಿಭೆಗಳನ್ನು ಪೋಷಿಸಲು ಡೆಲಾಯ್ಟ್ ಇಂಡಿಯಾ ಅರ್ಹರಿಗೆ ಸಂಪೂರ್ಣ ಬೆಂಬಲ ನೀಡಲು ಮುಂದಾಗಿದೆ. ಭಾರತದ ಭವಿಷ್ಯವು ಇಂತಹ ಪ್ರತಿಭಾನ್ವಿತರ ಕೈಯಲ್ಲಿದ್ದು, ಅವರಿಗೆ ಬೇಕಾದ ಸವಲತ್ತು ಹಾಗೂ ಸೌಲಭ್ಯ ಒದಗಿಸಿದರೆ, ಪ್ರತಿಯೊಬ್ಬರೂ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕಿರೀಟವನ್ನು ಎತ್ತಿ ಹಿಡಿಯುತ್ತಾರೆ ಎಂದಿದ್ದಾರೆ. ಬಿಲ್ಲುಗಾರ್ತಿ ಶೀತಲ್ ದೇವಿ ಮಾತನಾಡಿ, ನನ್ನಂತಹ ಹಲವು ಪ್ರತಿಭೆಗಳಿಗೆ ಡೆಲಾಯ್ಟ್ ಸೌಲಭ್ಯ ಒದಗಿಸಲು ಮುಂದಾಗಿರುವುದು ಶ್ಲಾಘನೀಯ. ಪ್ಯಾರಒಲಿಂಪಿಕ್‌ನಲ್ಲಿ ಭಾಗವಹಿಸಲು ಪ್ರತಿಭೆಗಳು ಮುಂದಾಗಬೇಕು, ಅಂತಹ ಪ್ರತಿಭೆಗಳನ್ನು ಹೊರತರುವ ಕೆಲಸ ಇಂತಹ ಸಂಸ್ಥೆಗಳಿಂದ ಸಾಧ್ಯ ಎಂದು ಹೇಳಿದರು.

ಭಾರತಕ್ಕೆ ಸುಲಭ ಜಯ

ಥಿಂಪು: ಶಿಸ್ತುಬದ್ಧ ಆಟವಾಡಿದ ಭಾರತ ತಂಡ ಸ್ಯಾಫ್ 17 ವರ್ಷದೊಳಗಿನ ಮಹಿಳಾ ಫುಟ್ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಬುಧವಾರ ನೇಪಾಳ ತಂಡವನ್ನು 7-0 ಗೋಲುಗಳಿಂದ ಸೋಲಿಸಿ ಶುಭಾರಂಭ ಮಾಡಿತು. ನಿರಾ ಚಾನು ಲಾಂಗ್ಜಮ್ (25. 56ನೇ ನಿಮಿಷ), ಅಭಿಷ್ಟಾ ಬಸ್ನೆಟ್ (16, 41ನೇ ನಿಮಿಷ), ಅನುಷ್ಕಾ ಕುಮಾರಿ (37, 62ನೇ ನಿಮಿಷ) ಮತ್ತು ಜೂಲನ್ ನೊಂಗಮೈಥೆಮ್ (45+1) ಅವರು ಭಾರತ ತಂಡದ ಪರ ಗೋಲುಗಳನ್ನು ಗಳಿಸಿದರು. ವಿರಾಮದ ವೇಳೆಗೆ ಭಾರತ 5-0 ಗೋಲುಗಳಿಂದ ಮುಂದಿತ್ತು. ಈ ಬಾರಿ ಚಾಂಪಿಯನ್‌ಶಿಪ್ ಡಬಲ್ ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯುತ್ತಿರುವ ಕಾರಣ ಪ್ರತಿಯೊಂದು ಗೆಲುವು ಮಹತ್ವದ್ದಾಗಿದೆ.

ಪ್ರವೀಣ್ ದುಬೆ ಬಿರುಸಿನ ಅರ್ಧ ಶತಕದಾಟ | ಆತಿಥೇಯ ಮೈಸೂರು ಪರದಾಟ

ಗುಲ್ಬರ್ಗಾ ತಂಡಕ್ಕೆ ರೋಚಕ ಜಯ

ಮೈಸೂರು: ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಬುಧವಾರದಂದು ಗುಲ್ಬರ್ಗಾ ತಂಡವು ಆತಿಥೇಯ ಮೈಸೂರು ವಾರಿಯರ್ಸ್ ತಂಡದ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ಮೊದಲು ಬ್ಯಾಟ್ ಮಾಡಿದ ಮೈಸೂರು 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿದರೆ, ಆ ಗುರಿ ಬೆನ್ನತ್ತಿದ ಗುಲ್ಬರ್ಗಾ ತಂಡವು 3 ವಿಕೆಟ್ ಕಳೆದುಕೊಂಡು 213 ರನ್ ಗಳಿಸಿ ಕೊನೆಯ ಬಾಲ್‌ನಲ್ಲಿ ಗೆಲುವಿನ ನಗೆ ಬೀರಿತು.

ಟಾಸ್ ಗೆದ್ದ ಗುಲ್ಬರ್ಗಾ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್‌ಗೆ ಇಳಿದ ಮೈಸೂರು ತಂಡದ ಆರಂಭ ಉತ್ತಮವಾಗಿರಲಿಲ್ಲ. ತಂಡದ ಸ್ಕೋರ್ ಕೇವಲ 5 ರನ್ ಆದಾಗ 1 ರನ್ ಗಳಿಸಿದ್ದ ಎಸ್.ಯು. ಕಾರ್ತಿಕ್ ಅವರು ಪೃಥ್ವಿರಾಜ್ ಶೆಕಾವತ್ ಬೌಲಿಂಗ್‌ನಲ್ಲಿ ಮೋನಿಶ್ ರೆಡ್ಡಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಆ ಬಳಿಕ ಕಾರ್ತಿಕ್ ಸಿ.ಎ ಮತ್ತು ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಎಂ.ವೆಂಕಟೇಶ್ ಮಧ್ಯೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು. ಆದರೆ ತಂಡದ ಮೊತ್ತ 25 ರನ್ ಗಳಿದ್ದಾಗ 17 ರನ್ ಗಳಿಸಿದ್ದ ಕಾರ್ತಿಕ್ ಸಿ.ಎ ಲವೀಶ್ ಕೌಶಲ್ ಬಾಲಿಂಗ್‌ನಲ್ಲಿ ಬೌಲ್ಡ್ ಆಗಿ ತಮ್ಮ ವಿಕೆಟ್ ಕಳೆದುಕೊಂಡರು.

ನಂತರ ಕ್ರೀಸ್‌ಗೆ ಬಂದ ಹರ್ಶಿಲ್ ಧರ್ಮಾನಿ ಅವರು ಎಂ. ವೆಂಕಟೇಶ್‌ಗೆ ಜತೆಯಾದರು. 11 ರನ್ ಗಳಿಸಿದ್ದ ಧರ್ಮಾನಿ ತಂಡದ ಸ್ಕೋರ್ 37 ರನ್ ಆದಾಗ ಔಟ್ ಆದರು. ಬಳಿಕ ಬಂದ ಮೈಸೂರು ತಂಡದ ನಾಯಕ ಮನೀಶ್ ಪಾಂಡೆ ಅವರು ವೆಂಕಟೇಶ್ ಜತೆ ಸೇರಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದರು.

19 ಬಾಲ್‌ಗಳಲ್ಲಿ 29 ರನ್ ಗಳಿಸಿದ್ದ ವೇಳೆ ಮನೀಶ್ ಪಾಂಡೆ ವೈಶಾಖ್ ವಿಜಯ್‌ಕುಮಾರ್ ಬೌಲಿಂಗ್‌ನಲ್ಲಿ ಶಶಿಕುಮಾರ್‌ಗೆ ಕ್ಯಾಚ್ ನೀಡಿ ತಮ್ಮ ವಿಕೆಟ್ ಕಳೆದುಕೊಂಡರು. ಬಳಿಕ ಬಂದ ಯಶೋವರ್ಧನ್ ಬಿರುಸಿನ ಆಟವನ್ನು ಪ್ರದರ್ಶಿಸಿದರು. ಕೇವಲ 24 ಬಾಲ್‌ಗಳನ್ನು ಎದುರಿಸಿ 48 ರನ್ ಗಳಿಸಿ ಮೋನಿಶ್ ರೆಡ್ಡಿಗೆ ವಿಕೆಟ್ ಒಪ್ಪಿಸಿದರು.

ಮೈಸೂರು ತಂಡದ ವಿಕೆಟ್‌ಗಳು ಬೀಳುತ್ತಿದ್ದರೂ, ಎಂ.ವೆಂಕೇಶ್ ಮಾತ್ರ ಛಲದಿಂದ ತಮ್ಮ ಬ್ಯಾಟಿಂಗ್ ಮುಂದುವರಿಸುತ್ತಾ ಹೋದರು. 53 ಬಾಲ್‌ಗಳನ್ನು ಎದುರಿಸಿದ ಅವರು 93 ರನ್ ಗಳಿಸಿ ಕೊನೆಗೂ ಅಜೇಯರಾಗಿ ಉಳಿದರು. ಸುಮಿತ್ ಕುಮಾರ್ 2 ಬಾಲ್ ಎದುರಿಸಿ 1 ರನ್ ಪಡೆದು ಅಜೇಯರಾಗುಳಿದರು.

ಗುಲ್ಬರ್ಗಾ ಪರ ಲವೀಶ್ ಕೌಶಲ್ 2 ವಿಕೆಟ್ ಗಳಿಸಿದರೆ, ಮೋನಿಶ್ ರೆಡ್ಡಿ, ಪೃಥ್ವಿರಾಜ್, ಶಶಿಕುಮಾರ್ ಮತ್ತು ಶೆಕಾವತ್ ತಲಾ ಒಂದು ವಿಕೆಟ್ ಪಡೆದರು.

210 ರನ್‌ಗಳ ಗುರಿ ಬೆಂಬತ್ತಿದ ಗುಲ್ಬರ್ಗಾ ತಂಡವು ಉತ್ತಮ ಆರಂಭ ಪಡೆಯಿತು. ಲುವಿನತ್ ಸಿಸೋಡಿಯಾ ಮತ್ತು ನಿಕಿನ್ ಜೋಸ್ ಮೊದಲ ವಿಕೆಟ್‌ಗೆ ತಂಡಕ್ಕಾಗಿ 52 ರನ್ ಕೂಡಿ ಹಾಕಿದರು. 18 ಬಾಲ್‌ಗಳಲ್ಲಿ 21 ರನ್ ಗಳಿಸಿದ್ದ ನಿಕಿನ್ ಜೋಸ್ ಗಾಯಾಳುವಾಗಿ ನಿವೃತ್ತಿ ಹೊಂದಿ ಪೆವಿಲಿಯನ್ ಸೇರಿದರು. ಆ ಬಳಿಕ ಬಂದ ಪಿ. ಪವನ್ 12 ಬಾಲ್‌ಗಳನ್ನು ಎದುರಿಸಿ ಕೇವಲ 7 ರನ್ ಗಳಿಸಲಷ್ಟೇ ಶಕ್ತರಾದರು.

ನಂತರ ಕ್ರೀಸ್‌ಗೆ ಆಗಮಿಸಿದ ಸ್ಮರಣ್ ರವಿಚಂದ್ರನ್ ಈ ಪಂದ್ಯದಲ್ಲೂ ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. 24 ಬಾಲ್‌ಗಳನ್ನು ಎದುರಿಸಿದ್ದ ಅವರು, 38 ರನ್ ಗಳಿಸಿ ಕಾರ್ತಿಕ್ ಬೌಲಿಂಗ್‌ನಲ್ಲಿ ಹರ್ಷಲ್‌ಗೆ ಕ್ಯಾಚಿತ್ತು ಕ್ರೀಸ್‌ನಿಂದ ನಿರ್ಗಮಿಸಿದರು. ನಂತರ ಕೃಷ್ಣಮೂರ್ತಿ ಸಿದ್ಧಾರ್ಥ್ ಮತ್ತು ಪ್ರವೀಣ್ ದುಬೆ ಮಧ್ಯೆ ಯಶಸ್ವೀ ಜತೆಯಾಟ ನಡೆಯಿತು. ಈ ಜೋಡಿ ಮೈಸೂರು ತಂಡದ ಬಹುತೇಕ ಎಲ್ಲಾ ಬೌಲರ್‌ಗಳನ್ನು ಹಿಗ್ಗಾ ಮುಗ್ಗಾ ದಂಡಿಸಿ, 4ನೇ ವಿಕೆಟ್‌ಗೆ ಅಮೂಲ್ಯ 73 ರನ್‌ಗಳನ್ನು ಕಲೆ ಹಾಕಿತು. 19 ಬಾಲ್‌ಗಳಲ್ಲಿ 53 ರನ್ ಗಳಿಸಿ ಅಜೇಯರಾಗುಳಿದ ಪ್ರವೀಣ್ ದುಬೆ ಗುಲ್ಬರ್ಗಾ ತಂಡದ ಗೆಲುವಿನ ರೂವಾರಿ ಎನಿಸಿದರೆ, ಅವರ ಜತೆಯಾಟಕ್ಕೆ ನೆರವಾದ ಕೆ. ಸಿದ್ಧಾರ್ಥ್ 34 ಬಾಲ್‌ಗಳಲ್ಲಿ 49 ರನ್ ಗಳಿಸಿದರು. ಆ ಮೂಲಕ ಕೊನೆಯ ಬಾಲ್‌ನಲ್ಲಿ ಗುಲ್ಬರ್ಗಾ ತಂಡಕ್ಕೆ ಗೆಲುವಿನ ದಡ ಸೇರಲು ಸಾಧ್ಯವಾಯಿತು. ಮೈಸೂರು ಪರ ಅಜಿತ್, ಗೌತಮ್ ಮತ್ತು ಶಿಖರ್ ಶೆಟ್ಟಿ ತಲಾ ಒಂದು ವಿಕೆಟ್ ಪಡೆದರು.

ಮೊದಲ ಏಕದಿನ ಪಂದ್ಯದಲ್ಲಿ ದ. ಆಫ್ರಿಕಾಕ್ಕೆ ಭರ್ಜರಿ ಗೆಲುವು

ಕೈರ್ನ್ಸ್: ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಹೀನಾಯ ಸೋಲನುಭವಿಸಿದೆ. ಕೈರ್ನ್ಸ್‌ನ ಕಝುಲಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕ ಮಿಚೆಲ್ ಮಾರ್ಷ್ ಬೌಲಿಂಗ್ ಆಯ್ದುಕೊಂಡಿದ್ದರು. ಮೊದಲು ಬ್ಯಾಟ್ ಮಾಡಿದ ದ.ಆಫ್ರಿಕಾ ತಂಡಕ್ಕೆ ಐಡೆನ್ ಮಾರ್ಕ್ರಾಮ್ ಹಾಗೂ ರಯಾನ್ ರಿಕೆಲ್ಟನ್ ಭರ್ಜರಿ ಆರಂಭ ಒದಗಿಸಿದ್ದರು.

ಮೊದಲ ವಿಕೆಟ್‌ಗೆ 92 ರನ್‌ಗಳ ಜತೆಯಾಟವಾಡಿದ ಬಳಿಕ ರಯಾನ್ ರಿಕೆಲ್ಟನ್ 33 ರನ್‌ಗೆ ಔಟಾದರು. ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಮುಂದುವರೆಸಿದ ಐಡೆನ್ ಮಾರ್ಕ್ರಾಮ್ 81 ಎಸೆತಗಳಲ್ಲಿ 9 ಬೌಂಡರಿಗಳೊಂದಿಗೆ 82 ರನ್ ಬಾರಿಸಿದರು. ಆ ಬಳಿಕ ಬಂದ ಟೆಂಬಾ ಬವುಮಾ 65 ರನ್‌ಗಳ ಕೊಡುಗೆ ನೀಡಿದರು. ಈ ಮೂಲಕ ದಕ್ಷಿಣ ಆಫ್ರಿಕಾ ತಂಡವು 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 296 ರನ್ ಕಲೆಹಾಕಿತು.

297 ರನ್‌ಗಳ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ತಂಡಕ್ಕೆ ಅನುಭವಿ ಸ್ಪಿನ್ನರ್ ಕೇಶವ್ ಮಹಾರಾಜ್ ಆಘಾತ ನೀಡಿದರು. ಮೊದಲ ವಿಕೆಟ್‌ಗೆ 60 ರನ್ ಪೇರಿಸಿದ ಆಸೀಸ್ ಪಡೆಯು ಕೇಶವ್ ಮಹಾರಾಜ್ ಸ್ಪಿನ್ ಮೋಡಿಯಿಂದಾಗಿ ದಿಢೀರ್ ಕುಸಿತಕ್ಕೊಳಗಾಯಿತು. ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ ಮಾರ್ಷ್ 88 ರನ್ ಕಲೆಹಾಕಿದರು. ಆದರೆ ಮತ್ತೊಂದೆಡೆ ಮಹಾರಾಜ್ ಸ್ಪಿನ್ ಮೋಡಿಯೊಂದಿಗೆ 33 ರನ್ ನೀಡಿ 5 ವಿಕೆಟ್ ಕಬಳಿಸಿದರು. ಆಸ್ಟ್ರೇಲಿಯಾ ತಂಡವು 40.5 ಓವರ್‌ಗಳಲ್ಲಿ 198 ರನ್ ಗಳಿಸಿ ಆಲೌಟ್ ಆಯಿತು.

ಆ ಮೂಲಕ ದಕ್ಷಿಣ ಆಫ್ರಿಕಾ ತಂಡವು 98 ರನ್‌ಗಳ ಅಮೋಘ ಗೆಲುವು ದಾಖಲಿಸಿದೆ. ಹೀನಾಯ ಸೋಲಿನೊಂದಿಗೆ ಆಸ್ಟ್ರೇಲಿಯಾ ತಂಡವು 34 ವರ್ಷಗಳ ಬಳಿಕ ಭಾರೀ ಮುಖಭಂಗ ಅನುಭವಿಸಿದೆ.

ಏಷ್ಯಾ ಕಪ್: ಹರ್ಮನ್‌ಗೆ ನಾಯಕತ್ವ

ಭಾರತ ಹಾಕಿ ತಂಡ ಪ್ರಕಟ

ದೆಹಲಿ: ಮುಂಬರುವ ಹಾಕಿ ಏಷ್ಯಾ ಕಪ್‌ಗಾಗಿ ಭಾರತ ತಂಡವನ್ನು ಘೋಷಿಸಲಾಗಿದ್ದು, ಹರ್ಮನ್‌ಪ್ರೀತ್ ಸಿಂಗ್ ನಾಯಕರಾಗಿದ್ದಾರೆ. 18 ಸದಸ್ಯರ ತಂಡವನ್ನು ಬುಧವಾರ ಹಾಕಿ ಇಂಡಿಯಾ ಪ್ರಕಟಿಸಿದೆ. ತಂಡವು ಯುವ ಮತ್ತು ಅನುಭವಿಗಳಿಂದ ಕೂಡಿದೆ. ಪಾಕಿಸ್ತಾನವು ಈ ಟೂರ್ನಿಯಿಂದ ಹಿಂದೆ ಸರಿದ ನಂತರ, ಭಾರತವು ಜಪಾನ್, ಚೀನಾ ಮತ್ತು ಕಜಕಸ್ತಾನ್‌ಗಳೊಂದಿಗೆ 'ಎ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಆಗಸ್ಟ್-29ರಂದು ಚೀನಾ ವಿರುದ್ಧ ತನ್ನ ಅಭಿಯಾನವನ್ನು ಪ್ರಾರಂಭಿಸಲಿದ್ದು, ನಂತರ ಆಗಸ್ಟ್-31 ಮತ್ತು ಸೆಪ್ಟೆಂಬರ್ -1ರಂದು ಜಪಾನ್ ಮತ್ತು ಕಜಕಸ್ತಾನ್ ವಿರುದ್ಧದ ಪಂದ್ಯಗಳನ್ನು ಆಡಲಿದೆ.

ಗೋಲ್‌ಕೀಪಿಂಗ್ ಕರ್ತವ್ಯಗಳನ್ನು ಕೃಷ್ಣ ಬಿ. ಪಾಠಕ್ ನಿರ್ವಹಿಸಿದರೆ, ಸೂರಜ್ ಕರ್ಕೇರಾ ಬ್ಯಾಕಪ್ ಆಟಗಾರರಾಗಿದ್ದಾರೆ. ತಂಡದಲ್ಲಿರುವ ಮಿಡ್‌ಫೀಲ್ಡರ್‌ಗಳಾಗಿ ಮನ್‌ಪ್ರೀತ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ರಾಜಿಂದರ್ ಸಿಂಗ್, ರಾಜ್ ಕುಮಾರ್ ಪಾಲ್ ಮತ್ತು ಹಾರ್ದಿಕ್ ಸಿಂಗ್ ಇರಲಿದ್ದಾರೆ. ಫಾರ್ವರ್ಡ್ಸ್ ಆಟಗಾರರಾಗಿ ಮನ್‌ದೀಪ್ ಸಿಂಗ್, ಅಭಿಷೇಕ್, ದಿಲ್‌ಪ್ರೀತ್ ಸಿಂಗ್, ಸುಖಜಿತ್ ಸಿಂಗ್ ಮತ್ತು ಶಿಲಾನಂದ್ ಲಾಕ್ರ ಕಾಣಿಸಿಕೊಂಡಿದ್ದಾರೆ.

8 ತಂಡಗಳ ಏಷ್ಯಾ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ತಂಡವು, ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್‌ನಲ್ಲಿ ನಡೆಯಲಿರುವ 2026ರ ವಿಶ್ವಕಪ್‌ನಲ್ಲಿ ಆಡುವ ಅರ್ಹತೆ ಪಡೆಯಲಿದೆ. ಗುಂಪು ಹಂತದ ಪಂದ್ಯಗಳ ನಂತರ ಸೆ. 3ರಿಂದ 6ರವರೆಗೆ ಸೂಪರ್-4 ಹಂತದ ಪಂದ್ಯಗಳು ನಡೆಯಲಿವೆ. ಅದರಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಫೈನಲ್ ಪಂದ್ಯ ಆಡಲಿವೆ.

ಭಾರತ ಹಾಕಿ ತಂಡದ ಆಟಗಾರರು

- **ಗೋಲ್ ಕೀಪರ್ಸ್:** ಕೃಷ್ಣ ಬಹದ್ದೂರ್ ಪಾಠಕ್, ಸೂರಜ್ ಕರ್ಕೇರ.
- **ಡಿಫೆಂಡರ್ಸ್:** ಸುಮೀತ್, ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ಹರ್ಮನ್‌ಪ್ರೀತ್ ಸಿಂಗ್ (ನಾಯಕ), ಅಮಿತ್ ರೋಹಿದಾಸ್ , ಜುಗರಾಜ್ ಸಿಂಗ್.
- **ಮಿಡ್ ಫೀಲ್ಡರ್ಸ್:** ರಾಜಿಂದರ್ ಸಿಂಗ್, ರಾಜ್‌ಕುಮಾರ್ ಪಾಲ್, ಹಾರ್ದಿಕ್ ಸಿಂಗ್, ಮನ್‌ಪ್ರೀತ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್.
- **ಫಾರ್ವರ್ಡ್ಸ್:** ಮನ್‌ದೀಪ್ ಸಿಂಗ್, ಅಭಿಷೇಕ್, ದಿಲ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಶಿಲಾನಂದ್ ಲಾಕ್ರ.
- **ಮೀಸಲು ಆಟಗಾರರು:** ನೀಲಮ್ ಸಂಜೀಪ್ ಕ್ಸೆಸ್, ಸಿಲ್ವಂ ಕಾರ್ತಿ.

ನಾರ್ತ್ ಈಸ್ಟ್ 2ನೇ ಬಾರಿ ಫೈನಲ್‌ಗೆ

ಶಿಲ್ಲಾಂಗ್: ಹಾಲಿ ಚಾಂಪಿಯನ್ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು 134ನೇ ಆವೃತ್ತಿಯ ಡುರ್ಯಾಂಡ್ ಕಪ್ ಫುಟ್ಬಾಲ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಫೈನಲ್‌ಗೆ ಲಗ್ಗೆ ಹಾಕಿತು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಮೊದಲ ಸೆಮಿಫೈನಲ್‌ನಲ್ಲಿ ನಾರ್ತ್ ಈಸ್ಟ್ ತಂಡವು 1-0 ಗೋಲಿನಿಂದ ಆತಿಥೇಯ ಶಿಲ್ಲಾಂಗ್ ಲಾಬೊಂಗ್ ಎಫ್‌ಸಿ ತಂಡವನ್ನು ಸೋಲಿಸಿತು. ಕಳೆದ ಆವೃತ್ತಿಯಲ್ಲೂ ನಾರ್ತ್ ಈಸ್ಟ್ ತಂಡವು ಇದೇ ತಂಡವನ್ನು 3-0ಯಿಂದ ಮಣಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿತ್ತು. ಪಂದ್ಯದ 36ನೇ ನಿಮಿಷದಲ್ಲಿ ರೆಡೀಮ್ ಟ್ಲಾಂಗ್ ಅವರು ನಾರ್ತ್ ಈಸ್ಟ್ ಪರ ಗೆಲುವಿನ ಗೋಲು ದಾಖಲಿಸಿದರು.

ಈಸ್ಟ್ ಬೆಂಗಾಲ್‌ಗೆ ಡೈಮಂಡ್ ಸವಾಲು: 16 ಬಾರಿಯ ಚಾಂಪಿಯನ್ ಈಸ್ಟ್ ಬೆಂಗಾಲ್ ತಂಡ ಮತ್ತು ಡೈಮಂಡ್ ಹಾರ್ಬರ್ ಎಫ್‌ಸಿ ತಂಡಗಳ ನಡುವೆ ನಡುವೆ ಎರಡನೇ ಸೆಮಿಫೈನಲ್ ನಡೆಯಲಿದೆ. ಆ ಪಂದ್ಯದಲ್ಲಿ ವಿಜೇತರಾಗುವ ತಂಡವನ್ನು ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ನಾರ್ತ್ ಈಸ್ಟ್ ತಂಡ ಎದುರಿಸಲಿದೆ.

ಈಸ್ಟ್ ಬೆಂಗಾಲ್ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ 2-1ರಿಂದ 17 ಬಾರಿಯ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವನ್ನು ಮಣಿಸಿತ್ತು. ಡ್ಯುರಾಂಡ್ ಕಪ್‌ನಲ್ಲಿ ಚೊಚ್ಚಲವಾಗಿ ಸ್ಪರ್ಧಿಸುತ್ತಿರುವ ಡೈಮಂಡ್ ತಂಡವು 2-0ಯಿಂದ ಜೆಡ್‌ಪುರ ಎಫ್‌ಸಿ ತಂಡಕ್ಕೆ ಆಘಾತ ನೀಡಿ ಸೆಮಿಫೈನಲ್ ಪ್ರವೇಶಿಸಿತ್ತು.

ವಿಟಾಕೀಸ್

45ಗೆ ತಾಂತ್ರಿಕ ಸ್ಪರ್ಶ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ನಿರ್ದೇಶನ ಮಾಡಿರುವ ಮಲ್ಟಿಸ್ಟಾರ್ ಚಿತ್ರ 45 ಕಳೆದ ವಾರವೇ ತೆರೆಗೆ ಬರಬೇಕಿತ್ತು. ಆದರೆ ಸಿನಿಮಾದ ತಾಂತ್ರಿಕ ಕೆಲಸಗಳು ಇನ್ನೂ ಬಾಕಿ ಇರುವ ಕಾರಣ ಸಿನಿಮಾದ ಬಿಡುಗಡೆ ತಡವಾಗಿದೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ಉಪೇಂದ್ರ, ಹಾಗೂ ರಾಜ್ ಬಿ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಸಿನಿಮಾವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ. ಅದ್ದೂರಿಯಾಗಿ ಮೂಡಿಬರುತ್ತಿರುವ ಈ ಚಿತ್ರವನ್ನು ಸೂರಜ್ ಪ್ರೊಡಕ್ಷನ್‌ನಲ್ಲಿ ರಮೇಶ್ ರೆಡ್ಡಿ ನಿರ್ಮಾಣ ಮಾಡುತ್ತಿದ್ದಾರೆ. ಕನ್ನಡದ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ ಇದಾಗಿದ್ದು, ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ.

ಕೆನಡಾದ ಎಂ.ಎ.ಆರ್.ಝುಡ್ ಸಂಸ್ಥೆ ಈ ಚಿತ್ರಕ್ಕೆ ವಿ.ಎಫ್.ಎಕ್ಸ್ ಕಾರ್ಯ ನಿರ್ವಹಿಸುತ್ತಿದ್ದು, ಈ ಸಂಸ್ಥೆ ವಿ.ಎಫ್.ಎಕ್ಸ್ ಮಾಡುತ್ತಿರುವ ಮೊದಲ ಕನ್ನಡ ಚಿತ್ರ ಇದಾಗಿದೆ. ಈ ಚಿತ್ರಕ್ಕೆ ಹಾಲಿವುಡ್‌ನ ಖ್ಯಾತ ತಂತ್ರಜ್ಞರಿಂದ ಸಿಜಿ ವರ್ಕ್ ನಡೆಯುತ್ತಿದ್ದು, ಭಾರತದಲ್ಲಿಯೇ ಅತೀ ಹೆಚ್ಚು ಸಿಜಿ ಅಳವಡಿಸಲಾಗುತ್ತಿರುವ ಮೊದಲ ಚಿತ್ರ ಕೂಡ ಇದಾಗಲಿದೆ.

ಈ ಸಂಸ್ಥೆ ಹದಿನೈದು ವರ್ಷಗಳಿಂದ ಐನೂರಕ್ಕೂ ಅಧಿಕ ಹಾಲಿವುಡ್ ಚಿತ್ರಗಳಿಗೆ ವಿ.ಎಫ್.ಎಕ್ಸ್ ಕಾರ್ಯ ಮಾಡಿದೆ. 45 ಚಿತ್ರಕ್ಕೆ ನಮ್ಮ ಸಂಸ್ಥೆ ವಿ.ಎಫ್.ಎಕ್ಸ್ ಕಾರ್ಯ ಮಾಡುತ್ತಿರುವುದು ನಮಗೆ ಹೆಮ್ಮೆ. ಇದು ನಮ್ಮ ಸಂಸ್ಥೆ ವಿ.ಎಫ್.ಎಕ್ಸ್ ಮಾಡುತ್ತಿರುವ ಮೊದಲ ಕನ್ನಡ ಚಿತ್ರ. ಈ ಚಿತ್ರದಲ್ಲಿ ಗ್ರಾಫಿಕ್ಸ್ ಮಹತ್ವದ ಪಾತ್ರ ವಹಿಸಲಿದೆ. ಗ್ರಾಫಿಕ್ ಕೆಲಸಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಿರುವುದರಿಂದ ಈ ಚಿತ್ರ ಆಗಸ್ಟ್ 15 ರಂದು ಬಿಡುಗಡೆ ಮಾಡಲು ಆಗಲಿಲ್ಲ. ಸೆಪ್ಟೆಂಬರ್ 16 ರ ಒಳಗೆ ವಿ.ಎಫ್.ಎಕ್ಸ್ ಕಾರ್ಯ ಮುಕ್ತಾಯವಾಗಲಿದೆ. ಆನಂತರ ಇನ್ನೊಂದು ತಿಂಗಳು ಕೆಲವು ಕೆಲಸಗಳಿರುತ್ತದೆ. ಅಕ್ಟೋಬರ್ 16 ರ ಒಳಗೆ ಚಿತ್ರ ತೆರೆಗೆ ಬರಲು ಸಿದ್ಧವಾಗುತ್ತದೆ ಎಂದು ಅರ್ಜುನ್ ಜನ್ಯ ತಿಳಿಸಿದ್ದಾರೆ.

ಟಾಕ್ಸಿಕ್ ತಂಡ ಸೇರಿದ ರುಕ್ಮಿಣಿ

ಸಪ್ತ ಸಾಗರಚೆಯ ಚೆಲುವೆ ರುಕ್ಮಿಣಿ ವಸಂತ್ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಕನ್ನಡ ಮಾತ್ರವಲ್ಲ ಪರಭಾಷೆಯ ಸಿನಿಮಾಗಳಲ್ಲಿಯೂ ನಟಿಸುತ್ತಿದ್ದು, ಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿದ್ದಾರೆ. ಈಗ ರುಕ್ಮಿಣಿ, ಟಾಕ್ಸಿಕ್ ಚಿತ್ರತಂಡ ಸೇರಿದ್ದಾರೆ. ಯಶ್ ಅಭಿನಯದ ಟಾಕ್ಸಿಕ್ ಸಿನಿಮಾ ಆರಂಭದಿಂದಲೂ ಸದ್ದು ಮಾಡುತ್ತಿದೆ. ಕಿಯಾರಾ ಅಡ್ವಾಣಿ, ಹುಮಾ ಖುರೇಷಿ, ನಯನತಾರಾ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಈಗ ರುಕ್ಮಣಿ ವಸಂತ್ ಕೂಡ ಟಾಕ್ಸಿಕ್ ಚಿತ್ರತಂಡ ಸೇರಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಚಿತ್ರದಲ್ಲಿ ರುಕ್ಮಿಣಿ ಚಿಕ್ಕ ಪಾತ್ರದಲ್ಲಿ ನಟಿಸುತ್ತಿದ್ದು, ಇದು ಕಥೆಗೆ ತಿರುವು ನೀಡುವ ಪಾತ್ರವಾಗಿದೆ. ಹಾಗಾಗಿ ರುಕ್ಮಿಣಿ ಈ ಚಿತ್ರದಲ್ಲಿಯೂ ಮಿಂಚಲಿದ್ದಾರೆ. ಇದರ ಜತೆಗೆ ಇನ್ನೇನು ಬಿಡುಗಡೆಗೆ ಸಜ್ಜಾಗಿರುವ ಕಾಂತಾರ ಚಿತ್ರದಲ್ಲಿಯೂ ರುಕ್ಮಿಣಿ ವಸಂತ್ ನಟಿಸಿದ್ದು, ಕನಕಾವತಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಟಾಕ್ಸಿಕ್ ಡ್ರಗ್ಸ್ ಮಾಫಿಯಾ ಕುರಿತ ಸ್ಟೋರಿಯಾಗಿದ್ದು, ಯಶ್ ಅಂಡರ್ ವರ್ಲ್ಡ್ ಡಾನ್ ಆಗಿ ಅಬ್ಬರಿಸಲಿದ್ದಾರೆ. ಮಲೆಯಾಳಂ ನಿರ್ದೇಶಕಿ ಗೀತು ಮೋಹನ್‌ದಾಸ್, ಟಾಕ್ಸಿಕ್ ಚಿತ್ರದ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಟಾಕ್ಸಿಕ್ ಚಿತ್ರತಂಡ ಮುಂಬೈನಲ್ಲಿ ಬೃಹತ್ ಸೆಟ್ ನಿರ್ಮಿಸಿದ್ದು ಅಲ್ಲಿಯೇ ಚಿತ್ರೀಕರಣ ನಡೆಸುತ್ತಿದೆ. ಚಿತ್ರದ ಪ್ರಮುಖ ಸನ್ನಿವೇಶದ ಶೂಟಿಂಗ್‌ಗಾಗಿ ವಿದೇಶಕ್ಕೂ ಹಾರಲಿದೆ.

ಡ್ಯಾಡ್ ಚಿತ್ರಕ್ಕೆ ಮುಹೂರ್ತ

ಶಿವರಾಜ್ ಕುಮಾರ್ ಅಭಿನಯದ ಡ್ಯಾಡ್ ಚಿತ್ರದ ಮುಹೂರ್ತ ಸಮಾರಂಭ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ನಂದಿ ದೇವಸ್ಥಾನದಲ್ಲಿ ನೆರವೇರಿತು. ಗೀತಾ ಶಿವರಾಜಕುಮಾರ್ ಚಿತ್ರದ ಮೊದಲ ದೃಶ್ಯಕ್ಕೆ ಆರಂಭ ಫಲಕ ತೋರಿ, ಚಿತ್ರತಂಡಕ್ಕೆ ಶುಭ ಕೋರಿದರು. ಮೂರು ದಶಕಗಳ ಹಿಂದೆ ಶಿವರಾಜ್‌ಕುಮಾರ್ ಅಭಿನಯದ ಜಗ ಮೆಚ್ಚಿದ ಹುಡುಗ ಚಿತ್ರ ಕೂಡ ಮೈಸೂರಿನ ಚಾಮುಂಡಿ ಬೆಟ್ಟದ ನಂದಿ ವಿಗ್ರಹದ ಎದುರು ಶುಭಾರಂಭವಾಗಿತ್ತು. ಈಗ ಅದೇ ನಂದಿ ದೇವಸ್ಥಾನದಲ್ಲಿ ಶಿವಣ್ಣ ಅಭಿನಯದ ಹೊಸ ಚಿತ್ರಕ್ಕೆ ಚಾಲನೆ ಸಿಕ್ಕಿದೆ. ತೆಲುಗಿನಲ್ಲಿ ಹಲವು ಸಿನಿಮಾಗಳನ್ನು ನಿರ್ದೇಶಿಸಿರುವ ಅನಿಲ್ ಕನ್ನೆಗಂಟಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ಮೈರಾ ಕ್ರಿಯೇಷನ್ಸ್ ಲಾಂಛನದಲ್ಲಿ ಹರೀಶ್ ಪೆದ್ದಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ನಿರ್ಮಾಪಕರಿಗೆ ಹಾಗೂ ನಿರ್ದೇಶಕರಿಗೆ ಕನ್ನಡದಲ್ಲಿ ಇದು ಮೊದಲ ಚಿತ್ರವಾಗಿದೆ.

ತಂದೆ ಮಗನ ಭಾಂಧವ್ಯದ ಕಥೆ ಚಿತ್ರದಲ್ಲಿದ್ದು, ಥ್ರಿಲ್ಲಂಗ್ ಅಂಶಗಳು ಕೂಡ ಬೆರೆತಿವೆ. ಶಿವರಾಜ್ ಕುಮಾರ್ ಈ ಚಿತ್ರದಲ್ಲಿ ವೈದ್ಯನ ಪಾತ್ರ ನಿರ್ವಹಿಸುತ್ತಿದ್ದಾರೆ. ಈ ಹಿಂದೆ ಗಡಿಬಿಡಿ ಕೃಷ್ಣ ಚಿತ್ರದಲ್ಲಿ ವೈದ್ಯರಾಗಿ ಕಾಣಿಸಿಕೊಂಡಿದ್ದ ಶಿವರಾಜ್ ಕುಮಾರ್, ಸುಮಾರು ಇಪ್ಪತ್ತೇಳು ವರ್ಷಗಳ ನಂತರ ಮತ್ತೆ ವೈದ್ಯರಾಗಿ ಅಭಿನಯಿಸುತ್ತಿದ್ದಾರೆ. ಶರ್ಮಿಳಾ ಮಾಂಡ್ರೆ, ಮಲೆಯಾಳಂ ನಟ ಸೂರಜ್ ವೆಂಜರಮೂಡು ಮುಂತಾದವರು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಕನ್ನಡ, ತೆಲುಗು ಮತ್ತು ಮಲೆಯಾಳಂನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸುತ್ತಿದ್ದು, ಬಿ.ರಾಜಶೇಖರ್ ಛಾಯಾಗ್ರಹಣದ ಜವಾಬ್ದಾರಿ ಹೊತ್ತಿದ್ದಾರೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಸುಮಾರು ಐವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಒಂದೇ ಚಿತ್ರದಲ್ಲಿ ರಜನಿ-ಕಮಲ್

ರಜನಿಕಾಂತ್ ಹಾಗೂ ಕಮಲ್ ಹಾಸನ್ ಭಾರತೀಯ ಚಿತ್ರರಂಗದ ದಿಗ್ಗಜ ನಟರು. ಹಲವು ಹಿಟ್ ಸಿನಿಮಾಗಳನ್ನು ನೀಡಿರುವ ಇವರಿಗೆ ದೊಡ್ಡ ಅಭಿಮಾನಿ ಬಳಗವೇ ಇದೆ. ಕಮಲ್ ಹಾಸನ್ ಹಾಗೂ ರಜನಿಕಾಂತ್, ಐವತ್ತು ವರ್ಷಗಳ ಹಿಂದೆ ಅಪೂರ್ವ ರಾಗಂಗಳ್ ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದರು. ಆ ಬಳಿಕ 1985ರಲ್ಲಿ ತೆರೆಗೆ ಬಂದ ಗಿರಫ್ತಾರ್ ಸಿನಿಮಾದಲ್ಲಿ ಒಟ್ಟಾಗಿ ಕಾಣಿಸಿಕೊಂಡಿದ್ದರು. ಅದಾದ ಬಳಿಕ ಇಬ್ಬರು ಯಾವ ಸಿನಿಮಾದಲ್ಲಿಯೂ ಒಟ್ಟಾಗಿ ನಟಿಸಲಿಲ್ಲ. ಈಗ ನವಲತ್ತು ವರ್ಷಗಳ ಬಳಿಕ ಇಬ್ಬರು ಒಂದೇ ಸಿನಿಮಾದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ಈ ಇಬ್ಬರನ್ನು ಒಂದೇ ಸಿನಿಮಾದಲ್ಲಿ ತರುತ್ತಿರುವುದು ನಿರ್ದೇಶಕ ಲೋಕೇಶ್ ಕನಕರಾಜ್. ಹೌದು, ಲೋಕೇಶ್, ರಜನಿಕಾಂತ್ ಅವರಿಗಾಗಿ ಕೂಲಿಯಂತಹ ಹಿಟ್ ಸಿನಿಮಾವನ್ನು ನಿರ್ದೇಶಿಸಿ ಸೈ ಎನಿಸಿಕೊಂಡರು. ಅಂತೆಯೇ ಈ ಹಿಂದೆ ಕಮಲ್ ಹಾಸನ್ ಅಭಿನಯದ ವಿಕ್ರಮ್ ಚಿತ್ರವನ್ನು ನಿರ್ದೇಶಿಸಿದ್ದರು. ವಿಕ್ರಮ್, ಕಮಲ್‌ಗೆ ಬಿಗ್ ಬ್ರೇಕ್ ನೀಡಿತು. ಚಿತ್ರರಂಗದಲ್ಲಿ ಕಮಲ್ ವರ್ಚಸನ್ನು ಇಮ್ಮಡಿಗೊಳಿಸಿತು. ಈಗ ಮುಂದೆ ರಜನಿ ಹಾಗೂ ಕಮಲ್‌ಗಾಗಿ ಹೊಸ ಕಥೆ ಬರೆದಿದ್ದಾರೆ. ಇದು ಅಂಡರ್ ವರ್ಲ್ಡ್ ಸ್ಟೋರಿಯ ಸಿನಿಮಾವಾಗಿದ್ದು, ಭರ್ಜರಿ ಆ್ಯಕ್ಷನ್ ಹಾಗೂ ಥ್ರಿಲ್ಲಂಗ್ ಅಂಶಗಳು ಚಿತ್ರದಲ್ಲಿರಲಿವೆ. ಈ ಸಿನಿಮಾ ಮುಂದಿನ ವರ್ಷದ ಅಕ್ಟೋಬರ್ ವೇಳೆಗೆ ಸೆಟ್ಟೇರುವ ನಿರೀಕ್ಷೆ ಇದೆ. ಕೂಲಿ ಗೆದ್ದ ಖುಷಿಯಲ್ಲಿರುವ ರಜನಿಕಾಂತ್, ಜೈಲರ್ 2 ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಇತ್ತ ಕಮನ್ ಹಾಸನ್ ಅನ್ಬರಿವ್ ನಿರ್ದೇಶನದ ಸಿನಿಮಾಕ್ಕಾಗಿ ತಯಾರಿ ನಡೆಸುತ್ತಿದ್ದಾರೆ. ನಿರ್ದೇಶಕ ಲೋಕೇಶ್ ಕನಕರಾಜ್ ಇಬ್ಬರನ್ನು ದೊಡ್ಡ ಪರದೆಯಲ್ಲಿ ಅದ್ಭುತವಾಗಿ ತೋರಿಸಲು ಸಿದ್ಧತೆ ಆರಂಭಿಸಿದ್ದಾರೆ. ಈ ಸಿನಿಮಾ ಹೇಗೆ ಮೂಡಿಬರಬಹುದು ಎಂಬ ಕಾತರ ಸಿನಿಪ್ರಿಯರಲ್ಲಿದೆ.